


ಬೇರು ಬಿಳಲು

ಸಮಾಜವಾದಿ ಸಂಕಥನಗಳು

ಡಿ.ಎಸ್. ನಾಗಭೂಷಣ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ತಿಮ್ಮಸಂದ್ರದಲ್ಲಿ ೧೯೫೨ರ ಫೆಬ್ರವರಿ ೧ರಂದು ಸಿ. ಹೆಚ್. ಸೂರಾಚಾರ್ ಹಾಗೂ ಗೌರಮ್ಮ ದಂಪತಿಗಳ ಎರಡನೇ ಮಗನಾಗಿ ಜನಿಸಿದ ಡಿ. ಎಸ್. ನಾಗಭೂಷಣ, ಶಾಲಾ ಶಿಕ್ಷಣವನ್ನು ಮುಗಿಸಿದ್ದು ಅದೇ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲುವಿನಲ್ಲಿ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಗಣಿತಶಾಸ್ತ್ರದಲ್ಲಿ ಆನರ್ಸ್ ಹಾಗೂ ೧೯೭೩ರಲ್ಲಿ ಸ್ನಾತಕೋತ್ತರ ಪದವಿ ಪಡೆದ ಅವರು, ೧೯೭೫ ರಿಂದ ಮುವ್ವತ್ತು ವರ್ಷಗಳ ಕಾಲ ಆಕಾಶವಾಣಿಯ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ೨೦೦೫ ರಲ್ಲಿ ಸ್ವಯಂ ನಿವೃತ್ತಿ ಪಡೆದು, ಪತ್ನಿ ಸವಿತಾ ನಾಗಭೂಷಣ ಅವರೊಂದಿಗೆ ಈಗ ಶಿವಮೊಗ್ಗದಲ್ಲಿ ವಾಸವಾಗಿದ್ದಾರೆ.

ಗಾಂಧಿ, ಲೋಹಿಯಾ ಹಾಗೂ ಅಂಬೇಡ್ಕರರ ವಿಚಾರಗಳ ಜೊತೆಗೆ ಬುದ್ಧ, ರಾಮಕೃಷ್ಣ ಪರಮಹಂಸ ಹಾಗೂ ರಮಣ ಮಹರ್ಷಿಗಳ ದರ್ಶನಗಳಿಂದ ಪ್ರಭಾವಿತರಾಗಿರುವ ನಾಗಭೂಷಣ, ಸಮಾಜವಾದಿ ಹಾಗೂ ರೈತ-ದಲಿತ ಚಳುವಳಿಗಳೊಂದಿಗೆ ಒಡನಾಡಿ ತಮ್ಮ ಚಿಂತನೆಗಳನ್ನು ಹದಗೊಳಿಸಿಕೊಂಡವರು. ಇವರ 'ಗಮನ' ಹಾಗೂ 'ಅನೇಕ' ಸಾಹಿತ್ಯ ವಿಮರ್ಶೆ-ಸಾಮಾಜಿಕ ಚಿಂತನೆಗಳ ಸಂಕಲನಗಳಾದರೆ, 'ಜಯಪ್ರಕಾಶ ನಾರಾಯಣ: ಒಂದು ಅಪೂರ್ಣ ಕ್ರಾಂತಿಯ ಕಥೆ' ಹಾಗೂ 'ಲೋಹಿಯಾ ಸಮಾಜವಾದ ದರ್ಶನ' ಜೆ. ಪಿ. ಹಾಗೂ ಲೋಹಿಯಾರ ಬದುಕು ಮತ್ತು ತತ್ವಗಳನ್ನು ಪರಿಚಯ ಮಾಡಿಕೊಡುವ ಹೊತ್ತಿಗೆಗಳು. 'ಜೆ. ಪಿ. ಸೆರೆಮನೆಯ ದಿನಚರಿ' ಇವರ ಅನುವಾದಿತ ಕೃತಿ.

ಇವಲ್ಲದೆ ನಾಗಭೂಷಣ ಅವರು 'ಲೋಹಿಯಾ: ವ್ಯಕ್ತಿ-ವಿಚಾರ-ವಿಮರ್ಶೆ', 'ಕುವೆಂಪು: ಒಂದು ಪುನರನ್ವೇಷಣೆ', 'ಹಣತೆ': ಜಿ. ಎಸ್. ಎಸ್ ಅಭಿನಂದನ ಗ್ರಂಥ, 'ಮಾಸ್ತಿ ಸಾಹಿತ್ಯ: ಸಮಗ್ರದರ್ಶನ', ' ಕಾಡಿನ ಹುಡುಗ ಕೃಷ್ಣ', :ಆಲನಹಳ್ಳಿ ನೆನಪಿನ ಸಂಪುಟ ಹಾಗೂ 'ಒಲವು': ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಚಿಕೆಯ ಸಂಪಾದನೆ/ ಸಹ ಸಂಪಾದನೆ ಮಾಡಿದ್ದಾರೆ. 'ಮಾನವ' ಹಾಗೂ 'ಸಾಹಿತ್ಯ ಸಂವಾದ' ನಿಯತಕಾಲಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿರುವ ಇವರು, ಚಿತ್ರದುರ್ಗದ 'ಅಭಿರುಚಿ': ಸಾಹಿತ್ಯಿಕ ಸಾಂಸ್ಕೃತಿಕ ವೇದಿಕೆಯ ಸ್ಥಾಪಕ ಸಂಚಾಲಕರೊಬ್ಬರಾಗಿದ್ದಾರೆ.

ಬೇರು ಬಿಳಲು

(ಸಮಾಜವಾದಿ ಸಂಕಥನಗಳು)

ಡಿ. ಎಸ್. ನಾಗಭೂಷಣ

ರೂಪ
ಪ್ರಕಾಶನ
ಮೈಸೂರು

BEARU BILHALU-a collection of Socialist discourses on contemporary theams by D.S.Nagabhushana, HIG-5, 'Nudi', KHB colony, Kallahalli Extn., Vinoba Nagar, Shimoga-577204. Phone: 08182-248574, Mobile: 94492 42284.
Published by: Roopa prakashana, B-21, Upstairs, Mallige Road, Kuvempu Nagar, Mysore-570023. Mobile:93422 74331.
Cover design: Sudhakar Darbe. ©Author. Printed at:Gayathri Enterprises,Mysore.First impression: 2006.Pages:xii+188=200
Price: Rs 100/-

ಬೇರು ಬಿಳಲು (ಸಮಾಜವಾದಿ ಸಂಕಥನಗಳು)

ಲೇಖಕ: ಡಿ.ಎಸ್.ನಾಗಭೂಷಣ

ಪ್ರಕಾಶಕರು: ರೂಪ ಪ್ರಕಾಶನ,ಬಿ.೨೧,ಮಹಡಿ,ಮಲ್ಲಿಗೆ ರಸ್ತೆ,ಕುವೆಂಪು ನಗರ,ಮೈಸೂರು -೫೭೦೦೨೩

ಪ್ರಥಮ ಮುದ್ರಣ:೨೦೦೬

ಪುಟಗಳು: xii+೧೮೮=೨೦೦

ಬೆಲೆ: ರೂ.೧೦೦/-

ಅಕ್ಷರ ವಿನ್ಯಾಸ: ರೂಪ ಗ್ರಾಫಿಕ್ಸ್

ಮುದ್ರಣ:ಗಾಯತ್ರಿ ಎಂಟರ್‌ಪ್ರೈಸಸ್.

ಮುಖಪುಟ ವಿನ್ಯಾಸ: ಸುಧಾಕರ ದರ್ಬೆ

ಹಕ್ಕುಗಳು: ಲೇಖಕ

ಲೇಖಕನ ಭಾವಚಿತ್ರ: ಎ.ಎನ್.ಮುಕುಂದ

ಲೇಖಕರ ಮಾತು

ಪ್ರಸ್ತುತ ಪುಸ್ತಕ ನನ್ನ ವಿಚಾರ-ವಿಮರ್ಶೆಗಳ ಮೂರನೇ ಸಂಕಲನ. ನನ್ನ ಮೊದಲೆರಡು ಸಂಕಲನಗಳಾದ 'ಗಮನ' (೧೯೯೦) ಹಾಗೂ 'ಅನೇಕ' (೨೦೦೫) ಮುಖ್ಯವಾಗಿ ಸಾಹಿತ್ಯ ಹಾಗೂ ಸಾಮಾಜಿಕ ತತ್ವ ಚಿಂತನೆಗಳಿಷ್ಟೇ ಸೀಮಿತವಾಗಿದ್ದರೆ, 'ಬೇರು ಬಿಳಲು' ಸದ್ಯದ ಸಾಂಸ್ಕೃತಿಕ ತುರ್ತುಗಳನ್ನು ಗಮನದಲ್ಲಿಟ್ಟುಕೊಂಡು ಸಾರ್ವತ್ರಿಕವಾಗಿ ಬರೆದ ಲೇಖನಗಳನ್ನೊಳಗೊಂಡಿದೆ. ಇಲ್ಲಿ ಎಲ್ಲ ರೀತಿಯ ರಾಜಕಾರಣದ-ಸಮಾಜ, ಸಾಹಿತ್ಯ, ಭಾಷೆ, ಶಿಕ್ಷಣ, ಸಂಸ್ಕೃತಿ, ಅಭಿವೃದ್ಧಿ-ವಿಶ್ಲೇಷಣೆಯ ಹಾಗೂ ಆ ಮೂಲಕ ಅವು ಒಂದರೊಳಗೊಂದು ಹಾಸು ಹೊಕ್ಕಾಗಿ ಸೃಷ್ಟಿಸುತ್ತಿರುವ ಹೊಸ ರೂಪದ ಸಾಂಸ್ಕೃತಿಕ ಸವಾಲುಗಳನ್ನು ಗುರುತಿಸುವ ಪ್ರಯತ್ನವಿದೆ. ಹೀಗಾಗಿ ಈ ಎಲ್ಲ ಲೇಖನಗಳನ್ನು ನಾನು *ಸಮಾಜವಾದಿ ಸಂಕಥನಗಳು* ಎಂದು ಕರೆದಿದ್ದೇನೆ. ಮುಖ್ಯವಾಗಿ ಭಾರತೀಯ ಸಮಾಜವು ಪಶ್ಚಿಮದ ಆಧುನೀಕರಣದ ಪ್ರಭಾವ ಮತ್ತು ಒತ್ತಡಗಳ ಮಧ್ಯೆ ತನ್ನ ಮೂಲಸತ್ವ(genius) ಹಾಗೂ ಅಸ್ಮಿತೆ (identity)ಗಳನ್ನು ಉಳಿಸಿಕೊಳ್ಳಲು ನಡೆಸುತ್ತಿರುವ ಹೋರಾಟ, ಜಾಗತೀಕರಣದ ಈ ಹಂತದಲ್ಲಿ ವಿಕ್ಷಿಪ್ತತೆಗೆ ಈಡಾಗುತ್ತಿದೆಯೇನೋ ಎಂಬ ಆತಂಕ ನನ್ನ ಈ ಲೇಖನಗಳ ಹಿಂದೆ ಕೆಲಸ ಮಾಡಿದೆ.

ನನ್ನ ಆತಂಕದ ಹಿಂದೆ ಮುಖ್ಯವಾಗಿ ಎರಡು ಕಾರಣಗಳಿವೆ. ಒಂದು, ಆಧುನಿಕೋತ್ತರ ಚಿಂತನೆಯ ಉತ್ಸಾಹದಲ್ಲಿ ಮೂಲಸತ್ವ ಹಾಗೂ ಅಸ್ಮಿತೆಗಳೂ ಸೇರಿದಂತೆ, ಮೂರನೇ- ಈಗ ಎರಡನೇ- ಜಗತ್ತಿನ ಜನ ಸಮುದಾಯಗಳ ಆತ್ಮ ವಿಶ್ವಾಸದ ಎಲ್ಲ ಆಧಾರಗಳನ್ನೂ ಸಂದೇಹಾಸ್ಪದಗೊಳಿಸುತ್ತಿರುವ ಬೌದ್ಧಿಕ ಆಂದೋಲನವೊಂದು ನಮ್ಮಗಳ ಮಧ್ಯೆಯೇ,ಜಾಗತೀಕರಣದ ಆರಂಭಿಕ ಲಾಭಗಳಿಂದ ಮೈಮರೆತಂತೆ ತೋರುತ್ತಿರುವ ಹೊಸ ಮಧ್ಯಮ ವರ್ಗದ ಕುಮ್ಮಕ್ಕಿನೊಂದಿಗೆ ಚಿಗುರೊಡೆಯುತ್ತಿರುವುದು. ಇನ್ನೊಂದು, ಇಂತಹ ಮೈ ಮರೆವಿನ ವಾತಾವರಣದಿಂದಾಗಿಯೋ ಏನೋ, ಕ್ಷೇತ್ರ ಪರಿಣತಿ ಹಿಂದಕ್ಕೆ-ತಮ್ಮದೇ ಪ್ರತ್ಯೇ ಕತೆಯೊಳಕ್ಕೆ- ಸರಿದು, ಸಮಾಜ ಇಡಿಯಾಗಿ ರಾಜಕೀಯ ಪುಢಾರಿಗಳ ಕೈ ವಶವಾಗುತ್ತಿರುವುದು. ಬೌದ್ಧಿಕ ವಲಯ ಹಾಗೂ ರಾಜಕೀಯ ವಲಯಗಳ ನಡುವೆ ಹೀಗೆ ಸಂಬಂಧವೇ ತಪ್ಪಿ ಹೋಗುತ್ತಿರುವ ದೂರಗಾಮಿ ಪರಿಣಾಮಗಳ ಬಗ್ಗೆ ನಾವು ಅಷ್ಟೇನೂ ವ್ಯಸ್ತರಾದಂತೆ ತೋರುತ್ತಿಲ್ಲ. ಈ ಎಲ್ಲ ಆತಂಕಗಳೂ ನನ್ನ ಈ ಬರಹಗಳಿಗೆ ತುರ್ತನ್ನು ಒದಗಿಸಿವೆ. ಹಾಗಾಗಿಯೇ ನನ್ನ ಮೊದಲೆರಡು ಸಂಕಲನಗಳ ಮಧ್ಯೆ ಒಂದೂವರೆ ದಶಕದ ಅಂತರವಿದ್ದರೆ, ಈ ಮೂರನೇ ಸಂಕಲನ ಒಂದೂವರೆ ವರ್ಷದ ಅಂತರದಲ್ಲಷ್ಟೇ ಪ್ರಕಟವಾಗುತ್ತಿದೆ. ಇಲ್ಲಿನ ರಾಜಕೀಯ ಲೇಖನಗಳು

ಸಾಂದರ್ಭಿಕ ಮಾತ್ರವೆಂಬಂತೆ ಕಂಡರೂ,ಅವುಗಳ ಹಿಂದಿನ ತಾತ್ವಿಕತೆಯ ಪ್ರಸ್ತುತತೆಯನ್ನು ಓದುಗರು ಗಮನಿಸುತ್ತಾರೆಂದು ನಂಬಿದ್ದೇನೆ.

ಈ ನನ್ನ ಬರವಣಿಗೆಯ ಹಿಂದೆ ಅನೇಕ ಶಕ್ತಿ-ವ್ಯಕ್ತಿಗಳ ಪ್ರೇರಣೆಗಳಿವೆ. ಮುಖ್ಯವಾಗಿ ನನ್ನ ದೀರ್ಘ ಹಾಗೂ ತೀವ್ರ ಅಸ್ವಸ್ಥತೆಯ ನಡುವೆ ನನ್ನಲ್ಲಿ ಆತ್ಮ ವಿಶ್ವಾಸ ತುಂಬಿ, ನನ್ನ ಸಾಹಿತ್ಯಿಕ-ಸಾಂಸ್ಕೃತಿಕ ಆಲೋಚನೆಗಳಿಗೆ ಸಾಣೆಯಂತೆ ಒದಗಿ ಬಂದ ಚಿತ್ರದುರ್ಗದ *'ಅಭಿರುಚಿ':ಸಾಹಿತ್ಯಿಕ-ಸಾಂಸ್ಕೃತಿಕ ವೇದಿಕೆ* ಯನ್ನು ನಾನು ಇಲ್ಲಿ ನೆನಪಿಸಿಕೊಳ್ಳಲೇಬೇಕು. ಕಳೆದ ಐದು ವರ್ಷಗಳಿಂದಲೂ ಪ್ರತಿ ತಿಂಗಳೂ ಉನ್ನತ ಮಟ್ಟದ ಸಾಹಿತ್ಯಿಕ-ಸಾಂಸ್ಕೃತಿಕ ಗೋಷ್ಠಿಗಳನ್ನು ನಡೆಸಿಕೊಂಡು ಬರುತ್ತಿರುವ ಈ ವೇದಿಕೆಯನ್ನು ನಾನು ಪ್ರೊ|| ಬಿ. ಪಿ. ವೀರೇಂದ್ರ ಕುಮಾರರೊಂದಿಗೆ ಸೇರಿ ಸ್ಥಾಪಿಸಿದೆನಾದರೂ, ಅದೀಗ ನಮ್ಮಿಬ್ಬರನ್ನೂ ಮೀರಿ ಬೆಳೆದು ತನ್ನ ಸ್ವಾಯತ್ತತೆಯನ್ನು ಗಳಿಸಿಕೊಂಡಿದೆ. ಆ ಮೂಲಕ ರಾಜ್ಯಾದ್ಯಂತ ಎಲ್ಲ ಸಾಂಸ್ಕೃತಿಕ ವ್ಯಕ್ತಿತ್ವಗಳ ಗಮನ ಸೆಳೆದು, ತನ್ನ ವಿಚಾರ ಸಂಕಿರಣ-ಅಧ್ಯಯನ ಶಿಬಿರ -ಕವಿ ಸಮ್ಮೇಳನಗಳ ಮುಖಾಂತರ ಕನ್ನಡದ ಮುಖ್ಯ ವಾಗ್ವಾದಗಳಿಗೆ ಒಂದು ವೇದಿಕೆಯಾಗಿ ಪರಿಣಮಿಸಿದೆ. ಈ ವೇದಿಕೆಯ ಎಲ್ಲ ಗೆಳೆಯ-ಗೆಳತಿಯರ ಪ್ರೀತಿ-ಸ್ನೇಹಗಳಿಗೆ ಗೌರವ ಸೂಚಿಸುತ್ತಾ, ಈ ಪುಸ್ತಕವನ್ನು ಅವರಿಗೆ ಅರ್ಪಿಸುತ್ತಿದ್ದೇನೆ.

ಇನ್ನು ಇಲ್ಲಿನ ಲೇಖನಗಳಿಗೆ ಕಾರಣರಾದ 'ಸಂವಾದ'ದ ಶ್ರೀ ಇಂದೂಧರ ಹೊನ್ನಾಪುರ, 'ಆಂದೋಲನ'ದ ಶ್ರೀ ರಾಜಶೇಖರ ಕೋಟಿ, 'ನಮ್ಮ ನಾಡು'ವಿನ ಶ್ರೀಮತಿ ಕೆ. ಅಕ್ಷತಾ, 'ಸುಧಾ'ದ ಶ್ರೀಮತಿ ಸಿ.ಜಿ. ಮಂಜುಳಾ, 'ಮಯೂರ'ದ ಶ್ರೀ ಜಿ. ಪಿ. ಬಸವರಾಜು, 'ಹೊನ್ನಾರು'ವಿನ ಶ್ರೀ ಉಜ್ಜಜ್ಜಿ ರಾಜಣ್ಣ, 'ಅಗ್ನಿ'ಯ ಶ್ರೀ ಮಂಜುನಾಥ ಅದ್ದೆ, 'ಹೇಮಾವತಿಯ ಚೇತನ'ದ ಶ್ರೀಮತಿ ಕಮಲಾ ನರಸಿಂಹ, ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ||ಹಿ.ಶಿ. ರಾಮಚಂದ್ರೇಗೌಡ, ಮೂಡುಬಿದರೆಯ 'ಆಳ್ವಾಸ್ ನುಡಿಸಿರಿ'ಯ ಡಾ|| ಎಂ. ಮೋಹನ ಆಳ್ವಾ, 'ಶೈನಾ' ಕೈಬರಹದ ಪತ್ರಿಕೆಯ ಶ್ರೀಮತಿ ಶೈಲಾ ನಾಗರಾಜ್, ಶಿವಮೊಗ್ಗದ 'ಸಿರಿಗನ್ನಡ ಪುಸ್ತಕ ಮನೆ'ಯ ಶ್ರೀ ಎಸ್.ಸುಂದರ್ ಹಾಗೂ 'ಕರ್ನಾಟಕ ರಾಜ್ಯ ನೈಸರ್ಗಿಕ ಕೃಷಿ ಆಂದೋಲನ ವೇದಿಕೆ'ಯ ಸ್ವಾಮಿ ಆನಂದ್; ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಕುರಿತ ವಿವಾದದ ಬಗೆಗಿನ ನನ್ನ ಆರಂಭಿಕ ಲೇಖನಗಳನ್ನು ಒಂದು ಕಿರು ಪುಸ್ತಕವಾಗಿ ಪ್ರಕಟಿಸಿದ ಲೋಹಿಯಾ ಪ್ರಕಾಶನದ ಸಿ. ಚೆನ್ನಬಸವಣ್ಣ; ಹಾಗೂ ಮೈಸೂರಿನಲ್ಲಿ ನನ್ನ ಕಷ್ಟಸುಖಗಳಲ್ಲಿ ಅಣ್ಣ-ತಮ್ಮಂದಿರಂತಿದ್ದ ಡಾ|| ಹನೂರು ಕೃಷ್ಣಮೂರ್ತಿ ಹಾಗೂ ಬಿ. ರಾಜೇಶ್‌ರಿಗೆ-

ನನ್ನ ಬರವಣಿಗೆಗೆ ಪ್ರತಿಸ್ಪಂದಿಸಿ, ಚರ್ಚೆ ಹುಟ್ಟು ಹಾಕಿ ಪ್ರೋತ್ಸಾಹಿಸುತ್ತಿರುವ

ರಾಜ್ಯಾದ್ಯಂತ ಇರುವ ನನ್ನ ಅನೇಕ ಹಿರಿ ಕಿರಿಯ ಗೆಳೆಯ-ಗೆಳತಿಯರಿಗೆ-

ಈ ಪುಸ್ತಕವನ್ನು ಪ್ರೀತಿಯಿಂದ ಪ್ರಕಟಿಸುತ್ತಿರುವ ಮೈಸೂರಿನ ರೂಪ ಪ್ರಕಾಶನದ ಯು. ಎಸ್. ಮಹೇಶ್ ಅವರ ವಿಶ್ವಾಸಕ್ಕೆ-

ಬೆನ್ನುಡಿಯೆಂಬ ಅಕ್ಕರೆಯ ಮಾತುಗಳನ್ನು ಬರೆದು ಕೊಟ್ಟಿರುವ ಹೊಸ ತಲೆಮಾರಿನ ನನ್ನ ಮೆಚ್ಚಿನ ಚಿಂತಕ-ಗೆಳೆಯ ಬಂಜಗೆರೆ ಜಯಪ್ರಕಾಶ್‌ಗೆ-

ಅಂದದ ಮುಖಪುಟ ವಿನ್ಯಾಸ ಮಾಡಿಕೊಟ್ಟಿರುವ ಕಲಾವಿದ ಸುಧಾಕರ ದರ್ಬೆ ಅವರಿಗೆ-

ನನ್ನ ಇತ್ತೀಚಿನ ಬರಹಗಳನ್ನು ಗಮನಿಸಿ, ಕೆಲವು ಸಲಹೆ-ಸೂಚನೆಗಳನ್ನು ನೀಡಿದ ಹಿರಿಯ ಗಣಿತಜ್ಞರಾದ ನನ್ನಣ್ಣ ಡಾ|| ಡಿ. ಎಸ್. ಚಂದ್ರಶೇಖರಯ್ಯನವರಿಗೆ-

ನನ್ನೆಲ್ಲ ಕೆಲಸದ ಹಿಂದೆ ಸದಾ ಚೈತನ್ಯ ಶಕ್ತಿಯಂತಿರುವ ಪತ್ನಿ ಸವಿತಾಗೆ-

ಇವರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ನೆನಕೆ-ವಂದನೆಗಳು ಸಲ್ಲುತ್ತವೆ.

೬-೧೨-೨೦೦೬ -ಡಿ.ಎಸ್.ನಾಗಭೂಷಣ

ಶಿವಮೊಗ್ಗ

ಪ್ರಕಾಶಕರ ಮಾತು

ಕರ್ನಾಟಕದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕುರಿತು ಗಂಭೀರವಾಗಿ ಬರೆಯುತ್ತಿರುವವರಲ್ಲಿ ಡಿ.ಎಸ್.ನಾಗಭೂಷಣ ಸಹ ಒಬ್ಬರು. ಅವರು ಇತ್ತೀಚಿನ ಎರಡು ವರ್ಷಗಳಲ್ಲಿ ಬರೆದ ಸುಮಾರು ಹದಿನೈದಕ್ಕೂ ಹೆಚ್ಚು ಚಿಂತನ ಲೇಖನಗಳ ಸಂಕಲನ ಇದಾಗಿದೆ. ಇಲ್ಲಿನ ಬಹುಪಾಲು ಬರೆಹಗಳು ಬೇರೆ ಬೇರೆ ರೂಪದ ತತ್ಕಾಲೀನ ಪ್ರತಿಕ್ರಿಯೆಗಳಿಗೆ ನೀಡಿರುವ ತುರ್ತು ಪ್ರಕ್ರಿಯೆಗಳಾಗಿ ಮೂಡಿಬಂದಿವೆ. ಹಾಗೆ ಒಡಮೂಡುವಾಗ ಕೂಡ ಅದರೊಳಗೆ ತನ್ನದೇ ಆದ ವಿಶಿಷ್ಟ ಛಾಪಿನ ಭಿನ್ನಧ್ವನಿಯೊಂದು ಅಂತರ್ಗತವಾಗಿ ಬರುವುದನ್ನು ನಾವು ಕಾಣಬಹುದು.

ಇತ್ತೀಚಿನ ದಿನಗಳಲ್ಲಿ ನಾಗಭೂಷಣರು ಗತ ಚರಿತ್ರೆಯ ಒತ್ತಡಗಳನ್ನು ಸಹಾನುಭೂತಿಯಿಂದ ಅರಿತು ಸ್ಪಂದಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. ಜಾಗತೀಕರಣವು ಸೃಷ್ಟಿಸುತ್ತಿರುವ ಹೊಸ ಬಗೆಯ ಸಾಂಸ್ಕೃತಿಕ ಬಿಕ್ಕಟ್ಟುಗಳಿಂದ ದೇಶವಾಸಿಗಳ ಆತ್ಮಗೌರವಕ್ಕೆ ಧಕ್ಕೆ ಒದಗುತ್ತಿರುವ ಸಂದರ್ಭದಲ್ಲಿ, ಗಾಂಧೀವಾದವನ್ನು ಅದರ ಎಲ್ಲ ಮಿತಿಗಳ ಒಳಗೆ ಸತತವಾಗಿ ಪುನರನ್ವೇಷಿಸುವ ಶೋಧಕರಂತೆ ಕಾಣುತ್ತಾರೆ. ಶೀಲ ಕಳೆದುಕೊಳ್ಳುತ್ತಿರುವ ಸಮಕಾಲೀನ ಸಾಂಸ್ಕೃತಿಕ ಲೋಕದ ಬಗ್ಗೆ ಸಾತ್ವಿಕ ಸಿಟ್ಟನ್ನು ಹೊರಹಾಕುವ ಇಲ್ಲಿನ ಬರೆಹಗಳು ಆತ್ಯಂತಿಕವಾಗಿ 'ಸಮಾಜ ಕ್ಷೇಮವಾದಿ ಚಿಂತನೆ'ಯ ನೆಲೆಯನ್ನು ಪಡೆದುಕೊಳ್ಳುತ್ತವೆ.

ಸಮಾಜ, ಚರಿತ್ರೆ ಹಾಗೂ ಸಮಕಾಲೀನ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ಇವರು ಸಾಹಿತ್ಯವನ್ನು ಪ್ರವೇಶಿಸುವ ರೀತಿ ವಿಶೇಷವಾಗಿದೆ. ಇದರೊಂದಿಗೆ 'ಸಮಾಜವಾದಿ ಬದ್ಧತೆ'ಯೂ ಸೇರಿ ಬರೆಹಗಳಿಗೆ ಒಂದು ಬಗೆಯ ಹೊಸ ಆಯಾಮವನ್ನು ದೊರಕಿಸಿದೆ. ಜೊತೆಗೆ ಆಧುನಿಕೋತ್ತರವಾದಿ ಅಧ್ಯಯನಗಳನ್ನು ವಿಶ್ಲೇಷಿಸುವಾಗ, ಗೊರೂರರ ಲಲಿತ ಪ್ರತಿಭೆಯ ಬಗ್ಗೆ ಬರೆಯುವಾಗ; ಕುವೆಂಪು, ತೇಜಸ್ವಿ, ಸುಬ್ಬಣ್ಣ, ಪ್ರಸನ್ನ- ಮೊದಲಾದವರ ಜೊತೆ ಅನುಸಂಧಾನ ಶುರುವಿಟ್ಟುಕೊಂಡಾಗ; ಕಾರಂತರ ಹುಚ್ಚುಮನಸ್ಸನ್ನೋ, ರಾಜಕುಮಾರರ ವ್ಯಕ್ತಿತ್ವವನ್ನೋ ಪ್ರವೇಶಿಸುವಾಗಲೆಲ್ಲ ನಾಗಭೂಷಣರಿಗೆ 'ಗಾಂಧೀ' ರೂಪಕವು ಮತ್ತೆ ಮತ್ತೆ ನೆನಪಾಗುವುದು ಆಕಸ್ಮಿಕವೇನಲ್ಲ. ಹೀಗೆ ಕನ್ನಡದ ಗಂಭೀರ ಓದುಗರನ್ನು ಚಿಂತನೆಗೆ ಹಚ್ಚಬಲ್ಲದೆಂಬ ಆಶಾವಾದದಿಂದ ಈ ಚಿಂತನ ಲೇಖನಗಳ ಸಂಕಲನವನ್ನು ಪ್ರಕಟಿಸಲು ಹರ್ಷಿಸುತ್ತೇವೆ.

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ತಗರ ಹೋರಟೆ
ಭಕ್ತಿಯೆಂಬುದು ತೋರುಂಬ ಲಾಭ
ಗುಹೇಶ್ವರನೆಂಬುದು ಮೀರಿದ ಘನವು

-ಅಲ್ಲಮ ಪ್ರಭು

ನನ್ನ ಚಿಂತನಶೀಲತೆಯನ್ನು ವಿಸ್ತರಿಸಿದ

ಚಿತ್ರದುರ್ಗದ 'ಅಭಿರುಚಿ':
ಸಾಹಿತ್ಯಿಕ -ಸಾಂಸ್ಕೃತಿಕ ವೇದಿಕೆಯ
ಗೆಳೆಯರ ಬಳಗಕ್ಕೆ

ಈ ಕೃತಿ ಅರ್ಪಿತ

ಪರಿವಿಡಿ:

'ಅಹಿಂದ'ದ ಅಧಿಕಾರ ರಾಜಕಾರಣ*

ಹಿರಿಯರೇ ಮತ್ತು ಸ್ನೇಹಿತರೇ,

'ಅಹಿಂದ'ದ ಹುಟ್ಟು ಯಾವ ಹಿನ್ನೆಲೆಯಲ್ಲೇ ಆಗಿರಲಿ, ಅದು ಈಚಿನ ದಿನಗಳಲ್ಲಿ ಪ್ರಕಟಪಡಿಸುತ್ತಿರುವ ಉದ್ದೇಶಗಳು ಏನೇ ಇರಲಿ, ಅದು ಸದ್ಯಕ್ಕೆ ಸಿದ್ಧರಾಮಯ್ಯನವರ ರಾಜಕೀಯ ಅಳಿವು ಉಳಿವಿನ ಹೋರಾಟದ ವೇದಿಕೆಯಾಗಿದೆ ಎಂಬುದನ್ನು ಮರೆಯದೆ, ನಮ್ಮ ಮಾತುಗಳನ್ನು ಆಡಬೇಕಾಗಿದೆ. ಏಕೆಂದರೆ ಇಂದು ಸಿದ್ಧರಾಮಯ್ಯನವರು ನಮ್ಮಂತಹ ಕೆಲವರಲ್ಲಿ ಬದಲೀ ರಾಜಕಾರಣದ ಆಸೆ ಹುಟ್ಟಿಸಿದ್ದಾರೆ. ಹಾಗಾಗಿ ಇಂದು ನಾವು ಆಡುವ ಮಾತುಗಳಿಗೆ ಸದ್ಯದ ರಾಜಕೀಯ ತುರ್ತು ಎಷ್ಟರಮಟ್ಟಿಗೆ ಇರುತ್ತದೋ, ಅಷ್ಟರಮಟ್ಟಿಗೆ ಚಾರಿತ್ರಿಕ ಅರಿವು-ಎಚ್ಚರಗಳೂ ಇರಬೇಕಾಗುತ್ತದೆ. ಏಕೆಂದರೆ ಕಳೆದ ೨೫-೩೦ ವರ್ಷಗಳಲ್ಲಿ ಇಂತಹ ವೇದಿಕೆ, 'ಚಳುವಳಿ'ಗಳ ಮೂಲಕ ಸೃಷ್ಟಿಸಲಾದ ಕನಸುಗಳನ್ನು ನಾವು ನಮ್ಮ ತಪ್ಪು ಮಾತುಗಳಿಂದ, ಬೇಜವಾಬ್ದಾರಿ ನಡವಳಿಕೆಗಳಿಂದ, ಅವಸರದ ಕಾರ್ಯಕ್ರಮಗಳಿಂದ ಕೈಯಾರ ಕೆಡಿಸಿ ಹಾಕಿದ್ದೇವೆ. ಇದು, ನಿರ್ದಿಷ್ಟ ಉದಾಹರಣೆಗಳು ಅನಗತ್ಯವಾಗುವಷ್ಟು ಸ್ಪಷ್ಟವಾಗಿದೆ.

'ಅಹಿಂದ'ದ ಸದ್ಯದ ಅವಸ್ಥೆಯನ್ನು ಅಥವಾ ಆಶೋತ್ತರಗಳನ್ನಷ್ಟೇ ಗಮನಿಸಿ ಇಂದು ಮಾತನಾಡಿದರೆ ಸಾಲದು. ಇಂದು 'ಅಹಿಂದ' ಕುರಿತು ನಮಗೆ ಪ್ರೀತಿ ಇದ್ದರೆ-ಅದು ನಮ್ಮದು ಎಂಬ ಭಾವನೆಯಿಂದ ನಾವು ಇಲ್ಲಿಗೆ ಬಂದಿದ್ದರೆ ಅದಕ್ಕೆ ಕಾರಣ, ಅದಕ್ಕೊಂದು ದೀರ್ಘ ಪರಂಪರೆ ಇದೆ-ಅದಕ್ಕೊಂದು ಆಳವಾದ, ವಿಶಾಲವಾದ ದರ್ಶನ ಅಂದರೆ Vision ಇದೆ; ನಾವು ಅದಕ್ಕೆ ಹಕ್ಕುದಾರರು ಎಂಬುದೇ ಆಗಿದೆ. ಈ ಪರಂಪರೆಯನ್ನು ಸ್ಥೂಲವಾಗಿ ಅವೈದಿಕ ಪರಂಪರೆ ಎಂದು ಗುರುತಿಸಬಹುದು. ಅಂದರೆ, ಅದು ಬ್ರಾಹ್ಮಣೇತರ ಜಾತಿ ಪರಂಪರೆಯಷ್ಟೇ ಅಲ್ಲ. ಅದೊಂದು ಬದಲೀ ಚಿಂತನ ಕ್ರಮ. ಬದಲೀ ದೃಷ್ಟಿಕೋನ, ಮೌಲ್ಯ ಹಾಗೂ ಪಾವಿತ್ರ್ಯಗಳುಳ್ಳ ಪರಂಪರೆ. ಅದು ಯಾವುದೇ ಜಾತಿಗೆ ಅಥವಾ ಜಾತಿಗಳಿಗೆ ಸೀಮಿತವಾಗದ ಜಾತ್ಯತೀತ ಪರಂಪರೆ. ಹಾಗಾಗಿಯೇ ನಾವು ಬುದ್ಧ-ಬಸವ-ಗಾಂಧಿ, ಇತ್ತೀಚೆಗೆ ಕುವೆಂಪು ಅವರನ್ನು ಸೇರಿಸಿಕೊಂಡು, ನಮ್ಮ ಪರಂಪರೆಯ ಮೈಲಿಗಲ್ಲುಗಳನ್ನು ಗುರುತಿಸಿಕೊಂಡಿದ್ದೇವೆ.

ಇದು ಬಹಳ ಸ್ಥೂಲವಾದ ಗುರುತಿಸುವಿಕೆ ಎಂದೇ ನನ್ನ ಭಾವನೆ. ಹಾಗೆ ನೋಡಿದರೆ ಈ ಪರಂಪರೆಯನ್ನು ಇನ್ನಷ್ಟು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಅದನ್ನು ಎರಡು ಧಾರೆಗಳನ್ನಾಗಿ, ಅವು ಪರಸ್ಪರ ಪ್ರತ್ಯೇಕವಲ್ಲದಿದ್ದರೂ, ನೋಡಬಹುದು. ಒಂದು

* 'ಚಿಂತನ ಅಹಿಂದ'ವು ೧೩-೧೧-೨೦೦೫ ರಂದು ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಅಹಿಂದ ಚಳುವಳಿ ಮತ್ತು ಸಾಮಾಜಿಕ ಆಯಾಮಗಳು' ಕುರಿತು ವಿಚಾರ ಸಂಕಿರಣದ ಮೊದಲ ಗೋಷ್ಠಿಯ ಅಧ್ಯಕ್ಷ ಭಾಷಣದ ಬರಹ ರೂಪ.

ಆಧ್ಯಾತ್ಮಿಕ ಧಾರೆ, ಇನ್ನೊಂದು ಲೌಕಿಕ ಧಾರೆ. ಈ ಆಧ್ಯಾತ್ಮಿಕ ಧಾರೆ ಬುದ್ಧ ಬಸವ ವಿವೇಕಾನಂದ- ನಾರಾಯಣಗುರು-ಮುಂತಾದ ಸಂತರಿಂದ, ಅವರ ತತ್ವ ಮೀಮಾಂಸೆಯ ಮೂಲಕ ಗುರುತಿಸಲ್ಪಟ್ಟಿದ್ದರೆ; ಲೌಕಿಕ ಧಾರೆ ಮಹಾತ್ಮ ಫುಲೆ-ಶಾಹು ಮಹಾರಾಜ್-ಪೆರಿಯಾರ್-ಸಿ.ಆರ್.ರೆಡ್ಡಿ-ತಂಬೂಚೆಟ್ಟಿ-ಕಾಂತರಾಜ ಅರಸ್-ದೇವರಾಜ ಅರಸರಂತಹ (ಉ.ಕರ್ನಾಟಕದಲ್ಲಿ ಅರಟಾಳ ರುದ್ರಗೌಡರು ಮತ್ತು ಸಿದ್ಧಪ್ಪ ಕಂಬಳಿ)ಹೋರಾಟಗಾರ-ಆಡಳಿತಗಾರರಿಂದ,ಅವರ ಕಾರ್ಯಕ್ರಮಗಳ ಮೂಲಕ ಗುರುತಿಸಲ್ಪಟ್ಟಿದೆ. ಗಾಂಧಿ-ಲೋಹಿಯಾ-ಅಂಬೇಡ್ಕರ್, ಈ ಎರಡೂ ಧಾರೆಗಳನ್ನು ಅವಿಭಾಜ್ಯವಾಗಿ ಜೋಡಿಸುವ ಪ್ರಯತ್ನ ಮಾಡಿದ ದ್ರಷ್ಟಾರರು ಎಂದು ಹೇಳಬಹುದು.

೨೦೦೫, ಈ ತಾತ್ವಿಕ ಧಾರೆಯ ಇತಿಹಾಸದ ದೃಷ್ಟಿಯಿಂದ, ವಿಶೇಷವಾಗಿ ಕರ್ನಾಟಕ ಚರಿತ್ರೆಯ ದೃಷ್ಟಿಯಿಂದ, ಬಹುಮುಖ್ಯ ವರ್ಷ. ಈಗ್ಗೆ ನೂರುವರ್ಷಗಳ ಹಿಂದಷ್ಟೇ ಈ 'ಅಹಿಂದ'ದ ಮೂಲ ಬೀಜ ಬಿತ್ತಲ್ಪಟ್ಟಿದುದು. ೧೯೦೫ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮೊಟ್ಟಮೊದಲ ಬ್ರಾಹ್ಮಣೇತರ ಸಂಘಟನೆ, ಲಿಂಗಾಯಿತರ ಸಂಘ ಸ್ಥಾಪನೆಯಾಯಿತು. ನಂತರದ ವರುಷಗಳಲ್ಲೇ ಒಕ್ಕಲಿಗರ ಸಂಘ, ಮುಸ್ಲಿಮರ ಸಂಘ, ಆದಿದ್ರಾವಿಡರ ಸಂಘ ಮುಂತಾಗಿ ಎಚ್ಚೆತ್ತ ಜಾತಿ-ಜನವರ್ಗಗಳ ಸಂಘಗಳು ಸ್ಥಾಪನೆಯಾದವು. ಇವು ಮೂಲತಃ ರಾಜ್ಯಾಡಳಿತದ ಹೆಚ್ಚು ಕಡಿಮೆ ಎಲ್ಲ ಸ್ಥಾನಮಾನಗಳನು ಮೇಲ್ಜಾತಿಯವರೇ (ಬ್ರಾಹ್ಮಣರೇ) ಪಡೆದಿದ್ದಾರೆ ಎಂಬ ಸಾಮಾಜಿಕ ಅರಿವಿನಿಂದ ಹುಟ್ಟಿದ ಬ್ರಾಹ್ಮಣೇತರ ಜಾತಿ ಪ್ರಜ್ಞೆಯ ಕೂಸುಗಳು. ಇವುಗಳೆಲ್ಲದರ ಫಲವೇ ೧೯೧೭ರ ಹೊತ್ತಿಗೆ ರಚನೆಯಾದ ಕರ್ನಾಟಕದ ಪ್ರಪ್ರಥಮ ಬ್ರಾಹ್ಮಣೇತರ ರಾಜಕೀಯ ಸಂಘಟನೆ *ಪ್ರಜಾಮಿತ್ರ ಮಂಡಳಿ.* ಆದರೆ ನಾವು ಗಮನಿಸಬೇಕಾದ್ದು ಇದಿಷ್ಟನ್ನೇ ಅಲ್ಲ; ಈ ಸಾಮಾಜಿಕ ಜಾಗೃತಿ ಉಂಟಾದದ್ದು, ಬ್ರಿಟಿಷರು ಅಧಿಕಾರವನ್ನು ಹಂತಾನುಹಂತವಾಗಿ ಹಸ್ತಾಂತರ ಮಾಡುವ ಪ್ರಕ್ರಿಯೆ ಆರಂಭದ ಮೊದಲ ಸುಳಿವು ದೊರಕಲಾರಂಭಿಸಿದ ಮೇಲೆ- ಅವರಿಂದ ಹಸ್ತಾಂತರವಾಗುವ ಅಧಿಕಾರ ಯಾರ ಕೈಗೆ ಹೋಗಲಿದೆ ಎಂಬುದನ್ನು ಊಹೆ ಮಾಡಿಕೊಳ್ಳಲು ಸಾಧ್ಯವಾದಾಗಷ್ಟೇ.

ನಾವು ಇಂದು ಈ 'ಅಹಿಂದ'ವನ್ನು ಬೆಳೆಸುವ, ಅದಕ್ಕೊಂದು ದಿಕ್ಕು ತೋರಿಸುವ ಮಾತನಾಡುತ್ತಿರುವವರು, ಆ ದಿಕ್ಕಿನಲ್ಲಿ ನಡೆಯಲು ಸಜ್ಜಾಗಿರುವವರು ಮುಖ್ಯವಾಗಿ ಗಮನಿಸಬೇಕಾದ್ದು, ಈ ಹಿಂದುಳಿದ ವರ್ಗಗಳ ಚಳುವಳಿ ಅಥವಾ ಸಂಘಟನೆಗೆ ಸ್ಫೂರ್ತಿ ಒದಗಿಸಿದ ಇಪ್ಪತ್ತನೇ ಶತಮಾನದ ಎರಡನೇ ದಶಕದಲ್ಲಿ ಆರಂಭವಾದ ಬ್ರಾಹ್ಮಣೇತರ ಜಾತಿಗಳ ಸಂಘಟನೆಯೂ ಮೂಲತಃ ಅಧಿಕಾರದ ಹಂಚಿಕೆಯನ್ನಷ್ಟೇ(ಅದರ ಶೀಲ ಮತ್ತು ಸ್ವರೂಪವನ್ನು ಬದಲಾಯಿಸುವುದಲ್ಲ)ದೃಷ್ಟಿಯಲ್ಲಿಟ್ಟುಕೊಂಡು ರೂಪುಗೊಂಡವು ಎಂಬುದನ್ನು. ಇಂದು 'ಅಹಿಂದ' ವೂ ಅದೇ ದೃಷ್ಟಿಯನ್ನಿಟ್ಟುಕೊಂಡು ಮತ್ತು ಅದೊಂದೇ

ದೃಷ್ಟಿಯನ್ನಿಟ್ಟುಕೊಂಡು ಮಾತನಾಡುತ್ತಿದ್ದರೆ, ಈ ಬ್ರಾಹ್ಮಣೇತರ ಚಳುವಳಿಯಿಂದ ಟಿಸಿಲೊಡೆದ ಈ ಹಿಂದುಳಿದ ವರ್ಗಗಳ 'ಚಳುವಳಿ' ಬೆಳೆದೇ ಇಲ್ಲ, ಚರಿತ್ರೆಯಿಂದ ಏನನ್ನೂ ಕಲಿತೇ ಇಲ್ಲ ಎಂದು ಹೇಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲೇ, ನಾನು ಮೊದಲಲ್ಲೇ ಪರಂಪರೆಯ ಮಾತೆತ್ತಿ, ಅದರ ಆಧ್ಯಾತ್ಮಿಕ ಹಾಗೂ ಲೌಕಿಕ ಧಾರೆಗಳ ಪ್ರಸ್ತಾಪ ಮಾಡಿದ್ದು.

ಬುದ್ಧ ಎನ್ನುತ್ತೇವೆ, ಬಸವ ಎನ್ನುತ್ತೇವೆ, ಅವರು ಜಾತಿ ಪದ್ಧತಿ ವಿರುದ್ಧ ಹೋರಾಡಿದರು ಎಂದು ಬಿಡುತ್ತೇವೆ. ಆದರೆ ಜಾತಿ ಪದ್ಧತಿ ವಿರುದ್ಧದ ಅವರ 'ಹೋರಾಟ', ಬದುಕನ್ನು ಕುರಿತ ಅವರ ಯಾವ ದರ್ಶನದ ಒಂದು ಭಾಗವಾಗಿ ಬಂದಿತ್ತು ಎಂಬುದನ್ನು ನಾವು ಯೋಚಿಸಿದ್ದೇವೆಯೇ? ಆ ದರ್ಶನದ ಭಿತ್ತಿ ಇಲ್ಲದೆ ಹೋಗಿದ್ದರೆ, ಜಾತಿ ಪದ್ಧತಿ ಕುರಿತ ಅವರ ನಿಲುವುಗಳು ಚರಿತ್ರೆಯಲ್ಲಿ ಇಷ್ಟು ಉಜ್ವಲವಾಗಿ ಉಳಿದು ಇನ್ನು ಮಾರ್ದನಿಗೊಳ್ಳಲು ಸಾಧ್ಯವಿರುತ್ತಿತ್ತೇ? ಬುದ್ಧ ಬದುಕಿನ ಅಶಾಶ್ವತತೆಯ ಮೀಮಾಂಸೆಯನ್ನು ಮಂಡಿಸಿದ್ದ. ಜಗತ್ತು ಆಸೆಯಿಂದ ಹುಟ್ಟಿದುದು, ದುಃಖದಿಂದ ಕೂಡಿದೆ ಎಂದ. ಆ ದುಃಖದ ನಿವಾರಣೆಯ ಮಾರ್ಗದ ಅನಾವರಣ ಮಾಡಿದ. ಈ ಅನಾವರಣದ ಭಾಗವಾಗಿ ಜಾತಿ ಪದ್ಧತಿಯ ಅಸಂಬದ್ಧತೆಯ ಬಗ್ಗೆ ಮಾತನಾಡಿದ; ಜಾತಿ ಎಂಬುವುದಿಲ್ಲ ಎಂದ. ಬಸವಣ್ಣ'ನಾನು ಮಾದರ ಚನ್ನಯ್ಯನ ಮಗ' ಎಂದೆನ್ನುತ್ತಾ ಜಾತಿ ಪದ್ಧತಿಯಲ್ಲಿ ಅಂತರ್ಗತವಾಗಿರುವ ಶ್ರೇಣೀಕರಣವನ್ನೇ ಪ್ರಶ್ನಿಸಿದ. ಜಾತಿಪದ್ಧತಿ ವಿರುದ್ಧದ ಕಾರ್ಯಕ್ರಮವಾಗಿ, ಪ್ರತಿಯೊಬ್ಬರ ಆತ್ಮಗೌರವಕ್ಕೂ ಆಧಾರವಾಗಬಲ್ಲ ಕಾಯಕ ಗೌರವದ ಕಲ್ಪನೆಯನ್ನು ಮಂಡಿಸಿದ. ಹೆಚ್ಚು ಗಳಿಸಿದವರು ಇತರರೊಡನೆ ಹಂಚಿಕೊಂಡು ತಿನ್ನುವ ಕಲ್ಪನೆಯನ್ನು ಆಧರಿಸಿದ ದಾಸೋಹ ಪದ್ಧತಿಯನ್ನು ರೂಢಿಸಿಕೊಟ್ಟ. ಇವುಗಳ ಆಧಾರದ ಮೇಲೆ ಜಾತ್ಯಾತೀತವಾದ ಶರಣ ಸಂಸ್ಕೃತಿ ಕಟ್ಟಿದ.

ಇನ್ನು ನಾವು ವಿವೇಕಾನಂದ- ನಾರಾಯಣ ಗುರುಗಳ ಬಗ್ಗೆ ಮಾತನಾಡುವುದೇ ಇಲ್ಲ. ಇದು ದೊಡ್ಡ ಆಶ್ಚರ್ಯ. ಏಕೆಂದರೆ ಈ ಇಬ್ಬರೂ ನಮ್ಮ ಹತ್ತಿರದ ಚರಿತ್ರೆಗೆ ಸೇರಿದವರು-ಕಳೆದ ಶತಮಾನದ ಬ್ರಾಹ್ಮಣೇತರ ಚಳುವಳಿಗೆ ಆಧ್ಯಾತ್ಮಿಕ ಭಿತ್ತಿ ಒದಗಿಸಿದ್ದವರು. ವಿವೇಕಾನಂದರು ಹಿಂದೂ ಧರ್ಮದ ಪುನರುಜ್ಜೀವನದ - ಇದಕ್ಕಾಗಿ ಅವರು ವೈದಿಕ ಚೌಕಟ್ಟನ್ನು ಹಲವಾರು ಬಾರಿ ಮೀರಿ ನಿಂತರು-ಕಾರ್ಯಕ್ರಮದ ಅಂಗವಾಗಿ ಮುನ್ನೋಡಿದ ಶೂದ್ರ ಭಾರತದ ಪರಿಕಲ್ಪನೆ ಹಾಗೂ ಅದಕ್ಕೆ ಒತ್ತಾಸೆಯಾಗಿ ಮಂಡಿಸಿದ ಸಲಹೆ-ಸೂಚನೆಗಳ ಬಲವಿಲ್ಲದೆ, ನಾವು ಇಂದು ಬಹುವಾಗಿ ಉಲ್ಲೇಖಿಸುವ ನಾಲ್ವಡಿ ಕೃಷ್ಣರಾಜ ಒಡೆಯರ 'ಶೂದ್ರ ಪ್ರಜ್ಞೆ' ಚಿಗುರೊಡೆಯುತ್ತಿರಲಿಲ್ಲ ಎಂಬುದನ್ನೇಕೆ ಗಮನಿಸುತ್ತಿಲ್ಲ? ಹಾಗೆಯೇ, ವಿವೇಕಾನಂದರ ಕೇರಳ ಯಾತ್ರೆಯೇ ಆಧುನಿಕ ಕಾಲದ ಶೂದ್ರ ಸಂತ ನಾರಾಯಣ ಗುರುಗಳ 'ಒಂದೇ ಕುಲ, ಒಂದೇ ದೈವ' ಚಳುವಳಿಗೆ ನಾಂದಿ

ಹಾಡಿದ್ದು ಎಂಬುದನ್ನು ನಾವೇಕೆ ಮರೆಯುತ್ತೇವೆ? ಇಂತಹ ಮರೆವುಗಳೇ ಹಿಂದುಳಿದ ವರ್ಗಗಳ ಚಳುವಳಿಯನ್ನು, ರಾಜಕೀಯ ಅಧಿಕಾರ -ಉದ್ಯೋಗ ಮೀಸಲಾತಿ ಎಂಬೆರಡು ಅಂಶಗಳ ಬೇಡಿಕೆಯನ್ನಾಧರಿಸಿದ ಕಾರ್ಮಿಕ ಸಂಘಗಳ ಮಟ್ಟಕ್ಕೆ ತಂದು ನಿಲ್ಲಿಸಿರುವುದು. ಇಂದು ಕಾರ್ಮಿಕ ಸಂಘಗಳಿಗೆ ಏನು ಗತಿ ಬಂದಿದೆ ಮತ್ತು ಏಕೆ ಈ ಗತಿ ಬಂದಿದೆ ಎಂದು ಯೋಚಿಸಿದರೆ, ಈ ಮರೆವು ಎಷ್ಟು ದುಬಾರಿ ಎಂಬುದು ಗೊತ್ತಾಗುತ್ತದೆ.

ಬುದ್ಧ-ಬಸವ-ವಿವೇಕಾನಂದ-ನಾರಾಯಣ ಗುರುಗಳನ್ನು ನೆನಪಿಸಿಕೊಳ್ಳುವುದು ಎಂದರೆ ಮುಖ್ಯವಾಗಿ ಎರಡು ವಿಷಯಗಳನ್ನು ನೆನಪಿಸಿಕೊಂಡಂತೆ. ಒಂದು, ಅವರೆಲ್ಲರೂ ಇಡೀ ಸಮಾಜವನ್ನು ಮುನ್ನಡೆಸುವ 'ಇಡಿ' ನಾಯಕರಾಗಿದ್ದರು. ಎಂದೂ ವರ್ಗದ, ಸಮಾಜದ ಒಂದು ಭಾಗದ 'ಬಿಡಿ' ನಾಯಕರಾಗಿ ಗುರುತಿಸಿಕೊಂಡು ತಮ್ಮ ದರ್ಶನವನ್ನು ರೂಪಿಸಿಕೊಡಲಿಲ್ಲ. ಎರಡು, ಅವರು ಆಧ್ಯಾತ್ಮವಾದಿಗಳಾಗಿದ್ದರು. ಆಧ್ಯಾತ್ಮ ಎಂದರೆ ಕೆಲವರು ಹೇಳುವಂತೆ ಅಮೂರ್ತ ಚಿಂತನೆ ಎಂದಲ್ಲ. ಬದಲಾಗಿ ಅಮೂರ್ತಗಳ ಮೂರ್ತೀಕರಣದ ಸಾಹಸವದು. ಅಂದರೆ, ಅವರು ಎಲ್ಲವನ್ನೂ ಏಕೆ ಮತ್ತು ಹೇಗೆ ಎಂಬ ಪ್ರಶ್ನೆಗಳ ಆಧಾರದ ಮೇಲೆ ಅವುಗಳ ತಾಳಿಕೆ-ಬಾಳಿಕೆಗಳನ್ನು ನೋಡುವವರಾಗಿದ್ದರು. ಉದಾಹರಣೆಗೆ ಆಸ್ತಿ, ಅಧಿಕಾರಗಳು, ಏಕೆ ಮತ್ತು ಹೇಗೆ ಎಂಬ ಪ್ರಶ್ನೆಗಳನ್ನು ಎದುರುಗೊಳ್ಳದೆ, ಅವಕ್ಕೆ ಅಸ್ತಿತ್ವವೇ ಇಲ್ಲ ಎಂದು ಪ್ರತಿಪಾದಿಸುವವರಾಗಿದ್ದರು. ಹಾಗಾಗಿಯೇ ಅವರೆಲ್ಲರೂ ಅವರ ದಿನಗಳಲ್ಲಿ ಕಟು ಸಾಮಾಜಿಕ ವಾಸ್ತವವೆನಿಸಿದ ಜಾತಿಪದ್ಧತಿಯನ್ನು ಅಲ್ಲಗಳೆದೂ, ಉಳಿದು ಬೆಳೆದರು. ನಮ್ಮ ತನಕವೂ ತಲುಪಿದರು. ಆದುದರಿಂದ ಇಂದು ಆಸ್ತಿ-ಅಧಿಕಾರಗಳ ನೆಲೆಗಳ ಮೇಲೆ ನಿಂತು ಬೆಳೆಯಬಯಸುತ್ತಿರುವ 'ಅಹಿಂದ' ತನ್ನ ಆಧ್ಯಾತ್ಮವಾದಿ ಪರಂಪರೆಯೊಂದಿಗೆ ತನ್ನನ್ನು ಜೋಡಿಸಿಕೊಂಡು ತನ್ನ ದಿಕ್ಕು-ದೆಸೆಗಳನ್ನು ನಿರ್ಧರಿಸಿಕೊಳ್ಳದೆ ಹೋದರೆ, ಬಹುಬೇಗನೆ ಕೊಳೆತು ಕಳೆದುಹೋಗುವ ಅಪಾಯವನ್ನು ಎದುರಿಸುತ್ತದೆ.

ಕರ್ನಾಟಕದ ಹಿಂದುಳಿದ ವರ್ಗಗಳ ತಾಯಿ ಚಳುವಳಿ ಎನಿಸಿರುವ ಬ್ರಾಹ್ಮಣೇತರ ಚಳುವಳಿಯ ಮೊದಲ ಬಲಿ, ಕನ್ನಡ ನಾಡು ಕಂಡ ಮಹಾ ಮೇಧಾವಿಯೂ, ಜಾತ್ಯಾತೀತರೂ, ದಕ್ಷರೂ ಆಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರು ಎಂಬುದನ್ನು ನಾವು ಮರೆಯದಿರೋಣ. ಅಂತಹ ಬಲಿಯನ್ನುಂಡ ಚಳುವಳಿಗೆ ಎಂತಹ ಜವಾಬ್ದಾರಿ ಇರಬೇಕಾಗುತ್ತದೆ! ಜಾತಿ ಎಂಬುದೇ ಬ್ರಾಹ್ಮಣೇತರರಿಗೆ, ನಿರ್ದಿಷ್ಟವಾಗಿ ಇಂದಿನ ಹಿಂದುಳಿದ ವರ್ಗಗಳಿಗೆ ಅನ್ಯಾಯಕ್ಕೆ ಕಾರಣವಾಗಿದ್ದರೆ, ಅದನ್ನೇಕೆ ಬಿಟ್ಟು ಬಿಡಬಾರದು? ಜಾತಿಯ ಮರ್ಮವೇ ಅದು: ಅದರಲ್ಲಿನ ಶ್ರೇಣೀಕರಣದ ನೋವು-ಅವಮಾನ-ಅನ್ಯಾಯಗಳು ನಮಗೆ ಮಾತ್ರ; ನಮಗಿಂತ ತಳಗಿನವರಲ್ಲಿ ಅದೂ ಇನ್ನೂ ಹೆಚ್ಚು

ನೋವು ಅವಮಾನ ಅನ್ಯಾಯಗಳನ್ನು ಎಸಗುತ್ತದೆ ಎಂಬುದನ್ನು ನಮ್ಮ ಅರಿವಿಗೆ ತರುವುದಿಲ್ಲ. ನಮ್ಮ ಕಣ್ಣು, ಶ್ರೇಣೀಕರಣದಲ್ಲಿ ನಮಗಿಂತ ಮೇಲಿರುವವರು ಪಡೆದಿರುವ ಹಕ್ಕು-ಅಧಿಕಾರ-ಸಂಪತ್ತುಗಳನ್ನು ಪಡೆಯುವ ಕಡೆಗಷ್ಟೇ. ಸಮಾಜದಲ್ಲಿ ಹಂಚಿ ಹರಡಿ ಹೋಗದಿದ್ದಲ್ಲಿ, ಆ ಹಕ್ಕು-ಅಧಿಕಾರ-ಸಂಪತ್ತುಗಳು ಕೆಡುಕನ್ನಷ್ಟೇ ಉಂಟುಮಾಡುವುವು ಎಂಬ ಪರಿವೆಯೇ ನಮಗಿಲ್ಲ. ಅಂದರೆ ಜಾತಿ ನಮ್ಮ ಮನಸ್ಸುಗಳನ್ನೇ, ನಮ್ಮ ಚಿಂತನಾಕ್ರಮವನ್ನೇ ಶ್ರೇಣೀಕರಿಸಿಗೊಳಿಸಿ ಬಿಟ್ಟಿದೆ. ಹಾಗಾಗಿಯೇ ಬ್ರಾಹ್ಮಣರ ಅಧಿಕಾರದ ಮೇಲಷ್ಟೇ ಕಣ್ಣಿಟ್ಟ ಕಳೆದ ಶತಮಾನದ ಬ್ರಾಹ್ಮಣೇತರ ಚಳುವಳಿಗೆ, ಸಂಖ್ಯಾಬಲವಿದ್ದ ಜಾತಿಗಳಾಚೆಗೆ ಕಣ್ಣು ಹಾಯಿಸುವ ವ್ಯವಧಾನವೇ ಉಂಟಾಗಲಿಲ್ಲ. ಅಷ್ಟೇ ಅಲ್ಲ, ಗಣನೀಯ ಸಂಖ್ಯಾಬಲವಿದ್ದ ದಲಿತರನ್ನು ತನ್ನವರೆಂದು ಭಾವಿಸುವ ಹೃದಯವನ್ನೇ ಪಡೆಯಲಿಲ್ಲ.

ಬ್ರಾಹ್ಮಣೇತರ ಚಳುವಳಿಯ ನಾಯಕರಲ್ಲಿ ಮುನ್ನೋಟವಿದ್ದ ಏಕೈಕ ನಾಯಕ ಸಿ.ಆರ್.ರೆಡ್ಡಿ ಅವರು ಬ್ರಾಹ್ಮಣೇತರರಿಗೆ ದೊರಕುವ ಸವಲತ್ತುಗಳು ದಲಿತರಿಗೂ ದೊರೆಯಬೇಕೆಂದಾಗ-ಅವರಿಗೆ ಸಾರ್ವಜನಿಕ ಶಾಲಾ ಪ್ರವೇಶದ ಹಕ್ಕನ್ನು ಪ್ರಸ್ತಾಪಿಸಿದಾಗ-ಬ್ರಾಹ್ಮಣೇತರರಿಂದಲೇ ಪ್ರಬಲ ವಿರೋಧವುಂಟಾಗಿ, ಅವರು ಹತಾಶರಾಗಿ ರಾಜ್ಯವನ್ನೇ ಬಿಟ್ಟು ಹೋದರು.ನಂತರ ಮೇಲ್ಜಾತಿಗಳನ್ನೇ ಮೇಲಕ್ಕೆ ತಂದು ಕೂರಿಸುವ ವಿಶ್ವೇಶ್ವರಯ್ಯನವರ ಕೈಗಾರಿಕಾ ಪ್ರಧಾನವಾದ ಆರ್ಥಿಕ ನೀತಿಗೆ ವಿರುದ್ಧವಾಗಿ ಕೃಷಿ ಮತ್ತು ಕೈಕಸುಬು ಪ್ರಧಾನವಾದ ಆರ್ಥಿಕ ಹಾಗೂ ಆಡಳಿತ ನೀತಿಯನ್ನು ಪ್ರತಿಪಾದಿಸಿ; ಬ್ರಾಹ್ಮಣೇತರ ಜಾತಿಗಳ ಹಾಗೂ ವಿವೇಕಾನಂದರಿಂದ ಆಧ್ಯಾತ್ಮಿಕ ಪ್ರೇರಣೆ ಪಡೆದಿದ್ದ ದೊರೆ ನಾಲ್ವಡಿಯವರ ಸಹಾನುಭೂತಿ ಗಳಿಸಿದ್ದ ದಿವಾನ್ ಕಾಂತರಾಜ ಅರಸರ ತಾತ್ವಿಕ ಪ್ರೇರಣೆಯ ಹಿಂದಿದ್ದ ದೃಢ ನಂಬಿಕೆಗಳಿಂದಾಗಿ, ಪ್ರಭುತ್ವದ ಕಡೆಯಿಂದ ಅಸ್ಪೃಶ್ಯರನ್ನು ಜನಸಮುದಾಯದ ಮುಖ್ಯ ಧಾರೆಗೆ ತರುವ ವಿಧಾಯಕ ಕ್ರಮಗಳು ಮುಂದುವರೆದುವು. ಆದರೆ ಅವಕ್ಕೆ ಬ್ರಾಹ್ಮಣೇತರ ಚಳುವಳಿಯ ಬೆಂಬಲ ಸಿಗಲಿಲ್ಲ. ಬ್ರಾಹ್ಮಣರ ಬೆಂಬಲವಂತೂ ಇಲ್ಲವೇ ಇಲ್ಲ. ವಿಚಿತ್ರವೆಂದರೆ ಮತ್ತೆ ಮೈಸೂರು ಸಂಸ್ಥಾನದಲ್ಲಿ ಇಂತಹ ವಿಧಾಯಕ ಕ್ರಮಗಳನ್ನು ಜನಸಮುದಾಯದ ಕಡೆಯಿಂದ ಕೈಗೆತ್ತಿಕೊಂಡವರೆಂದರೆ, ನಂತರದ ದಿನಗಳಲ್ಲಿ ಗಾಂಧೀಜಿಯಿಂದ ಪ್ರೇರಣೆ ಪಡೆದ ಕುದ್ಮಲ್ ರಂಗರಾವ್ ಹಾಗೂ ನರಸಿಂಹ ಅಯ್ಯಂಗಾರ್‌ರಂತಹ ಬ್ರಾಹ್ಮಣರೇ.

ಹೀಗಾಗಿ ಬ್ರಾಹ್ಮಣೇತರ ಚಳುವಳಿ, ಸವಲತ್ತುಗಳು ಸಿಕ್ಕಂತೆಲ್ಲಾ ಬ್ರಾಹ್ಮಣೇತರರ ಜಾತಿವಾದಿ ಚಳುವಳಿಯಾಗಿ ಮಾರ್ಪಟ್ಟು, ಜಾತಿ ಗುಂಪುಗಳ ಒಡಕು ರಾಜಕಾರಣವೇ ಮೇಲುಗೈ ಪಡೆದು, ಅವುಗಳ ಮುಖ್ಯ ಪಕ್ಷವಾದ ಪ್ರಜಾಮಿತ್ರ ಮಂಡಳಿಯು ದುರ್ಬಲಗೊಳ್ಳುತ್ತಾ ಹೋಯಿತು. ಅಂತಿಮವಾಗಿ ಅದು ತನ್ನ ಚಹರೆಗಳನ್ನು

ಮೈಸೂರು ಕಾಂಗ್ರೆಸ್‌ನಲ್ಲಿ ಕರಗಿಸಿಕೊಂಡಿತು. ಈ ಪ್ರವೃತ್ತಿಯ ಮುಂದುವರಿಕೆಯೇ ಇಂದಿನ ಒಳಮೀಸಲಾತಿ ಪ್ರಸ್ತಾವನೆ. ಈ ಒಳಮೀಸಲಾತಿ ಕುರುಬ-ಈಡಿಗರಿಗಷ್ಟೇ ನಿಲ್ಲುವಂತಹುದೇ? ಅದಕ್ಕೆ ನಿಲುಗಡೆ ಎಂಬುದಿದೆಯೇ? ಈ ನಿಲುಗಡೆಯನ್ನು ಅದು ತಲುಪುವ ವೇಳೆಗೆ ಅದು ಸಮಾಜದ ಎಷ್ಟು 'ಒಳ'ಗಳನ್ನು ಕೊರೆಯುತ್ತಾ ಹೋಗಬಹುದು? ಈ ಕಡೆ ಗಮನವಿರದ ಯಾವುದೇ ಚಳುವಳಿ ಸಾಮಾಜಿಕ ಚಳುವಳಿ ಎನ್ನಿಸಿಕೊಳ್ಳಲಾರದು. ನಮ್ಮ ಕಣ್ಮುಂದೆಯೇ ಇತ್ತೀಚಿನ ದಾರುಣ ಉದಾಹರಣೆ ಇದೆ. ಕರ್ನಾಟಕ ಕಂಡ ಅತ್ಯಂತ ಸಮರ್ಥ ಹಾಗೂ ನ್ಯಾಯಯುತ ಚಳುವಳಿಯೆನಿಸಿಕೊಂಡಿದ್ದ ದಲಿತ ಚಳುವಳಿಯನ್ನು ಬಲಿ ತೆಗೆದುಕೊಂಡಿದ್ದಾದರೂ ಯಾವುದು?

ಜಾತಿ ಎಂದರೆ ತಾರತಮ್ಯ. ಇದನ್ನಿಟ್ಟುಕೊಂಡು ಸಮಾನತೆಯೆಡೆಗೆ ಚಳುವಳಿಯನ್ನು ನಡೆಸುವುದು ಸಾಧ್ಯವೇ? ಜಾತಿಯನ್ನಿಟ್ಟುಕೊಂಡೇ ಎಲ್ಲಾ ಜಾತಿಗಳಿಗೂ ಸಮಾನ ಅಧಿಕಾರ ಸಾಧ್ಯವೇ? ಅಧಿಕಾರವೆಂದರೆ ಏನು? ಅದೇನು ಅಂಕಗಣಿತದ ಆಟವೇ, ಲೆಕ್ಕಾಚಾರದಂತೆ ಹಂಚಲು? ದೇವರಾಜ ಅರಸರ ಹೆಸರು ಹೇಳುತ್ತೇವೆ. ಅದೇ ಉಸಿರನಲ್ಲಿ ಅವರು ಹಿಂದುಳಿದ ಜಾತಿಗೆ ಸೇರಿದವರಲ್ಲ ಎಂದು ಹೇಳುತ್ತೇವೆ! ಅದೇನೇ ಇರಲಿ, ದೇವರಾಜ ಅರಸರ ಹಿಂದುಳಿದ ಜಾತಿಗಳ ಪ್ರಗತಿಪರ ರಾಜಕಾರಣ ಅವರ ಕಾಲದಲ್ಲೇ, ಅವರೇ ಅದಕ್ಕೆ ಬಲಿಯಾಗುವ ರೀತಿಯಲ್ಲಿ ಏಕೆ ಅವಸಾನವಾಯಿತು? ಅರಸರು ಒಂದು ಕಡೆ ಈ ಪ್ರಗತಿಪರ ರಾಜಕಾರಣ ನಡೆಸಲು, ಇನ್ನೊಂದೆಡೆ ಭ್ರಷ್ಟಾಚಾರವನ್ನು ಸಂಸ್ಥೀಕರಿಸುವ ಕೆಲಸವನ್ನು ಮಾಡುವ ಅನಿವಾರ್ಯತೆಗೂ ಈಡಾಗಬೇಕಾಯಿತು ಎಂಬುದನ್ನು ಮರೆಯದಿರೋಣ. ಇದರ ಪರಿಣಾಮ ಎಂತಹುದು ಎಂಬುದನ್ನು ಇಲ್ಲಿ ವಿವರಿಸುವ ಅಗತ್ಯವಿಲ್ಲ. ಶೀಲವಿಲ್ಲದ ಯಾವುದೇ ಚಳುವಳಿ ಬೆಳೆಯಲಾರದು. ಇದು ದೇವರಾಜ ಅರಸರ ರಾಜಕಾರಣದ ದುರಂತದಿಂದ ಕಲಿಯಬೇಕಾದ ಪಾಠ. ಸಾಮಾಜಿಕ ನ್ಯಾಯವೆಂಬುದು ಕೇವಲ ಸಮಾಜದ ಕೆಳವರ್ಗಗಳಿಗೆ ಕೆಲ ಸವಲತ್ತುಗಳನ್ನು ಮತ್ತು ಅಧಿಕಾರದ ನಾಯಕತ್ವವನ್ನು ಕಲ್ಪಿಸಿಕೊಡುವುದಲ್ಲ. ಇಡೀ ಸಮಾಜದ ಒಳಿತನ್ನು ಅನುಸಂಧಾನಿಸಿಕೊಂಡು ರೂಪಿಸಿಕೊಡಬೇಕಾದ/ಪಡೆಯಬೇಕಾದ ನ್ಯಾಯ.

ಇಂದು ಸಿದ್ಧರಾಮಯ್ಯನವರು ಕುಟುಂಬ ರಾಜಕಾರಣದ ವಿರುದ್ಧ ಗುಡುಗುತ್ತಿದ್ದಾರೆ. ಅದೇ ತಮ್ಮ ಪದಚ್ಯುತಿಗೆ ಕಾರಣವಾಯಿತು ಎಂದು ಹೇಳುತ್ತಿದ್ದಾರೆ. ನಿಜವಿರಬಹುದು. ಕುಟುಂಬದ ರಾಜಕಾರಣ ನೆಲೆಗಳಾದರೂ ಯಾವುವು? ಜಾತಿ-ಹಣ-ಅಧಿಕಾರದ ಪರಸ್ಪರ ಸಂಬಂಧಗಳು. ಯಾರಾದರೂ ತಮ್ಮ ಮಕ್ಕಳಿಗೆ ರಾಜಕೀಯ ವಾರಸುದಾರಿಕೆಗಾಗಿ ಏಕೆ ಹಂಬಲಿಸುವರು? ಏಕೆಂದರೆ ಅಲ್ಲಿ ಹಣ-ಅಧಿಕಾರವಿದೆ; ಅದಕ್ಕೆ ಜಾತಿ ರಾಜಕಾರಣದ ಆಧಾರವಿದೆ. ಇದೊಂದು ಸಾಮಾಜಿಕ ಶ್ರೇಣೀಕರಣವಿರುವ ಊಳಿಗ ವ್ಯವಸ್ಥೆಯಿಂದ ಪೋಷಿಸಲ್ಪಟ್ಟ ಮತ್ತು ಅದರಿಂದ ಮಾತ್ರ ಉಳಿದುಕೊಳ್ಳಬಹುದಾದ

ಸಾಮ್ರಾಜ್ಯ. ಆದುದರಿಂದ ಸಿದ್ದರಾಮಯ್ಯನವರು 'ಅಹಿಂದ'ದ ನಾಯಕರಾಗಿ ಮೊದಲು ಮಾಡಬೇಕಾದ ಕೆಲಸ, ರಾಜಕಾರಣದಲ್ಲಿನ ಜಾತಿ-ಹಣ-ಅಧಿಕಾರಗಳ ಗುದಮುರಿಗೆಯನ್ನು ನಾಶಮಾಡುವ ಸಾಹಸಕ್ಕೆ ಕೈ ಹಾಕುವುದೇ ಆಗಿದೆ. ಇಲ್ಲದಿದ್ದರೆ ಸ್ವತಃ ಅವರು ಸಹಜವಾಗಿಯೇ, ತಮ್ಮದೇ ಕುಟುಂಬ ರಾಜಕಾರಣಕ್ಕೆ ಬಲಿಯಾಗಬೇಕಾಗುತ್ತದೆ.

ಈ ಸಾಹಸಕ್ಕೆ ಕೈ ಹಾಕಬಯಸುವವರು ಒಂದು ಹೊಸ ರಾಜಕೀಯ ದರ್ಶವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಲ್ಲದೆ ಹೋದರೆ, ರಾಜಕೀಯ ಉಳಿವಿಗಷ್ಟೇ ಅನುಕೂಲಿತವಾದ ಪ್ರತಿಕ್ರಿಯೆಗಳಿಗೆ ಮೊರೆಹೋಗಬೇಕಾಗುತ್ತದೆ. ಉದಾಹರಣೆಗೆ ಇನ್‌ಫೋಸಿಸ್‌ನ ನಾರಾಯಣಮೂರ್ತಿ ಅವರ ಭೂದಾಹದ ಬಗ್ಗೆ ದೇವೇಗೌಡರು ಮಾಡಿದ ಟೀಕೆಯನ್ನು, ನನ್ನ ಶತ್ರುವಿನ ಶತ್ರು ನನ್ನ ಮಿತ್ರ ಎಂಬ ಸರಳೀಕೃತ ರಾಜಕಾರಣದ ಆಧಾರದ ಮೇಲೆ ಖಂಡಿಸುವ ಅನಿವಾರ್ಯತೆಗೆ, ಇಕ್ಕಟ್ಟಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಸಿದ್ಧರಾಮಯ್ಯನವರು ಮಾಡಿದ್ದು ಅದನ್ನೇ. ಇಂದು ಜಾಗತೀಕರಣ ನಮ್ಮ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಬೇರುಗಳನ್ನೇ ಕತ್ತರಿಸಿ ಹಾಕುತ್ತಾ, ನಮ್ಮ ಕಾಲ ಕೆಳಗಿನ ನೆಲವನ್ನೇ ಜರುಗಿಸ ಹೊರಟಿದೆ. ಸರ್ಕಾರಿ ಕಾಮಗಾರಿ ಗುತ್ತಿಗೆದಾರರು, ನಂತರ ಹೆಂಡದ ದೊರೆಗಳು ನಡೆಸುತ್ತಿದ್ದ ಸಮಾನಾಂತರ ಸರ್ಕಾರಗಳನ್ನು ದೂಷಿಸುತ್ತಿದ್ದ ನಾವು, ಈಗ ಐ.ಟಿ. ಉದ್ಯಮದ ಗುತ್ತಿಗೆದಾರರು ಕಟ್ಟುತ್ತಿರುವ ಸಮಾನಾಂತರ ಪ್ರಪಂಚವನ್ನು ಬೆರಗುಗಣ್ಣುಗಳಿಂದ ನೋಡುತ್ತಾ ಕೂತಿದ್ದೇವೆ. ನೀವು ವಶಪಡಿಸಿಕೊಳ್ಳಲೆತ್ನಿಸುತ್ತಿರುವ ಸರ್ಕಾರಕ್ಕೆ ಈ ಸಮಾನಾಂತರ ಪ್ರಪಂಚದಲ್ಲಿ ಮೂರು ಕಾಸಿಗೂ ಬೆಲೆ ಇರಲಾರದು. ಇಷ್ಟು ಆಳವಾಗಿ ಅಥವಾ ದೀರ್ಘಕಾಲೀನವಾಗಿ ಯೋಚನೆ ಮಾಡುವಷ್ಟು ವ್ಯವಧಾನ 'ಅಹಿಂದ'ಕ್ಕೆ ಇನ್ನೂ ಸಿದ್ಧಿಸಿಲ್ಲವೆಂದು ಸದ್ಯಕ್ಕೆ ಇಟ್ಟುಕೊಳ್ಳೋಣ. ಆದರೆ ಭ್ರಷ್ಟಾಚಾರ ವಿರೋಧಿ ಕಾರ್ಯಾಚರಣೆಯಲ್ಲಿ ಎದುರಾಗಿರುವ ಅಸಹಾಯಕತೆ ಬಗ್ಗೆ ನ್ಯಾ. ವೆಂಕಟಾಚಲ ದಿನನಿತ್ಯ ಹಾಕುತ್ತಿರುವ ಒಂಟಿ ಕೂಗಿಗೆ ಒಂದು ಬೆಂಬಲದ ಮಾತನ್ನು ಆಡಲಾಗದಷ್ಟು 'ಸಾಮಾಜಿಕ ನ್ಯಾಯ ರಾಜಕಾರಣ'ದ ಗರ ಬಡಿದು ಕೊಂಡರೆ?ಜಾತಿ ನ್ಯಾಯದ ಹೊರತಾಗಿ ಮಿಕ್ಕಿದ್ದೆಲ್ಲದಕ್ಕೂ ಅಸೂಕ್ಷ್ಮವಾಗಿ ಹೋಗಿರುವಂತೆ ತೋರುವ 'ಅಹಿಂದ'ದ ನಾಯಕತ್ವಕ್ಕೆ ಮುಖ್ಯಮಂತ್ರಿ ಪದವಿ ಸಿಕ್ಕಿದೆಯಾದರೂ ಫಲವೇನು? ಫಲವಿದ್ದರೂ ಅದನ್ನು ಉಣ್ಣುವವರು ಯಾರು? ಅದಕ್ಕೇ ನಾನು ಮೊದಲೇ ಹೇಳಿದ್ದು,ಅಧಿಕಾರದ ಪರಿಕಲ್ಪನೆಯನ್ನು ಆಧ್ಯಾತ್ಮೀಕರಿಸಿಕೊಳ್ಳದೆ-ಕನಿಷ್ಠ ಕಾಂತರಾಜೇಅರಸರ ಮಟ್ಟಕ್ಕಾದರೂ-ಅಂದರೆ ನನಗೆ ಅಧಿಕಾರ ಏಕೆ? ಮತ್ತು ಹೇಗೆ? ಪ್ರಶ್ನೆಗಳನ್ನು ಎದುರಿಸದೆ ಮಾಡುವ ಯಾವುದೇ ರಾಜಕಾರಣ, ಅದು ಮುಂದುವರಿದವರೇ ಮಾಡಲಿ, ಹಿಂದುಳಿದವರೇ ಮಾಡಲಿ, ಅದರ ಫಲಾನುಭವಿಗಳು ಕೆಲವೇ ಕೆಲವರು ಮಾತ್ರ. ಮಿಕ್ಕವರು ಕೊಸರಿಗಾಗಿ ಕಾಯುತ್ತಾ ಕೂತಿರಬೇಕಷ್ಟೆ.

ಯಾರೇ ಏನೇ ಹೇಳಲಿ, ಹೊಸ ರಾಜಕಾರಣದ ಸುಪ್ತ ಬಯಕೆ ಜನರಲ್ಲಿ ಇಂದು ಒಡಮೂಡಿದೆ. ಅವರು ಹಳೇ, ಜಡ್ಡುಗಟ್ಟಿದ ರಾಜಕಾರಣದಲ್ಲಿ ಮುಳುಗಿದಂತೆ ತೋರುತ್ತಿದ್ದರೂ, ಹೊಸ ರಾಜಕಾರಣದ ನಾಯಕನಿಗಾಗಿ ಕಾಯುತ್ತಿದೆ. ಆ ತವಕ ಇಂದಿನ ಸಾಮಾಜಿಕ ಅಶಾಂತಿ ಗೊಂದಲದ- ವಾತಾವರಣದಲ್ಲಿ, ಯಾವದೋ ಒಂದು ತರಂಗಾಂತರದಲ್ಲಿ ಅನುರಣಿಸುತ್ತಿದೆ. ಈ ತರಂಗಾಂತರಕ್ಕೆ ಕಿವುಡಾಗಿರುವವರಿಗೆ ಹಣ ಮತ್ತು ಜಾತಿ ಶಕ್ತಿಗಳಾಚೆಯ ರಾಜಕಾರಣದ ಸಾಧ್ಯತೆಯೇ ಹೊಳೆಯಲಾರದು. ಅವರು ಹೊಸ ರಾಜಕಾರಣವನ್ನೂ ಮಾಡಲಾರರು. ಸಿದ್ಧರಾಮಯ್ಯನವರಿಗೆ ಇದೊಂದು ಐತಿಹಾಸಿಕ ಸಂದರ್ಭ, ಹೊಸ ರಾಜಕಾರಣದ ನಾಂದಿ ಹಾಡಲು. ಅಪಾರ ಹಣ ಹಾಗೂ ಜಾತಿ ಲೆಕ್ಕಾಚಾರವಿಲ್ಲದ ಹೊಸ ರಾಜಕಾರಣ ಮಾಡುವ ಧೈರ್ಯವನ್ನೂ, ವಿವೇಕವನ್ನೂ ಅವರು ತೋರಬೇಕಿದೆ. ಖಂಡಿತ ಕರ್ನಾಟಕ ಅವರಿಗೆ ಸ್ಪಂದಿಸಲಿದೆ-ಅವರನ್ನು ಮುಖ್ಯಮಂತ್ರಿ ಮಾಡಿ ಬಿಡುತ್ತದೆ ಎಂದೇನೂ ನಾನು ಹೇಳುತ್ತಿಲ್ಲ. ಅದಕ್ಕಿಂತ ದೊಡ್ಡ ಸ್ಥಾನ ಅವರಿಗೆ ನೀಡಲಿದೆ. ಗೋಪಾಲಗೌಡರ ಉದಾಹರಣೆ ನಮ್ಮ ಮುಂದೆಯೇ ಇದೆ. ಆ ಸ್ಥಾನವನ್ನು ಕಲ್ಪಿಸಿಕೊಳ್ಳುವ ತಾಕತ್ತು ಸಿದ್ಧರಾಮಯ್ಯ ಅವರಲ್ಲಿ ಸಂಚಯವಾಗಿದೆ ಎಂದು ಭಾವಿಸಿಯೇ, ಇಷ್ಟು ಮಾತುಗಳನ್ನು ನಾನು ಆಡಿರುವೆ.

ಇಂತಹ ರಾಜಕಾರಣವು ಸಮಗ್ರವೂ, ಜಾತ್ಯತೀತವೂ ಆಗಿರಬೇಕಾಗುತ್ತದೆ. ಗಾಂಧೀಜಿ ಅದರ ಹೊಳಹು ಬಿಟ್ಟು ಹೋಗಿದ್ದಾರೆ. ಲೋಹಿಯಾ ಹಾಗೂ ಅಂಬೇಡ್ಕರ್ ಅದನ್ನು ವಿಸ್ತರಿಸಿದ್ದಾರೆ. ನಮ್ಮದೇ ಸ್ಥಳೀಯ ಪ್ರಯೋಗಗಳಾದ ದಲಿತ ಮತ್ತು ರೈತ ಚಳುವಳಿಗಳು ಈ ವಿಸ್ತರಣೆಯ ಎಡರು-ತೊಡರುಗಳ ಕಡೆ ಬೆಟ್ಟು ಮಾಡಿವೆ. ಇವುಗಳ ಆಧಾರದ ಮೇಲೆ ಕಟ್ಟಿದ ತಾತ್ವಿಕ ನೆಲೆಯಲ್ಲಿ ಸಿದ್ಧರಾಮಯ್ಯನವರು ರಾಜಕಾರಣ ಮಾಡುವುದಾದರೆ 'ಅಹಿಂದ'ಕ್ಕೆ ಜೀವ ಹಾಗೂ ಗೌರವ ಎರಡೂ ಒದಗೀತು. ಇಲ್ಲವಾದರೆ 'ಅಹಿಂದ' ಮತ್ತು ಸಿದ್ಧರಾಮಯ್ಯ ಒಟ್ಟಿಗೇ- ಅವರಿಗೆ ಮುಖ್ಯಮಂತ್ರಿತ್ವ ದೊರಕಿದರೂ, ಅದರ ಜೊತೆಗೇ-ಇತಿಹಾಸದ ಕಸದ ಬುಟ್ಟಿಗೆ ಎಸೆಯಲ್ಪಡುತ್ತಾರೆ.

('ಸಂವಾದ', ಮಾರ್ಚ್ ೨೦೦೬)

ಒಂದು ಪ್ರತಿಕ್ರಿಯೆ :

'ಸಂವಾದ'ದ ಮಾರ್ಚ್ ೨೦೦೬ ಸಂಚಿಕೆಯಲ್ಲಿನ 'ಅಹಿಂದದ ಅಧಿಕಾರ ರಾಜಕಾರಣ' ಎಂಬ ನನ್ನ ಲೇಖನಕ್ಕೆ ಏಪ್ರಿಲ್ ಸಂಚಿಕೆಯಲ್ಲಿ 'ಇಡಿ' 'ಬಿಡಿ' ನಾಯಕರನ್ನು

ಕುರಿತು ಗಡಿಬಿಡಿಯಾಗಿ....' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿರುವ ಡಾ||ಮೂಡ್ನಾಕೂಡು ಚಿನ್ನಸ್ವಾಮಿಯರ ಪ್ರತಿಕ್ರಿಯೆಯನ್ನು ಗಮನಿಸಿದೆ. ನನ್ನ ಲೇಖನದಲ್ಲಿ '....ಅಂಬೇಡ್ಕರರನ್ನು 'ಬಿಡಿ'ನಾಯಕರು ಎಂದು ಹೇಳಿರುವಂತಿದೆ' ಎಂಬ ಅರ್ಥ ಅನ್ನಿಸಿಕೆಯ ಆಧಾರದ ಮೇಲೇ ಅವರು ತಮ್ಮ ಪ್ರತಿಕ್ರಿಯೆಯನ್ನು ಬೆಳೆಸಿದ್ದಾರೆ. ಆದರೆ ಲೇಖನದಲ್ಲೆಲ್ಲೂ ನಾನು ಅಂಬೇಡ್ಕರ್‌ರನ್ನು ಹಾಗೆ ಗುರುತಿಸುವ ಪ್ರಯತ್ನವನ್ನು ಮಾಡಿಲ್ಲ ಎಂಬುದು ಲೇಖನವನ್ನು ಓದಿದ ಯಾರಿಗಾದರೂ ಗೊತ್ತಾಗುತ್ತದೆ. ಚಿನ್ನಸ್ವಾಮಿಯವರ ರೀತಿಯಲ್ಲಿ ಲೇಖನವನ್ನು ಅರ್ಥೈಸಹೊರಟರೆ, ಅಂಬೇಡ್ಕರ್‌ರ ಜೊತೆಗೇ ಪ್ರಸ್ತಾಪಿಸಲ್ಪಟ್ಟಿರುವ ಗಾಂಧಿ, ಲೋಹಿಯಾ ಕೂಡ ನನ್ನ ಪ್ರಕಾರ 'ಬಿಡಿ' ನಾಯಕರೇ ಆಗುತ್ತಾರೆ. ಇದು ಚಿನ್ನಸ್ವಾಮಿಯವರಿಗೆ ಸ್ವಲ್ಪವಾದರೂ ತೃಪ್ತಿ ತಂದೀತೇನೋ ತಿಳಿಯದು....

ವೀರಭದ್ರ ಚನ್ನಮಲ್ಲ ಸ್ವಾಮೀಜಿ ಎಂಬುವವರು ಬುದ್ಧ ಬಸವ ಅಂಬೇಡ್ಕರರನ್ನು ಆಧುನಿಕ ತ್ರಿಮೂರ್ತಿಗಳೆಂದು ವಿಶ್ಲೇಷಿಸಿರುವುದು ನನಗೆ ತಿಳಿಯದು. ಹಾಗೂ ಅದು ನನಗೆ ಮುಖ್ಯ ಸಂಗತಿಯೂ ಅಲ್ಲ. ಹಾಗಾಗಿ ಈ ತ್ರಿಮೂರ್ತಿಗಳ ಸಾಲಿನಲ್ಲಿ ಗಾಂಧಿ ಇಲ್ಲವೆಂದು, ಚಿನ್ನಸ್ವಾಮಿಯವರಿಗೆ ಪರಿಚಯವಿರುವ ಮಧ್ಯಮ ಜಾತಿಯ ಬುದ್ಧಿಜೀವಿಗಳ್ಯಾರಾದರೂ ಚಿಂತೆಗೀಡಾಗಿದ್ದರೆ ಅದಕ್ಕೆ ನಾನು ಹೊಣೆಯಲ್ಲ. ಹಾಗೇ ಗಾಂಧೀಜಿ ಕುರಿತ ಚಿನ್ನಸ್ವಾಮಿಯವರ ಅಭಿಪ್ರಾಯಕ್ಕೆ ಸಂಪೂರ್ಣ ಅವರೇ ಹೊಣೆ.

ಇನ್ನು ವಿವೇಕಾನಂದ, ವಿಶ್ವೇಶ್ವರಯ್ಯನವರನ್ನು ಪ್ರಸ್ತಾಪಿಸಿರುವ ಕುರಿತು ಚಿನ್ನಸ್ವಾಮಿಯವರು ಎತ್ತಿರುವ ಆಕ್ಷೇಪಗಳ ಬಗ್ಗೆ. ವಿವೇಕಾನಂದರ ಸಮಗ್ರ ಕೃತಿಗಳ ಪ್ರಾಥಮಿಕ ಪರಿಚಯವಿರುವ ಯಾರಿಗಾದರೂ ಅವರು ಜಾತಿ ಪದ್ಧತಿ, ಸತಿಪದ್ಧತಿಗಳನ್ನು ಸಮರ್ಥಿಸಿದ್ದಾರೆ ಎಂದು ಭಾವಿಸಲೂ ಸಾಧ್ಯವಿಲ್ಲ. ಸತಿಪದ್ಧತಿ ಕುರಿತ ವಿವೇಕಾನಂದರ ಸಮರ್ಥನೆ ಎಂದು ಚಿನ್ನಸ್ವಾಮಿಯವರು ಉಲ್ಲೇಖಿಸಿರುವ ಮಾತುಗಳನ್ನು ಸಂದರ್ಭ ಸಹಿತ ಮಾಹಿತಿಯೊಂದಿಗೆ ನಿರೂಪಿಸಿದ್ದರೆ ಅನುಮಾನ ಪರಿಹಾರವಾಗುತ್ತಿತ್ತು. ಹಾಗೇ ವಿಶ್ವೇಶ್ವರಯ್ಯನವರ ಜೀವನ ಹಾಗೂ ಮೌಲ್ಯಗಳ ಬಗ್ಗೆ ಓದಿ ತಿಳಿದುಕೊಂಡ ಯಾರಾದರೂ ಅವರನ್ನು ಜಾತಿವಾದಿ ಎಂದು ಕರೆಯಲು ಸಾಧ್ಯವಿಲ್ಲ. ಹೆಚ್ಚೆಂದರೆ ಅವರು ಚರಿತ್ರೆಯ ಒತ್ತಡಗಳನ್ನು ಸಹಾನುಭೂತಿಯಿಂದ ಅರಿಯುವಷ್ಟು ಸ್ಪಂದನಶೀಲರಾಗಿರಲಿಲ್ಲ ಎಂದಷ್ಟೇ ಹೇಳಬಹುದು. ನಾನು ನನ್ನ ಲೇಖನದಲ್ಲಿ ವಿಶ್ವೇಶ್ವರಯ್ಯನವರ ಪ್ರಸ್ತಾಪ ಮಾಡಿದ್ದು, ಅಂತಹವರನ್ನು ಬಲಿತೆಗೆದುಕೊಂಡ ಹಿಂದುಳಿದ ವರ್ಗಗಳ ಚಳುವಳಿಗೆ ಎಷ್ಟು ಜವಾಬ್ದಾರಿ ಇರಬೇಕು ಎಂಬುದನ್ನು ಸೂಚಿಸಲೇ ಹೊರತು, ಅವರನ್ನು ಜಾತ್ಯತೀತರೆಂದು ಸಾರಲು ಇಲ್ಲ.

ಹಿಂದೂ ಧರ್ಮದ ಬಗ್ಗೆ ಕಿಡಿಕಾರಿರುವ ಚಿನ್ನಸ್ವಾಮಿಯವರು 'ಬುದ್ಧನ ನಂತರ ಹಿಂದೂ ಧರ್ಮವೆನ್ನುವುದು ಬೌದ್ಧೀಯ ಮೌಲ್ಯಗಳ ತಿರುಳನ್ನು ಪಡೆದು, ಬುದ್ಧನೆಂಬ ಸಿಪ್ಪೆಯನ್ನು ಹೊರತುಹಾಕಿತು ಎಂಬ ಅಂಬೇಡ್ಕರ್ ಮಾತನ್ನು ಉಲ್ಲೇಖಿಸಿದ್ದಾರೆ. ಇಂದಿನ ಹಿಂದೂ ಧರ್ಮವನ್ನು ಕುರಿತು ನಮ್ಮ ನಿಲುವನ್ನು ಸ್ಪಷ್ಟಪಡಿಸಿಕೊಳ್ಳಲು ಇದಕ್ಕಿಂತ ಹೆಚ್ಚಿನ ಆಧಾರ ಬೇಕಿಲ್ಲ: ಬೌದ್ಧನಾಗಲು ಬೌದ್ಧಧರ್ಮ ಸೇರುವ ಅಗತ್ಯವೇನು ಇಲ್ಲ; ಹಾಗೆ ಮಾಡಿದರೆ ಒಂದು ಬಂಧನ ಕಳಚಿಕೊಂಡು ಇನ್ನೊಂದು ಬಂಧನಕ್ಕೆ ಸಿಕ್ಕಿ ಹಾಕಿಕೊಂಡಂತಾಗುತ್ತದಷ್ಟೇ. ಹಿಂದೂ ಧರ್ಮದ ವೈದಿಕ ಚೌಕಟ್ಟನ್ನು ಚಿನ್ನಸ್ವಾಮಿ ಪ್ರಸ್ತಾಪಿಸಿದ್ದಾರೆ. ಹಿಂದೂಗಳೆಂದು ಹೇಳಿಕೊಳ್ಳುವ ಬಹುಸಂಖ್ಯಾತ ಜನ ಈ ಚೌಕಟ್ಟಿನ ಹೊರಗೇ ಬದುಕು ನಡೆಸುತ್ತಿರೆಂಬುದನ್ನು ನಾವು ಗಮನಿಸಬೇಕು. ಹಾಗೇ ಚಿನ್ನಸ್ವಾಮಿಯವರು ಪ್ರತಿನಿಧಿಸುವ ದಲಿತ ಚಿಂತನಾಲಹರಿಯ ಒತ್ತಡ ಹೆಚ್ಚಿದಷ್ಟೂ, ಅಂಬೇಡ್ಕರ್ ಫೋಟೋ ಇಟ್ಟುಕೊಂಡ ದಲಿತರ ಮನೆಗಳಲ್ಲಿ ಗಣಪತಿ ಹೋಮ-ಸತ್ಯನಾರಾಯಣ ಪೂಜೆಗಳ ಭರಾಟೆ ಹೆಚ್ಚುತ್ತಾ, ಅವರೂ ಸವರ್ಣೀಯರಂತೇ ವೈದಿಕ ಚೌಕಟ್ಟಿಗೆ ಸೇರಿಕೊಳ್ಳುವ ಆತುರದಲ್ಲಿರುವುದನ್ನು ನಾವು ಗಮನಿಸಬೇಕು.

ಚಿನ್ನಸ್ವಾಮಿಯವರು ಇತ್ತೀಚಿನ ಬನ್ನಿಕೊಪ್ಪ ಕೆರೆ ನೀರಿನ ಪ್ರಕರಣವನ್ನು ಜಾತಿ-ಪದ್ಧತಿ ಅಸ್ಪೃಶ್ಯತೆಗಳ ಕ್ರೌರ್ಯದ ಉದಾಹರಣೆಯಾಗಿ ನೀಡಿ ಅಲ್ಲಿಗೇ ನಿಂತುಬಿಟ್ಟಿದ್ದಾರೆ. ಆದರೆ ಈ ಪ್ರಕರಣ ಅಸ್ಪೃಶ್ಯತೆಯ ಆಚರಣೆಯ ಉದಾಹರಣೆ ಹೇಗೋ ಹಾಗೇ, ಅದರ ವಿರುದ್ಧ ಒಟ್ಟಾರೆ ಸಮಾಜ ವ್ಯಕ್ತಪಡಿಸಿದ ಪ್ರತಿಕ್ರಿಯೆಯ ಉದಾಹರಣೆಯೂ ಆಗಿದೆ ಎಂಬುದನ್ನು ಗಮನಿಸದೇ ಹೋದಲ್ಲಿ, ನಾವು ವ್ಯಸನ ಸಂತೋಷದ ಕಾಯಿಲೆಗೆ ಬಲಿಯಾಗುತ್ತೇವಷ್ಟೆ. ಜಾತಿ ಪದ್ಧತಿ ಕುರಿತಂತೆ ಚಿನ್ನಸ್ವಾಮಿಯವರು ಹೇಳಿರುವ ಮಾತುಗಳನ್ನೇ ನಾನು ಚರಿತ್ರೆಯ ಉದಾಹರಣೆಗಳ ಸಮೇತ ಇನ್ನಷ್ಟು ಪರಿಣಾಮಕಾರಿಯಾಗಿ ಹೇಳಿರುವೆನಾದರೂ, ಅವರು ಜಾತಿ-ಅಸ್ಪೃಶ್ಯತೆಯ ಅವಮಾನದ ಬಗ್ಗೆ 'ನೋವುಂಡವರೇ ನೋವ ಬಲ್ಲವರು' ಎಂಬ ಹಳೆಯ ಕ್ಲೀಷೆಯ ಮಾತುಗಳನ್ನಾಡಿದ್ದಾರೆ. ಒಬ್ಬರ ನೋವು ಇನ್ನೊಬ್ಬರಿಗೆ ಅರ್ಥವೇ ಆಗುವುದಿಲ್ಲ ಎಂದು ತೀರ್ಮಾನಿಸುವುದಾಗಿದ್ದರೆ, ಸಂವಾದ-ಚರ್ಚೆಯಾದರೂ ಏಕೆ ಬೇಕು? ಇದು ಇನ್ನೊಂದು ರೀತಿಯಲ್ಲಿ, ಆಯಾ ಜಾತಿ-ಜನಾಂಗಗಳು ಆಯಾ ಜಾತಿ-ಜನಾಂಗಗಳಿಗೆ ಸಂಬಂಧಪಟ್ಟ ಕಷ್ಟಗಳನ್ನೋ ಸುಖಗಳನ್ನೋ ಉಂಡುಕೊಂಡಿರುವುದು ಅನಿವಾರ್ಯ ಎಂದು ಹೇಳಿದಂತೆ.

ನನಗೆ ದಲಿತ ಸಂಘರ್ಷ ಸಮಿತಿಯ ಜೊತೆಗೆ ಸುಮಾರು ೨೫ ವರ್ಷಗಳ ಒಡನಾಟವಿದೆ. ಆ ಒಡನಾಟದ ಅನುಭವದ ಆಧಾರದ ಮೇಲೆ ಹೇಳುವುದಾದರೆ, ನನ್ನ ಈ ಕೆಲವು ಗೆಳೆಯರಿಗೆ ಅಸ್ಪೃಶ್ಯತೆಯ ನೋವು-ಅವಮಾನವೆಂಬುದು ತಲೆಯಿಂದ

ಇಳಿಸಿಕೊಳ್ಳ ಕೂಡದ ಒಂದು ಹೊರೆಯಾಗಿಯೇ ಮುಂದುವರಿದಿದೆ. ಇದರ ಮರ್ಮ ನನಗೆ ಇನ್ನೂ ಅರ್ಥವಾಗಿಲ್ಲ. ಹಾಗೇ ದಲಿತರು ಸಮಾಜದ ಮುಖ್ಯವಾಹಿನಿಗೆ ಸೇರುವುದನ್ನು ಸಹಿಸದ ಅಥವಾ ತಡೆಯುವ ಸವರ್ಣೀಯರ ಒಂದು ವರ್ಗವಿರುವಂತೆಯೇ, ದಲಿತರಲ್ಲೂ ಅಂತಹ ಒಂದು ವರ್ಗವಿದ್ದಂತೆ ತೋರುತ್ತದೆ. ಇಂತಹ ರಾಜಕಾರಣ ಯಾರಿಗೂ ಒಳ್ಳೆಯದನ್ನು ಮಾಡುವಂತಹುದಲ್ಲ

O

('ಸಂವಾದ', ಮೇ - ೨೦೦೬)

ಕುಟುಂಬ ರಾಜಕಾರಣದ ಅಶ್ಲೀಲತೆ

ಕಳೆದ ಮೂರ್‍ನಾಲ್ಕು ದಿನಗಳಲ್ಲಿ ರಾಜ್ಯದ ರಾಜಕೀಯ ಜೀವನದಲ್ಲಿ ಕಂಡುಬಂದಿರುವ ದಿಢೀರ್ ಬೆಳವಣಿಗೆ, ಕರ್ನಾಟಕದ ಸಾರ್ವಜನಿಕ ಜೀವನ ಮುಟ್ಟಿರುವ ಅಧೋಗತಿಗೆ ಸಾಕ್ಷಿಯಾಗಿದೆ. ಈ ಬೆಳವಣಿಗೆ ನಿರೀಕ್ಷೆಗಿಂತ ಮುಂಚೆ ಸಂಭವಿಸಿದೆ ಎಂಬರ್ಥದಲ್ಲಿ ಮಾತ್ರ ಇದನ್ನು ದಿಢೀರ್ ಎನ್ನಬಹುದಷ್ಟೆ. ಏಕೆಂದರೆ ಕಳೆದ ಚುನಾವಣೆಗಳಲ್ಲಿ ಅತಂತ್ರ ವಿಧಾನಸಭೆ ಸೃಷ್ಟಿಯಾಗಿ, ಸಮ್ಮಿಶ್ರ ಸರ್ಕಾರದ ರಚನೆಯ ಅನಿವಾರ್ಯತೆಯಿಂದಾಗಿ ಜಾತ್ಯತೀತ ಜನತಾದಳದಲ್ಲಿ ಆರಂಭವಾದ ಒಳರಾಜಕೀಯದ ತಾರ್ಕಿಕ ಅಂತ್ಯವನ್ನಷ್ಟೇ ನಾವೀಗ ನೋಡುತ್ತಿರುವುದು. ಉಪಮುಖ್ಯಮಂತ್ರಿ ಸ್ಥಾನ ಹಾಗೂ ಪಕ್ಷದಿಂದ ಸಿದ್ಧರಾಮಯ್ಯನವರನ್ನು ಹೊರ ಹಾಕಿದಾಗ, ಈ ಒಳರಾಜಕೀಯ ಅರ್ಧವಿರಾಮವನ್ನಷ್ಟೇ ಮುಟ್ಟಿತ್ತು.

ಸಿದ್ಧರಾಮಯ್ಯನವರನ್ನು ಹೊರಹಾಕಿದ ಮೇಲೆ ಸಂಪೂರ್ಣವಾಗಿ ದೇವೇಗೌಡರ ಹದ್ದುಬಸ್ತಿಗೆ ಒಳ ಪಟ್ಟಿದ್ದ ಜಾತ್ಯತೀತ ಜನತಾ ದಳದಲ್ಲಿ ದೇವೇಗೌಡರ ವಿರುದ್ಧವೇ ಬಂಡಾಯವೆಂದರೆ, ಅದು ಸ್ವಲ್ಪ ಸಾವಧಾನದಿಂದ ಯೋಚಿಸಬೇಕಾದ ವಿಚಾರವೇ ಆಗಿರುತ್ತದೆ. ಈ 'ಬಂಡಾಯ'ವನ್ನು ಸಮಯಸಾಧಕ ಅಥವಾ ಅಧಿಕಾರದಾಹಿ ರಾಜಕಾರಣವೆಂದು ಕರೆದು ಕೈ ತೊಳೆದುಕೊಳ್ಳುವುದು ಜನತೆಯ ಪಾಲಿಗೆ ರಾಜಕೀಯ ಅವಿವೇಕತನವಾದೀತು ಮತ್ತು ಈ ಇಡೀ ವಿದ್ಯಮಾನದ ಸರಳೀಕರಣವಾದೀತು. ಆದುದರಿಂದ ಈ ವಿದ್ಯಮಾನ ಕರ್ನಾಟಕದ ರಾಜಕಾರಣವನ್ನು ಕೊಂಡೊಯ್ಯಬಹುದಾದ ದಿಕ್ಕನ್ನು ಅಂದಾಜು ಮಾಡುವುದು, ಸದ್ಯದ ರಾಜಕೀಯ ವಿಶ್ಲೇಷಣೆಯ ಬಹು ಮುಖ್ಯ ಕಾಳಜಿಯಾಗುತ್ತದೆ.

ಸದ್ಯದ ಬೆಳವಣಿಗೆಯ ಕೇಂದ್ರ ಸ್ಥಾನದಲ್ಲಿರುವ ಜಾತ್ಯಾತೀತ ಜನತಾ ದಳದ ಹುಟ್ಟನ್ನೊಮ್ಮೆ ಪರಿಶೀಲಿಸಿ. ಇದು ತನ್ನ ವಿಶಿಷ್ಟತೆಯನ್ನು ಸಾರಿಕೊಳ್ಳುತ್ತಿರುವುದೇ ತನ್ನ ಹೆಸರಿನಲ್ಲಿರುವ ಜಾತ್ಯತೀತ ಎಂಬ ಗುಣ ವಿಶೇಷದಿಂದ - ಈ ಪಕ್ಷ ಹುಟ್ಟಿದ್ದೇ ಮೂಲ ಜನತಾದಳ ೧೯೯೯ರ ಚುನಾವಣೆಯಲ್ಲಿ 'ಕೋಮುವಾದಿ ಬಿಜೆಪಿ'ಯೊಂದಿಗೆ ಕೈ ಜೋಡಿಸಿದ್ದನ್ನು ವಿರೋಧಿಸಿ, ಜಾತ್ಯತೀತ ರಾಜಕಾರಣವನ್ನು ಎತ್ತಿ ಹಿಡಿಯುವ ಘೋಷಣೆಯೊಂದಿಗೆ. ನಂತರ ಈ ಚುನಾವಣೆಯಲ್ಲಿ ಅದು ತಾನು ಕಟುವಾಗಿ ವಿರೋಧಿಸುತ್ತಿದ್ದ ಕಾಂಗ್ರೆಸ್‌ನೊಡನೆ ಸಮ್ಮಿಶ್ರ ಸರ್ಕಾರದಲ್ಲಿ ಭಾಗಿಯಾಗಿದ್ದೂ, ಮೊನ್ನೆಯವರೆಗೆ ಅದು ಹೇಳಿಕೊಳ್ಳುತ್ತಿದ್ದಂತೆ, 'ಕೋಮುವಾದಿ ಬಿಜೆಪಿ'ಯನ್ನು

ಅಧಿಕಾರದಿಂದ ದೂರವಿಡುವ ತನ್ನ ಜಾತ್ಯತೀತ ರಾಜಕೀಯ ನಿಲುವಿನ ಬದ್ಧತೆಯ ಕಾರಣದ ಮೇಲೇ. ಆದರೆ ಈಗ ಈ ಪಕ್ಷದ ಅಧ್ಯಕ್ಷ -ಕಾರ್ಯಾಧ್ಯಕ್ಷರೂ ಸೇರಿದಂತೆ ಪಕ್ಷದ ಮುಕ್ಕಾಲು ಪಾಲು ಶಾಸಕರು ಈ ಬದ್ಧತೆಯನ್ನೇ ಗಾಳಿಗೆ ತೂರಿ ತಮ್ಮ ಸರ್ವೋಚ್ಛ ನಾಯಕ ದೇವೇಗೌಡರಿಗೆ ಸೆಡ್ಡು ಹೊಡೆದು ನಿಂತಿದ್ದಾರೆ ಎಂದರೆ ಏನರ್ಥ? ದೇವೇಗೌಡರು ಸರ್ವೋಚ್ಛ ನಾಯಕರಾಗಿ ಪಕ್ಷವನ್ನು ಎಂದೂ ತನ್ನ ಘೋಷಿತ ನೀತಿಯನುಸಾರ ಕಟ್ಟಿಯೇ ಇಲ್ಲವೆಂದೇ ಇದರ ಅರ್ಥ. ಮತ್ತೆ ಇದರ ಒಳಾರ್ಥವೆಂದರೆ ಸ್ವತಃ ದೇವೇಗೌಡರಿಗೇ ಈ ಜಾತ್ಯತೀತತೆ ಎಂಬುದು ದೊಡ್ಡ ಮೌಲ್ಯವಾಗಿರಲಾರದು ಎಂಬುದು. ಅದು ಹಾಗೆ ಅವರಿಗೆ ದೊಡ್ಡ ಮೌಲ್ಯವಾಗಿದ್ದಲ್ಲಿ, ಪಕ್ಷವನ್ನು ಕಟ್ಟುವ ವಿವಿಧ ಹಂತಗಳಲ್ಲೇ - ತಮ್ಮ ಆಯ್ಕೆ ಹಾಗೂ ಆದ್ಯತೆಗಳ ಮೂಲಕವೇ ಕಾರ್ಯಕರ್ತರು ಹಾಗೂ ಸಹೋದ್ಯೋಗಿಗಳಲ್ಲಿ ಆ ಮೌಲ್ಯವನ್ನು ಬಿತ್ತಿ ಬೆಳಸುತ್ತಿದ್ದರು. ಹಾಗೆ ಬೆಳಸಿದ್ದಲ್ಲಿ ಪಕ್ಷ ಸಾರಾಸಗಟಾಗಿ ಹೀಗೆ ಅಧಿಕಾರದಾಹಿ ಸಮಯಸಾಧಕತೆಯನ್ನು ಪ್ರದರ್ಶಿಸುವ ನೈತಿಕ ದಿವಾಳಿತನಕ್ಕೆ ಈಡಾಗುತ್ತಿರಲಿಲ್ಲ.

ದೇವೇಗೌಡರ ರಾಜಕೀಯ ಜೀವನವನ್ನೊಮ್ಮೆ ಅವಲೋಕಿಸಿದರೆ ನಮಗೆ ಕಾಣುವುದು ಕೇವಲ ವೈಯಕ್ತಿಕ ನೆಲೆಯ ಸ್ಥೂಲ ರಾಜಕಾರಣವೇ ಹೊರತು, ಆರ್ಥಿಕ ಅಥವಾ ಸಾಮಾಜಿಕ ನೆಲೆಯ(ಸಾಂಸ್ಕೃತಿಕವನ್ನಂತೂ ಕೇಳಲೇಬೇಡಿ) ನೀತಿ ಆಧಾರಿತ ರಾಜಕಾರಣವಲ್ಲ. ಇದರ ಫಲವೇ ಇಂದಿನ ಕುಮಾರಸ್ವಾಮಿ ನೇತೃತ್ವದ 'ಬಂಡಾಯ'. ಈ 'ಬಂಡಾಯ'ಕ್ಕೆ ಯಾವುದೇ ನೈತಿಕ ಆಧಾರವಿದ್ದಂತೆ ತೋರುವುದಿಲ್ಲ. ಈ ಬಂಡಾಯಕ್ಕೆ ಅವರು ಕೊಡುವ ಕಾರಣವೆಂದರೆ ಅವರ ಶಾಸಕ ಮಿತ್ರರು ವಿಷ ತೆಗೆದುಕೊಳ್ಳುವ ಬೆದರಿಕೆ ಹಾಕಿರುವುದು! ಇದು ಇಂದಿನ ರಾಜಕಾರಣ ಎಷ್ಟು ಹಾಸ್ಯಾಸ್ಪದವಾಗಿದೆ ಎಂಬುದರ ದ್ಯೋತಕವಷ್ಟೆ. ಅಂದ ಹಾಗೆ ಅವರೇಕೆ ವಿಷ ತೆಗೆದುಕೊಳ್ಳಬೇಕು? ಕಳೆದ ಚುನಾವಣೆಯಲ್ಲಿ ಖರ್ಚು ಮಾಡಿರುವ ಹಣವೇ ಇನ್ನು ಪೂರ್ತಿಯಾಗಿ ಹುಟ್ಟಿಲ್ಲದಿರುವಾಗ ಮತ್ತೊಮ್ಮೆ ಚುನಾವಣೆಗೆ ನಿಲ್ಲಲು ಖರ್ಚೆಲ್ಲಿಂದ ತರುವುದು? ಇವರನ್ನು ಮತ್ತೆ ಚುನಾವಣೆಗೆ ನಿಲ್ಲಲು ಆಗ್ರಹಿಸುತ್ತಿರುವವರಾದರೂ ಯಾರು? ಯಾರೂ ಆಗ್ರಹಿಸಬೇಕಿಲ್ಲ; ಅದು ಅವರ ಹಕ್ಕು! ಅದು ರಾಜಕೀಯದಲ್ಲಿ ಹಣ ಹೂಡಿ, ಹಣ ಮಾಡುವ ಹಕ್ಕು. ಕುಮಾರಸ್ವಾಮಿ ಅವರು ಈ ಹಕ್ಕನ್ನು ಮಾನ್ಯಮಾಡಿ, ಈ ಹಕ್ಕಿಗೆ ಈಗ ಭಂಗ ಬಂದಿದೆ ಎಂದು ತಮ್ಮ ಬಂಡಾಯವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಅಲ್ಲದೆ, ಬಿಜೆಪಿ ಜೊತೆ ಸೇರುವ ಮೂಲಕ ದೇವೇಗೌಡರ ಜಾತ್ಯತೀತ ನಿಲುವಿಗೆ ಯಾವ ರೀತಿಯ ಅಪಚಾರವನ್ನೂ ಮಾಡುತ್ತಿಲ್ಲವೆಂಬ ಭಂಡ ಹೇಳಿಕೆ ಬೇರೆ! ರಾಜಕೀಯ ಇದಕ್ಕಿಂತ ಅಶ್ಲೀಲಗೊಳ್ಳಲು ಸಾಧ್ಯವೇ?

ಕುಮಾರಸ್ವಾಮಿಯವರನ್ನು ಜಾತ್ಯತೀತ ಜನತಾದಳದ ಮುಕ್ಕಾಲು ಪಾಲು

ಶಾಸಕರು ತಮ್ಮ ನಾಯಕನನ್ನಾಗಿ ಒಪ್ಪಿಕೊಂಡಿದ್ದಾರಂತೆ. ಇವರಲ್ಲಿ ಅನೇಕ ಹಿರಿಯ ನಾಯಕರು ಹಾಗೂ ಸಚಿವರೂ ಸೇರಿದ್ದಾರೆ. ಕುಮಾರಸ್ವಾಮಿ ಅವರಲ್ಲಿ ಯಾವ ಗುಣಗಳನ್ನು ಕಂಡು ಅವರು ಇವರನ್ನು ನಾಯಕರನ್ನಾಗಿ ಒಪ್ಪಿಕೊಂಡಿದ್ದಾರೆ? ಕುಮಾರಸ್ವಾಮಿ ದೇವೇಗೌಡರ ಮಗ ಎಂಬುದನ್ನು ಬಿಟ್ಟರೆ, ಅವರ ರಾಜಕೀಯ ಜೀವನದ ಉದ್ದ-ಅಗಲಗಳಾದರೂ ಏನು? ಅವರ ರಾಜಕೀಯ ಸಾಧನೆಗಳಾದರೂ ಏನು?ಅವರದ್ದೇ ಆದ ರಾಜಕೀಯ ದರ್ಶನವೇನಾದರೂ ಹೊರಬಿದ್ದಿದೆಯಾ? ಅವರು ಒಂದಷ್ಟು ಒರಟು ಕನ್ನಡ ಸಿನಿಮಾಗಳನ್ನು ನಿರ್ಮಿಸಿದ್ದಾರೆ ಮತ್ತು ಬೆಂಗಳೂರು ಸುತ್ತಮುತ್ತ ಭೂ ವ್ಯವಹಾರ ನಡೆಸುತ್ತಾರೆ ಎಂಬುದನ್ನು ಬಿಟ್ಟರೆ, ಸಾರ್ವಜನಿಕರಿಗೆ ಅವರ ಬಗ್ಗೆ ಮತ್ತೇನೂ ತಿಳಿಯದು. ಹೀಗಿರುವಾಗ ಹಿರಿಕಿರಿಯರೆನ್ನದೆ ಪಕ್ಷದ ಮುಕ್ಕಾಲು ಪಾಲು ಜನ ಅವರಿಗೆ ಮುಗಿಬಿದ್ದಿರುವುದರ ಹಿಂದಿನ ಮರ್ಮವಾದರೂ ಏನು? ಸಿದ್ಧರಾಮಯ್ಯನವರನ್ನು ಪಕ್ಷದೊಳಗೆ ನಿಯಂತ್ರಿಸಲು ಮತ್ತು ಪಕ್ಷವನ್ನು ಸಂಪೂರ್ಣವಾಗಿ ತಮ್ಮ ನಿಯಂತ್ರಣದಲ್ಲೇ ಇರಿಸಿಕೊಳ್ಳಲು ದೇವೇಗೌಡರು ಕುಮಾರಸ್ವಾಮಿಯವರನ್ನು ಪಕ್ಷದ ಕಾರ್ಯಾಧ್ಯಕ್ಷರಾಗಿ ಮಾಡಿದಾಗಿನಿಂದಲೂ, ಕುಮಾರಸ್ವಾಮಿ ಶಾಸಕರನ್ನು ತಮ್ಮೆಡೆಗೆ ಸೆಳೆದಿಟ್ಟುಕೊಳ್ಳಲು ಬಳಸುತ್ತಿರುವ ತಂತ್ರ ಬಲ್ಲವರ್‍ಯಾರಿಗೂ ಈ ಮರ್ಮ ಗೊತ್ತಿಲ್ಲದೇನಿಲ್ಲ. ರಾಜಕಾರಣದ ತಾತ್ವಿಕ ಪರಿವೇಷವನ್ನೂ ನಿರ್ದಾಕ್ಷಿಣ್ಯವಾಗಿ ಬಿಚ್ಚಿಸೆದು ನಿಂತಿರುವ ಈ ಗುಂಪು ರಾಜಕಾರಣವನ್ನು ಸಂಪೂರ್ಣವಾಗಿ ಒಂದು ದಂಧೆಯನ್ನಾಗಿ ಮಾತ್ರ ಪರಿಭಾವಿಸಿ ನಿರ್ವಹಿಸ ಹೊರಟಿದೆ. ಇಲ್ಲಿ ಹಣ-ಆಮಿಷಗಳಷ್ಟೇ ಅಳತೆಗೋಲು-ಮೀಟುಗೋಲು. ನಿಜ, ರಾಜಕಾರಣ ಒಂದು ದೊಡ್ಡ ದಂಧೆಯಾಗಿ ಮಾರ್ಪಟ್ಟು ಬಹಳ ವರ್ಷಗಳೇ ಆಗಿದೆ. ಆದರೆ ಈಗ ಅದನ್ನು ಹೀಗೆ ರಾಜಾರೋಷವಾಗಿ ಜನತೆಯ ಮುಂದೆ ಹೆಮ್ಮೆಯಿಂದ ಘೋಷಿಸಿಕೊಳ್ಳುವಲ್ಲಿ ಪ್ರದರ್ಶಿತವಾಗುತ್ತಿರುವ ಭಂಡತನ ನಿಜವಾಗಿಯೂ ಗಾಬರಿ ಹುಟ್ಟಿಸುವಂತಹುದು.

ಅಂದ ಹಾಗೆ, ಈ ದಂಧೆಗೆ ಬಳಸಲಾಗುವ ಹಣ ಯಾರದು, ಯಾರಪ್ಪನದು? ಅದು ಎಲ್ಲಿಂದ ಬರುತ್ತದೆ, ಹೇಗೆ ಬರುತ್ತದೆ? ಹಾಗೆ ಬರುವಾಗ ಅದು ಸೃಷ್ಟಿಸುವ ಆರ್ಥಿಕ-ಸಾಮಾಜಿಕ ಅಪರಾಧಗಳು ಎಂತಹವು? ನೈತಿಕತೆಯ ಗ್ರಹಿಕೆಯ ವಿಚಾರದಲ್ಲಿ ಜನತೆಯ ಮನದಲ್ಲಿ ಇದರಿಂದ ಉಂಟಾಗುವ ಅಲ್ಲೋಲ ಕಲ್ಲೋಲಗಳು ಎಂತಹವು? ಈ ದೃಷ್ಟಿಯಿಂದ ಯೋಚನೆ ಮಾಡಿದಾಗ ಇನ್ನೂ ಹೆಚ್ಚು ಗಾಬರಿಯನ್ನುಂಟು ಮಾಡುವಂತಹದ್ದು, ದೀರ್ಘ ರಾಜಕೀಯ ಚರಿತ್ರೆಯುಳ್ಳ ಬಿಜೆಪಿ ಮತ್ತು ದೀರ್ಘ ರಾಜಕೀಯ ಅನುಭವವುಳ್ಳ ಅದರ ರಾಜಕೀಯ ನಾಯಕರು ಇಂತಹ ಭಂಡ ಮತ್ತು ಅಶ್ಲೀಲ ರಾಜಕಾರಣದಲ್ಲಿ ಭಾಗಿಯಾಗಿರುವುದು. ಕನಿಷ್ಠ ಎರಡು-ಎರಡೂವರೆ ದಶಕಗಳ ಸಾಂಪ್ರದಾಯಿಕ ರಾಜಕಾರಣ ಮಾಡಿರುವ ಯಡಿಯೂರಪ್ಪ, ಅನಂತಕುಮಾರ್,

ಜಗದೀಶ್ ಶೆಟ್ಟರ್, ಈಶ್ವರಪ್ಪ ಮುಂತಾದ ಬಿಜೆಪಿ ನಾಯಕರು ಯಾವುದೇ ತತ್ವ ರಾಜಕೀಯದ ಗ್ರಹಿಕೆಗೆ ಸಿಗದ ರಾಜಕೀಯ ನಿರಕ್ಷರ ಕುಕ್ಷಿಯೊಬ್ಬರನ್ನು ತಾವು ಸ್ಥಾಪಿಸಲು ಹೊರಟಿರುವ ಸರ್ಕಾರದ ಶಾಸಕಾಂಗದ ನಾಯಕನನ್ನಾಗಿ ಒಪ್ಪಿಕೊಂಡಿರುವುದು, ನಮ್ಮ ಇಂದಿನ ರಾಜಕಾರಣ ಎಷ್ಟು ಮರ್ಯಾದೆಗೆಟ್ಟಿದೆ ಎಂಬುದರ ಸೂಚಕವೂ ಆಗಿದೆಯಲ್ಲವೆ?

ಸರ್ಕಾರ ರಚಿಸಲು ಹೊರಟಿರುವ ಈ ಎರಡೂ ಪಕ್ಷಗಳ ಶಾಸಕರನ್ನು ನೋಡಿ. ಈಗ ಅವರು ರಾಜ್ಯದ ಹೊರಗಿನ -ಗೋವಾ ಮತ್ತು ಚೆನ್ನೈನ (ಈಗ ಕೊಡೈಕೆನಾಲ್)- ವೈಭವೋಪೇತ ರೆಸಾರ್ಟ್‌ಗಳಿಗೆ ಸ್ಥಳಾಂತರಗೊಂಡಿದ್ದಾರೆ. ಅಲ್ಲಿ ಅವರಿಗೆ ಯಾರದೋ ಖರ್ಚಿನಲ್ಲಿ ಊಟ-ವಸತಿ-ಮನರಂಜನೆ. ಅವರನ್ನೆಲ್ಲಾ ಏಕೆ ಹೀಗೆ ರೆಸಾರ್ಟ್‌ಗಳಲ್ಲಿ 'ಬಂಧಿಸಿ'ಇಡಲಾಗಿದೆ? ಅವರು ಖರೀದಿಗೊಳ್ಳುವರೆಂಬ ಆತಂಕ. ಹೀಗೆ 'ಬಂಧನ'ಕ್ಕೊಳಪಟ್ಟಿರುವ ರಾಜ್ಯದ ಒಟ್ಟು ಶಾಸಕರ ಸಂಖ್ಯೆ ಸುಮಾರು ೧೨೫. ಇವರಲ್ಲಿ ಒಬ್ಬರಿಗೂ ಆತ್ಮಗೌರವವೆನ್ನುವುದು ಇಲ್ಲವೇ? 'ನನ್ನನ್ನು ಅನುಮಾನಿಸಿ ಅವಮಾನಿಸುವ ಹಕ್ಕು ಯಾರಿಗೂ ಇಲ್ಲ; ವೈಯಕ್ತಿಕ ಸ್ವಾತಂತ್ರ್ಯ ನನ್ನ ಅಬಾಧಿತ ಹಕ್ಕು'ಎಂದು ಹೇಳುವ ಧೈರ್ಯವಾಗಲಿ, ಆತ್ಮವಿಶ್ವಾಸವಾಗಲೀ ಇವರಲ್ಲಿ ಯಾರೊಬ್ಬರಿಗೂ ಇಲ್ಲ ಎಂದರೆ ನಮ್ಮ ರಾಜಕಾರಣವನ್ನು ಆವರಿಸಿರುವ ನಿರ್ಲಜ್ಜತನ ಎಂತಹುದಿರಬೇಕು!

ಇದೆಲ್ಲದರ ಶ್ರೇಯಸ್ಸು ದೇವೇಗೌಡರಿಗೇ ಸಲ್ಲಬೇಕು. ಏಕೆಂದರೆ ೧೯೯೦ ರಿಂದೀಚೆಗೆ ಅವರು ಮಾಡುತ್ತ ಬಂದ ರಾಜಕಾರಣದ ಅಂತಿಮ ಫಲವೇ ಇದಾಗಿದೆ. ತಮ್ಮ ಗುಪ್ತ ಕಾರ್ಯಕ್ರಮವಾದ ಕುಟುಂಬ ರಾಜಕಾರಣದ ಯಶಸ್ಸಿಗಾಗಿ ಎಲ್ಲ ನೀತಿ-ಮೌಲ್ಯಗಳನ್ನು ನೆಪಮಾತ್ರಕ್ಕೆ ಇಳಿಸಿ, ರಾಜ್ಯದ ಸಮರ್ಥ ರಾಜಕಾರಣಿಗಳನೇಕರನ್ನು ಬಲಿ ತೆಗೆದುಕೊಂಡ ದೇವೇಗೌಡರ ರಾಜಕಾರಣವನ್ನು ಕರ್ನಾಟಕದ ಜನತೆ ಈ ಬಾರಿ ಕ್ಷಮಿಸದು. ಅವರಿಗೆ ಈಗ ಈ ಕ್ಷಮೆಯೂ ಬೇಕಿಲ್ಲವೇನೋ! ಹೇಗೂ ಅವರ ಗುಪ್ತ ಕಾರ್ಯಕ್ರಮ ತಾವು ನಿರೀಕ್ಷಿಸಿದುದಕ್ಕಿಂತ ಮುಂಚೆಯೇ ಯಶಸ್ವಿಯಾಗಿದೆ-ತಮ್ಮ ವಂಶದ ಕುಡಿ ರಾಜ್ಯದ ಗೌಡಿಕೆ ಮಾಡಲು ವೇದಿಕೆ ಸಿದ್ದವಾಗಿದೆ; ತಾವಿನ್ನು ತಮ್ಮ ರಾಜಕೀಯ ಅಸಹಾಯಕತೆಯ ನೆಪವೊಡ್ಡಿ ನಿರಾಳವಾಗಿ ರಾಜಕೀಯ ನಿವೃತ್ತಿ ಪಡೆಯಬಹುದು!

ಒಂದು ಪಕ್ಷ ಕರ್ನಾಟಕದ ಜನತೆ ದೇವೇಗೌಡರ ಅಸಹಾಯಕತೆ ನಿಜವಿದ್ದರೂ ಇರಬಹುದೆಂದು ನಂಬಿ ಅವರನ್ನು ಕ್ಷಮಿಸಿದರೂ ಕ್ಷಮಿಸಬಿಡಬಹುದು; ಆದರೆ ಕಾಂಗ್ರೆಸ್ಸನ್ನಾಗಲೀ, ಸಿದ್ಧರಾಮಯ್ಯನವರನ್ನಾಗಲೀ ಕ್ಷಮಿಸಲಾರದು- ಅವರು ದೇವೇಗೌಡರ ಈ ಕೌಟುಂಬಿಕ ರಾಜಕೀಯ ನಾಟಕ ಯಶಸ್ವಿಯಾಗಿ ಅಂತ್ಯಗೊಳ್ಳಲು ಅವಕಾಶ ಮಾಡಿಕೊಟ್ಟರೆ.ದೇವೇಗೌಡರ ಈ ನಾಟಕಕ್ಕೆ ಒಂದು ಘಟ್ಟದವರೆಗೆ ಪರೋಕ್ಷ ಹಾಗೂ ಮೌನ ಬೆಂಬಲ ನೀಡಿದ್ದೇ ಕಾಂಗ್ರೆಸ್ ಪಕ್ಷದ ಅಧಿಕಾರ ರಾಜಕಾರಣ ಹಾಗೂ

ಸಿದ್ಧರಾಮಯ್ಯನವರ ರಾಜಕೀಯ ಆಲಸಿತನ.ಸಮ್ಮಿಶ್ರ ಸರ್ಕಾರದ ನೇತೃತ್ವವಹಿಸಲು ಯಾವುದೇ ನೈತಿಕ ಅಧಿಕಾರ ಹೊಂದದ ರೀತಿಯಲ್ಲಿ ಕಳೆದ ಚುನಾವಣೆಯಲ್ಲಿ ಮುಖಭಂಗ ಅನುಭವಿಸಿದ್ದ ಕಾಂಗ್ರೆಸ್, ದೂರ ದೃಷ್ಟಿಯ ಹಾಗೂ ರಚನಾತ್ಮಕ ರಾಜಕಾರಣ ಮಾಡುವುದಿದ್ದರೆ ಮುಖ್ಯಮಂತ್ರಿತ್ವವನ್ನು ನಿರಾಕರಿಸಬೇಕಿತ್ತು. ಅಥವಾ ಶರದ್ ಪವಾರ್ ಮಧ್ಯಸ್ಥಿಕೆಯಲ್ಲಿ ಜಾ. ಜನತಾದಳದ ಪಾಲಿಗೆ ಬಿಟ್ಟುಕೊಡಲಾಗಿದ್ದ ಮುಖ್ಯ ಮಂತ್ರಿತ್ವವನ್ನು ದೇವೇಗೌಡರು ಸಿದ್ಧರಾಮಯ್ಯನವರಿಗೆ ನಿರಾಕರಿಸಿ ತಮಗೆ ಬಿಟ್ಟುಕೊಟ್ಟಾಗಲಾದರೂ, ಕಾಂಗ್ರೆಸ್ ತನ್ನ ಅಭ್ಯರ್ಥಿಯ ಆಯ್ಕೆಯನ್ನು ದೇವೇಗೌಡರಿಗೆ ಬಿಟ್ಟು ಕೊಡಬಾರದಿತ್ತು. ಹಾಗೆ ಬಿಟ್ಟುಕೊಟ್ಟು ಕಾಂಗ್ರೆಸ್, ದೇವೇಗೌಡರ ವೈಯುಕ್ತಿಕ ಶೈಲಿಯ ರಾಜಕಾರಣಕ್ಕೆ ಕುಮ್ಮಕ್ಕು ಕೊಟ್ಟಿತು. ಈಗ ಮತ್ತೆ ದೇವೇಗೌಡರ ಹೊಸ ರಾಜಕೀಯ ವರಸೆಗೆ ಬಗ್ಗಿ ಅವರೊಡನೆ ಅವರದೇ ಷರತ್ತುಗಳ ಮೇಲೆ ಮೈತ್ರಿ ಮುಂದುವರೆಸಿದಲ್ಲಿ ಇನ್ನೂ ದೊಡ್ಡ ಅನಾಹುತ ಆ ಪಕ್ಷಕ್ಕೆ, ರಾಜ್ಯ ರಾಜಕಾರಣಕ್ಕೆ ಮತ್ತು ರಾಜ್ಯದ ಜನತೆಗೆ ಕಾದಿದೆ ಎಂದೇ ಹೇಳಬೇಕು.

ಇನ್ನು ಸಿದ್ಧರಾಮಯ್ಯನವರ ರಾಜಕೀಯವಂತೂ ಎಲ್ಲರ ನಿರೀಕ್ಷೆಗಳನ್ನೂ ಹುಸಿಗೊಳಿಸಿ, ದೇವೇಗೌಡ ಕೇಂದ್ರಿತವಾಗಿ ಬಿಟ್ಟಿರುವುದು ವಿಷಾದಕರ. ಜಾತ್ಯತೀತ ಜನತಾದಳದಲ್ಲಿದ್ದಾಗಲೂ ಇವರು ದೇವೇಗೌಡರ ಗುಂಪಿಗೆ ಪ್ರತಿಯಾಗಿ ಮತ್ತೊಂದು ಗುಂಪು ಕಟ್ಟಿಕೊಂಡರೇ ಹೊರತು, ಪಕ್ಷವನ್ನು ಇಡಿಯಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಅದನ್ನು ಬೆಳೆಸುವ ಸಾಹಸ ಮಾಡಿದಂತೆ ತೋರಿವುದಿಲ್ಲ. ಹೀಗಾಗಿಯೇ ಇವರನ್ನು ಹೊರಹಾಕಿದಾಗ ಪಕ್ಷದಲ್ಲಿ ದೊಡ್ಡ ಅಲ್ಲೋಲ ಕಲ್ಲೋಲವೇನೂ ಉಂಟಾಗಲಿಲ್ಲ. ಬದಲಿಗೆ ದೇವೇಗೌಡರ ಸೇಡಿನ ರಾಜಕಾರಣಕ್ಕೆ ಪ್ರತಿಯಾಗಿ ಪಂಚಾಯತ್ ಚುನಾವಣೆಗಳ ಮೂಲಕ ಇವರು ನಡೆಸಿದ್ದೂ ಸೇಡಿನ ರಾಜಕಾರಣವೇ. ಇದಕ್ಕೆ ಪ್ರತಿಯಾಗಿ ಈಗ ನಡೆದಿರುವುದು ಸಿದ್ಧರಾಮಯ್ಯನವರೊಂದಿಗೆ ಜಿಲ್ಲಾ ಪಂಚಾಯತ್‌ಗಳಲ್ಲಿ ಅಧಿಕಾರ ಹಂಚಿಕೊಳ್ಳಲು ಮುಂದಾಗಿರುವ ಕಾಂಗ್ರೆಸ್ ವಿರುದ್ಧ ಕುಮಾರಸ್ವಾಮಿಯವರ ಸೇಡಿನ ರಾಜಕಾರಣ.

ಹೀಗೆ ರಾಜ್ಯದ ಇಡೀ ರಾಜಕಾರಣ ವೈಯಕ್ತಿಕ ನೆಲೆಯ ಸೇಡಿನ ರಾಜಕಾರಣವಾಗಿ ಮಾರ್ಪಟ್ಟು, ಪಕ್ಷಗಳು ವ್ಯಕ್ತಿನಿಷ್ಠ ಗುಂಪುಗಳ ಮಟ್ಟಕ್ಕೆ ಇಳಿದು, ಮತ್ತೆ ನಾವು ಪ್ರಜಾಪ್ರಭುತ್ವದ ಹೆಸರಿನಲ್ಲಿ ಪಾಳೇಗಾರಿ ರಾಜಕಾರಣದ ಸಾಮಂತಶಾಹಿ ವ್ಯವಸ್ಥೆಗೇ ಹಿಂತಿರುಗುತ್ತಿದ್ದೇವೆಯೇ? ಹೀಗಾದರೆ ಸಾಮಾಜಿಕ ನ್ಯಾಯ, ವೈಯಕ್ತಿಕ ಸ್ವಾತಂತ್ರ್ಯ, ಸಾಮಾನ್ಯ ಮನುಷ್ಯನ ಆತ್ಮ-ಘನತೆಯ ಪಾಡೇನು? ಈ ಮಧ್ಯೆ ಮತ್ತು ಈ ಅಧಃಪತನದಿಂದಾಗಿಯೋ ರಾಜ್ಯಾದ್ಯಂತ ಸಂಪತ್ತು- ಅಧಿಕಾರಗಳ ಖಾಸಗಿ ಕೇಂದ್ರಗಳನೇಕವು ಉದ್ಯಮ ಸ್ವಾತಂತ್ರ್ಯದ ಹೆಸರಿನಲ್ಲಿ ಸೃಷ್ಟಿಯಾಗತೊಡಗಿ, ಸರ್ಕಾರದ

ವಿಶ್ವಾಸಾರ್ಹತೆಗೇ ಸವಾಲೆಸೆಯುತ್ತಿವೆ. ಇಂಥ ಸಂದರ್ಭದಲ್ಲಿ ಹಣ-ಅಧಿಕಾರಿಗಳಷ್ಟನ್ನೇ ಗುರಿಯಾಗಿಟ್ಟುಕೊಂಡ ಈ ತತ್ವ ದರಿದ್ರವಾದ ರಾಜಕಾರಣವನ್ನಾಧರಿಸಿ ಸೃಷ್ಟಿಯಾಗುವ ಸರ್ಕಾರ, ಹೇಗೆ ಯಾರ ಪರವಾಗಿ ವರ್ತಿಸೀತು? ಇದರ ದೂರಗಾಮಿ ಪರಿಣಾಮಗಳೇನು? ಇಷ್ಟನ್ನೆಲ್ಲಾ ವ್ಯವಧಾನದಿಂದ ಯೋಚಿಸಲೇಬೇಕಾದ ಕಾಲ ರಾಜ್ಯದ ಜನತೆಗೀಗ ಬಂದಿದೆ ಎನ್ನಿಸುತ್ತದೆ.

('ಆಂದೋಲನ' ಜನವರಿ ೨೩, ೨೦೦೬)

ಪಕ್ಷ ರಾಜಕಾರಣದ ಪ್ರಹಸನ

ಈ ಹೊತ್ತಿಗೆ ರಾಜ್ಯದ ರಾಜಕೀಯ ಬಿಕ್ಕಟ್ಟು ಬಹುಶಃ ಒಂದು ನಿಶ್ಚಿತ ನೆಲೆಗೆ ತಲುಪಿದಂತೆ ಕಾಣುತ್ತದೆ. ಆ ನೆಲೆ ಏನೇ ಇರಲಿ, ಈ ಬಿಕ್ಕಟ್ಟು ಹೊರಗೆಡಹಿದ ಕೆಲವು ಮುಖ್ಯ ಸಂಗತಿಗಳನ್ನು ಈ ಸಂದರ್ಭದಲ್ಲಿ ಪರಿಶೀಲಿಸುವುದು, ಕರ್ನಾಟಕದ ರಾಜಕಾರಣ ಮುಂದಿನ ದಿನಗಳಲ್ಲಿ ಪಡೆದುಕೊಳ್ಳಬಹುದಾದ ಪೂರ್ಣ ಜನಘಾತುಕ ಆಯಾಮದ ದೃಷ್ಟಿಯಿಂದ ಅತ್ಯಗತ್ಯ.

ಈ ಬಿಕ್ಕಟ್ಟಿನಲ್ಲಿ ಎದ್ದು ಕಂಡದ್ದು, ರಾಜಕೀಯ ಪಕ್ಷವೆಂಬ ಪರಿಕಲ್ಪನೆಯೇ ಘಾತಗೊಂಡು, ಅಪ್ರಸ್ತುತವಾಗ ಹೊರಟಿರುವುದು. ಜನಹಿತ ದೃಷ್ಟಿಯಿಂದ, ತುಲನಾತ್ಮಕವಾಗಿ ಅತ್ಯಂತ ಕಡಿಮೆ ಅಪಾಯದ ಮತ್ತು ಹೆಚ್ಚು ಪ್ರಯೋಜನಕಾರಿಯಾದ ಆಡಳಿತ ಪದ್ಧತಿಯೆಂದು ನಾವು ಒಪ್ಪಿಕೊಂಡಿರುವ ಸಂಸದೀಯ ಪ್ರಜಾಪ್ರಭುತ್ವಕ್ಕೆ ರಾಜಕೀಯ ಪಕ್ಷಗಳ ಪರಿಕಲ್ಪನೆಯೇ ಅಡಿಗಲ್ಲು. ಪಕ್ಷ ಎಂದರೇನೇ ಒಂದು ನಿಲುವು, ಒಂದು ಅಭಿಪ್ರಾಯ ಎಂದರ್ಥ. ರಾಜಕೀಯ ಪಕ್ಷ ಎಂದರೆ ಸ್ಥೂಲವಾಗಿ ಒಂದು ರಾಜಕೀಯ ನಿಲುವು ಅಥವಾ ಅಭಿಪ್ರಾಯ ಎಂದರ್ಥ.ರಾಜಕೀಯ ನಿಲುವು ಎಂಬುದರಲ್ಲಿ ಎಂತಹ ಮತ್ತು ಹೇಗೆ ಒಂದು ರಾಷ್ಟ್ರ ಅಥವಾ ಸಮಾಜವನ್ನು ಕಟ್ಟಬೇಕೆಂಬ ಕಾಣ್ಕೆ ಅಡಗಿರುತ್ತದೆ. ಹೀಗಾಗಿ ಒಂದು ರಾಜಕೀಯ ಪಕ್ಷ ಎಂದರೆ ಅದಕ್ಕೊಂದು ಸಾಮಾಜಿಕ ಆರ್ಥಿಕ ನೆಲೆಗಟ್ಟಿನ ರಾಜಕೀಯ ಅತ್ಯಗತ್ಯ. ಇದೇ ಪಕ್ಷವೊಂದರ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಸಾದರ ಪಡಿಸುವ ಜೀವ ಜೀವಾಳ. ಸಂಸದೀಯ ಪ್ರಜಾಪ್ರಭುತ್ವ ಕ್ರಿಯಾಶೀಲವಾಗುವುದೇ ಇಂತಹ ವಿವಿಧ ರಾಜಕೀಯ ದರ್ಶನಗಳ ಸಂಘರ್ಷದಲ್ಲಿ ಹುಟ್ಟುವ ರಾಜಕೀಯ ಕಾರ್ಯಕ್ರಮದ ಮೂಲಕ ಜನತೆಯನ್ನು ಒಳಿತನ್ನು ಸಾಧಿಸತೊಡಗಿದಾಗ.

ಆದರೆ ಇಂದೇನಾಗಿದೆ? ಸ್ವಾತಂತ್ರ್ಯ ಹೋರಾಟದ ಮೂಲಕ ಮಂಥನಗೊಂಡ ವಿವಿಧ ರಾಜಕೀಯ ದರ್ಶನಗಳನ್ನು ಮುಖ್ಯವಾಗಿ ಮೂರು ಧಾರೆಗಳಲ್ಲಿ ಪ್ರತಿನಿಧಿಸುತ್ತಾ ಬೆಳೆದ ಮೂರು ರಾಜಕೀಯ ಪಕ್ಷಗಳು ಇಂದು ಛಿದ್ರ ಛಿದ್ರವಾಗಿ ಬಿಡಿ ಬಿಡಿಯಾದ ಸಾಮಾಜಿಕ ಆರ್ಥಿಕ ಗುಂಪುಗಳ ಹಿತಾಸಕ್ತಿಯಲ್ಲಿ ಷೇರು ಬಂಡವಾಳ ಹೂಡುವ ಉದ್ಯಮ ಸಂಸ್ಥೆಗಳಾಗಿ ಹೋಗಿವೆ. ಸಮಾಜವನ್ನು ಒಂದು ಸಮಗ್ರ ಘಟಕವನ್ನಾಗಿ ಗ್ರಹಿಸಿ, ಅದರ ಸಮಗ್ರ ಬೆಳವಣಿಗೆಯ ಭಾಗವಾಗಿಯೇ ಬೇರೆ ಬೇರೆ ಸಾಮಾಜಿಕ ಆರ್ಥಿಕ ಗುಂಪುಗಳ ಬೆಳವಣಿಗೆಯನ್ನು ಸಾಧಿಸಬೇಕಾದ ತಾತ್ವಿಕ ವಿವೇಕವನ್ನೇ ಕಳೆದುಕೊಂಡಿರುವ ಈ

ರಾಜಕೀಯ ಪಕ್ಷಗಳು, ಕೇವಲ ಪಟ್ಟಭದ್ರ ಹಿತಾಸಕ್ತ ಗುಂಪುಗಳಾಗಿ ಮಾರ್ಪಟ್ಟು ಸಂಸದೀಯ ಪ್ರಜಾಪ್ರಭುತ್ವದ ಅಡಿಗಲ್ಲನ್ನೇ ಅಲ್ಲಾಡಿಸುತ್ತಿವೆ. ಉದಾಹರಣೆಗೆ ಸದ್ಯದ ರಾಜ್ಯ ರಾಜಕೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ರಾಜ್ಯದ ಇಬ್ಬರು ಅತ್ಯಂತ ಹಿರಿಯ ನಾಯಕರೆನಿಸಿಕೊಂಡ ರಾಜಶೇಖರ ಮೂರ್ತಿ ಹಾಗೂ ದೇವೇಗೌಡರು ಪ್ರದರ್ಶಿಸುತ್ತಿರುವ ರಾಜಕೀಯ ವರಸೆಗಳನ್ನು ಗಮನಿಸಿ.

ರಾಜಶೇಖರ ಮೂರ್ತಿಯವರು ಇತ್ತೀಚೆಗೆ ತಾನೇ-ಒಂದೆರೆಡು ತಿಂಗಳ ಹಿಂದಷ್ಟೇ-ಬಿಜೆಪಿಯಿಂದ ಭ್ರಮನಿರಸನಗೊಂಡು ಒಂದು ಒಂದೂವರೆ ವರ್ಷಗಳ ಕಾಲ ಲಾಭ-ನಷ್ಟಗಳನ್ನು ತೂಗಿ ನೋಡಿ, ಬಿಜೆಪಿಯಿಂದ ಪಡೆದಿದ್ದ ರಾಜ್ಯ ಸಭಾ ಸ್ಥಾನದ ಸುಖವನ್ನು ಹೆಚ್ಚು ಕಡಿಮೆ ಪೂರ್ಣವಾಗಿ ಅನುಭವಿಸಿದ ನಂತರವೇ ಜಾತ್ಯತೀತ ಜನತಾ ದಳವನ್ನು ಸೇರಿದವರು. ಈ ಮೊದಲು ಕಾಂಗ್ರೆಸ್‌ನಲ್ಲಿದ್ದು ಕೇಂದ್ರ-ರಾಜ್ಯಗಳೆರಡರಲ್ಲೂ ಮಂತ್ರಿಗಳಾಗಿದ್ದ ರಾಜಶೇಖರ ಮೂರ್ತಿ ಅವರಿಗೆ ಒಂದೇ ರಾಜಕೀಯ ಕಾರ್ಯಕ್ರಮ: ತಾವು ಮುಖ್ಯಮಂತ್ರಿಯಾಗಬೇಕೆಂಬುದು. ಹಾಗಾಗಿಯೇ ಅವರು ತಮ್ಮ ಈ ಆಕಾಂಕ್ಷೆಯ ಈಡೇರಿಕೆಯ ಹಂಬಲ ಇಟ್ಟುಕೊಂಡು ಕಳೆದು ಐದು ವರ್ಷಗಳಲ್ಲಿ ಮೂರು ವಿಭಿನ್ನ ಪಕ್ಷಗಳನ್ನು ಸೇರಿದ್ದಾರೆ. ಅಂಥವರೀಗ ಹಿರಿಯ ರಾಜಕಾರಣಿಯ ಗತ್ತಿನಲ್ಲಿ ದೇವೇಗೌಡರಿಗೆ ಒಂದು ಪತ್ರ ಬರೆದು, ಕುಮಾರಸ್ವಾಮಿಯವರ ಬಂಡಾಯಕ್ಕೆ ಪಕ್ಷ ರಾಜಕಾರಣದ ನೆಲೆಗಟ್ಟಿನಲ್ಲಿ ತಾತ್ವಿಕ ಸಮರ್ಥನೆ ಒದಗಿಸಿದ್ದಾರೆ! ಕೆಲವೇ ತಿಂಗಳುಗಳ ಹಿಂದೆ ಭ್ರಮನಿರಸನಗೊಂಡು ದೂಷಿಸಿ ಬಂದ ಬಿಜೆಪಿಯೊಡನೆ ಮೈತ್ರಿಯು, ತಾವೀಗ ಸೇರಿರುವ ಪಕ್ಷದ ಜಾತ್ಯತೀತ ನಿಲುವನ್ನು ಮಲಿನಗೊಳಿಸುವುದಿಲ್ಲವಂತೆ. ಹಾಗೆ ನೋಡಿದರೆ ತಾವು ಐದು ವರ್ಷಗಳ ಹಿಂದಿನವರೆಗೆ ಅನೇಕ ವರ್ಷಗಳ ಕಾಲ ಮನೆ ಮಾಡಿಕೊಂಡಿದ್ದ ಕಾಂಗ್ರೆಸ್ ಪಕ್ಷವೇ ಕೋಮುವಾದಿ ಪಕ್ಷವಂತೆ! ಈಗ ಪಕ್ಷ ಉಳಿಸುವುದೇ ಮುಖ್ಯವಂತೆ. ಹಾಗಾಗಿ ಕುಮಾರಸ್ವಾಮಿಯವರ ಪ್ರಯತ್ನಕ್ಕೆ ಶ್ರೀಯುತರ ಬೆಂಬಲ. ವಿ.ಪಿ.ಸಿಂಗ್ ಅಂಥವರೇ ಬಿಜೆಪಿ ಬೆಂಬಲ ಪಡೆದು ಸರ್ಕಾರ ರಚಿಸಿರಲಿಲ್ಲವೇ ಎಂದೂ ಅವರು ಕೇಳಿದ್ದಾರೆ. ಆದರೆ ಅದ್ಯಾಕೋ, ಈ ಬೆಂಬಲ ಪಡೆದ ವಿ.ಪಿ.ಸಿಂಗ್ ಅವರಿಗೆ ಏನಾಯಿತು ಮತ್ತು ಆನಂತರ ರಾಷ್ಟ್ರ ರಾಜಕಾರಣದಲ್ಲಿ ಏನೆಲ್ಲ ಆಗಿಹೋಯಿತು ಎಂಬುದನ್ನು ಅವರು ಹೇಳಿಲ್ಲ.

ಸದ್ಯದ ರಾಜಕೀಯ ಬಿಕ್ಕಟ್ಟು ಆರಂಭವಾದಾಗ ಬಾಯಿ ಬಿಡದಿದ್ದ ಈ ಹಿರಿಯ ರಾಜಕಾರಣಿಗೆ, ಯಾವಾಗ ಕುಮಾರಸ್ವಾಮಿ ಅವರು ರಿಸಾರ್ಟ್ ರಾಜಕಾರಣದಲ್ಲಿ ಭಾಗವಹಿಸಲು ಹಿಂಜರಿದ ತಮ್ಮ ಮತ್ತು ಎಂ.ಪಿ. ಪ್ರಕಾಶ್‌ರಂತಹ ಹಿರಿಯ ರಾಜಕಾರಣಿಗಳಿಗೆ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡುವ ಆಮಿಷ ತೋರಿಸಿದರೋ, ಆವಾಗಿನಿಂದ ಹೊಸ ಹೊಸ ರಾಜಕೀಯ ಸತ್ಯಗಳು ಸಾಕ್ಷಾತ್ಕಾರಗೊಳ್ಳತೊಡಗಿವೆ! ಎಂ.

ಪಿ.ಪ್ರಕಾಶ್ ಅವರಿಗಂತೂ ಬಿಜೆಪಿಯನ್ನು ಕೋಮುವಾದಿ ಪಕ್ಷವೆಂದು ವರ್ಗೀಕರಿಸುವುದು ತಪ್ಪೆಂದು ನಾಲ್ಕು ದಿನಗಳ ಹಿಂದಿನವರೆಗೂ ಅರಿವಾಗಲೇ ಇರಲಿಲ್ಲ! ರಾಜಕಾರಣದಲ್ಲಿ ಇರುವವರು ಮಂತ್ರಿತ್ವ, ಮುಖ್ಯಮಂತ್ರಿತ್ವ ಮುಂತಾದ ಅಧಿಕಾರ ಸ್ಥಾನಗಳ ಮೇಲೆ ಕಣ್ಣಿಡುವುದು ತಪ್ಪೆಂದು ಯಾರು ಹೇಳಲಾರರು. ಆದರೆ ಆ ಸ್ಥಾನವನ್ನು ಪಡೆಯುವ ರೀತಿ ನೀತಿಗಳಿಗೂ ಒಂದು ರಾಜಕೀಯ ಮರ್ಯಾದೆ ಎಂಬುದು ಬೇಡವೇ? ಈ ಮರ್ಯಾದೆ ಬಿಡಲು ಆತ್ಮ ಸಾಕ್ಷಿ ಬೇಡ, ಜನ ಏನೆಂದು ಕೊಂಡಾರು ಎಂಬ ಭಯವಾದರೂ ಬೇಡವೇ?

ಇನ್ನು ಬಿಕ್ಕಟ್ಟಿನ ಆರಂಭದಲ್ಲಿ ಕುಮಾರಸ್ವಾಮಿ ವಿರುದ್ಧ, ಮಗನೆಂಬ ಮಮಕಾರವಿಲ್ಲದೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುವುದಾಗಿ ಗುಟುರು ಹಾಕಿದ್ದ ದೇವೇಗೌಡರೀಗ ತಣ್ಣಗಾಗಿದ್ದಾರೆ. ಈ ಮೊದಲು ಪ್ರಕಟಿಸಿದ್ದಂತೆ ಲೋಕಸಭಾ ಸ್ಥಾನ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಗಳಿಗೆ ರಾಜೀನಾಮೆ ನೀಡಿ, ರಾಜಕೀಯ ನಿವೃತ್ತಿ ಪಡೆಯುವ ಆಲೋಚನೆಯನ್ನು ಅವರು ಕೈ ಬಿಟ್ಟಿದ್ದಾರೆ. ಏಕೆಂದರೆ ಮಗನೊಂದಿಗೆ ಈಚೆಗೆ ಮಾತನಾಡಿದ ಮೇಲೆ, ಆತ ಮಾಡಿರುವುದೆಲ್ಲವೂ ಪಕ್ಷ ಉಳಿಸುವ ಸದುದ್ದೇಶದಿಂದಲೇ ಎಂದು ಅವರಿಗೀಗ ಮನವರಿಕೆಯಾಗಿದೆಯಂತೆ! ಹೀಗೆ, ಜಾತ್ಯತೀತ ಜನತಾದಳದ ಹಿರಿಯ ಮುಖಂಡರೆಲ್ಲರಿಗೂ ಈಗ ಪಕ್ಷ ನಾಶವಾಗಿ ಹೋಗದಂತೆ ಅದನ್ನು ಉಳಿಸಿಕೊಳ್ಳುವ ಚಿಂತೆ. ಅಧಿಕಾರವೊಂದೇ ಈ ಚಿಂತೆಗೆ ಪರಿಹಾರ ಎಂಬುದು ನಿಧಾನವಾಗಿಯಾದರೂ ಅವರಿಗೆ ಗೊತ್ತಾಗತೊಡಗಿದೆ. ಯಾವುದೇ ರಾಜಕೀಯ ಪಕ್ಷದ ಅಳಿವು-ಉಳಿವನ್ನು ನಿರ್ಧರಿಸಬೇಕಾದ, ಅದರ ಬೆನ್ನೆಲುಬಾಗಿರಬೇಕಾದ ನೀತಿ-ಧೋರಣೆಯ ಚರ್ಚೆ ಇರಲಿ, ಪ್ರಸ್ತಾಪಕ್ಕೂ ಇಲ್ಲಿ ಅವಕಾಶವಿಲ್ಲ. ಹಾಗಾದರೆ ದೇವೇಗೌಡ ಮತ್ತು ಅವರ ಅನುಯಾಯಿಗಳು ವರ್ಷಾನುಗಟ್ಟಲೆ ಬೆವರು ಸುರಿಸಿ, ಹಣ ಹರಿಸಿ ಕಟ್ಟಿದ್ದು ಒಂದು ರಾಜಕೀಯ ಪಕ್ಷವನ್ನೋ ಅಥವಾ ಒಂದು ಸಣ್ಣ ರಾಜಕೀಯ ಮರು ಹೊಂದಾಣಿಕೆಯನ್ನು, ನೀತಿ ಮರ್ಯಾದೆಯೊಡನೆ ನಿಭಾಯಿಸಲಾಗದಂತಹ ಒಂದು ನಗ್ನ ಅಧಿಕಾರದಾಹಿ ಗುಂಪನ್ನೋ? ಕರ್ನಾಟಕದ ಮುಂದಿನ ರಾಜಕಾರಣದ ಹಿತ ದೃಷ್ಟಿಯಿಂದ ನಾವು ಕೇಳಿಕೊಳ್ಳಬೇಕಾದ ಬಹು ಮುಖ್ಯ ಪ್ರಶ್ನೆ ಇದೆನ್ನಿಸುತ್ತದೆ. ಏಕೆಂದರೆ ಒಂದು ಪಕ್ಷ ನಾಶವನ್ನು ತಡೆಯುವ ಈ ಪ್ರಯತ್ನ, ಸಂಸದೀಯ ಪ್ರಜಾಪ್ರಭುತ್ವದ ತಾತ್ವಿಕ ನೆಲಗಟ್ಟನ್ನೇ ನಾಶಮಾಡ ಹೊರಟಿದೆ.

ನಿಜ, ಸದ್ಯದ ಬಿಕ್ಕಟ್ಟಿನ ದೃಷ್ಟಿಯಲ್ಲಿ ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳು ಪಾತ್ರವಹಿಸಿವೆ. ಆದರೆ ದೇವೇಗೌಡರ ಪಕ್ಷದ ಹೊರತಾಗಿ ಮತ್ತಾವ ಪಕ್ಷವೂ ತನ್ನ ಪಾತ್ರವನ್ನು ತನ್ನ ಪಕ್ಷದ ನಾಶದ ಭಯದ ಆಧಾರದ ಮೇಲೆ ಸಮರ್ಥಿಸಿಕೊಳ್ಳುವ ತತ್ವ ದಾರಿದ್ರ್ಯದ ದುರ್ಗತಿಗೆ ಈಡಾಗಿಲ್ಲ. ದೇವೇಗೌಡ ಮತ್ತು ರಾಜಶೇಖರ ಮೂರ್ತಿ ತಮ್ಮ ಪ್ರತ್ಯಕ್ಷ ಮತ್ತು ಪರೋಕ್ಷ ಸಮರ್ಥನೆಗಳ ಮೂಲಕ ರಾಜಕೀಯ ಪಕ್ಷದ

ಪರಿಕಲ್ಪನೆಯನ್ನು ಒಂದು ಸಂಘಟಿತ ಅಧಿಕಾರ ದಂಧೆಕೋರರ ಗುಂಪಿನ ಮಟ್ಟಕ್ಕೆ ಇಳಿಸಿ, ಸಂಸದೀಯ ಪ್ರಜಾಪ್ರಭುತ್ವವನ್ನು ಒಂದು ಪ್ರಹಸನದ ಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ. ಆದರೆ ಈ ಪ್ರಹಸನ ಕೇವಲ ಪ್ರಹಸನವಾಗಿ ಮುಗಿಯದೆ, ಕರ್ನಾಟಕದ ಜನತೆಯ ಪಾಲಿಗೆ ಬಹುಕಾಲ ದುಃಸ್ವಪ್ನವಾಗಿ ಕಾಡುವಂತಾದರೆ? ಯೋಚಿಸಬೇಕಾದ ವಿಚಾರವಲ್ಲವೇ?

('ಆಂದೋಲನ', ಜನವರಿ ೨೮, ೨೦೦೬)

ಸುಲಭ ರಾಜಕಾರಣದ ಸಂದಿಗ್ಧಗಳು

ಕೊನೆಗೂ ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿದ್ದಾರೆ. ಇದನ್ನು ತಮ್ಮ ರಾಜಕೀಯ ಜೀವನದ ಅನಿವಾರ್ಯತೆ ಎಂದು ಬಣ್ಣಿಸಿಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ ತಾವೇನೂ ಸಂನ್ಯಾಸಿಯಲ್ಲವೆಂದು (ಹಾಗೆಂದು ಭಾವಿಸಿದ್ದವರಾದರೂ ಯಾರು?) ಹೇಳಿಕೊಂಡು, ಈ ಅನಿವಾರ್ಯತೆ ಎಂಬುದರ ಅರ್ಥವನ್ನು ಸೂಚ್ಯವಾಗಿ ನಿರೂಪಿಸಿದ್ದಾರೆ. ಆ ಮೂಲಕ ರಾಜ್ಯದ ಮುಖ್ಯಮಂತ್ರಿಯಾಗುವ ತಮ್ಮ ಕನಸನ್ನು ಜೀವಂತವಾಗಿರಿಸಿಕೊಂಡಿರುವ ಸಂದೇಶವನ್ನು ತಮ್ಮ ಅಭಿಮಾನಿ-ಅನುಯಾಯಿಗಳಿಗೆ ರವಾನಿಸಿದ್ದಾರೆ. ಆದರೆ ಈ ಸಂದೇಶದ ಜೊತೆಗೇ ಈ ಸಂದರ್ಭದಲ್ಲಿ ಪತ್ರಿಕೆಗಳ ಮುಖಪುಟಗಳಲ್ಲಿ ಪ್ರಕಟವಾಗಿರುವ ಚಿತ್ರಗಳಲ್ಲಿ, ಸಿದ್ಧರಾಮಯ್ಯ ಮಂದಸ್ಮಿತರಾಗಿ ಹೆಗಲ ಮೇಲೆ ಕೈ ಹಾಕಿರುವ ವ್ಯಕ್ತಿಗಳ ಚಹರೆಗಳನ್ನು ಬಲ್ಲ ಕರ್ನಾಟಕದ ಜನತೆಗೆ ,ಇನ್ನೊಂದು ಸಂದೇಶವೂ ರವಾನೆಯಾಗಿದೆ- ಅಧೋಗತಿಗೆ ಇಳಿದಿರುವ ಕರ್ನಾಟಕದ ರಾಜಕಾರಣಕ್ಕೆ ಸದ್ಯಕ್ಕೆ ಮುಕ್ತಿಯಿಲ್ಲ.

ಸಿದ್ಧರಾಮಯ್ಯ ಈಚಿನ ವರ್ಷಗಳಲ್ಲಿನ ರಾಜ್ಯದ ರಾಜಕಾರಣಗಳ ಪೈಕಿ ಸ್ವಲ್ಪ ವಿಭಿನ್ನವಾಗಿ ಕಂಡವರು. ಗೋಪಾಲಗೌಡರ ನಿಧನಾನಂತರ ಕ್ರಮೇಣ ವಿಶ್ವಾಸ ಕಳೆದುಕೊಳ್ಳುತ್ತಾ ಹೋದ ಸಮಾಜವಾದಿ ರಾಜಕಾರಣ, ಜೆ. ಹೆಚ್. ಪಟೇಲರ ಮಂತ್ರಿಗಿರಿ-ಮುಖ್ಯಮಂತ್ರಿಗಿರಿಗಳು ಮುಗಿಯುವ ಹೊತ್ತಿಗೆ ಸಮಾಧಿಯಾಗಿ ಹೋಗಿದ್ದ ಸಂದರ್ಭದಲ್ಲಿ, ಜನಸಾಮಾನ್ಯರ ರಾಜಕಾರಣದ ಬಗ್ಗೆ ಮತ್ತೆ ಆಸೆ ಹುಟ್ಟಿಸಿದವರು ಸಿದ್ಧರಾಮಯ್ಯ. ಅಂತಹ ಪ್ರಖರ ಸಮಾಜವಾದಿ ತಾತ್ವಿಕ ಅಥವಾ ಹೋರಾಟದ ರಾಜಕಾರಣದ ಹಿನ್ನಲೆ ಇರದಿದ್ದರೂ ತಮ್ಮ ಪಾರದರ್ಶಕ ವ್ಯಕ್ತಿತ್ವ ಹಾಗೂ ಪ್ರಾಮಾಣಿಕ ನಡವಳಿಕೆಯ ಮೂಲಕ, ದಿನೇ ದಿನೇ ಹೊಲಸಾಗಿ ಅಧ್ವಾನಗೊಳ್ಳುತ್ತಿದ್ದ ರಾಜ್ಯ ರಾಜಕಾರಣದ ಮಧ್ಯೆ ಹೊಸ ಭರವಸೆ ಮೂಡಿಸಿದ್ದರು. ಜೊತೆಗೆ ಅಯೋಧ್ಯಾ ಪ್ರಕರಣದಿಂದಾಗಿ ತೊಂಭತ್ತರ ದಶಕದಿಂದೀಚೆಗೆ ರಾಷ್ಟ್ರ ರಾಜಕಾರಣದಲ್ಲಿ ಚರ್ಚೆಗೆ ಒಳಗಾದ ಜಾತ್ಯತೀತತೆ ಹಾಗೂ ಸಾಮಾಜಿಕ ನ್ಯಾಯಗಳ ಪರಿಕಲ್ಪನೆಗಳ ಹಿನ್ನಲೆಯಲ್ಲಿ ಅವರ ಸಮಾಜವಾದಿ ಒಲವುಗಳು ಹಾಗೂ ಬದ್ಧತೆ ಅವರನ್ನು ರಾಜಕಾರಣದ ಮುನ್ನೆಲೆಗೆ ತಂದು ನಿಲ್ಲಿಸಿದ್ದವು. ಮುಖ್ಯಮಂತ್ರಿಯಾಗುವ ಎರಡು ಅವಕಾಶಗಳ ಸಂದರ್ಭಗಳಲ್ಲೂ, ಯಾವ ರಾಜಕೀಯ ಅನುಕೂಲ ಪರಿಸ್ಥಿತಿಯಿಂದಾಗಿ ತಮ್ಮ ರಾಜಕೀಯ ಜೀವನದಲ್ಲಿ ಒಮ್ಮೆಗೇ ಉತ್ಕರ್ಷ ಕಂಡಿದ್ದರೋ ಅಂತಹ ರಾಜಕೀಯ ಅನುಕೂಲ ಪರಿಸ್ಥಿತಿಯ ಲಾಭ ಇನ್ನೊಬ್ಬರ ಪಾಲಾದ ಕಾರಣದಿಂದಾಗಿ ಉಪ ಮುಖ್ಯಮಂತ್ರಿ ಪಟ್ಟವನ್ನಷ್ಟೇ ಪಡೆದು, ಆ ಸ್ಥಾನದಲ್ಲೇ ತಮ್ಮ ದಕ್ಷತೆಯನ್ನು ಮೆರೆದಿದ್ದರು. ಆದರೆ ದೇವೇಗೌಡರೆಂಬ ಹಿರಿಯ

ಹಾಗೂ ೨೪ ತಾಸುಗಳ ರಾಜಕಾರಣೆಯನ್ನು ನೆಚ್ಚಿಕೊಂಡು ಕಳೆದ ೨೪ ವರ್ಷಗಳ ಕಾಲ ಕಾಂಗ್ರೆಸ್ ವಿರೋಧಿ ರಾಜಕಾರಣವನ್ನು ಮಾಡಿಕೊಂಡು ಬಂದಿದ್ದ ಅವರು ಈಗ (ಅಂದರೆ ಆರು ತಿಂಗಳಿನಿಂದೀಚೆಗೆ) ದಿಢೀರನೇ ದೇವೇಗೌಡರ ವಿರುದ್ಧ ತಿರುಗಿ ಬಿದ್ದು ಕಾಂಗ್ರೆಸ್ ತೆಕ್ಕೆಗೆ ಜಾರಿಕೊಳ್ಳುವ ಮೂಲಕ ತಮ್ಮ ರಾಜಕೀಯ ವ್ಯಕ್ತಿತ್ವದ ದೃಢತೆಯ ಬಗ್ಗೆ ಜನರಿಟ್ಟುಕೊಂಡಿದ್ದ ನಂಬಿಕೆಗೇ ಭಂಗ ತಂದೊಡ್ಡಿಕೊಂಡಿದ್ದಾರೆ. ಸಿದ್ಧರಾಮಯ್ಯನವರಂತಹ ವಿಶಿಷ್ಟ ವ್ಯಕ್ತಿತ್ವದ ರಾಜಕಾರಣಿ, ಎಲ್ಲ ವ್ಯಕ್ತಿತ್ವಗಳೂ ಕಲೆಸಿ ಹೋಗುವಂತಹ ಸಗಟು ರಾಜಕಾರಣ ಮಾಡುವ ಕಾಂಗ್ರೆಸ್ ಪಕ್ಷದಲ್ಲಿ ಎಷ್ಟು ಕಾಲ ಬಾಳಿಕೆಯಲ್ಲಿರಬಲ್ಲರು ಎಂಬ ಪ್ರಶ್ನೆಯ ಹೊರತಾಗಿಯೂ, ಅವರೀಗ ಪ್ರದರ್ಶಿಸುತ್ತಿರುವ ರಾಜಕೀಯದ ಮಾದರಿ, ಸದ್ಯದ ರಾಜಕೀಯ ಸಂದರ್ಭದಲ್ಲಿ ಅನೇಕ ಮುಖ್ಯ ಪ್ರಶ್ನೆಗಳನ್ನು ಎತ್ತುತ್ತದೆ.

ಸಕಲ ರಾಜಕೀಯ ಪಕ್ಷಗಳೂ ಇಂದು ಜಾಗತೀಕರಣ ಪ್ರಕ್ರಿಯೆಗೆ ಪೂರಕವಾದ ನಿಲವುಗಳನ್ನೇ ಪ್ರದರ್ಶಿಸುತ್ತಿವೆ. ಎರಡು ಕಮ್ಯೂನಿಷ್ಟ್ ಪಕ್ಷಗಳೂ ಇದಕ್ಕೇನೂ ಹೊರತಾಗಿಲ್ಲ. ಅವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ವಿದೇಶಿ ಬಂಡವಾಳದ ಆಹ್ವಾನ, ಸರ್ಕಾರಿ ಉದ್ಯಮಗಳ ಖಾಸಗೀಕರಣ ಮುಂತಾದ 'ಆರ್ಥಿಕ ಸುಧಾರಣೆ'ಗಳನ್ನು ಕೈಗೊಳ್ಳುತ್ತಾ, ಆ ರಾಜ್ಯಗಳ ಹೊರಗಷ್ಟೇ ಒಂದು ತಾತ್ವಿಕ ಚಾಳಿಯೆಂಬಂತೆ ಜಾಗತೀಕರಣ ವಿರೋಧಿ ಪ್ರತಾಪವನ್ನು ತೋರಿಸುತ್ತಿವೆ. ಹೀಗಾಗಿ ನಮ್ಮ ಸದ್ಯದ ರಾಷ್ಟ್ರೀಯ ರಾಜಕೀಯ ಸಂದರ್ಭವೇ, ಜಾಗತೀಕರಣದ ಅನಿವಾರ್ಯತೆಯನ್ನು ಇಡಿಯಾಗಿ ಒಪ್ಪಿಕೊಂಡಂತೆ ಕಾಣುತ್ತಿದೆ. ಇದಕ್ಕೆ ಮುಖ್ಯ ಕಾರಣ, ಇಂದಿನ ರಾಜಕಾರಣ ಯಾವೊಬ್ಬ ಸೃಜನಶೀಲ ಚಿಂತಕನನ್ನೂ ತನ್ನ ನಾಯಕತ್ವದ ಪರಿಧಿಯೊಳಕ್ಕೆ ಬಿಟ್ಟುಕೊಳ್ಳದಷ್ಟು ಜಡಗೊಂಡಿರುವುದೇ ಆಗಿದೆ. ಹಾಗಾಗಿಯೇ ಇಂದಿನ ರಾಜಕಾರಣಕ್ಕೆ ಕಳೆದ ೧೦-೧೫ ವರ್ಷಗಳಲ್ಲಿ ರಾಷ್ಟ್ರಾದ್ಯಂತ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಒಂದು ಲಕ್ಷವನ್ನು ದಾಟಿದ್ದರೂ, ಇದನ್ನು ರಾಷ್ಟ್ರೀಯ ದುರಂತವೆಂದು ಪರಿಗಣಿಸಲು ಹಾಗೂ ಇದರ ಹಿಂದೆ ಜಾಗತಿಕ ರಾಜಕಾರಣದ ಒತ್ತಡಗಳೇನಾದರೂ ಕೆಲಸ ಮಾಡಿವೆಯೋ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗದೇ ಹೋಗಿದೆ.

ಗ್ರಾಮವೇ ಭಾರತದ ಹೃದಯ, ರೈತನೇ ದೇಶದ ಬೆನ್ನೆಲುಬು ಎಂಬ ನಂಬಿಕೆ-ಘೋಷಣೆಗಳೊಂದಿಗೆ ರಾಷ್ಟ್ರೀಯ ನವೋದಯದ ಸಂದರ್ಭದಲ್ಲಿ ಆರಂಭವಾದ ರಾಷ್ಟ್ರ ನಿರ್ಮಾಣದ ಕೆಲಸ ಈಗ ರೈತರ ಎಡೆಬಿಡದ ಆತ್ಮಹತ್ಯೆಗಳ ಸರಮಾಲೆಯನ್ನು ತನ್ನ ಕೊರಳಿಗೆ ಹಾಕಿಕೊಳ್ಳುವ ಸ್ಥಿತಿ ತಲುಪಿದೆ. ಯಾಕೆ ಹೀಗಾಯಿತು? ರಾಷ್ಟ್ರ ನಿರ್ಮಾಣಕ್ಕಾಗಿ ನಾವು ಆರಿಸಿಕೊಂಡ ಅಭಿವೃದ್ಧಿ ಮಾದರಿಯ ಅಸಮರ್ಪಕತೆಯೇ ಇದಕ್ಕೆ ಕಾರಣವಾಗಿರಬಹುದೇ? ಈ ಮಾದರಿಗೆ ಆಧಾರವಾದ ಆಧುನೀಕರಣದ ಪರಿಕಲ್ಪನೆಯೇ ನಮಗೆ ಕೈಕೊಟ್ಟಿತೆ? ಪಶ್ಚಿಮದ ವೈಜ್ಞಾನಿಕತೆಯನ್ನೇ ತನ್ನ ಪರಮ ಧರ್ಮವನ್ನಾಗಿ

ಒಪ್ಪಿಕೊಂಡ ಆಧುನೀಕರಣದ ಪರಿಕಲ್ಪನೆಯೇ ನಮ್ಮ ರೈತ ಕೇಂದ್ರಿತ ಗ್ರಾಮ ಸಮಾಜದ ಎಲ್ಲ ಆಯಾಮಗಳನ್ನು ಒಳಗೊಳ್ಳಲು, ಅರ್ಥಮಾಡಿಕೊಳ್ಳಲು ಸಾಧ್ಯವಾಗದೇ ಹೋಯಿತೇ? ಇಂತಹ ಆಧುನೀಕರಣ ಪ್ರಕ್ರಿಯೆಯಲ್ಲಿ ಗ್ರಾಮ ಹಾಗೂ ರೈತನ 'ಮಾತೃಕೆ'ಗಳೇ ಸೀಳು ಬಿಟ್ಟಿವೇ? ಆಧುನೀಕರಣದ ಹೊರ ಆಕರ್ಷಣೆ (ಹಸಿರು ಕ್ರಾಂತಿಯ ತತ್ಕಾಲೀನ ಆರ್ಥಿಕ ಲಾಭಗಳು) ಒಳಗಾದ ರೈತ ತನ್ನ ಒಳಗಿನ ಸ್ಮೃತಿ ಕರೆಗೆ ಓಗೊಡದಾದನೆ? ಆ ಮೂಲಕ ತಳಗೆ ಬೇರು ಕಳಚಿಕೊಳ್ಳುತ್ತಿರುವ ಅನುಭವಕ್ಕೆ ಎರವಾದನೇ? ಅಪ್ಪಟ ಮಣ್ಣಿನ ಮಗನಾಗಿ ಮೂಡಿ, ರೈತ ಪ್ರತಿನಿಧಿಯಾಗಿ ರಾಜಕಾರಣ ಮಾಡುತ್ತ ಬಂದ ದೇವೇಗೌಡರೇ, ಭೂ-ಪರಿಮಿತಿ ಹಾಗೂ ಭೂ-ಪರಭಾರೆ ಕಾಯಿದೆಗಳಿಗೆ ತಿದ್ದುಪಡಿ ತರುವಂತಾದುದು ಹೇಗೆ? ಸಮಾಜವಾದಿ ಹಿನ್ನಲೆಯ ಪ್ರೊ|| ನಂಜುಡಸ್ವಾಮಿ ಮತ್ತವರ ಗೆಳೆಯರ ನೇತೃತ್ವದ ರೈತ ಚಳುವಳಿ ರೈತನಿಗೆ ಒಂದು ವ್ಯಕ್ತಿತ್ವವನ್ನು ಸಂಘಟಿಸಿ ಕೊಡುವ ಬದಲಾಗಿ ಆತನನ್ನು ಉತ್ಪಾದಕ ಮಾತ್ರನನ್ನಾಗಿ ನೋಡಿದುದರ ಹಿಂದಿನ ಮರ್ಮವೇನು? ದಲಿತರ ಪಾಲಿಗೆ ಹಳ್ಳಿ ನರಕ ಎಂಬ ಅಂಬೇಡ್ಕರ್ ನಿಲುವನ್ನು ಪೂರ್ಣ ಸತ್ಯವಾಗಿ ಪರಿಗಣಿಸದ ಕರ್ನಾಟಕದ ದಲಿತ ಚಳುವಳಿಯನ್ನು, ನಂತರ ಆರಂಭಗೊಂಡ ರೈತ ಚಳುವಳಿ ಹಿನ್ನಲೆಗೆ ಸರಿಸಿ, ಕ್ರಮೇಣ ತಾನೇ ಹಿನ್ನಲೆಗೆ ಸರಿಯುವಂತಾದುದರ ದುರಂತಕ್ಕೆ ಏನು ಕಾರಣ? ಇದನ್ನು 'ಅಮೃತ ಭೂಮಿ'ಎಂಬ ಅಂತಾರಾಷ್ಟ್ರೀಯ ಟ್ರಸ್ಟ್ ಸ್ಥಾಪನೆಯ ಹಿಂದೆ ಕೆಲಸ ಮಾಡಿದ ಜಾಗತಿಕ (ರೈತ)ರಾಜಕಾರಣದಲ್ಲಿ ಹುಡುಕೋಣವೇ?

ಆಧುನೀಕರಣವೆಂದರೆ ಒಕ್ಕಣ್ಣಿನ ಅಭಿವೃದ್ಧಿ. ನಗರೀಕರಣವೇ ಅದರ ಪರಮಾರ್ಥ. ನಗರೀಕರಣವೆಂದರೆ ನಿಲ್ಲದ ನಡಿಗೆ, ತಣಿಯದ ದಾಹ, (ಅದರ ಆಯಾಸದಲ್ಲಿ) ಕಳೆದುಹೋಗುವ ಮನುಷ್ಯ. ಹಳ್ಳಿಯಲ್ಲಿದ್ದೂ, ಈ ಆಧುನೀಕರಣಕ್ಕೆ ಒಳಗಾದವರ ಗತಿಯೂ ಅದೇನೇ . ಹಾಗಾಗಿಯೇ ಆಧುನೀಕರಣ ನಮ್ಮ ಹಳ್ಳಿಗಳನ್ನು ಹಸಿರು ಕ್ರಾಂತಿಗೆ ತೆರಬೇಕಾದ ಬೆಲೆ ಎಂಬಂತೆ ಅವುಗಳನ್ನು ಕೊಂಪೆಗಳನ್ನಾಗಿ ಪರಿವರ್ತಿಸಿ, ಅದರಿಂದ ಅನುಕೂಲ ಪಡೆದ ಮತ್ತು ಪಡೆಯದ ಇಬ್ಬರನ್ನೂ ಬೇರೆ ಬೇರೆ ಕಾರಣಗಳಿಗಾಗಿ ನಗರಗಳಿಗೆ ದಬ್ಬಿತು: ಜಾತಿವ್ಯವಸ್ಥೆಯ ಬಂಧನದಲ್ಲಿ ಒಂದು 'ಸ್ಥಿರತೆ'ಯಲ್ಲಿದ್ದ ಹಳ್ಳಿಗಳನ್ನು ಜಾತಿ ಕಟ್ಟು ಹಾಗೂ ಅದನ್ನು ಆಧರಿಸಿದ ಗ್ರಾಮಾಡಳಿತ ವ್ಯವಸ್ಥೆಯಿಂದ ಬಿಡುಗಡೆಗೊಳಿಸಿ, 'ಅಸ್ಥಿರತೆ'ಗೆ ದೂಡಿತಷ್ಟೆ; ಅದಕ್ಕೊಂದು ಹೊಸ ಸ್ಥಿರತೆಯನ್ನಾಗಲೀ-ಸಮತೋಲನವನ್ನಾಗಲೀ ಒದಗಿಸುವ ಬುದ್ಧಿಯಾಗಲೀ, ಹೃದಯವಾಗಲೀ ಅದಕ್ಕಿರಲಿಲ್ಲ. ಏಕೆಂದರೆ ಅದು ಹಳ್ಳಿಗಳ ಎಲ್ಲ ವಿದ್ಯೆ-ಕೌಶಲ್ಯಗಳನ್ನು , ಅವುಗಳಿಂದ ಭಟ್ಟಿಯಾಗುತ್ತಿದ್ದ ಪಾರಂಪರಿಕ ವಿವೇಕವನ್ನು ತನ್ನ ಹೊಸ ವಿಜ್ಞಾನ-ವಿದ್ಯೆಯ ಒರೆಗಲ್ಲಿಗೆ ಹಚ್ಚಿ ನೋಡಿ, ಅವುಗಳನ್ನು ಸಾರಾಸಗಟಾಗಿ ಹಿಂದುಳಿದ ಸಮಾಜವೊಂದರ 'ರೋಗ ಲಕ್ಷಣ'ಗಳಂತೆ ಪರಿಗಣಿಸುವ, ಹೊಸ ಅಂತರರಾಷ್ಟ್ರೀಯ ಔಷಧ ಪದ್ಧತಿ ಕಂಪನಿಯೊಂದರ ಸಗಟು

ವ್ಯಾಪಾರಿಯಂತೆ ವರ್ತಿಸಿತು. ಹಳ್ಳಿಯ ಅಸ್ಮಿತೆಗೂ, ಆತ್ಮ ವಿಶ್ವಾಸಕ್ಕೂ ಆಘಾತ ಉಂಟು ಮಾಡಿತು. ಹಳ್ಳಿಗಳ ಸ್ವಾಯತ್ತತೆಯನ್ನೇ ನಾಶ ಮಾಡಿ 'ಬಡತನ' ಎಂಬ ಭೀಕರ ರೋಗವೊಂದನ್ನು ಪತ್ತೆ ಹಚ್ಚಿತು. ನಿವಾರಣೆಯಾದಷ್ಟೂ ಹೆಚ್ಚುತ್ತಾ ಹೋಗುವ ಈ ವಿಚಿತ್ರ ರೋಗದ ಭಯ ಹುಟ್ಟಿಸಿತು. ಆಧುನೀಕರಣದ ಮೊದಲ ಹೆಜ್ಜೆಗಳ ಸಪ್ಪಳದಲ್ಲೇ ಅದರ ಈ ಆಘಾತಕಾರಿ ತರಂಗಗಳನ್ನು ಗ್ರಹಿಸುವಷ್ಟು ಸೂಕ್ಷ್ಮರಾಗಿದ್ದ ಗಾಂಧೀಜಿ (ಅವರೂ ವ್ಯಾಪಾರಿಯೇ-ಆದರೆ ನಮ್ಮ ವ್ಯಾಪಾರಿ!) ತಮ್ಮ 'ಹಿಂದ್ ಸ್ವರಾಜ್' ನಲ್ಲಿ ಇದರ ವಿರುದ್ಧ ತಮ್ಮ ಮೊದಲ ಮತ್ತು ನಿಜವಾದ 'ಮಾಡು ಇಲ್ಲವೇ ಮಡಿ' ಕಾರ್ಯಕ್ರಮವನ್ನು ಘೋಷಿಸಿದ್ದರು. ಅವರ ೧೯೪೨ ರ 'ಮಾಡು ಇಲ್ಲವೇ ಮಡಿ' ಘೋಷಣೆ ಏನಿದ್ದರೂ, ಮೊದಲಿನದರ ಕ್ಷೀಣ ಪ್ರತಿಧ್ವನಿ ಮಾತ್ರವಾಗಿತ್ತು; ಮೊದಲಿನದರ ಸೋಲನ್ನು ನುಂಗಿಕೊಂಡ ವಿಚಲತೆ ಅದರಲ್ಲಿತ್ತು. ಹಾಗಾಗಿಯೇ ಅದು ಗಾಂಧಿ ಆಶಯ ಮತ್ತು ನಿರೀಕ್ಷೆಗಳಿಗೆ ವಿರುದ್ಧವಾಗಿ ವ್ಯಾಪಕ ಹಿಂಸಾಚಾರಕ್ಕೆ ತಿರುಗಿ ವೈಭವೀಕರಣಗೊಳ್ಳುವ ಮೂಲಕ-ಅದರ ನೇತೃತ್ವ ವಹಿಸಿದ್ದ ಸಮಾಜವಾದಿಗಳಿಗೆ ಸ್ವತಃ ಗಾಂಧೀಜಿ ಹೇಳಿದಂತೆ-ದೇಶವಿಭಜನೆ ಸಂದರ್ಭದ ಕೋಮು ಹಿಂಸಾಚಾರಕ್ಕೆ ವಾತಾವರಣ ನಿರ್ಮಾಣ ಮಾಡಿಕೊಟ್ಟಿತು.

ಅದೇನೇ ಇರಲಿ, ಗಾಂಧೀಜಿ ಈ ಪಾಶ್ಚಿಮಾತ್ಯ ಶೈಲಿಯ ಆಧುನೀಕರಣದಲ್ಲಿ ಹಿಂಸೆ ಕಂಡಿದ್ದರು. ಹಾಗೆ ನೋಡಿದರೆ, ಗಾಂಧೀಜಿ ಆ ಕಾಲದ ದೊಡ್ಡ ಆಧುನಿಕರ-ಮಧ್ಯಯುಗೀನ ನಂಬಿಕೆಗಳಲ್ಲೇ ಲಂಗರು ಹಾಕಿದ್ದ ಭಾರತೀಯ ಸಮಾಜವನ್ನು ತಮ್ಮ 'ಸತ್ಯಾಗ್ರಹ'ದ ಪ್ರಯೋಗಗಳ ಮೂಲಕ ಅಂದಿನ ವಾಸ್ತವದ ಸತ್ಯಗಳಿಗೆ ಎಚ್ಚರಿಸಿದವರು;ಯಾವುದೇ ತರತಮವಿಲ್ಲದೆ, ಎಲ್ಲ ಮನುಷ್ಯರ ಘನತೆ ಸಮಾನವಾದುದೆಂದು ತಮ್ಮ ಜನ ಸಂಘಟನೆ ಹಾಗೂ ಹೋರಾಟದ ರೀತಿ ನೀತಿಗಳಿಂದಲೇ ತೋರಿಸಿಕೊಟ್ಟವರು. ಆ ನಂಬಿಕೆ ಮಾತ್ರ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟಕ್ಕೆ ಧಾರಣ ಶಕ್ತಿ ನೀಡಬಲ್ಲದೆಂದು ಅವರು ಮನಗಂಡಿದ್ದರು. ಇದೇ, ಇಂದು ನಾವು ಅಧ್ವಾನಗೊಳಿಸಿ ವಿಷಮ ಚರ್ಚೆಗೆ ಕಾರಣ ಮಾಡಿರುವ 'ಸಾಮಾಜಿಕ ನ್ಯಾಯ'ದ ಮೂಲ ರೂಪ ಕೂಡಾ. ಹಾಗಾಗಿ ಗಾಂಧೀಜಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಪಡೆಯಬೇಕಾದ ಮುಕ್ತಿ, ಸಾಮಾಜಿಕ ನ್ಯಾಯ ಸ್ಥಾಪನೆಯ ಮೊದಲ ಕ್ರಮವಾಗಿತ್ತು. ಅಂದರೆ ಗಾಂಧೀಜಿಗೆ ಆಧುನೀಕರಣವೆಂದರೆ ಸಾಮಾಜಿಕ ನ್ಯಾಯವೇ ಆಗಿತ್ತು. ಆದರೆ ಅದರಲ್ಲಿ ಇಂದಿನ ಸಾಮಾಜಿಕ ನ್ಯಾಯದಂತೆ ಆಡಳಿತದಲ್ಲಿ ಪಾಲು ಕೇಳುವುದಷ್ಟೇ ಅಲ್ಲ, ಉತ್ಪಾದನಾ ಪ್ರಕ್ರಿಯೆಯಲ್ಲೂ ಪಾಲು ಉಳಿಸಿಕೊಳ್ಳುವುದು ಕೂಡಾ ಸೇರಿತ್ತು. ಏಕೆಂದರೆ ಆಗ ಮಾತ್ರ ಸಾಮಾಜಿಕ ನ್ಯಾಯ ಸುಸ್ಥಿರವಾಗಬಲ್ಲುದು ಎಂಬ ಮುನ್ನೋಟ ಅದಕ್ಕಿತ್ತು. ಇದು ಸಾಧ್ಯವಾಗುವುದು, ಆಧುನೀಕರಣವನ್ನು ಪಶ್ಚಿಮದ ನಗರೀಕರಣದ ಮಾದರಿಗೆ ಬದಲಾಗಿ

ಗ್ರಾಮೀಣೀಕರಣದ ಮೂಲಕ ಕೈಗೊಂಡಾಗ ಮಾತ್ರ. ಗ್ರಾಮೀಣೀಕರಣ ಎಂದರೆ; ಭಾರತದ ಜೀವಸತ್ವ ಅಥವಾ ಸುಪ್ತಮನಸ್ಸು ಹಳ್ಳಿಯೇ ಆಗಿರುವುದರಿಂದ, ಅದರ ವಿಶಿಷ್ಟ ಪ್ರತಿಭೆಯೂ ಅಲ್ಲಿಂದಲೇ ಹೊರ ಹೊಮ್ಮುತ್ತಾದ್ದರಿಂದ, ಹಳ್ಳಿಯನ್ನು ಎಚ್ಚರಿಸುವುದೇ ಆಗಿದೆ.ಎಚ್ಚರಿಸುವುದು ಎಂದರೆ, ಜಡತೆಯಿಂದ ಹೊರತಂದು ಕ್ರಿಯಾಶೀಲಗೊಳಿಸುವುದು; ಕಳೆದು ಹೋಗುತ್ತಿರುವ ಅದರ ಸ್ವಾಯತ್ತತೆಯನ್ನು ಮರಳಿ ಸ್ಥಾಪಿಸುವುದು.* ಅದರ ಸ್ವಾಯತ್ತತೆ ನಾಶವಾಗಿದ್ದೇ, ಅದರ ಉತ್ಪಾದನಾ ಸಾಮರ್ಥ್ಯಕ್ಕೆ ಪೆಟ್ಟು ಬಿದ್ದುದೇ, ಅಲ್ಲಿನ ಕಸುಬುದಾರಿಕೆಯು-ಸಾಮ್ರಾಜ್ಯಶಾಹಿ ಶೋಷಣೆಯ ಅಸ್ತ್ರವಾಗಿ ಬಂದ ಬೃಹತ್ ಉತ್ಪಾದನೆಯನ್ನು ಸಾಧ್ಯಗೊಳಿಸಿದ ತಂತ್ರಜ್ಞಾನದ ಹಾಗೂ ಬಳಕೆದಾರಿಕೆಯ-ಆಧುನೀಕರಣದಿಂದಾಗಿ ನಾಶವಾಗತೊಡಗಿದ್ದರಿಂದ.

ಇದನ್ನು ಗಾಂಧೀಜಿ, ಅನ್ನ ತಿನ್ನಲು ಕೈಗೆ ಬದಲಾಗಿ ಒಂದು ಯಂತ್ರ (ವೈಜ್ಞಾನಿಕ ಸಾಧನ) ವನ್ನು ಬಳಸಿಕೊಳ್ಳುವುದಕ್ಕೆ ಹೋಲಿಸುತ್ತಾರೆ: ಇದು, ಅನ್ನದ ಸ್ಪರ್ಶ, ಅಗತ್ಯಕ್ಕೆ ತಕ್ಕಂತೆ ತುತ್ತಿನ ಗಾತ್ರವನ್ನು ನಿರ್ಣಯಿಸುವ ಮನಸ್ಸು ಮತ್ತು ಬೆರಳುಗಳ ಸಹಜ ಹೊಂದಾಣಿಕೆಯ ನೆಮ್ಮದಿ ಹಾಗೂ ಬಾಯಿಗೆ ತಾನೊಂದು ಭಾಗವಾಗಿರುವ ದೇಹದ್ದೇ ಇನ್ನೊಂದು ಭಾಗವಾದ ಕೈ, ತುತ್ತುಣಿಸುವುದರ ಹಿಂದಿನ ಜೀವ ಸ್ವಾಯತ್ತತೆಯ ನಿರಾಳತೆಯನ್ನು ಕಳೆದುಕೊಳ್ಳುವುದಕ್ಕೆ ಸಮನಾದ ದುರಂತ ಎಂದು ಎಚ್ಚರಿಸುತ್ತಾರೆ. ಇದು ನಿಜವಾಗಿಯೂ ಗ್ರಾಮದ ಆತ್ಮಸಾಕ್ಷಿಯನ್ನು, ಅದರೆಲ್ಲ ಆಳಗಳೊಂದಿಗೆ ಎಚ್ಚರಿಸುವ ಕೆಲಸ;ತಾನು ಸೃಜನಶೀಲವಾಗುಳಿಯದಂತೆ ತಡೆದ ಶಕ್ತಿಗಳನ್ನು ಗುರುತಿಸುವ ಕೆಲಸ ಹಾಗೂ ಅದರಿಂದಾಗಿಯೇ ಹೊರಗಿನ ಸೃಜನಶೀಲತೆ (ಪಾಶ್ಚಿಮಾತ್ಯ ಶೈಲಿಯ ಯಂತ್ರೀಕರಣ)ಗೆ ಪಕ್ಕಾಗಿ ತನ್ನ ಉತ್ಪಾದನಾಶೀಲತೆಯನ್ನು ಕಳೆದುಕೊಂಡುದರ ಪರಿಣಾಮಗಳ ಬಗ್ಗೆ ಆಳವಾಗಿ ಯೋಚಿಸುವ ಕೆಲಸ. ಹೀಗೆ ವಿಚಾರಿಸಿದಾಗ ಗೊತ್ತಾಗುವುದು, ಹಳ್ಳಿಯ ಸಾಮಾಜಿಕ ರಚನೆ ಜಾತಿ ವ್ಯವಸ್ಥೆಯಾಗಿ ಸ್ಥಗಿತಗೊಂಡಿದ್ದುದೇ ಅದರ ಒಟ್ಟಾರೆ ಜಡತೆಗೆ, ಅದರ ಸೃಜನ ಹೀನತೆಗೆ, ಅದರ ಕಸಬುದಾರಿಕೆ ಆಧುನಿಕ ಯಂತ್ರೀಕರಣವನ್ನು ಎದುರಿಸಲಾರದೇ ಹೋದುದಕ್ಕೆ ಮೂಲಕಾರಣ ಎಂದು. ಜಾತಿ ವ್ಯವಸ್ಥೆಯಲ್ಲಿನ ತರ-ತಮದ ಶ್ರೇಣೀಕರಣ ಹೆಪ್ಪುಗೊಂಡಿದ್ದೇ ಕಸಬುದಾರಿಕೆ ಕುರಿತಾದ ನಿಷೇಧ-ಮೈಲಿಗೆಗಳ (ಅ)ನೀತಿ ಸಂಹಿತೆಯಿಂದ. ಈ ನೀತಿ ಸಂಹಿತೆ, ಗ್ರಾಮವು ಒಂದು ತೆರೆದುಕೊಂಡ ಸಮಾಜವಾಗಿ ಪ್ರಯೋಗಗಳಲ್ಲಿ ತೊಡಗುವುದನ್ನೇ ಬಂದ್ ಮಾಡಿತು. ಗಾಂಧೀಜಿ ತಿರುಗುವ ಚರಕಾದ ಮೂಲಕ ಹಳ್ಳಿಯನ್ನು ಮತ್ತೆ ಜೀವಂತಗೊಳಿಸಲು ಯತ್ನಿಸಿದರು. ಅದು ಆರಂಭ ಮಾತ್ರವಾಗಿತ್ತು. ಚರಕಾ, ಗಾಂಧಿ ಕಲ್ಪನೆಯ ಆಧುನೀಕರಣದ (ಗ್ರಾಮೀಣೀಕರಣದ)ಮೂಲ ಮಾತೃಕೆ ಇದ್ದಂತೆ. ಹಾಗೇ ಅದು

---

*ಈ ಬಗ್ಗೆ ಗಾಂಧೀಜಿಯವರ 'ನನ್ನ ಆದರ್ಶ ಗ್ರಾಮ' ಕಿರು ಪುಸ್ತಿಕೆಯನ್ನು ನೋಡಿ (ಸಂಕಲನ ಹಾಗೂ ಅನುವಾದ: ಕೆ. ಎಸ್. ನಾರಾಯಣ ಸ್ವಾಮಿ)

ಸಾಮಾಜಿಕ ನ್ಯಾಯದ ಮೂಲ ಮಾತೃಕೆ ಕೂಡಾ: ಉತ್ಪಾದನೆಯಲ್ಲಿ ಸರ್ವರಿಗೂ ಸಮಾನಾವಕಾಶ ಒದಗಿಸುವಂತಹ ಸೃಜನಶೀಲ ತಾಂತ್ರಿಕತೆ ಮೂಲಕ ಕಟ್ಟುವ ಸಮಾಜದ ಒಡೆತನವು ಸಹಜವಾಗಿಯೇ ಸರ್ವರಲ್ಲೂ ಪ್ರಾತಿನಿಧಿಕವಾಗಿ ಹಂಚಿ ಹೋಗುವ ವ್ಯವಸ್ಥೆಯದು. ಆದರೆ ಭಾರತದ ಮುಚ್ಚಿಕೊಂಡ ಜಾತಿಸಮಾಜ, ಅದನ್ನು ಬಿಚ್ಚಲು ಹೊರಟ ಗಾಂಧೀಜಿಯನ್ನು ಕೊಂದು ಹಾಕುವ ಮೂಲಕ ಆ ವ್ಯವಸ್ಥೆಯ ಆಶಯವನ್ನೇ ನುಚ್ಚು ನೂರು ಮಾಡಿತು.

ಈ ನುಚ್ಚು ನೂರಾದ ಆಶಯವನ್ನೇ ತಮ್ಮ ಸಣ್ಣ ಘಟಕ ತಂತ್ರಜ್ಞಾನ, ಆಡಳಿತ ವಿಕೇಂದ್ರೀಕರಣ, ಜಾತಿ ವಿನಾಶ ಹಾಗೂ ಭಾರತೀಯ ಭಾಷಾ ಆಂದೋಲನಗಳ ಮೂಲಕ ಪುರ್ನಸಂಘಟಿಸಲು ಯತ್ನಿಸಿದ ಸಮಾಜವಾದಿಗಳು, ಗಾಂಧೀಜಿಯ 'ಅಹಿಂಸೆ'ಯ ತಿರುಳನ್ನೇ ಅರಿಯದೆ, ಕ್ರೋಧಕ್ಕೆ ಬಿದ್ದು ಸ್ವತಃ ತಾವೇ ನುಚ್ಚು ನೂರಾದರು: ಸಮಾಜವಾದಿ ಆಂದೋಲನವು ನೆಹರೂ ಅವರ 'ಆಧುನಿಕತೆ'ಯ ಖಯಾಲಿಯನ್ನಾಧರಿಸಿದ ರಾಜಕಾರಣದಿಂದಾಗಿ, ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಭಾರಿ ಅಘಾತವನ್ನನುಭವಿಸಿತು. ಅದರ ಪರಿಣಾಮವಾಗಿಯೋ ಎಂಬಂತೆ ಅದು ನಂತರ ತನ್ನಮಾರ್ಗವನ್ನು ಪಾಶ್ಚಿಮಾತ್ಯ ಶೈಲಿಯ ಆಧುನೀಕರಣವನ್ನೇ ಮೂಲಸ್ಫೂರ್ತಿಯನ್ನಾಗಿಸಿಕೊಂಡ ಮಾರ್ಕ್ಸ್‌ವಾದದಿಂದ ಸಂಪೂರ್ಣವಾಗಿ ಭಿನ್ನವಾಗಿಸಿಕೊಂಡು, ಗಾಂಧೀಜಿಯಿಂದ ಕಲಿತ ಪಾಠಗಳಾನ್ನಾಧರಿಸಿ ತನ್ನದೇ ಹಾದಿ ಹಿಡಿಯುವ ಸಂಕಲ್ಪ ಕೈಗೊಂಡಿತು. ಈ ಸಂಕಲ್ಪಕ್ಕೆ ಹಿನ್ನಲೆ ಒದಗಿಸಿದ ಲೋಹಿಯಾ ಅವರ 'ಭಾರತೀಯ ಸಮಾಜವಾದದ ತಾತ್ವಿಕ ಅಡಿಗಲ್ಲು'ಎಂಬ ಭಾಷಣವು (೧೯೫೨)ಪ್ರಸ್ತಾಪಿಸುವ 'ಸಮಾಜವಾದಿ ಆಶ್ರಮ'ಗಳ ಪರಿಕಲ್ಪನೆಯೂ ಇದೇ ಆಶಯವನ್ನು ಹೊಂದಿದೆ. ಆದರೆ ಈ ಸಮಾಜವಾದಿಗಳು ತಾವು ಕಾಂಗ್ರೆಸ್‌ನೊಳಗಿದ್ದು ಅನುಭವಿಸಿದ ನೋವು ಸಂಕಷ್ಟಗಳಿಗೆ ಪ್ರತೀಕಾರವೆಂಬಂತೆ ತಮ್ಮ ಚಳುವಳಿಯನ್ನು ಕಟ್ಟತೊಡಗಿದ್ದರಿಂದ, ಗಾಂಧಿಯಿಲ್ಲದ ಅವರ ಆಶ್ರಮದ ಕಲ್ಪನೆ, ಕೇವಲ ಕಳೆದು ಹೋದ ಕನಸಿನ ಕನವರಿಕೆಯಾಗಿ ಮಾತ್ರ ಉಳಿಯಿತಷ್ಟೇ.

ಆದರೆ ಈ ಕನಸು ಇನ್ನೂ ಬತ್ತಿ ಹೋಗಿಲ್ಲ. ಕಾಂಗ್ರೆಸ್ ಮೂಲದ ಸಮಾಜವಾದಿಗಳ ಕಾಲ ಮುಗಿದಿದೆ. ಅವರ ಮಾರ್ಗ ಬಿಟ್ಟು ಅವರ ಗುರಿಯನ್ನು ಅರಸುವ ಹಂಬಲ, ಅನೇಕ ರೂಪಗಳಲ್ಲಿ ಇಂದು ವ್ಯಕ್ತವಾಗುತ್ತಿದೆ.ಮೇಧಾಪಾಟ್ಕರ್‌ರ 'ನರ್ಮದಾ ಬಚಾವೋ ಆಂದೋಲನ' ಅದರ ಆಶಯದ ದೃಷ್ಟಿಯಿಂದ ಇಂತಹ ರೂಪಗಳ ಒಂದು ದೊಡ್ಡ ಮಾದರಿಯಾಗಿದೆ. ಹಾಗೇ ಅಣ್ಣಾ ಹಜಾರೆ ಅವರ ಮಾದರಿ ಗ್ರಾಮ ಪ್ರಯೋಗವು ಒಂದು ಚಿಕ್ಕ ಮಾದರಿಯಾಗಿದೆ. ಇದರ ಜೊತೆಯಲ್ಲೇ ಭಾರತದಾದ್ಯಂತ ಅನೇಕ ಸಣ್ಣ ಗುಂಪುಗಳು, ನೀರು, ಕಾಡು, ಖನಿಜ, ಬೀಜ, ಕಸುಬುಗಳ ಸಂರಕ್ಷಣೆಗಾಗಿ

ಆಂದೋಲನಗಳನ್ನು ನಡೆಸಿವೆ. ಈ ಹಿನ್ನಲೆಯಲ್ಲಿ ರೈತರ ನಿಲ್ಲದ ಆತ್ಮಹತ್ಯೆ ಸರಣಿ ಇಂದಿನ ಒಂದು ದೊಡ್ಡ ರಾಷ್ಟ್ರೀಯ ತಳಮಳಕ್ಕೆ ರೂಪಕವಾಗಿ ನಿಲ್ಲುತ್ತದೆ. ಸಾಮ್ರಾಜ್ಯಶಾಹಿಯ ಹೊಸ (ಹಾಗೂ ಅಂತಿಮ?)ರೂಪವಾದ ಜಾಗತೀಕರಣವು ಸಾಮ್ರಾಜ್ಯಶಾಹಿಯಂತೆ ಕಸುಬುದಾರರ ಕೈಬೆರಳುಗಳನ್ನು ಕಡಿದು ಹಾಕುವಷ್ಟು ರೂಕ್ಷವಾಗುಳಿದಿಲ್ಲ. ಈಗಾಗಲೇ ಅನೇಕ 'ಮ್ಯಾನೇಜ್‌ಮೆಂಟ್' ಕೋರ್ಸುಗಳನ್ನು ಆವಿಷ್ಕರಿಸುವ ಅದು ಸಹಜವಾಗಿಯೇ, ಕಾಣದಂತೆ ಕೊಲ್ಲುವ ಕಲೆಯನ್ನು ಸಿದ್ಧಿಸಿಕೊಂಡಿದೆ.

ಭಾರತದ ಮಟ್ಟಿಗೆ ಜಾಗತೀಕರಣವೆಂದರೆ ಕೃತಕ ಉಸಿರಾಟದ ಮೇಲೆ ನಡೆಯುತ್ತಿರುವ ಆಧುನೀಕರಣದ ಮುಂದುವರಿಕೆ. ನೆಹರೂ ಖಯಾಲಿಯ ಆಧುನೀಕರಣ ಸ್ವಂತ ಉಸಿರಿನ ಮೇಲೆ ಆರಂಭವಾಗಿ, ಅವರ (ತತ್ವ ಶಾಲೆಯ) ಶಿಷ್ಯ ಚಂದ್ರಶೇಖರರ ಪ್ರಧಾನಮಂತ್ರಿತ್ವದ ಅವಧಿಯ ಹೊತ್ತಿಗೆ ದೇಶದ ಕಾಪು ಚಿನ್ನವನ್ನೆಲ್ಲ ವಿಶ್ವ ಬ್ಯಾಂಕ್‌ನ ಬಳಿ ಅಡವಿಡುವ ದಾರಿದ್ರ್ಯಕ್ಕೆ ದೇಶವನ್ನು ದೂಡಿದ್ದರೊಂದಿಗೆ ಕೊನೆಯುಸಿರೆಳೆಯಿತು. ಹೀಗಾಗಿ ಈಗ ವಿಶ್ವ ಬ್ಯಾಂಕೆಂಬ ಅಂತಾರಾಷ್ಟ್ರೀಯ ಚಿಕಿತ್ಸಾ ಘಟಕದ ಕೃತಕ ಉಸಿರಾಟದ ಉಪಕರಣದ ಅಳವಡಿಕೆಯೊಂದಿಗೆ-ಐ.ಟಿ. ಮತ್ತು ಬಿ.ಟಿ. ಇದರ ಉಸಿರಾಟದ ಎರಡು ನಳಿಕೆಗಳು-ಆಧುನೀಕರಣ, ಜಾಗತೀಕರಣವಾಗಿ ಮಾರ್ಪಟ್ಟು ಮುನ್ನಡೆಯುತ್ತಿದೆ. ಜಾಗತಿಕ ವ್ಯಾಪಾರ ಹಾಗೂ ಪರಿಸರ ಸಂರಕ್ಷಣೆಯ ಅಸಮ ಒಪ್ಪಂದಗಳಿಗೆ ನೀಡಲಾಗುವ ಒಪ್ಪಿಗೆಯೇ ಇದಕ್ಕೆ ಭಾರತದ ತೆರಬೇಕಾದ 'ಚಿಕಿತ್ಸಾ ಶುಲ್ಕ'ವಾಗಿದೆ. ಆದರೆ ಈ ವ್ಯವಸ್ಥೆ ಬಹಳ ಕಾಲ ನಡೆಯಲಾರದೆಂಬ ಮೊದಲ ಮತ್ತು ಮುಖ್ಯ ಸೂಚನೆಯೇ, ನಿಲ್ಲದ ರೈತರ ಆತ್ಮಹತ್ಯೆ ಸರಣಿ. ಇದರ ಹಿಂದಿರುವುದು ಕೇವಲ ಸಾಲ-ಸೋಲಗಳ ಆರ್ಥಿಕ ಪ್ರಶ್ನೆಯಲ್ಲ. ಇದು ಭಾರತದ ರೈತನ, ಅವನು ಪ್ರತಿನಿಧಿಸುವ ಗ್ರಾಮ ಸಮಾಜದ ಸಮಗ್ರ 'ವ್ಯಕ್ತಿತ್ವ'ದ-ಅದರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮಗಳೂ ಸೇರಿದಂತೆ-ಸುಸ್ಥಿರತೆಯ/ನಾಶದ ಪ್ರಶ್ನೆ. ಜಾಗತೀಕರಣ ಭಾರತದ ಬೇರುಗಳಿರುವ - ಆಧುನೀಕರಣದ ಪರಿಣಾಮವಾಗಿ ಕೊಂಪೆಗಳಾಗಿರುವ - ಹಳ್ಳಿಗಳನ್ನು ಈಗ ಸ್ಮಶಾನ ಮಾಡ ಹೊರಟಿದೆ; ನಗರಗಳನ್ನು 'ಪರಿಹಾರವಾಗದ ಬಡತನ'ವೆಂಬ ಭೀಕರ ರೋಗಕ್ಕೆ ತುತ್ತಾಗಿಸಿ ನರಕಗಳನ್ನಾಗಿಸತೊಡಗಿದೆ.

ಹೀಗಾಗಿ ಜಾಗತೀಕರಣವೆಂದರೆ ಮತ್ತೇನೂ ಆಗಿರದೆ, ಗಾಂಧೀಜಿ ಮುನ್ನೋಡಿದ್ದ ಪಶ್ಚಿಮದ ಆಧುನಿಕ ನಾಗರೀಕತೆಯ ಅನಾಹುತದ ಅಂತಿಮ ರೂಪವೇ ಆಗಿದೆ. ಈ ಆಧುನೀಕರಣ ನಮ್ಮ ಗ್ರಾಮಗಳನ್ನು ಜಡತೆಯಿಂದ ಸ್ಥಿರತೆಗೆ ದೂಡಿದ್ದ ಜಾತಿ ವ್ಯವಸ್ಥೆಯನ್ನೇನೂ ಮುಖಾಮುಖಿಗೊಳಿಸಿಕೊಳ್ಳಲಿಲ್ಲ ; ಬದಲಾಗಿ ಅದರೊಂದಿಗೆ 'ನನ್ನ ತಂಟೆಗೆ ನೀನು ಬರಬೇಡ, ನಿನ್ನ ತಂಟೆಗೆ ನಾನು ಬರುವುದಿಲ್ಲ' ಎಂಬ ಒಳ ಒಪ್ಪಂದದೊಂದಿಗೆ ಮುನ್ನಡೆಯಿತು. ಜಾಗತಿಕವಾಗಿ ರಾಷ್ಟ್ರಗಳನ್ನು, ಸಮಾಜಗಳನ್ನು,

ಮನುಷ್ಯರನ್ನು ಒಡೆದು ನಿಲ್ಲಿಸಿರುವ ಈ ಆಧುನೀಕರಣ, ಈಗ ಜಾಗತೀಕರಣದ ರೂಪದಲ್ಲಿ- ಅದರೆಲ್ಲ ವಿಶ್ವಾತ್ಮಕತೆಯ ಆದರ್ಶದ ಬೆಡಗು ಬಿನ್ನಾಣಗಳೊಂದಿಗೆ- ನಮ್ಮೆಲ್ಲರ ಮನಸ್ಸಿನ ಗರ್ಭಗುಡಿಯನ್ನು ಪ್ರವೇಶಿಸಲು ಹೊಂಚುಹಾಕುತ್ತಿದೆ; ಒಂದು 'ಪಾವಿತ್ರ್ಯ'ವಾಗಿ ಸ್ಥಾಪಿತಗೊಳ್ಳಲು ಹವಣಿಸುತ್ತಿದೆ. ('ಇನ್ಫೋಸಿಸ್'ನ ನಾರಾಯಣಮೂರ್ತಿಯವರನ್ನು ನಮ್ಮ ಮುಂದಿನ ರಾಷ್ಟ್ರಪತಿ ಮಾಡಲು ಸಿದ್ಧತೆಗಳು ನಡೆದಿವೆ!) ಅದು ಮುನ್ನೋಡಿರುವ 'ಇತಿಹಾಸದ ಸಾವು' ಅಥವಾ 'ಇನ್ನು ಮುಂದೆ ಇತಿಹಾಸವಿಲ್ಲ' ಎಂಬುದರ ಅರ್ಥವಾದರೂ ಇದೇನೇ: ಭಾರತದಂತಹ ಸಮಾಜ ಹೀಗಿರುವಂತೆಯೇ ಸಮೃದ್ಧಿ-ದಾರಿದ್ರ್ಯಗಳ ದ್ವಂದ್ವದಲ್ಲಿ ಶಾಶ್ವತವಾಗಿ ತೊಳಲಾಡುತ್ತಿರಬೇಕಾಗುತ್ತದೆ, ಜಾಗತೀಕರಣ ನಿರೂಪಿಸಿರುವ ಕಸುಬು-ಕೌಶಲ್ಯಗಳನ್ನು ಪವಿತ್ರೀಕರಿಸಿಕೊಳ್ಳದೇ ಹೋದರೆ!

ಇದು ಇಂದು ನಮ್ಮೆದುರಿಗಿರುವ ಅಂತಿಮ ಸವಾಲು. ಈಗಾಗಲೇ ವಿವರಿಸಿರುವಂತೆ, ಇದು ಬಹು ಆಯಾಮಗಳುಳ್ಳ ಸವಾಲು. ಇದನ್ನು ಸಮಗ್ರವಾಗಿ ಎದುರಿಸಲು ರಾಜಕಾರಣದಿಂದ ಮಾತ್ರ ಸಾಧ್ಯ. ಏಕೆಂದರೆ ಈ ಸವಾಲು ಸೃಷ್ಟಿಯಾಗಿರುವುದೇ ದೂರ ದೃಷ್ಟಿಯಿಲ್ಲದ ತಪ್ಪು ರಾಜಕಾರಣದಿಂದ. ಆದುದರಿಂದ ಇದನ್ನು ಎದುರಿಸಲು, ರಾಜಕಾರಣವನ್ನು ಪುನರ್ರೂಪಿಸುವ ತುರ್ತು ಅಗತ್ಯವಿದೆ. ತನ್ನ ದೃಷ್ಟಿಕೇಂದ್ರವನ್ನೇ ಕಳೆದುಕೊಂಡಿರುವ ನಮ್ಮ ರಾಜಕಾರಣವೀಗ ಈ ಮೊದಲು ಸೂಚಿಸಿದಂತೆ - ಅದರ ರೈತ ಮುಖವೂ ಸೇರಿದಂತೆ -ಗೊತ್ತಿದ್ದೋ ಗೊತ್ತಿಲ್ಲದೆಯೋ ಜಾಗತೀಕರಣದ ನಮ್ರ ಸೇವಕನಾಗಿ ಪರಿವರ್ತಿತವಾಗಿದೆ. ಇಂತಹ ಪರಿಸ್ಥಿತಿಯಲ್ಲಿ- ಮುಳುಗುವಾಗ ಒಂದು ಹುಲ್ಲುಕಡ್ಡಿ ಸಿಕ್ಕರೂ ಸಾಕೆನ್ನಿಸುವ ಈ ಪರಿಸ್ಥಿತಿಯಲ್ಲಿ-ಈ ಮೊದಲು ತಿಳಿಸಿದ ಕಾರಣಗಳಿಂದಾಗಿ ಕರ್ನಾಟಕದ ಮಟ್ಟಿಗಾದರೂ ಪರ್ಯಾಯ ರಾಜಕಾರಣದ ನಾಯಕತ್ವ ವಹಿಸಿಕೊಳ್ಳುವ ಸಾಧ್ಯತೆ ಇರುವವರಾಗಿ ಕಂಡವರು ಸಿದ್ಧರಾಮಯ್ಯ. ಇಂದಿನ ರಾಜಕಾರಣಿಗಳ ಮಧ್ಯೆ ಅಪರೂಪವೆಂಬಂತೆ ಜನ ಮನ್ನಣೆ- ಮರ್ಯಾದೆಗಳೆರಡನ್ನೂ ಉಳಿಸಿಕೊಂಡಿದ್ದ ಅವರು, ಹೊಸ ಆಲೋಚನೆಗಳಿಗೆ ತೆರೆದುಕೊಳ್ಳುವವರಂತೆ ಕಂಡವರು; ಸದ್ಯದ ಕರ್ನಾಟಕದ ರಾಜಕಾರಣ ಮುಟ್ಟಿರುವ ಅಧೋಗತಿಯ (ಈಗ ಕರ್ನಾಟಕವನ್ನು ದಕ್ಷಿಣದ ಬಿಹಾರ ಎಂದೂ ಕರೆಯಲಾಗುತ್ತಿದೆಯಂತೆ!) ಸಂಕೇತದಂತಿರುವ ಮತ್ತು ಆಧುನೀಕರಣದ ವಿಕ್ಷಿಪ್ತ ರೂಪದಂತಿರುವ ದೇವೇಗೌಡರ ರಾಜಕಾರಣದ ವಿರುದ್ಧ ಕೊನೆಗೂ ಸೆಟೆದು ನಿಂತವರು; ಅಷ್ಟೇನೂ ಆಧುನೀಕರಣಕ್ಕೆ ಒಳಗಾಗದಂತೆ ತೋರುವ ಅವರು, ತಾವು ಬಹುವಾಗಿ ಹಂಬಲಿಸುತ್ತಿರುವ ಸಾಮಾಜಿಕ ನ್ಯಾಯದ ಮೂಲ ಬೇರು ಗ್ರಾಮೀಣೀಕರಣದಲ್ಲಿದೆ ಎಂಬ ಗಾಂಧಿ ಹೊಳಹನ್ನು ಕ್ರಮೇಣವಾಗಿಯಾದರೂ ಕಾಣಬಲ್ಲರೆಂಬ ವಿಶ್ವಾಸವನ್ನು, ತಮ್ಮ ನಡೆ-

ನುಡಿಗಳ ಮೂಲಕ ಮೂಡಿಸಿದ್ದವರು. ಇದಕ್ಕೆಲ್ಲ ಹಿನ್ನಲೆಯಾಗಿ ವರ್ಷಾನುಗಟ್ಟಲೆ ಮಲಗಿದ್ದ ನಮ್ಮ ದೇವನೂರು ಮಹಾದೇವ ಇದ್ದಕ್ಕಿದ್ದಂತೆ ಎಚ್ಚರಗೊಂಡಂತೆ, ತಮ್ಮ ಕೆಲವು ದಲಿತ-ರೈತ ಚಳುವಳಿಗಳ ಗೆಳೆಯರೊಂದಿಗೆ ಘೋಷಿಸಿದ 'ಸರ್ವೋದಯ ಕರ್ನಾಟಕ' ಪಕ್ಷದ ಆಶಯಗಳು ಚಿಗುರಿಸಿದ ಹೊಸ ಕರ್ನಾಟಕದ ಕನಸು ಸೇರಿ ಕೆಲಸ ಮಾಡಿ, ಸಿದ್ಧರಾಮಯ್ಯನವರ 'ಬಂಡಾಯ'ವೇ ಒಂದು ನೆಪವಾಗಿ, ಕರ್ನಾಟಕದ ಮಟ್ಟಿಗಾದರೂ ಹೊಸ ರಾಜಕಾರಣ ಆರಂಭವಾಗುವ ಆಸೆ ಚಿಗುರಿತ್ತು. ಆದರೀಗ ಕಣದಲ್ಲಿ ಸಿದ್ಧರಾಮಯ್ಯನವರೂ ಇಲ್ಲ, 'ಸರ್ವೋದಯ ಕರ್ನಾಟಕ'ವೂ ಇಲ್ಲ! ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿ ಯುದ್ಧ ಆರಂಭಿಸದೆಯೇ ಸೋತವರಂತೆ ಕಾಣಿಸತೊಡಗಿದ್ದಾರೆ. 'ಸರ್ವೋದಯ ಕರ್ನಾಟಕ' ಸ್ಥಾಪನೆಯ ದಿಢೀರ್ ಘೋಷಣೆಯ ತುರ್ತನ್ನೇ ಅನುಮಾನಸ್ಪದಗೊಳಿಸುವ ರೀತಿಯಲ್ಲಿ, ಅದರ ನಾಯಕರು ಕಣ್ಮರೆಯಾಗಿದ್ದಾರೆ!

ಸಿದ್ಧರಾಮಯ್ಯನವರ ಸದ್ಯದ ರಾಜಕಾರಣ ಹೀಗಾಗಲು, ಅವರು ನಾನು ಈ ಹಿಂದೆ 'ಅಹಿಂದ'ಚಳುವಳಿ ಕುರಿತ ಲೇಖನದಲ್ಲಿ ಹೇಳಿದಂತೆ(ನೋಡಿ: *ಸಂವಾದ : ಮಾರ್ಚ್-೨೦೦೬*)ಅಧಿಕಾರದ ಆಧ್ಯಾತ್ಮೀಕರಣಕ್ಕೆ-ನಾನು ರಾಜಕಾರಣ ಮಾಡುತ್ತಿರುವುದಾದರೂ ಏತಕ್ಕೆ ಮತ್ತು ಯಾರಿಗಾಗಿ ಎಂಬ ಪ್ರಶ್ನೆಗೆ - ಅವಕಾಶವೇ ಇರದ ಆಧುನಿಕತೆಯ ಎರಕದಿಂದ ಸಂಪೂರ್ಣವಾಗಿ ಹೊರಬರುವಷ್ಟು ಅವರ ರಾಜಕೀಯ ವ್ಯಕ್ತಿತ್ವ ಮಾಗದಿರುವುದೇ ಕಾರಣವಾಗಿದೆ. ಅವರ ಪ್ರಕಾರ, ಅವರು ಕಾಂಗ್ರೆಸ್ಸಿಗೆ ಸೇರಿದ್ದು ಮೂರು ಕಾರಣಗಳಿಗಾಗಿ-ಒಂದು, ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷದ ರಚನೆಯ ಹಲವು ಪ್ರಯತ್ನಗಳು ವಿಫಲವಾಗಿರುವುದರಿಂದ; ಎರಡು, ಹೊಸ ಪಕ್ಷ ಕಟ್ಟುವಷ್ಟು ದುಡ್ಡಿಲ್ಲದಿರುವುದರಿಂದ; ಮೂರು, ಕೋಮುವಾದಿ ಶಕ್ತಿಗಳನ್ನು ಕರ್ನಾಟಕದಲ್ಲಿ ಹಿಮ್ಮೆಟ್ಟಿಸುವ ತುರ್ತು ಅಗತ್ಯವಿರುವುದರಿಂದ. ಆದರೆ ಈ ಮೂರು ಕಾರಣಗಳು ಸಿದ್ಧರಾಮಯ್ಯ ಹುಟ್ಟಿಸಿದ್ದ ನಿರೀಕ್ಷೆಗಳ ಹಿನ್ನಲೆಯಲ್ಲಿ ಅಸಂಬದ್ಧವಾಗಿ ಕಾಣುತ್ತವೆ.

ಕರ್ನಾಟಕದಲ್ಲಿ ಹೊಸ ರಾಜಕಾರಣ ಮಾಡುವ ಬದ್ಧತೆಯಿಂದ ಪ್ರಾದೇಶಿಕ ಪಕ್ಷದ ರಚನೆಯ ಸಾಮೂಹಿಕ (ಆಂದೋಲನ ರೂಪಿಯಾದ) ಗಂಭೀರ ಪ್ರಯತ್ನವಾದರೂ ಯಾವಾಗ ನಡೆದಿದೆ? ದುಡ್ಡಿನಿಂದಲೇ ನಡೆಯುವ ರಾಜಕಾರಣ ಮಾಡುವುದಾದರೆ, ಸಿದ್ಧರಾಮಯ್ಯ ಮಾಡಬಹುದಾದ ರಾಜಕಾರಣದಿಂದ ನಾವೇನು ನಿರೀಕ್ಷಿಸಬಹುದು? ಸಿದ್ಧರಾಮಯ್ಯನವರು ಈಗ ಸೇರಿರುವ ಪಕ್ಷದ ಅಧಿಕಾರಾವಧಿಯಲ್ಲೇ ಅಲ್ಲವೇ 'ಕೋಮುವಾದಿ ಶಕ್ತಿಗಳು' ಬೆಳೆದು ಈಗ ಅಧಿಕಾರಕ್ಕೆ ಬರುವಂತಾಗಿರುವುದು ಎಂಬುದು ಅವರಿಗೆ ಗೊತ್ತಿಲ್ಲದ ವಿಷಯವೇ? ಸಿದ್ಧರಾಮಯ್ಯ ನೇರ ನಡೆ ನುಡಿಗೆ ಹೆಸರಾದವರು. ಹಾಗಾಗಿ ಅವರು ಕಾಂಗ್ರೆಸ್ ಸೇರಲು ಇರುವ ಮೂಲ ಪ್ರೇರಣೆ ಏನೆಂಬುದನ್ನು

ಬಾಯಿಬಿಟ್ಟು ಹೇಳಲು ಏಕೆ ಹಿಂಜರಿಯುತ್ತಿದ್ದಾರೋ ತಿಳಿಯದು. ತಾವೇನೂ ಸಂನ್ಯಾಸಿಯಲ್ಲ ಎಂದು ಹೇಳುವ ಮೂಲಕ ಹಾಗೂ ಇತ್ತೀಚಿನ ದಿನಗಳಲ್ಲಿ 'ನಾನ್ಯಾಕೆ ಮುಖ್ಯ ಮಂತ್ರಿಯಾಗಬಾರದು?' ಎಂಬ ಪ್ರಶ್ನೆಯನ್ನು ಪದೇ ಪದೇ ಕೇಳಿಕೊಳ್ಳುವ ಮೂಲಕ ಸಿದ್ಧರಾಮಯ್ಯ ಈಗಾಗಲೇ ತಮ್ಮ ಗುಟ್ಟು ಬಿಟ್ಟುಕೊಟ್ಟಿದ್ದಾರೆ. ಆದರೆ ಅದು ಸ್ವಲ್ಪ ಆಘಾತಕಾರಿ ಗುಟ್ಟೇ ಆಗಿದೆ...

ಸಿದ್ಧರಾಮಯ್ಯ ಮುಖ್ಯ ಮಂತ್ರಿಯಾಗಬೇಕೆಂಬುದೇ ಅವರಲ್ಲಿ ವಿಶ್ವಾಸವಿಟ್ಟಿರುವ ಎಲ್ಲರ ಆಸೆ. ಆದರೆ ಅವರು ಅದಕ್ಕಾಗಿ ಮಾಡುವ ರಾಜಕಾರಣ ಎಂತಹದು ಎಂಬುದರ ಬಗ್ಗೆಯೂ, ಹಾಗೆ ಆಸೆ ಪಟ್ಟ ಎಲ್ಲರ ಆತಂಕ-ಕುತೂಹಲ-ಕಾಳಜಿಗಳಿವೆ. ಜಾಗತೀಕರಣದ ಆಘಾತಗಳನ್ನು ಎದುರಿಸುವಂತಹ ರಾಜಕಾರಣ ಮಾಡುವ ಮೂಲಕ ಅವರು ಮುಖ್ಯ ಮಂತ್ರಿಯಾಗುವುದಾದರೆ ಮಾತ್ರ ಅವರು ತಮ್ಮ ಕೇಂದ್ರ ಕಾಳಜಿಯನ್ನು ಮಾಡಿಕೊಂಡಿರುವ ಹಾಗೂ ಯಾವುದರ ಆಧಾರದ ಮೇಲೆ ಅವರು ಹೊಸ ರಾಜಕಾರಣದ ಆಸೆ ಹುಟ್ಟಿಸಿದ್ದರೋ, ಆ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಇಡಿಯಾಗಿ ಎದುರಿಸಬಲ್ಲರು ಎಂಬುದು ಅಂತಹವರ ಪ್ರಾಮಾಣಿಕ ನಂಬಿಕೆ. ಇದು ಕಾಂಗ್ರೆಸ್‌ನಲ್ಲಿ ಸಾಧ್ಯವೇ? ಅಸಾಧ್ಯವೆನಿಸುವುದಾದರೆ, ಸಿದ್ಧರಾಮಯ್ಯನವರ ಸದ್ಯದ ರಾಜಕಾರಣಕ್ಕೆ ಇರುವ ಅರ್ಥವಾದರೂ ಏನು? ಕುರುಬನೊಬ್ಬ ಮುಖ್ಯ ಮಂತ್ರಿಯಾಗಿ ಕುರುಬ ಜನಾಂಗದವರನ್ನು ಸಂತೋಷ ಪಡಿಸುವುದಷ್ಟೇ ಅವರ ಈ ಸಾಮಾಜಿಕ ನ್ಯಾಯ ರಾಜಕಾರಣದ ಉದ್ದೇಶವಾದರೆ, ಅಂತಹ ಮುಖ್ಯಮಂತ್ರಿತ್ವವನ್ನು ಉಳಿಸಿಕೊಳ್ಳುವುದೇ ಕಾಂಗ್ರೆಸ್‌ನಲ್ಲಿ ಸಿದ್ಧರಾಮಯ್ಯನವರಿಗೆ ದೊಡ್ಡ ಹಾಗೂ ಏಕೈಕ ಉದ್ಯೋಗವಾದೀತು. ಅದು ಸಿದ್ಧರಾಮಯ್ಯನವರಂತಹ ಸ್ವಾಭಿಮಾನಿ ಹಾಗೂ ಮರ್ಯಾದಸ್ಥ ರಾಜಕಾರಣಿಗೆ ನರಕವೇ ಸರಿ, ಅವರು ಆವರೆಗೆ ಸ್ವಾಭಿಮಾನ ಹಾಗೂ ಮರ್ಯಾದಸ್ತಿಕೆ ಉಳಿಸಿಕೊಂಡಿದ್ದರೆ!

ಒಂದು ಸಂಗತಿಯಂತೂ ನಿಜ: ಜಾಗತೀಕರಣವೆಂಬ ಮಾಯಾಜಾಲವನ್ನು ಸೃಷ್ಟಿಸಿರುವ ಆಧುನೀಕರಣದ ರಾಜಕಾರಣದಿಂದಾಗಿ ಕಂಗಾಲಾಗಿರುವ ಹಾಗೂ ಆಯಾಸಗೊಂಡಿರುವ ಬೃಹತ್ ಜನಸ್ತೋಮವೊಂದು ಸರಳ, ನೆಮ್ಮದಿಯ ಹೊಸ ರಾಜಕಾರಣದ ಹುಡುಕಾಟದಲ್ಲಿದೆ. ಒಮ್ಮೆ ಹಿಂದಿರುಗಿ ನೋಡಲು ಹಿಂಜರಿಯದ, ಆಧುನೀಕರಣದ ಮೂಲಾರ್ಥವನ್ನು ಪುನರ್‌ಶೋಧಿಸುವ ಧೈರ್ಯ ವಹಿಸಬಲ್ಲ ನಾಯಕತ್ವಕ್ಕಾಗಿ ಅದು ಕಾಯುತ್ತಿದೆ. ಇದನ್ನರಿಯದೇ ಹೋದ ಸಿದ್ಧರಾಮಯ್ಯ ಸುಲಭ ರಾಜಕಾರಣದ ಹಾದಿ ಹಿಡಿದಿದ್ದಾರೆ. ಆದರೆ 'ಸರ್ವೋದಯ ಕರ್ನಾಟಕ' ಏನು ಮಾಡುತ್ತಿದೆ? ಅದಕ್ಕಾದರೂ ಈ ಅರಿವು ಬೇಡವೇ?

('*ಸಂವಾದ ಸೆಪ್ಟೆಂಬರ್ ೨೦೦೬*)

ಅನುಬಂಧ:

ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ ಅಂತೂ ಸಿದ್ಧರಾಮಯ್ಯ ಗೆದ್ದಿದ್ದಾರೆ. ಎರಡೂವರೆ ಲಕ್ಷ ಮತಗಳು ಚಲಾವಣೆಯಾದ ಈ ಚುನಾವಣೆಯಲ್ಲಿ ಸಿದ್ಧರಾಮಯ್ಯನವರು ಗೆದ್ದಿರುವುದು ೨೫೭ ಮತಗಳ ಅಂತರದಿಂದ. ಇದನ್ನು ಅವರು ಗೆಲವು, ಅದೂ ತಮ್ಮ ಗೆಲವು ಎಂದು ಭಾವಿಸುತ್ತಾರೆಂದು ಸಿದ್ಧರಾಮಯ್ಯನವರ ವ್ಯಕ್ತಿತ್ವ ಗೊತ್ತಿರುವ ಯಾರೂ ನಂಬುವುದಿಲ್ಲ. ಹೀಗಾಗಿ, ಈ ಚುನಾವಣೆಯಿಂದ ಅವರು ಕಲಿಯಬೇಕಾದ ಪಾಠಗಳು ಅನೇಕವಿವೆ. ವಿಶೇಷವಾಗಿ, ತಮ್ಮ ಕಳೆದ ಒಂದು ವರ್ಷದ ರಾಜಕೀಯ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ.

ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿ ಏನು ಗಳಿಸಿದರು? ಕ್ಷೇತ್ರದಲ್ಲಿ ತಾವು ಮಾಡಿದ ಕೆಲಸ, ಸ್ಥಾಪಿಸಿಕೊಂಡಿದ್ದ ಸಂಪರ್ಕ ಹಾಗೂ ಗಳಿಸಿಕೊಂಡಿದ್ದ ವರ್ಚಸ್ಸಿನಿಂದಾಗಿ ಸುಲಭವಾಗಿ ಗೆದ್ದು ಬರಬೇಕಿದ್ದ ಅವರಿಗೆ ಈಗ ಸಿಕ್ಕಿರುವುದು ೨೫೭ ಮತಗಳ ಜಯ! ಅದಕ್ಕಾಗಿ ಏನೆಲ್ಲ ಸಾಹಸ, ಮುಜುಗರ ಹಾಗೂ ಪರದಾಟಗಳು- ಚಾಮುಂಡೇಶ್ವರಿ ಒಂದು ಭೀಕರ ಕದನವನ್ನೇ ಕಾಣಬೇಕಾಯಿತು: ಕರ್ನಾಟಕದ ಚುನಾವಣಾ ಇತಿಹಾಸದಲ್ಲೇ ಅತ್ಯಂತ ಭ್ರಷ್ಟ ಹಾಗೂ ದುಷ್ಟ ರಾಜಕೀಯ ವರಸೆಗಳಿಗೆ ನಾಂದಿ ಹಾಡಲಾಯಿತು. ಅದನ್ನೆಲ್ಲ ಸಿದ್ಧರಾಮಯ್ಯ ಮೂಕ ಪ್ರೇಕ್ಷಕರಂತೆ ನೋಡಬೇಕಾಯಿತು ಅರ್ಥಾತ್ ಸಹಿಸಬೇಕಾಯಿತು. ಇದಲ್ಲವೂ ಒಟ್ಟಾರೆ ಕರ್ನಾಟಕದ ರಾಜಕಾರಣವನ್ನು ಎಲ್ಲಿಗೆ ಕೊಂಡಯ್ಯಬಹುದು ಎಂಬುದರ ಪರಿವೆ ಇದ್ದರೆ, ಅವರು ಇಂತಹ ರಾಜಕಾರಣಕ್ಕೆ ಇಳಿಯುತ್ತಿರಲಿಲ್ಲ. ಈಗ ಅವರು ಇಂತಹ, ಲಂಗೋಟಿ ಬಿಚ್ಚಿಟ್ಟು ನಿಂತ ಎದುರಾಳಿಯೊಡನೆ ಕೆಸರಿನಲ್ಲಿ ಗುದ್ದಾಡಬೇಕಾದ ರಾಜಕಾರಣದ ಸಕ್ರಿಯ ಸದಸ್ಯ. ಇಂತಹ ರಾಜಕಾರಣದ ಮಧ್ಯೆ ಅವರೇನು ಸಾಧಿಸುವ ಕನಸು ಕಾಣುತ್ತಿದ್ದಾರೋ ತಿಳಿಯದು.

ಎದುರು ಪಕ್ಷದವರು ಏನೆಲ್ಲ ಮಾಡಿದರೂ-ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂತಹ ದುಷ್ಟ ಹಾಗೂ ಭ್ರಷ್ಟ ಕಾರ್ಯಾಚರಣೆಗಳಿಗೆ ಇಳಿದರೂ- ಸಿದ್ಧರಾಮಯ್ಯ ಅದೃಷ್ಟವಶಾತ್ ಗೆದ್ದಿದ್ದಾರೆ. ಅವರ ಈ ಅದೃಷ್ಟದ ಹಿಂದೆ ಜಾತಿ-ಹಣ-ಪಕ್ಷ ಇದೆ ಎಂದು ಹೇಳುವುದು ತಪ್ಪಾದೀತು. ಏಕೆಂದರೆ ಈ ಮೂರೂ ವಿಷಯಗಳಲ್ಲಿ ಅವರು ಎದುರಾಳಿಗಳ ಮುಂದೆ, ಏನೇನೂ ಬಲ ಹೊಂದಿರಲಿಲ್ಲ. ಆದರೂ, ಅದೃಷ್ಟವಶಾತ್ ಎಂಬಂತಾದರೂ ಗೆದ್ದಿದ್ದಾರೆ. ಅದೇ ದೊಡ್ಡ ವಿಷಯ; ಸಿದ್ಧರಾಮಯ್ಯ ವಿಶೇಷವಾಗಿ, ವ್ಯವಧಾನದಲ್ಲಿ ಗಮನಿಸಬೇಕಾದ ವಿಷಯ:ಪರಿಸ್ಥಿತಿ ನಾವು ಪಲಾಯನವಾದಿಗಳಾಗುವಷ್ಟು ಕೆಟ್ಟಿಲ್ಲ-ವಾತಾವರಣ ಎಷ್ಟೇ ಕಲುಷಿತಗೊಂಡಿದ್ದರೂ ದುಷ್ಟತನ-ಭ್ರಷ್ಟತನಗಳ ವಿರುದ್ಧ ಎಲ್ಲ ಕಾಮನೆಗಳನ್ನು ಮೀರಿ ಧ್ವನಿ ಉಳಿಸಿಕೊಂಡಿರುವ

ಜನ ಇನ್ನೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅವರು ಸಮರ್ಥ ನಾಯಕತ್ವಕ್ಕಾಗಿ ಕಾಯುತ್ತಿದ್ದಾರೆ. ಆದರೆ ನೀವು ಸುಲಭ ರಾಜಕಾರಣದ ದಾರಿ ಹಿಡಿದು ನಿರಾಶೆಗೊಳಿಸಿದ್ದೀರಿ. ಅಲ್ಲದೆ ಈಗ ನೀವೂ ನಿರಾಶೆಗೊಂಡಂತೆ ಕಾಣುತ್ತದೆ, ಈ ಗೆದ್ದ ಸೋಲಿನಲ್ಲಿ.

ಈಗಲೂ ಕಾಲ ಮಿಂಚಿಲ್ಲ. ಹೊಸ ರಾಜಕಾರಣವನ್ನು ಸಿದ್ಧರಾಮಯ್ಯ ಈಗ ಇರುವಲ್ಲಿಂದಲೇ ಆರಂಭಿಸಬಹುದು, ಅವರನ್ನು ಇಲ್ಲಿಯವರೆಗೆ ಸುಕ್ಷೇಮವಾಗಿ ಕರೆದು ತಂದಿರುವ ಜನತೆಯ ಶೀಲದಲ್ಲಿ ನಂಬಿಕೆಯಿದ್ದರೆ; ಹಾಗೇ ತಮ್ಮ ಶೀಲದಲ್ಲೂ ಸ್ವಯಂ ನಂಬಿಕೆ ಇದ್ದರೆ... ಏಕೆಂದರೆ, ಈಗ ಬೇರೆ ದಾರಿ ಕಾಣದೆ-ಈ ಕುರುಡೂ ಅವರದೇ ಸೃಷ್ಟಿ-ಸೇರಿಕೊಂಡಿರುವ ಕಾಂಗ್ರೆಸ್ ಪಕ್ಷದಲ್ಲಿ ಸಿದ್ಧರಾಮಯ್ಯನಂತಹವರು ಸಲ್ಲುವುದು ಕಷ್ಟವೇ!

○

ಮೀಸಲಾತಿ:ಜಾತಿ ಮೀರಿದ ಪ್ರಶ್ನೆ

ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಸೇರಿದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೇಕಡ ೨೭ ರಷ್ಟು ಮೀಸಲಾತಿ ಪ್ರಸ್ತಾಪ ಪ್ರಕಟವಾದಾಗಿನಿಂದ ಈ ಮೀಸಲಾತಿ ವಿರುದ್ಧ ಆರಂಭವಾದ ಪ್ರತಿಭಟನೆಯ ವ್ಯಾಪಕತೆ ಹಾಗೂ ಅದು ಪಡೆದ ಪ್ರಚಾರ; ಮತ್ತು ಇದಕ್ಕೆ ಪ್ರತಿಕ್ರಿಯೆಯಾಗಿ, ನಿಧಾನವಾಗಿಯಾದರೂ ಆರಂಭವಾದ ಮೀಸಲಾತಿ ಪರವಾದ ಮತಪ್ರದರ್ಶನ ಹಾಗೂ ವಾದಗಳ ರಭಸದ ಮಧ್ಯೆ, ಈ ಯಾವುದಾದರೊಂದು ಪಕ್ಷದೊಂದಿಗೆ ಸಂಪೂರ್ಣವಾಗಿ ಗುರುತಿಸಿಕೊಳ್ಳದೆ, ಮೀಸಲಾತಿ ಬಗ್ಗೆ ಮಾತಾಡುವುದೇ ಕಷ್ಟವೆನಿಸತೊಡಗಿದೆ. ಮೀಸಲಾತಿ ಪ್ರಶ್ನೆಯು ಕೇವಲ ಜಾತಿ ಹಿತಾಸಕ್ತಿಗಳ ಆಧಾರದ ಭಾವಾವೇಶದ ವಿವಾದವಾಗಿ ಪರಿವರ್ತಿತವಾಗಿರುವುದೇ, ಇದಕ್ಕೆ ಕಾರಣವಾಗಿದೆ. ಇದು ಮೀಸಲಾತಿ ತತ್ವದ ವಿಕೃತಿಯಲ್ಲದೆ ಮತ್ತೇನಲ್ಲ. ಈ ಹಿನ್ನಲೆಯಲ್ಲಿ, ಮೀಸಲಾತಿಯಿಂದಾಗಿ ಪ್ರತಿಭೆಗೆ ಹಿನ್ನಡೆಯಾಗಿ ರಾಷ್ಟ್ರದ ಪ್ರಗತಿಗೆ ಧಕ್ಕೆಯಾಗುವುದೆಂಬ ಮೀಸಲಾತಿ ವಿರೋಧಿಗಳ ಸಮಾನ ಅವಕಾಶಗಳ ಬೇಡಿಕೆಯನ್ನಾಧರಿಸಿದ ಅಮಾಯಕ ವಾದವಾಗಲಿ;ಮೀಸಲಾತಿಯು ಚರಿತ್ರೆಯ ಅನ್ಯಾಯಗಳಿಗೆ ತುತ್ತಾಗುತ್ತಿರುವ ಜನವರ್ಗಗಳಿಗೆ ಒದಗಿಸಲಾಗುತ್ತಿರುವ ನ್ಯಾಯಬದ್ಧವಾದ ಪರಿಹಾರವೇ ಆಗಿದೆಯೆಂಬ ಮೀಸಲಾತಿ ಪರವಾಗಿರುವವರ ಪ್ರತಿ ವಾದವಾಗಲಿ, ಕಳೆದ ನಾಲ್ಕು ದಶಕಗಳಲ್ಲಿನ ಮೀಸಲಾತಿ ಜಾರಿ ಅನುಭವದ ಹಿನ್ನಲೆಯಲ್ಲಿ ಸಂಪೂರ್ಣ ಸತ್ಯವನ್ನು ಬಿಚ್ಚಿಡುತ್ತಿದೆ ಎನ್ನಿಸುವುದಿಲ್ಲ. ಮೀಸಲಾತಿ ವಿರೋಧಿಗಳ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ವಿಚಾರಣೆ ಸಂಬಂಧ ಸರ್ವೋಚ್ಚ ನ್ಯಾಯಾಲಯವು ಮಧ್ಯ ಪ್ರವೇಶಿಸಿರುವುದರಿಂದಾಗಿ, ಸದ್ಯಕ್ಕೆ ಈ ಸಾಮಾಜಿಕ ಮುಖಾಮುಖಿ-ಹೋರಾಟ ಸ್ಥಗಿತಗೊಂಡಿದೆ. ಆದರೆ ಈ ಹೋರಾಟದ ಎರಡೂ ಕಡೆಯವರು ಎತ್ತಿರುವ ಅನೇಕ ಪ್ರಶ್ನೆಗಳು ನ್ಯಾಯಾಂಗ ಪರಿಹಾರದ ವ್ಯಾಪ್ತಿಯನ್ನು ಮೀರಿದ್ದು, ವ್ಯಾಪಕ ಸಾರ್ವಜನಿಕ ಚರ್ಚೆ ಹಾಗೂ ಒಮ್ಮತದ ಮೂಲಕ ಮಾತ್ರ ಪರಿಹಾರಗೊಳ್ಳಬಲ್ಲವಾಗಿವೆ. ಅಲ್ಲದೆ, ಇಂದು ಅಭಿಪ್ರಾಯಗಳು ಎರಡೂ ಕಡೆ ಭಾವಾವೇಶಕ್ಕೆ ಸಿಕ್ಕಿ ಧೃವೀಕರಣಗೊಂಡು, ವಸ್ತುನಿಷ್ಠ ಚರ್ಚೆ ಸಾಧ್ಯವಾಗದಂತಾಗಿರುವುದು ದುರದೃಷ್ಟಕರ ಸಂಗತಿಯಾಗಿದೆ.

ಜಾತಿ ವ್ಯವಸ್ಥೆಯನ್ನು ಬಾಯಿ ಮಾತಿನ ಹೊರತಾಗಿ, ತಮ್ಮ ಮಿಕ್ಕೆಲ್ಲ ಚಟುವಟಿಕೆಗಳ ನೆಲೆಯಲ್ಲಿ ಒಪ್ಪಿಕೊಂಡಿರುವ (ಇದು ಎಲ್ಲಾ ಜಾತಿಗಳಿಗೂ ಅನ್ವಯಿಸುತ್ತದೆ)ಬಹು ದೊಡ್ಡ ಜನವರ್ಗವನ್ನು ಒಳಗೊಂಡಿರುವ ಭಾರತೀಯ ಸಮಾಜದಲ್ಲಿ ಅಸಮಾನತೆ ಅಂತರ್ಗತವಾಗಿದೆ. ಮೀಸಲಾತಿ ಈ ಅಸಮಾನತೆಯನ್ನು

ತೊಡೆಮು ಹಾಕಿ ಸಮಾಜವನ್ನು ಜಾತಿವ್ಯವಸ್ಥೆಯ ಬಂಧನದಿಂದ ಬಿಡುಗಡೆಗೊಳಿಸುವ ಆಶಯ ಹೊಂದಿದೆ. ಹೀಗಾಗಿ ಮೀಸಲಾತಿಯನ್ನು ವಿರೋಧಿಸುವುದು ಎಂದರೆ ಸಮಾನತೆಯನ್ನು ವಿರೋಧಿಸುತ್ತಾ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದೇ ಆಗಿದೆ. ಇಂತಹ ಸರಳ ಸತ್ಯ 'ಕಲಿತ'ವರಿಗೆ ಅರ್ಥವಾಗುತ್ತಿಲ್ಲ ಎಂದರೆ ಆಶ್ಚರ್ಯವಾಗುತ್ತದೆ. ಆದರೆ ಇವರ ಈ ವಿರೋಧವನ್ನು ಮನುವಾದದ ಹೆಸರಿನಲ್ಲಿ ಮೇಲ್ಜಾತಿ ಮಾನಸಿಕತೆ ಎಂದು ದೂಷಿಸಿ ಕೈ ತೊಳೆದುಕೊಳ್ಳುವವರು, ಕೆಳ ಜಾತಿ ಮಾನಸಿಕತೆಯ ದೂಷಣೆಗೆ ಒಳಗಾಗಬೇಕಾಗುತ್ತದೆ. ಈಗ ಪ್ರಸ್ತಾಪಿಸಲ್ಪಟ್ಟಿರುವ ಮೀಸಲಾತಿಯು ಮಂಡಲ್ ವರದಿ ಶಿಫಾರಸುಗಳ ವಿಸ್ತರಣೆಯೇ ಆಗಿದ್ದು, ಈವರೆಗೆ ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸದಿದ್ದ ಮೀಸಲಾತಿಯನ್ನು ಈಗ ವಿಸ್ತರಿಸಲಾಗುತ್ತಿದೆಯಷ್ಟೇ. ಅದಕ್ಕೇಕೆ ಇಷ್ಟು ರಂಪ? ಈ ಪ್ರಶ್ನೆಯ ಹಿಂದೆ ಅನೇಕ ಪ್ರಶ್ನೆಗಳಿವೆ.

ಮೊದಲನೆಯದು, ಈವರೆಗೆ ಸುಮ್ಮನಿದ್ದ ಸರ್ಕಾರ ಇದ್ದಕ್ಕಿದ್ದಂತೆ ಈಗೇಕೆ ಈ ಕ್ರಮಕ್ಕೆ ಕೈ ಹಾಕಿದೆ ? ವೋಟ್ ಬ್ಯಾಂಕ್ ರಾಜಕೀಯವೇ ಇದರ ಉದ್ದೇಶವೇ? ಎರಡನೆಯ ಪ್ರಶ್ನೆ, ಉನ್ನತ ಶಿಕ್ಷಣ ಹಂತದವರೆಗೆ ಮೀಸಲಾತಿ ಪಡೆದಿರುವ ವರ್ಗಗಳೇಕೆ ಮೀಸಲಾತಿ ಇಲ್ಲದೇ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲಾಗುತ್ತಿಲ್ಲ? ಆರ್ಥಿಕ ಅನುಕೂಲತೆಯ ಜೊತೆಗೇ ಸಾಕಷ್ಟು ಸಾಮಾಜಿಕ ಪ್ರತಿಷ್ಠೆಯನ್ನೂ ಹೊಂದಿರುವಂತಹ ಗಣನೀಯ ಜಾತಿ ಸಮೂಹವನ್ನು ಒಳಗೊಂಡಿರುವ ಹಿಂದುಳಿದ ವರ್ಗಗಳಿಗೆ, ಶಿಕ್ಷಣದ ಕೊನೆಯ ಹಂತದವರೆಗೂ ಮೀಸಲಾತಿ ನೀಡುವುದು, ಆ ವರ್ಗಗಳಲ್ಲಿನ ಪ್ರಯತ್ನಶೀಲತೆಯನ್ನೇ ಕುಂಠಿತಗೊಳಿಸಬಹುದಲ್ಲವೇ? ಇದು ಮೂಲತಃ ಆ ವರ್ಗಗಳಿಗೆ ಮಾಡುವ ಅನ್ಯಾಯವಲ್ಲವೇ? ಈ ಪ್ರಶ್ನೆಗಳನ್ನು ದಾಟಿಕೊಂಡೇ ಮೀಸಲಾತಿ ವಿರೋಧಿಗಳು ಉಂಟು ಮಾಡಿರುವ ರಂಪವನ್ನು ಎದುರಿಸಬೇಕಾಗುತ್ತದೆ. ಯಾವುದೇ ಸರ್ಕಾರ ಕೈಗೊಳ್ಳುವ ಯಾವುದೇ ಕ್ರಮಕ್ಕೆ ರಾಜಕೀಯ ಆಯಾಮ ಇದ್ದೇ ಇರುತ್ತದೆ. ತಾನು ಕೈಗೊಂಡ ಕ್ರಮಗಳ ಮೂಲಕ ಜನ ಬೆಂಬಲ ಗಳಿಸಿಕೊಳ್ಳಲೆತ್ನಿಸುವುದು ಸರ್ಕಾರದಲ್ಲಿರುವ ರಾಜಕೀಯ ಪಕ್ಷಗಳ ಸಹಜ ಹಕ್ಕು.ಆದರೆ ಆ ಕ್ರಮ ರಾಜ್ಯ-ರಾಷ್ಟ್ರದ ಒಳಿತಿಗಾಗಿಯೋ ಅಲ್ಲವೋ ಎಂಬ ಪ್ರಶ್ನೆಯಷ್ಟೇ ಇಲ್ಲಿ ಮುಖ್ಯ. ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ವಿದ್ಯಾರ್ಥಿ ಸಮೂಹ ಹಾಗೂ ಶಿಕ್ಷಕ ವೃಂದದ ಜಾತಿವಾರು ಅಂಕಿ ಅಂಶಗಳನ್ನು ಗಮನಿಸಿದರೆ, ಈ ಪ್ರಶ್ನೆಗೆ ಉತ್ತರ ಸಿಗುತ್ತದೆ. ದೇಶದ ಜನಸಂಖ್ಯೆಯಲ್ಲಿ ಶೇಕಡಾ ೫೦ರಷ್ಟಿರುವ (ಇದನ್ನು ಸದ್ಯದ ಸ್ಥಿತಿಯಲ್ಲಿ ಖಚಿತಪಡಿಸಿಕೊಳ್ಳಲು, ಜಾತಿ ಜನಸಂಖ್ಯಾಗಣತಿ ಅತ್ಯವಶ್ಯಕವಾಗಿದೆ) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಈ ಸಂಸ್ಥೆಗಳಲ್ಲಿರುವುದು ಶೇಕಡಾ ೧೦ಕ್ಕೂ ಕಡಿಮೆ!ಅಂದರೆ ಸರ್ಕಾರವು ಸಮಾಜದ ಎಲ್ಲ ವರ್ಗಗಳಿಂದ ಪಡೆದ ಹಣವನ್ನು-ಏಳು

ಸಾವಿರ ಕೋಟಿ ರೂಪಾಯಿಗಳನ್ನು- ಒಂದು ಸೀಮಿತ ಗಾತ್ರದ ವರ್ಗಕ್ಕಷ್ಟೇ ಖರ್ಚು ಮಾಡುತ್ತಿದೆ. ಈ ಚಿಕ್ಕ ವರ್ಗದಲ್ಲಿ ಅತಿ ದೊಡ್ಡ ಪಾಲನ್ನು ಒಂದು ಜಾತಿಯಷ್ಟೇ- ಬ್ರಾಹ್ಮಣ- ಪಡೆಯುತ್ತಿದೆ. ಇದು ಹೇಗೆ ಸಾಧ್ಯವಾಯಿತು? ಹಾಗೂ ಇದು ಎಷ್ಟು ನ್ಯಾಯಬದ್ಧವಾದ ಪಾಲಾಗಿದೆ?

ತಾವು ತಮ್ಮ ಪ್ರತಿಭೆಯಿಂದ ಪಾಲು ಪಡೆದಿರುವುದಾಗಿ ಮೇಲ್ಜಾತಿ ಜನರ ವಕ್ತಾರರು ಹೇಳಿಕೊಳ್ಳುತ್ತಾರೆ. 'ಮುಕ್ತ ಸ್ಪರ್ಧೆ'ಯಲ್ಲಿ 'ಜಯಶಾಲಿ'ಗಳಾದ ಈ ಜನ ಹೀಗೆ ಹೇಳಿಕೊಳ್ಳುವುದು ಸಹಜವೂ ಮೇಲ್ನೋಟಕ್ಕೆ ಸರಿಯೂ ಆಗಿದೆ. ಆದರೆ ಸ್ಪರ್ಧೆಯಲ್ಲಿ ಇತರರನ್ನು-ಸಮಾಜದ ಬಹು ದೊಡ್ಡ ಭಾಗವನ್ನು-ಸೋಲಿಸಬಲ್ಲ 'ಪ್ರತಿಭೆ' ಈ ಚಿಕ್ಕ ವರ್ಗಕ್ಕೆ ಎಲ್ಲಿಂದ ಬಂತು ? ಹುಟ್ಟಿನಿಂದ ಬಂದದ್ದು ಅದು. ಕೆಲವೇ ಜಾತಿಗಳಿಗೆ ಹುಟ್ಟಿನಿಂದಲೇ ಈ ಪ್ರತಿಭೆ ದತ್ತವಾಗುವುದರ ಮರ್ಮವಾದರೂ ಏನು? ಪ್ರಕೃತಿ ಹಾಗೆ ಮಾಡಲಾರದು. ಹಾಗೆ ಮಾಡಿದರೆ ಅದನ್ನು ಪ್ರಕೃತಿ ಎಂದು ಕರೆಯಲಾಗದು. ಹುಟ್ಟು ಪ್ರತಿಭೆ ಎಂದರೆ ಮತ್ತೇನೂ ಆಗಿರದೆ, ತಲೆಮಾರುಗಳ ಮೂಲಕ ಜೈವಿಕವಾಗಿ ಹರಿದು ಬರುವ ಒಂದು ದಕ್ಷತೆ ಮಾತ್ರ. ಭಾರತದ ಒಂದೊಂದು ಜಾತಿಯೂ ಇಂತಹ ಒಂದೊಂದು ರೀತಿಯ ದಕ್ಷತೆಗೆ ವಾರಸುದಾರನಾಗಿದೆ. ಆದರೆ ಇಂದಿನ ಸಂದರ್ಭದಲ್ಲಿ-ಆಧುನಿಕ ನಾಗರೀಕತೆಯ ಸಂರಚನೆಗಳಲ್ಲಿ-ಅಕ್ಷರ ಜ್ಞಾನದ ವಾರಸುದಾರಿಕೆಗೇ ಪ್ರಾಮುಖ್ಯತೆ ಬಂದಿರುವುದರಿಂದ, ತಲೆ-ತಲೆಮಾರುಗಳಿಂದ ಅಕ್ಷರ ಜ್ಞಾನ ರೂಢಿಸಿಕೊಂಡು ಆ ಶಿಸ್ತಿನಲ್ಲಿ ಪರಿಣಿತವಾದ ಜಾತಿಗಳಲ್ಲಿ ಈ ದಕ್ಷತೆ ಸಹಜವಾಗಿಯೇ ಹೆಚ್ಚಾಗಿರುತ್ತದೆ. ಈ ಜಾತಿಗಳಿಗೆ ಸೇರಿದ ಈಚಿನ ತಲೆಮಾರುಗಳಿಗೆ ಇದು, ಶ್ರಮವಿಲ್ಲದೇ ದತ್ತ ಮಾಡಿಕೊಂಡ 'ಪ್ರತಿಭೆ.' ಆದರೆ ಶತ-ಶತಮಾನಗಳ ಕಾಲದ ಜಾತಿ ವ್ಯವಸ್ಥೆಯಿಂದಾಗಿ ಬಹಳಷ್ಟು ಜಾತಿಗಳು ಈ 'ಪ್ರತಿಭೆ'ಯನ್ನು ಈಗ ಶ್ರಮದಿಂದ ದತ್ತ ಮಾಡಿಕೊಳ್ಳಬೇಕಾಗಿದೆ. ಇಂತಹ ಸಂದರ್ಭದಲ್ಲಿ ತಾವು ಜಯಶಾಲಿಗಳಾಗಿರುವುದು ಮುಕ್ತ ಸ್ಪರ್ಧೆಯಲ್ಲಿ ಎಂದು ಮೇಲ್ಜಾತಿಗಳವರು ಅಥವಾ ಅವರ ವಕ್ತಾರರು ಹೇಳಿಕೊಂಡರೆ, ಅದಕ್ಕಿಂತ ಹಾಸ್ಯಾಸ್ಪದ ಸಂಗತಿ ಇನ್ನೊಂದಿರಲಾರದು.

ಜಾತಿ ವ್ಯವಸ್ಥೆಯೆಂಬುದೇ ಒಂದು ದೊಡ್ಡ ಮೀಸಲಾತಿ ವ್ಯವಸ್ಥೆ. ಒಂದು ಇನ್ನೊಂದನ್ನು ಅತಿಕ್ರಮಿಸಕೂಡದೆಂಬ ಒಪ್ಪಂದದನ್ವಯ ದಕ್ಷತೆ-ಪ್ರತಿಭೆಗಳು ಬೆಳೆಯುವ ರೀತಿಯಲ್ಲಿ ವಿನ್ಯಾಸಗೊಂಡಿದ್ದ ಜಾತಿ ವ್ಯವಸ್ಥೆಯ ಮೀಸಲಾತಿ ಲಾಭವನ್ನು ಯಾವುದೇ ಶ್ರಮವಿಲ್ಲದೆ ಜನ್ಮತಃ ಪಡೆದು ಕೊಂಡಿರುವ ಜಾತಿಗಳು, ಇಂದು ಇಂತಹ 'ಲಾಭ'ವನ್ನು ಶ್ರಮವಹಿಸಿ ಪಡೆಯಲೆತ್ನಿಸುತ್ತಿರುವ ಜಾತಿಗಳಿಗೆ ನ್ಯಾಯ ಮತ್ತು ಸಮಾನ ಅವಕಾಶಗಳ ಸಂದೇಶವನ್ನು ಬೋಧಿಸ ಹೊರಟಿರುವುದು ಈ ಮೇಲ್ಜಾತಿ ಪ್ರತಿಭೆಯೆನ್ನುವುದು ಎಷ್ಟು ಅಚಾರಿತ್ರಿಕವಾದುದು ಎಂಬುದನ್ನಷ್ಟೇ ತೋರಿಸುತ್ತದೆ. ಚಾರಿತ್ರ್ಯ ಎಂಬ ಶಬ್ದ ಚರಿತ್ರೆ

ಎನ್ನುವ ಶಬ್ದದಿಂದ ಹುಟ್ಟಿದುದು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಂದಿನ ಮೀಸಲಾತಿ, ಈ ಹಿಂದಿನ ಮೀಸಲಾತಿಯ ದುಷ್ಪರಿಣಾಮಗಳನ್ನು ತೊಡೆದುಹಾಕಲಷ್ಟೇ ಜಾರಿಯಲ್ಲಿರುವುದು ಎಂಬುದನ್ನು ಅರಿಯಲಾಗದವರ ಚಾರಿತ್ರ್ಯ ಅನುಮಾನಾಸ್ಪದವೆನಿಸಿಕೊಳ್ಳುತ್ತದೆ. ಹಿಂದಿನ ವ್ಯವಸ್ಥೆಯ ಲಾಭವನ್ನು ಪಡೆದುಕೊಳ್ಳುತ್ತಿರುವ ಇಂದಿನವರು, ತಮ್ಮ ಹಿಂದಿನವರು ಮಾಡಿದ ತಪ್ಪಿಗೆ (ವಿದ್ಯೆಯ ನಿರ್ಬಂದ) ನಮಗೇಕೆ ಶಿಕ್ಷೆ ಎಂದು ಕೇಳುವುದು ಕಲಿತವರ 'ಕಲಿತ' ಅಮಾಯಕತನ ಮಾತ್ರವಾದೀತು. ಇನ್ನು ಮೀಸಲಾತಿ ಮೂಲಕ ಶಿಕ್ಷಣ ಪಡೆದವರ ವೃತ್ತಿ ದಕ್ಷತೆ (ಕೆಟ್ಟ ವೈದ್ಯರು, ಕೆಟ್ಟ ಎಂಜಿನಿಯರ್ ಇತ್ಯಾದಿ.,)ಬಗ್ಗೆ ಇವರು ವ್ಯಕ್ತಪಡಿಸುತ್ತಿರುವ ಅನುಮಾನಗಳು,ಬುದ್ಧಿಪೂರ್ವಕ ಅಪಪ್ರಚಾರದ ಉದ್ದೇಶದಿಂದಲೇ ಹೊರಹೊಮ್ಮಿರುವಂತೆ ತೋರುತ್ತವೆ. ಏಕೆಂದರೆ ಮೀಸಲಾತಿಯಲ್ಲಿ ಶಿಕ್ಷಣ ಪಡೆದವರಿಗೆ ಪರೀಕ್ಷೆ ತೇರ್ಗಡೆ ಅಂಕಗಳಲ್ಲಿ ರಿಯಾಯಿತಿಯೇನೂ ಇಲ್ಲ. ಅಲ್ಲದೆ ಈ ಮೀಸಲಾತಿ ವಿರೋಧಿಗಳು ಹಣ (ಕ್ಯಾಪಿಟೇಷನ್) ಕೊಟ್ಟು ಪ್ರವೇಶ ಪಡೆವ ಹಾಗೂ ಅನಿವಾಸಿ ಭಾರತೀಯರಿಗಾಗಿ ಶೇಕಡಾ ೧೫ರ ಮೀಸಲಾತಿಯಡಿಯಲ್ಲಿ ನಡೆಯುವ ಸೀಟುಗಳ ಹರಾಜಿನಲ್ಲಿ ಪ್ರವೇಶ ಪಡೆಯುವ 'ಪ್ರತಿಭಾ'ವಿಹೀನರಿಂದ ಉಂಟಾಗುವ ಅನಾಹುತಗಳ ಬಗ್ಗೆ ಸೊಲ್ಲೇ ಎತ್ತುತ್ತಿಲ್ಲ! ಆದುದರಿಂದ ಇಂದಿನ ಮೀಸಲಾತಿ ವಿರೋಧಿ ಚಳುವಳಿ, ಈ ಅನಾಹುತಗಳ ಬಗ್ಗೆಯೂ ಸೊಲ್ಲೆತ್ತದಿರುವವರೆಗೆ ಜಾತೀಯತೆಯ ಕಳಂಕದಿಂದ ಸಂಪೂರ್ಣ ಮುಕ್ತವಾಗಲಾರದು.

ಇಷ್ಟೆಲ್ಲಾ ವಿಶ್ಲೇಷಣೆಯ ಆಚೆಯೂ ಇನ್ನೊಂದು ಮುಖ್ಯ ಪ್ರಶ್ನೆಯು ಉಳಿದೇ ಇದೆ. ಅದೆಂದರೆ ಉನ್ನತ ಶಿಕ್ಷಣದವರೆಗೂ ಮೀಸಲಾತಿ ಪಡೆದ ವರ್ಗಗಳೇಕೆ ಉನ್ನತ ಶಿಕ್ಷಣಕ್ಕೂ ಮೀಸಲಾತಿ ಅಗತ್ಯವೆನ್ನಿಸುವಷ್ಟರ ಮಟ್ಟಿಗೆ ದುಃಸ್ಥಿತಿಗೆ ಈಡಾಗಿವೆ? ಇದನ್ನು 'ಮೀಸಲಾತಿ ಮಾನಸಿಕತೆ' ಎನ್ನಬಹುದೇ?ಮೀಸಲಾತಿಯ ಸುರಕ್ಷತೆಯಡಿಯಲ್ಲಿ ಮಾತ್ರ ಮುನ್ನಡೆಯಬಲ್ಲ ಜಡ ಚೇತನಗಳಾಗಿಬಿಟ್ಟಿಯವೇ ಈ ವರ್ಗಗಳು? ಹಿಂದಿನ ಮೀಸಲಾತಿಯ ಪ್ರೋತ್ಸಾಹದ ಲಾಭ ಪಡೆದುಕೊಂಡು ಮುಂದಿನ ಹಂತಕ್ಕೆ ತನ್ನ ಸ್ವಂತ ಶಕ್ತಿಯಿಂದ ಪ್ರವೇಶ ಪಡೆಯುವ ಸಾಮರ್ಥ್ಯವನ್ನು ಗಳಿಸಿಕೊಳ್ಳಲಾಗದ ವರ್ಗ, ದುರ್ಬಲತೆಯನ್ನೇ ಶಕ್ತಿಯನ್ನಾಗಿ ಬಳಸಿಕೊಳ್ಳಲೆಣಿಸುವ ಪ್ರವೃತ್ತಿ ಬೆಳಸಿಕೊಂಡು ಒಟ್ಟಾರೆ ಸಮಾಜದ ಮುನ್ನಡೆಗೆ ಅಡ್ಡಿಯಾಗಬಹುದಲ್ಲವೇ? ಆದರೆ ಈ ವರ್ಗದ ಕೆಲವರಾದರೂ ಈವರೆಗಿನ ಮುಕ್ತ ಸ್ಪರ್ಧೆಯಲ್ಲಿಯೇ ಈ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಾನ ಗಳಿಸಿದ್ದಾರೆಂಬ ಅಂಶ, ಈ ಪ್ರಶ್ನೆಯನ್ನು ಈ ವರ್ಗಗಳ ಬಗ್ಗೆ ಸಾರಾಸಗಟಾಗಿ ಕೇಳಲಾಗದೆಂದು ಸೂಚಿಸುತ್ತದೆ. ಅಲ್ಲದೆ, ಪ್ರತಿಕೂಲ ಪರಿಸ್ಥಿತಿಯಲ್ಲೂ ಈ ವರ್ಗದ ಅಭ್ಯರ್ಥಿಗಳು ಮುಕ್ತಸ್ಪರ್ಧೆಯಲ್ಲಿ ತೀವ್ರ ಪೈಪೋಟಿ ನೀಡುತ್ತಿದ್ದು, ಈಗಾಗಲೇ ಈ ಸಂಸ್ಥೆಗಳಲ್ಲಿ ತುಂಬಿ ಹೋಗಿರುವ 'ಪ್ರತಿಭಾ'ವಾದಿಗಳ ಅಚಾರಿತ್ರಿಕ ಮಾನಸಿಕತೆಯ

ಪೂರ್ವಾಗ್ರಹಗಳಿಂದಾಗಿ, ಆಯ್ಕೆ ಪ್ರಕ್ರಿಯೆಗಳಲ್ಲಿ ತಾಂತ್ರಿಕವಾಗಿ (ಅಂದರೆ ಒಂದೆರೆಡು ಶೇಕಡಾವಾರು ಅಂಕಗಳ ಅಂತರದಲ್ಲಿ)ಹೊರಗುಳಿಯಲ್ಪಟ್ಟಿರುವ ಸಂಭವ ಇಲ್ಲದಿಲ್ಲ. ಅದೇನೇ ಇರಲಿ, ಯಾವುದೇ ಸಂಸ್ಥೆ-ಸಂಘಟನೆಯಲ್ಲಿ, ಚರಿತ್ರೆಯ ಒಂದು ಭಾಗದ-ಅದೂ ಅತ್ಯಲ್ಪ ಭಾಗದ-ವಾರಸುದಾರರು ಮಾತ್ರ ಇರುವುದು ಸಮಾಜದ ಒಟ್ಟಾರೆ ಮುನ್ನಡೆಯ ದೃಷ್ಟಿಯಿಂದ ಒಳ್ಳೆಯದಲ್ಲ.ಆದುದರಿಂದ ಈ ದಿಸೆಯಲ್ಲಿನ ಒಂದು ನಿರ್ದಿಷ್ಟ ಕಾರ್ಯಕ್ರಮಾಧಾರಿತವಾದ ಸೀಮಿತ ಅವಧಿಯವರೆಗೆ, ಈ ಹಂತದಲ್ಲಿ ಮೀಸಲಾತಿ ಅಗತ್ಯವೆನಿಸುತ್ತದೆ.

ಈ ಸೀಮಿತ ಅವಧಿಯ ಮೀಸಲಾತಿ ಪ್ರಸ್ತಾಪಕ್ಕೆ ನಮ್ಮನ್ನು ತಂದು ನಿಲ್ಲಿಸಿದ ವಿಚಾರ ಲಹರಿಯು, ಮೀಸಲಾತಿ ಕುರಿತಂತೆ ಇನ್ನೂ ಅನೇಕ ಹೊಸ ಪ್ರಸ್ತಾಪಗಳಿಗೆ ದಾರಿ ಮಾಡಿಕೊಡುತ್ತದೆ. ನಾವು ಈವರೆಗೆ ಮೀಸಲಾತಿ ಪರವಾದ ತಾತ್ವಿಕ ಜಿಜ್ಞಾಸೆಯನ್ನಷ್ಟೇ ಮಾಡಿದೆವು. ಅಂದರೆ ಮೀಸಲಾತಿಯು ಸದ್ಯದ ಸಂದರ್ಭದಲ್ಲಿ ತಾತ್ವಿಕವಾಗಿ ಸರಿ ಎಂದು ಹೇಳಿದೆವು. ಆದರೆ ಮೀಸಲಾತಿ ಜಾರಿಗೆ ಬಂದು ಸರಿ ಸುಮಾರು ಐದು ದಶಕಗಳೇ ಕಳೆದಿವೆ. ಮೊದಲ ನಾಲ್ಕು ದಶಕಗಳಲ್ಲಿ ಈ ಮೀಸಲಾತಿಗೆ ಅಂತಹ ಯಾವುದೇ ವಿರೋಧ ಕಂಡು ಬರಲಿಲ್ಲ. ಈಗ ಕಳೆದೊಂದು ದಶಕದಲ್ಲಿ-ವಿಶೇಷವಾಗಿ ಮೀಸಲಾತಿಯ ವಿಸ್ತರಣೆಯ ವಿವಿಧ ಹಂತಗಳಲ್ಲಿ-ಅಪಸ್ವರಗಳೆದ್ದು, ಅದು ವ್ಯಾಪಕಗೊಳ್ಳುತ್ತಿದೆ. ಅಂದರೆ ಮೀಸಲಾತಿ ತತ್ವದ ಬಗ್ಗೆ ಹೆಚ್ಚೇನೂ ತಕರಾರಿಲ್ಲ; ಆದರೆ ಜಾರಿಯಾದ ರೀತಿ-ನೀತಿ ಹಾಗೂ ಅದರ ಅನುಭವಗಳು, ಹಲವು ನೆಲೆಗಳಲ್ಲಿ ಪ್ರತಿಭಟನೆಗಳನ್ನು ಹುಟ್ಟುಹಾಕಿವೆ. ಈ ಪ್ರತಿಭಟನೆಗಳ ಒಂದು ನೆಲೆ ಮೀಸಲಾತಿಯ ಸದ್ಯದ ಸ್ವರೂಪವನ್ನು ಪ್ರಶ್ನಿಸುತ್ತಿದ್ದರೆ, ಇನ್ನೊಂದು ನೆಲೆ ಸದ್ಯದ ಜಾಗತೀಕರಣದ ಸಂದರ್ಭದಲ್ಲಿ ಮೀಸಲಾತಿಯ ಪ್ರಸ್ತುತತೆಯನ್ನೇ ಪ್ರಶ್ನಿಸುತ್ತಿದೆ. ಅಂದರೆ ಮೊದಲ ನೆಲೆ ಮೀಸಲಾತಿಯ ಸಾರಾಸಗಟುತನವನ್ನು ಪ್ರಶ್ನಿಸುತ್ತಿದ್ದರೆ, ಅದರ ಎರಡನೆಯ ನೆಲೆ ಅದರ ಸಾರ್ವಕಾಲಿಕತೆಯನ್ನು ಪ್ರಶ್ನಿಸುತ್ತದೆ.

ಒಂದು ಜಾತಿಯಲ್ಲಿ-ಅದು ಮೇಲು ಅಥವಾ ಕೆಳ ಜಾತಿಯೇ ಆಗಿರಲಿ- ನೆಲೆ ನಿಂತವರಿಗೆ, ಈ ಪ್ರಶ್ನೆಗಳು ಅಸಂಗತವಾಗಿ ಕಂಡಾವು. ಆದರೆ ಮೀಸಲಾತಿ ತತ್ವವನ್ನು ತಾತ್ವಿಕವಾಗಿ ಒಪ್ಪಿಕೊಳ್ಳಲು ಸಾಧ್ಯವಾಗುವುದು, ನಾವು ಜಾತಿ ಮೀರಿ ನಿಂತು, ಒಟ್ಟಾರೆ ಸಮಾಜದ ಸಾರ್ವತ್ರಿಕ ಆರೋಗ್ಯದ ದೃಷ್ಟಿಯಿಂದ ಯೋಚಿಸಿದಾಗ. ಹೀಗಿರುವಾಗ, ಮೀಸಲಾತಿ ವಿರೋಧವನ್ನು ಅರ್ಥ ಮಾಡಿಕೊಳ್ಳಲು ಕೂಡ, ಜಾತಿ ಮೀರಿ ನಿಲ್ಲಬೇಕಾದ್ದು ನಮ್ಮ ಧರ್ಮವೇ ಆಗಿದೆ. ಆದುದರಿಂದ ಮೀಸಲಾತಿ ವಿರೋಧಿ ಪ್ರತಿಭಟನೆಗಳು ಜಾತಿ ನೆಲೆಯ ಆಧಾರದ ಮೇಲೆ, ಅಂದರೆ ಕೇವಲ ಮೇಲ್ಜಾತೀಯತೆಯ ಆಧಾರದ ಮೇಲೆ

ತಳ್ಳಿ ಹಾಕದೇ(ಹಾಗೆ ಮಾಡಿದವರು ಕೆಳ ಜಾತೀಯತೆಯ ಆರೋಪಕ್ಕೆ ಗುರಿಯಾಗಬೇಕಾಗುತ್ತದೆ) ಐದು ದಶಕಗಳ ಈ ಮೀಸಲಾತಿ ಜಾರಿ ಅನುಭವದ ಹಿನ್ನಲೆಯ ಈ ಪ್ರತಿಭಟನೆಗಳ ನೆಲೆಗಳನ್ನು, ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲೆತ್ನಿಸಿ ತೀರ್ಮಾನಗಳಿಗೆ ಬರಬೇಕಾಗುತ್ತದೆ.

ಮೊದಲ ನೆಲೆ, ಮೀಸಲಾತಿಯ ಸಾರಾ ಸಗಟುತನದ ಪ್ರಶ್ನೆಯನ್ನೊಳಗೊಂಡದ್ದು - ಹಿಂದುಳಿದ ವರ್ಗಗಳೆಂದು ಗುರುತಿಸಲ್ಪಟ್ಟಿರುವ ಎಲ್ಲ ಜಾತಿಗಳಿಗೂ ಸಮಾನ ಮಾನದಂಡಗಳ ಮೀಸಲಾತಿ ಅಗತ್ಯವೇ ಎಂಬ ಪ್ರಶ್ನೆ ಇದು. ಈ ಹಿಂದುಳಿದ ಜಾತಿಗಳಲ್ಲಿ ಕೆಲವು ಆಧುನಿಕ ಜಮೀನ್ದಾರಿ ಅಥವಾ ಕಸುಬುದಾರಿಕೆಗೆ ಪರಿವರ್ತಿತವಾದ ವರ್ಗಗಳಾಗಿದ್ದು, ಇವು ಇತರೆ ಹಿಂದುಳಿದ ಜಾತಿಗಳಿಗೆ ಹೋಲಿಸಿದರೆ ಆರ್ಥಿಕ ಹಾಗೂ ಸಾಮಾಜಿಕ ಮುನ್ನಡೆಯ ಚೇತನವನ್ನು ಗಳಿಸಿಕೊಂಡಿರುವಂತಹವುಗಳಾಗಿವೆ. ಈ ವರ್ಗಗಳೇ ಸಹಜವಾಗಿ ಮೀಸಲಾತಿಯ ಪ್ರಯೋಜನದ ಬಹು ಭಾಗವನ್ನು ಪಡೆಯಲು ಶಕ್ಯವಾಗಿವೆ. ಇದು ಅನೇಕ ಮಾದರಿ ಸಮೀಕ್ಷೆಗಳಿಂದ ಸಾಬೀತಾಗಿದೆ. ಇದರ ಪರಿಣಾಮವೆಂದರೆ, ಆಧುನೀಕರಣದ ಅನುಕೂಲಗಳಿಂದ ಇನ್ನೂ ವಂಚಿತವಾಗಿರುವ ಜಾತಿಗಳು ಮೀಸಲಾತಿಯಿಂದಲೂ ವಂಚಿತವಾಗುತ್ತಿವೆ. ಈ ಕಾರಣದಿಂದಾಗಿಯೇ ಸರ್ವೋಚ್ಚ ನ್ಯಾಯಾಲಯವು, ಹಿಂದುಳಿದ ಜಾತಿ ಮೀಸಲಾತಿ ವ್ಯಾಪ್ತಿಯಿಂದ ಅನುಕೂಲಸ್ಥ ವರ್ಗವನ್ನು ಹೊರಗಿಡಬೇಕೆಂದು ಸೂಚಿಸಿದೆ. ಆದರೆ ಇದು ಯಾವುದೇ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಗಂಭೀರ ಪರಿಗಣನೆಗೆ ಒಳಗಾಗದೆ, ದುರ್ಬಲ ಜಾತಿಗಳಿಗೆ ಬದಲಾಗಿ ಅದರಲ್ಲಿನ ಪ್ರತಿಷ್ಠಿತ ವರ್ಗಗಳೇ ಮೀಸಲಾತಿ ಪಡೆದು ಬರುತ್ತಿರುವುದು ತಮ್ಮ ವರ್ಗಕ್ಕಾಗುತ್ತಿರುವ ಅನ್ಯಾಯವೇ ಆಗಿದೆ ಎಂದು ಭಾವಿಸಿ, 'ಪ್ರತಿಭಾ'ವಾದಿಗಳು ಸದ್ಯದ ಮೀಸಲಾತಿ ಪದ್ಧತಿಯನ್ನು ವಿರೋಧಿಸುತ್ತಿದ್ದರೆ ಆಶ್ಚರ್ಯ ಪಡಬೇಕಿಲ್ಲ. ಅವರು, ಆರ್ಥಿಕವಾಗಿ ಮುಂದುವರಿದ ಕೆಳ ಜಾತಿಗಳಿಗೆ ಮೀಸಲಾತಿ ಒದಗಿಸುವುದಾದರೆ, ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿಗಳಿಗೂ ಮೀಸಲಾತಿ ಒದಗಿಸಬೇಕಾಗುತ್ತದೆಯೆಂದು ವಾದಿಸಿದರೆ, ಅದನ್ನು ತಳ್ಳಿ ಹಾಕುವಂತೆಯೂ ಇಲ್ಲ. ಆದರೆ ಇದು ಚಾರಿತ್ರಿಕ ಅನ್ಯಾಯದ ವಾದವನ್ನೇ ಅಲ್ಲಗಳೆದು, ಮೀಸಲಾತಿ ತತ್ವವನ್ನೇ ಅಪಹಾಸ್ಯಕ್ಕೆ ಈಡು ಮಾಡುತ್ತದೆ. ಕರ್ನಾಟಕ ಸರ್ಕಾರವೂ ಸೇರಿದಂತೆ ಅನೇಕ ಸರ್ಕಾರಗಳು ಯಾವುದೇ ವ್ಯವಸ್ಥಿತ ಸಮೀಕ್ಷೆಗಳ ಆಧಾರವಿಲ್ಲದೆ, ಕೇವಲ ರಾಜಕೀಯ ಒತ್ತಡದಿಂದಾಗಿ ಹೆಚ್ಚೆಚ್ಚು ಜಾತಿಗಳನ್ನು ಮೀಸಲಾತಿ ಪಟ್ಟಿಗೆ ಸೇರಿಸುವ ಮೂಲಕ ಮಾಡಿರುವುದೂ ಇದನ್ನೇ. ಇದರಿಂದಾಗಿ ಮೀಸಲಾತಿ ತತ್ವದ ಕಾರ್ಯಾಚರಣೆಯೇ ದಾರಿ ತಪ್ಪಿ, ಅದರ ಉದ್ದೇಶಗಳೇ ವಿಚಲಿತವಾಗುತ್ತ ಹೋಗಿ, ಸಲ್ಲದ ದಾಳಿಗೆ ಈಡಾಗುತ್ತವೆ-ಈಗ ಆಗಿರುವ ಹಾಗೆ.

ಇದೇ ನೆಲೆಯ ಇನ್ನೊಂದು ಪ್ರಶ್ನೆಯೆಂದರೆ, ಪರಿಶಿಷ್ಟ ಜಾತಿ ಹಾಗೂ ವರ್ಗಗಳಿಗೂ ಅನ್ವಯವಾಗುವಂತೆ, ಒಮ್ಮೆ ಮೀಸಲಾತಿ ಪಡೆದು ಮೇಲ್ಮುಖ ಚಲನೆ ಒಳಗಾದ ಕುಟುಂಬಕ್ಕೆ ಮತ್ತೆ ಮೀಸಲಾತಿ ಸೌಲಭ್ಯ ಬೇಕೇ ಎಂಬುದು. ಅಂದರೆ, ತಂದೆಯೋ ತಾಯಿಯೋ ಒಮ್ಮೆ ಮೀಸಲಾತಿಯಿಂದ 'ಸಾಮಾಜಿಕ ಚೇತನ' ಪಡೆದು ಒಂದು ಹಂತ ತಲುಪಿದ ಮೇಲೂ ಅವರ ಮಕ್ಕಳಿಗೆ ಮೀಸಲಾತಿ ಸೌಲಭ್ಯ ನೀಡುವ ಮೂಲಕ, ಆ ಸೌಲಭ್ಯದಿಂದ ವಂಚಿತವಾಗಿರುವ ಅದೇ ಜಾತಿಯ ಇತರರಿಗೆ ಅವಕಾಶ ವಂಚನೆಯಾಗುವುದಿಲ್ಲವೇ ಎಂಬ ಪ್ರಶ್ನೆ ಇದು. ಅವಕಾಶಗಳು ಕಡಿಮೆಯಾಗುತ್ತಾ, ಸ್ಪರ್ಧೆ ತೀವ್ರವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಈ ಪ್ರಶ್ನೆ ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತದೆ. ನಿಜ, ಇಲ್ಲಿ ಮೊದಲ ಮೀಸಲಾತಿ ಸೌಲಭ್ಯದಿಂದ ಆ ಕುಟುಂಬ ತಲುಪಿರುವ ಸಾಮಾಜಿಕ-ಆರ್ಥಿಕ ಸ್ಥಿತಿಯು, ಆ ಕುಟುಂಬದ ಮುಂದಿನ ತಲೆಮಾರನ್ನು ಮಾನವ ಸಂಪನ್ಮೂಲಗಳ ನೆಲೆಯಲ್ಲಿ ಎಷ್ಟರ ಮಟ್ಟಿಗೆ ಸಜ್ಜುಗೊಳಿಸಿದೆ ಎಂಬುದರ ಆಧಾರದ ಮೇಲೆ ಈ ಹಂತವನ್ನು ನಿರ್ಧರಿಸಬೇಕಾಗಿದೆ. ಉದಾಹರಣೆಗೆ, ಮೇಲ್ವಿಚಾರಣೆ ಜವಾಬ್ದಾರಿಯುಳ್ಳ ಹುದ್ದೆಗೆ ಸಮನಾದ ಎಲ್ಲ ಹುದ್ದೆಗಳನ್ನು ಆ ಕುಟುಂಬಕ್ಕೆ ಮೀಸಲಾತಿ ನಿಲ್ಲಿಸಲು ನಿರ್ಗಮನ (cut off) ಹಂತದ ಹುದ್ದೆಗಳೆಂದು ಗುರುತಿಸಲು ಸಾಧ್ಯವೇ ನೋಡಬೇಕು. ಹಾಗೇ, ಮೀಸಲಾತಿ ಕಾರ್ಯಕ್ರಮವನ್ನು ಉನ್ನತ ಹುದ್ದೆಗಳಿಗೆ ವಿಸ್ತರಿಸಿದಂತೆ, ಕೆಳ ಹಂತದ ಹುದ್ದೆಗಳಲ್ಲಿ ಮೀಸಲಾತಿ ಈಗ ಎಷ್ಟರ ಮಟ್ಟಿಗೆ ಅಗತ್ಯ ಎಂಬುದನ್ನು ಪರಿಶೀಲಿಸತೊಡಗಬೇಕು. ಇದನ್ನು ವಿವಿಧ ಸಾಮಾಜಿಕ ಹಿನ್ನಲೆಗಳುಳ್ಳ ವೃತ್ತಿಪರರಿಂದ ಕೂಡಿದ ಆಯೋಗಕ್ಕೆ ಒಪ್ಪಿಸಿ, ಅದರ ಶಿಫಾರ್ಸುಗಳಿಗೆ ಅನುಗುಣವಾಗಿ ಅಗತ್ಯವೆನಿಸಿದರೆ, ಕೆಳ ಹಂತಗಳಿಂದ ಮೊದಲ್ಗೊಂಡು ಮೀಸಲಾತಿಯನ್ನು ಕ್ರಮೇಣ ಶೇಕಡಾವಾರು ಕಡಿಮೆ ಮಾಡುತ್ತಾ ಹೋಗಿ, ಸಂಪೂರ್ಣವಾಗಿ ತೆಗೆದು ಹಾಕುವ ಕಾಲಮಿತಿಯುಳ್ಳ ಕಾರ್ಯಕ್ರಮವೊಂದನ್ನು ರೂಪಿಸಬೇಕು. ಇದಕ್ಕೆ ಮೊದಲಾಗಿ ಪರಿಶಿಷ್ಟ ಜಾತಿ-ವರ್ಗಗಳೂ ಸೇರಿದಂತೆ, ಸಮಾಜದ ಎಲ್ಲ ವರ್ಗಗಳನ್ನೂ ಮಾನಸಿಕವಾಗಿ ಸಿದ್ಧಗೊಳಿಸಬೇಕು. ಈ ಸಂದರ್ಭದಲ್ಲಿ ಉತ್ತರ ಪ್ರದೇಶದಲ್ಲಿ ಝಾಡಮಾಲಿ ಹುದ್ದೆಗಳಿಗೆ ಬ್ರಾಹ್ಮಣರೂ ಅರ್ಜಿ ಸಲ್ಲಿಸಿ, ಪರಿಶಿಷ್ಟ ಜಾತಿ ಸಂಘಟನೆಗಳಿಂದ ಪ್ರತಿಭಟನೆಯನ್ನು ಎದುರಿಸುತ್ತಿರುವ ವಿಚಿತ್ರ ಸನ್ನಿವೇಶವನ್ನು ನಾವು ಬಹು ಎಚ್ಚರಿಕೆಯಿಂದ ಗಮನಿಸಬೇಕಾಗಿದೆ.

ಇನ್ನು ಎರಡನೆಯ ನೆಲೆಯ ಸಾರ್ವಕಾಲಿಕತೆಯ ಪ್ರಶ್ನೆ. ಅಂದರೆ, ಎಷ್ಟು ವರ್ಷ ಈ ಮೀಸಲಾತಿ? ಜಾತಿ ಮೂಲವಾದ ಅಸಮಾನತೆ ಇರುವವರೆಗೆ ಈ ಮೀಸಲಾತಿ ಎಂಬುದು ಇದಕ್ಕೆ ಸರಿಯಾದ ತಾತ್ವಿಕ ಉತ್ತರವಿರಬಹುದು. ಆದರೆ ವಾಸ್ತವ ಮಟ್ಟದ ಉತ್ತರ? ಜಾತಿ-ಮೀಸಲಾತಿ ತತ್ವದ ಮೂಲ ಪ್ರತಿಪಾದಕರಾದ ಡಾ. ಅಂಬೇಡ್ಕರ್‌ರೇ

ಮೀಸಲಾತಿಯ ಶಾಶ್ವತ ವ್ಯವಸ್ಥೆಯಾಗಬಾರದೆಂಬ ಎಚ್ಚರದಿಂದ ಹತ್ತು ವರ್ಷಗಳ ನಂತರ ಈ ಮೀಸಲಾತಿ ನೀತಿಯನ್ನು ಮರುವಿಮರ್ಶೆಗೆ ಒಳಪಡಿಸಬೇಕೆಂದು ಸೂಚಿಸಿದ್ದರೂ, ಇಂತಹ ಐದು ಹತ್ತು ವರ್ಷಗಳು ಕಳೆದು ಹೋದರೂ ಮೀಸಲಾತಿ ನೀತಿ ತನ್ನ ವ್ಯಾಪ್ತಿಯನ್ನು ಕುಗ್ಗಿಸಿಕೊಳ್ಳುವುದಿರಲಿ, ವಿವಿಧ ರೀತಿಯಲ್ಲಿ ಹಿಗ್ಗಿಸಿಕೊಳ್ಳುತ್ತಲೇ ಹೋಗುತ್ತಿದೆ. ಅಲ್ಲದೆ, ಮುಕ್ತ ಸ್ಪರ್ಧೆ ಆಧಾರಿತ ಜಾಗತೀಕರಣದ ಪ್ರತಿಪಾದಕರಾದ ನಮ್ಮ ಪ್ರಧಾನಿ ಡಾ. ಮನಮೋಹನ ಸಿಂಗರೂ ಈಚೆಗೆ ಜಾತಿ ಮೀಸಲಾತಿಯ-ಖಾಸಗಿ ವಲಯವಲ್ಲೂ-ಪ್ರತಿಪಾದನೆ ಮಾಡುತ್ತಿದ್ದಾರೆ. ಇದರ ಹಿಂದೆ, ನಿವಾಸಿ ಹಾಗೂ ಅನಿವಾಸಿ ಶ್ರೀಮಂತರಿಗಾಗಿರುವ ಕ್ಯಾಪಿಟೇಷನ್ ಆಧಾರಿತ ಹೊಸ ಹಾಗೂ ಶಾಶ್ವತವಾದ ಮೀಸಲಾತಿ ಪ್ರಭೇದಗಳಿಗೆ ಬೆಂಬಲ ಗಳಿಸಿಕೊಳ್ಳುವ ಹುನ್ನಾರವಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. ಇವೆರಡೂ ನಿಜವಾಗಿಯೂ ಆತಂಕಕಾರಿ ಬೆಳವಣಿಗೆಗಳು. ನಮ್ಮ ದುರ್ಬಲ ವರ್ಗಗಳನ್ನು ಶಾಶ್ವತ ದುರ್ಬಲ ವರ್ಗಗಳನ್ನಾಗಿ ಪರಿವರ್ತಿಸಿ, ಆರ್ಥಿಕ ಸಬಲರ ಸಾಮ್ರಾಜ್ಯ ವಿಸ್ತರಣೆಗೆ ಅವರನ್ನು ಕಾಲಾಳುಗಳಾಗಿ ಬಳಸಬಹುದಾದ ಈ ಬೆಳವಣಿಗೆಗಳು , ಸದ್ಯದ ಮೀಸಲಾತಿ ನೀತಿಯಲ್ಲಿ ಅಂತರ್ಗತವಾಗಿರುವ ಅಪಾಯಗಳನ್ನು ಸಾಬೀತುಪಡಿಸುವಂತಿದೆ. ಹೀಗಾಗಿ ಮೀಸಲಾತಿ ನೀತಿಯು ತನ್ನ ಸದ್ಯದ ಸ್ವರೂಪದಲ್ಲಿ ತನ್ನೆಲ್ಲಾ ತಾತ್ವಿಕತೆಯನ್ನು ಕಳೆದುಕೊಂಡು, ತನ್ನ ಮೂಲ ಉದ್ದೇಶವಾದ ಸಾಮಾಜಿಕ ಏಕೀಕರಣದ ಆಶಯವನ್ನು ಹುಟ್ಟಿಸುವಲ್ಲಿ ವಿಫಲವಾಗಿದೆ.

ಇದಕ್ಕೆ ಮುಖ್ಯ ಕಾರಣ, ಮೀಸಲಾತಿ ಕಾರ್ಯಕ್ರಮ ವಾಸ್ತವದ ಮಟ್ಟದಲ್ಲಿ ಒಂದು ಲಾಭದ ಜಡ ಸಾಧನವಾಗಿ ಪರಿವರ್ತಿತಗೊಂಡು; ಸಾಮಾಜಿಕ ಎಚ್ಚರದ, ಉನ್ನತಿಯ ಹಾಗೂ ಏಕೀಕರಣದ ಚೈತನ್ಯ-ಶಕ್ತಿಯಾಗಿ ಬೆಳೆದೇ ಇಲ್ಲದಿರುವುದು. ಜಾತಿ ವ್ಯವಸ್ಥೆಯನ್ನು ಪೋಷಿಸಿಕೊಂಡೇ ಮೀಸಲಾತಿ ನೀತಿಯನ್ನು ಜಾರಿಗೆ ತರುತ್ತಿರುವುದರ ದುರಂತವಿದು. ಈ ಸಂಬಂಧ ಸರ್ಕಾರವಾಗಲಿ, ಮೀಸಲಾತಿ ಜಾರಿ ಪ್ರಶ್ನೆ ವಿವಾದಕ್ಕೆ ಸಿಕ್ಕಾಗ ಮಾತ್ರ ಎಚ್ಚರಗೊಳ್ಳುವ ಸಾಮಾಜಿಕ ನ್ಯಾಯ ಚಳುವಳಿಕಾರರಾಗಲಿ ಅಥವಾ ಸಂಘಟನೆಗಳಾಗಲಿ ಯಾವುದೇ ಕಾರ್ಯಕ್ರಮ ಹಾಕಿಕೊಳ್ಳದೇ, ತಂತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವಷ್ಟರಲ್ಲೇ ತೃಪ್ತಗೊಂಡಿವೆ. ಹೀಗಾಗಿ ಈಗ ಮೀಸಲಾತಿಯ ಜೊತೆ ಜೊತೆಗೇ, ಜಾತಿ ವಿನಾಶ ಚಳುವಳಿಯನ್ನು ಸಮರೋಪಾದಿಯಲ್ಲಿ ಪುನಾರಚಿಸಬೇಕಿದೆ. ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ; ಅವರಿಗೆ ಕೆಲಸದಲ್ಲಿ , ಅವರ ಮಕ್ಕಳಿಗೆ ಶಿಕ್ಷಣದಲ್ಲಿ ಮೀಸಲಾತಿ;ಜಾತಿ ಆಧಾರಿತ ಕಾಲೋನಿಗಳ, ವಿದ್ಯಾರ್ಥಿ ನಿಲಯಗಳ ಹಾಗೂ ಸಾರ್ವಜನಿಕ ಸಂಘ-ಸಂಸ್ಥೆಗಳ ರದ್ದತಿ; ಎಲ್ಲಾ ಪೂಜಾ ಸ್ಥಳಗಳನ್ನು ಸಾರ್ವಜನಿಕ ಸ್ಥಳಗಳೆಂದು ಘೋಷಿಸಿ, ಅಲ್ಲಿ ಯಾವುದೇ ರೀತಿಯ ಜಾತಿ ತಾರತಮ್ಯ ಆಚರಣೆಗಳನ್ನು ಶಿಕ್ಷಾರ್ಹ ಅಪರಾಧಗಳನ್ನಾಗಿ ಮಾಡುವುದು ಹಾಗೂ ಇದಕ್ಕಾಗಿ ನ್ಯಾಯಾಂಗ

ಅಧಿಕಾರಗಳುಳ್ಳ ಪ್ರಾಧಿಕಾರವೊಂದನ್ನು ಸ್ಥಾಪಿಸುವುದು; ಜಾತಿ ಸಂಬಂಧಿ ವೃತ್ತಿಗಳಲ್ಲಿ (ಉದಾ: ಪೂಜಾರಿಕೆ ಹಾಗೂ ಪೌರ ಕಾರ್ಮಿಕ)ವಿಜಾತಿಯುವರಿಗೆ ಪ್ರೋತ್ಸಾಹ ಕಾರ್ಯಕ್ರಮ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಶಾಲಾ ಪಠ್ಯ ಪುಸ್ತಕಗಳಲ್ಲಿ, ಸದ್ಯದ ಸಾಮಾಜಿಕ ರಚನೆಯ ವೈರುಧ್ಯಗಳು ಮತ್ತು ಸರ್ವರ ಹಿತಕ್ಕಾಗಿ ಅವುಗಳನ್ನು ತುರ್ತಾಗಿ ನಿವಾರಿಸಬೇಕಾದ ಅಗತ್ಯವು ಮಕ್ಕಳಿಗೆ ಮನದಟ್ಟಾಗುವಂತೆ, ಜಾತಿ ವ್ಯವಸ್ಥೆ ಚರಿತ್ರೆಯ ಪರಿಚಯವನ್ನು ಅಳವಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನೊಳಗೊಂಡ ಈ ಪುನಾರಚನೆಯಲ್ಲಿ, ಸರ್ಕಾರದ ಜೊತೆಗೆ ಈಗ ಮೀಸಲಾತಿ ಸಂಬಂಧ ಪರಸ್ಪರ ದೂಷಣೆಯಲ್ಲಿ ತೊಡಗಿರುವ ಗುಂಪುಗಳು, ಮೀಸಲಾತಿ ಪರ ಅಥವಾ ವಿರೋಧಿ ಹೋರಾಟಗಳಲ್ಲಿ ತೋರಿದಷ್ಟೇ ಆಸಕ್ತಿಯೊಂದಿಗೆ ಸಕ್ರಿಯವಾಗಿ ಭಾಗಿಯಾಗಬೇಕಿವೆ.ಇಲ್ಲದೇ ಹೋದಲ್ಲಿ ಅವುಗಳ ಸದ್ಯದ ಹೋರಾಟಗಳು ಅನುಮಾನಾಸ್ಪದವೆನಿಸಿಕೊಳ್ಳುತ್ತವೆ.

ಸದಾ 'ದುರ್ಬಲತೆಯ ಸುರಕ್ಷತೆ'ಯಲ್ಲಿರ ಬಯಸುವ ಯಾವುದೇ ಸಾಮಾಜಿಕ ಗುಂಪು, ಒಟ್ಟಾರೆ ಸಮಾಜಕ್ಕೆ ಕಂಟಕಪ್ರಾಯವೇ ಆಗಿರುತ್ತದೆ. ಅದು ಪ್ರತ್ಯೇಕತೆಯಲ್ಲಿ ಸ್ವತಃ ದುರ್ಬಲವಾಗುತ್ತಾ ಹೋಗುವ ಮೂಲಕ ಸಮಾಜದ ಸೃಜನಶೀಲತೆಯನ್ನು ಮುಕ್ಕುಗೊಳಿಸಿ, ಒಟ್ಟಾರೆ ಸಮಾಜದ ಮುಂದುವರಿಕೆಗೂ ಅಡ್ಡಿಯಾಗಿ ನಿಲ್ಲುತ್ತದೆ. ಆದುದರಿಂದ, ಮೀಸಲಾತಿ ಎಂದರೆ ಅವಕಾಶ ವಂಚಿತ ವರ್ಗದವರೆಲ್ಲರಿಗೂ ಎಲ್ಲ ಹಂತಗಳ ಕೆಲಸ ಕೊಡಿಸುವ ನಿರುದ್ಯೋಗ ಅಥವಾ ಬಡತನ ನಿವಾರಣಾ ಕಾರ್ಯಕ್ರಮವಾಗಿರದೆ ; ಆ ವರ್ಗಗಳಲ್ಲಿ, ಬದಲಾದ ಸಾಮಾಜಿಕ ಸಂದರ್ಭದಲ್ಲಿ ಇತರ ವರ್ಗಗಳೊಂದಿಗೆ ಒಟ್ಟಾರೆ ಸಮಾಜದ ಹಿತಕ್ಕಾಗಿ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ಹೊಸ ರೀತಿಯ ದಕ್ಷತೆ ಮತ್ತು ಆತ್ಮ ವಿಶ್ವಾಸ ರೂಢಿಸುವ ಸಾಮಾಜಿಕ ಏಕೀಕರಣದ ಪ್ರೇರಕ-ಸಾಧನ ಮಾತ್ರವಾಗಿದೆ ಎಂಬುದನ್ನು ಸಂಬಂಧಪಟ್ಟವರೆಲ್ಲರೂ ಮನಗಾಣಬೇಕಾಗಿದೆ. ಇಲ್ಲದೆ ಹೋದಲ್ಲಿ ಸದ್ಯದ ಮೀಸಲಾತಿ ನೀತಿಯು ಕೆಲವು ವರ್ಗಗಳಲ್ಲಿ ಎಂದೂ ತಣಿಯದ ನಿರಂತರ ಸಾಮಾಜಿಕ ದಾಹವನ್ನೂ, ಇನ್ನು ಕೆಲವು ವರ್ಗಗಳಲ್ಲಿ ಎಂದೂ ಆರದ ಸಾಮಾಜಿಕ ಅಶಾಂತಿಯನ್ನೂ ಉಂಟು ಮಾಡುವ ರಾಕ್ಷಸ ಸಾಧನವಾಗಿ ಪರಿವರ್ತಿತವಾಗುವ ಎಲ್ಲ ಸಾಧ್ಯತೆಗಳಿವೆ. ಇಂದಿನ ಜಾಗತೀಕರಣ ಸಂದರ್ಭದ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಒತ್ತಡಗಳ ಮಧ್ಯೆ ಇಂತಹ ಬೆಳವಣಿಗೆ ಉಂಟುಮಾಡಬಹುದಾದ ಸಾಮಾಜಿಕ ಅನಾಹುತಗಳು ಊಹಾತೀತವಾಗಿವೆ. ಈ ದೃಷ್ಟಿಯಿಂದ ಜ್ಞಾನ ಆಯೋಗದ (Knowledge Commission) ಓರ್ವ ಸದಸ್ಯರು ಮುಂದಿಟ್ಟಿರುವ, ಇನ್ನು ಹದಿನೈದು ವರ್ಷಗಳಲ್ಲಿ ಯಾವುದೇ ಮೀಸಲಾತಿಯ ಅಗತ್ಯವಿಲ್ಲದಂತಹ ಸಾಮಾಜಿಕ ವಾತಾವರಣ ನಿರ್ಮಾಣ ಮಾಡುವುದೆಂದು ಹೇಳಲಾದ,

ಸರ್ವರಿಗೂ ಸಮಾನ ಹಾಗೂ ಗುಣಮಟ್ಟದ ಶಾಲಾಶಿಕ್ಷಣ ಕಾರ್ಯಕ್ರಮದ ಪ್ರಸ್ತಾಪವು, ಸಂಬಂಧಪಟ್ಟವರೆಲ್ಲರ ಪರಿಶೀಲನೆಗೆ ಅರ್ಹವಾಗಿದೆ. ಅದೇನೇ ಇರಲಿ, ಸದ್ಯದ ಮೀಸಲಾತಿ ನೀತಿಯನ್ನು ಪೂರಕ ಕಾರ್ಯಕ್ರಮಗಳೊಂದಿಗೆ, ಈವರೆಗಿನ ಅನುಭವದ ಆಧಾರದ ಮೇಲೆ ಅದರಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವ ಮೂಲಕ, ಅದು ದೀರ್ಘಕಾಲಿಕ ದೃಷ್ಟಿಯಲ್ಲಿ ಸರ್ವರ ಉನ್ನತಿಗೂ ಬದ್ಧವಾದ ಹಾಗೂ ಒಂದು ಕಾಲಮಿತಿಯಲ್ಲಿ ಅನುಷ್ಠಾನಗೊಳ್ಳಬೇಕಾದ ರಾಷ್ಟ್ರೀಯ ಕಾರ್ಯಕ್ರಮವಾಗಿದೆ ಎಂಬುದನ್ನು ಸಮಾಜದ ಎಲ್ಲ ವರ್ಗಗಳಿಗೆ ಮನವರಿಕೆ ಮಾಡಿಕೊಡಬೇಕಿದೆ.

ಇನ್ನು ಮೀಸಲಾತಿ ಪರವಾಗಿ ಇಂದು ಸಾರಾಸಗಟಾಗಿ ವಾದಿಸುತ್ತಿರುವವರು ಮುಂದಿಟ್ಟಿರುವ ಕೆಲವು ಸಲಹೆ-ಬೇಡಿಕೆಗಳನ್ನು ಪರಿಶೀಲಿಸೋಣ. ಮೊದಲನೆಯದು, ಕುಗ್ಗುತ್ತಿರುವ ಸರ್ಕಾರಿ ವಲಯಕ್ಕೆ ಪ್ರತಿಯಾಗಿ ಹಿಗ್ಗುತ್ತಿರುವ ಖಾಸಗಿ ವಲಯದಲ್ಲಿ ಮೀಸಲಾತಿ ಜಾರಿಯ ಸಲಹೆ. ಇದು ರಾಜಕೀಯವಾಗಿ ಖಾಸಗೀಕರಣವನ್ನು ಒಂದು ನೀತಿಯಾಗಿ ಪರಿಶಿಷ್ಟ ಹಾಗೂ ಹಿಂದುಳಿದ ಜಾತಿ-ವರ್ಗಗಳು ಒಪ್ಪಿಕೊಳ್ಳುತ್ತಿರುವ ಮೊದಲ ಸೂಚನೆಯಾಗಿದೆ. ಇದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಒತ್ತಟ್ಟಿಗಿಟ್ಟು ಯೋಚಿಸಿದರೂ, ಎಲ್ಲ ರೀತಿಯ ಮೀಸಲಾತಿಗಳನ್ನೂ ಕ್ರಮೇಣ ಕೊನೆಗಾಣಿಸಬೇಕಾದ ಅಗತ್ಯವನ್ನು ಸಮಾಜದ ಹೆಚ್ಚೆಚ್ಚು ಭಾಗಗಳು ಹಿಂದೆಂದಿಗಿಂತ ಇಂದು ಹೆಚ್ಚು ಮನಗಾಣುತ್ತಿರುವಾಗ, ಮೀಸಲಾತಿ ವಿಸ್ತರಣೆಯ ಆ ಸಲಹೆ ಮೊದಲ ನೋಟಕ್ಕೆ ಸರಿಯೆನಿಸುವುದಿಲ್ಲ . ಜೊತೆಗೆ ವೈಯುಕ್ತಿಕ ಸ್ಫೂರ್ತಿ-ಸಾಹಸ ಹಾಗೂ ಮುಕ್ತ ಸ್ಪರ್ಧೆಯನ್ನೇ ನಂಬಿ, ಸಾಮಾಜಿಕ ನ್ಯಾಯವನ್ನು ನಂಬಿದ ಸರ್ಕಾರಿ ವಲಯವನ್ನು ಬಹು ಹಿಂದಿಕ್ಕಿ ಬೆಳೆಯುತ್ತಿರುವ ಖಾಸಗಿ ವಲಯದಲ್ಲೂ ಮೀಸಲಾತಿ ಕೇಳುವುದು, ತಾತ್ವಿಕವಾಗಿ ವಿರೋಧಾಭಾಸದ ಸಂಗತಿಯಾಗುತ್ತದೆ. ಆದರೆ ಭಾರತದ ಖಾಸಗಿ ವಲಯವು ಲಾಭವೊಂದನ್ನೇ ಗುರಿಯಾಗಿಟ್ಟುಕೊಂಡು, ಸರ್ಕಾರದಿಂದ-ಅಂದರೆ ಜನಸಾಮಾನ್ಯರಿಂದ -ಪೋಷಿಸಲ್ಪಟ್ಟ, ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡೇ ಬೆಳೆದಿದೆ. ಈ ವಲಯದಲ್ಲಿನ ಇತ್ತೀಚಿನ ಸಂಸ್ಥೆಗಳಂತೂ - ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದವು- ಕೋಟಿಗಟ್ಟಲೆ ಲಾಭ ಮಾಡಿ, ಸಮಾಜದಲ್ಲಿ ವರಮಾನ ತಾರತಮ್ಯವನ್ನು ತಾರಕಕ್ಕೇರಿಸುವ ಮೂಲಕ ಶ್ರೀಮಂತಿಕೆ ಎಂದರೇ ಸಾಮಾಜಿಕ ಅಶ್ಲೀಲತೆ ಎನ್ನುವಷ್ಟರ ಮಟ್ಟಿಗೆ ಸಾರ್ವಜನಿಕ ಅಭಿರುಚಿ-ಆದ್ಯತೆಗಳನ್ನು ಬುಡಮೇಲುಗೊಳಿಸಿವೆ. ಇದರಿಂದಾಗಿ ಉಂಟಾಗಿರುವ ಸಾಮಾಜಿಕ ಒತ್ತಡಗಳು, ಹೆಚ್ಚುತ್ತಿರುವ ಅಕಾರಣ ಹಿಂಸೆಯ ವೈವಿಧ್ಯ ಹಾಗೂ ಅದರ ಆಧಾರದ ಮೇಲೆ ವಾಣಿಜ್ಯೋದ್ಯಮ ಸಂಸ್ಥೆಗಳಂತೆ ಬೆಳೆಯುತ್ತಿರುವ ಮಾನಸಿಕ ಶಾಂತಿ ಕೇಂದ್ರಗಳು, ಪದೇ ಪದೇ ಭಂಗಗೊಳ್ಳುತ್ತಿರುವ ಕಾನೂನು-ಸುವ್ಯವಸ್ಥೆ ಪ್ರಕರಣಗಳ ಮೂಲಕ ಎದ್ದು ಕಾಣತೊಡಗಿವೆ.

ಅಲ್ಲದೆ ಈ ಸಂಸ್ಥೆಗಳ ಜಾತಿ ಸ್ವರೂಪವಂತೂ, ನಮ್ಮ ಖಾಸಗಿ ವಲಯವು ಮೇಲ್ಜಾತಿಗಳಲ್ಲಿ ಪ್ರಕಟಗೊಳ್ಳುವ ಪ್ರತಿಭೆ-ದಕ್ಷತೆಗಳ ಮೂಲಕ ಮಾತ್ರ ತಮ್ಮ ಸ್ವತ್ತು ನಿರ್ಮಾಣವಾಗಬಲ್ಲುದು ಎಂಬ ಮೂಢ ನಂಬಿಕೆಗೆ ತುತ್ತಾಗಿರುವುದನ್ನು ಸಾಬೀತುಪಡಿಸುತ್ತದೆ. ಹೀಗಾಗಿ ಈ ಸಂಸ್ಥೆಗಳ ಸಾಮಾಜಿಕ ಲೆಕ್ಕಪರೀಕ್ಷೆ (Social auditing)ನಡೆಸಿ, ಅವುಗಳಲ್ಲಿ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡಿಸಬೇಕಿದೆ. ಸಮಾಜ ಸೇವೆ ಎಂದರೆ ದಾನ-ಧರ್ಮ ಮಾತ್ರವಲ್ಲ; ಅದಕ್ಕಿಂತ ಮುಖ್ಯವಾಗಿ, ಅದು ಸಮಾನತೆಯ ಆಶಯವುಳ್ಳ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಕಾರ್ಯಕ್ರಮ; ಅದರ ಮೂಲಕ ಮಾತ್ರ ಯಾವುದೇ ಉದ್ಯಮ ಸಂಸ್ಥೆ ತನ್ನ ದಕ್ಷತೆಯ ಪರಿಕಲ್ಪನೆಗೆ ಹೊಸ ಆಯಾಮಗಳನ್ನು ಸೇರಿಸಿಕೊಂಡು ತಾನು ಸೃಷ್ಟಿಸುವ ಸ್ವತ್ತಿನ ಮೌಲ್ಯವನ್ನು ಮಾತ್ರವಲ್ಲ,ಮೌಲಿಕತೆಯನ್ನೂ ಹೆಚ್ಚಿಸಿಕೊಳ್ಳಬಲ್ಲುದು. ಇದು ಮಾತ್ರ ತಾನು ಬದುಕುತ್ತಿರುವ ಅಭಿವೃದ್ಧಿಶೀಲ ಅಸಮಾನ ಸಮಾಜದಲ್ಲಿ ನಿಜವಾದ ಹಾಗೂ ಸ್ಥಿರವಾದ ಸಾಧನೆ ಎಂದು ಅವುಗಳಿಗೆ ತಿಳಿ ಹೇಳಬೇಕಿದೆ. ಈ ಸಂಬಂಧವಾಗಿ ಖಾಸಗಿ ವಲಯದ ಆರ್ಥಿಕತೆಯನ್ನೇ ಆಧರಿಸಿದ ಅಮೆರಿಕ, ತನ್ನ ಕರಿ ಜನರ ಸಾಮಾಜಿಕ ಏಕೀಕರಣಕ್ಕಾಗಿ ಅಳವಡಿಸಿಕೊಂಡ ಸಕಾರಾತ್ಮಕ ಕ್ರಿಯಾ ಯೋಜನೆ (Affirmative action)ಯ ಕಡೆ ಅವುಗಳ ಗಮನ ಸೆಳೆಯಬೇಕಾಗಿದೆ.

ಮಾರ್ಟಿನ್ ಲೂಥರ್ ಕಿಂಗ್ ನೇತೃತ್ವದಲ್ಲಿ ಕರಿ ಜನರ ಹಕ್ಕುಗಳಿಗಾಗಿ ನಡೆದ ಚಳುವಳಿಯ ಫಲವಾಗಿ ರೂಪುಗೊಂಡ ನಾಗರಿಕ ಹಕ್ಕುಗಳ ಕಾಯಿದೆಯಡಿ ಅಮೆರಿಕಾ ಸರ್ಕಾರವು, ಕರಿಜನರು ಗಣನೀಯ ಸಂಖ್ಯೆಯಲ್ಲಿರುವ ತನ್ನ ೧೯ರಾಜ್ಯಗಳಲ್ಲಿ ಈ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಿ, ಮಿಕ್ಕ ರಾಜ್ಯಗಳಲ್ಲಿ ಅದನ್ನು ಸ್ವಯಂ ಇಚ್ಛೆಗೆ ಬಿಟ್ಟಿದೆ. ಈ ಯೋಜನೆ ಯಾವುದೇ ಮೀಸಲಾತಿಯನ್ನು ಮೇಲಿನಿಂದ ಹೇರದೆ, ಶಿಕ್ಷಣ ಹಾಗೂ ಉದ್ಯಮ ಸಂಸ್ಥೆಗಳು ರಾಷ್ಟ್ರದ ಸಾಮಾಜಿಕ ವೈವಿಧ್ಯತೆಯನ್ನು ತನ್ನ ಶಿಕ್ಷಣಾರ್ಥಿ ಹಾಗೂ ಸಿಬ್ಬಂದಿ ವಲಯದಲ್ಲಿ ಪ್ರತಿಬಿಂಬಿಸುವಂತೆ ಶಾಸನಾತ್ಮಕವಾಗಿ ಸೂಚಿಸುತ್ತದೆ. ಆಶ್ಚರ್ಯವೆಂದರೆ, ಈ ಯೋಜನೆಯನ್ನು ಕಡ್ಡಾಯಗೊಳಿಸದ ರಾಜ್ಯಗಳ ಉದ್ಯಮ ಹಾಗೂ ಶಿಕ್ಷಣ ಸಂಸ್ಥೆಗಳೂ-ಹಾರ್ವರ್ಡ್‌ನಂತಹ ಪ್ರತಿಷ್ಠಿತ ವಿಶ್ವವಿದ್ಯಾಲಯಗಳೂ ಸೇರಿದಂತೆ-ಅನುಷ್ಠಾನಕ್ಕೆ ತಂದಿವೆ. ಇದಕ್ಕೆ ಕಾರಣ, ಎಲ್ಲ ರೀತಿಯ ಮಾನವ ಸಂಪನ್ಮೂಲಗಳ ಸೂಕ್ತ ಸಂಯೋಜನೆ ಮಾತ್ರ ಸಂಸ್ಥೆಯೊಂದರ ದಕ್ಷತೆಯನ್ನು ಎಲ್ಲ ರೀತಿಯಲ್ಲಿ ಹೆಚ್ಚಿಸಬಲ್ಲುದು ಎಂಬುದನ್ನು ಅಲ್ಲಿನ ಉದ್ಯಮಿಗಳು ಮನಗಂಡಿರುವುದು ಹಾಗೂ ಅಲ್ಲಿನ ಕರಿ ಜನರು ಯಾವುದೇ ಪೂರ್ವಾಗ್ರಹವಿಲ್ಲದೆ ಅದಕ್ಕೆ ಸೂಕ್ತವಾಗಿ ಪ್ರತಿಸ್ಪಂದಿಸುತ್ತಿರುವುದು.

ಹೀಗಾಗಿ ಸ್ವತಃ ಉದ್ಯಮ ಸಂಸ್ಥೆಗಳೇ-ಮಾಹಿತಿ ತಂತ್ರಜ್ಞಾನದ ಜಾಗತಿಕ ಸಂಸ್ಥೆ ಎನ್ನಿಸಿರುವ ಮೈಕ್ರೋಸಾಫ್ಟ್ ಕಂಪನಿ ಸೇರಿದಂತೆ-ಕರಿ ಜನರಲ್ಲಿ ಪ್ರತಿಭಾವಂತರನ್ನು ಗುರುತಿಸಿ, ವಿಶೇಷ ಶಿಕ್ಷಣ-ತರಬೇತಿ ನೀಡಿ, ಅವರನ್ನು ತಮ್ಮ ಸಂಸ್ಥೆಗಳಲ್ಲಿ ಎಲ್ಲ ಹಂತಗಳ ಹುದ್ದೆಗಳಿಗೆ ನೇಮಿಸುತ್ತಿವೆ. ಆದರೆ ಇದಕ್ಕಾಗಿ ಆಯ್ಕೆ ಕೇವಲ ಅಂಕ ಗಳಿಕೆಯ ಮೇಲೆ ನಡೆಯದೆ, ವ್ಯಕ್ತಿತ್ವ ಪರಿಶೀಲನೆಯ ಮೇಲೆ ಆಧಾರಿತವಾಗಿರುತ್ತದೆ. ಎಲ್ಲ ರೀತಿಯ ಸಾಮಾಜಿಕ ಹಿನ್ನಲೆಯುಳ್ಳ ಮತ್ತು ತನ್ನ ಪರಿಶ್ರಮಶೀಲತೆಯ ಬಗ್ಗೆ ಸ್ಪಷ್ಟತೆ ಹಾಗೂ ನಂಬಿಕೆಯುಳ್ಳ ವಿದ್ಯಾರ್ಥಿ-ನೌಕರ ವರ್ಗದಿಂದ ಕೂಡಿದ ಸಂಸ್ಥೆಗಳು ಮಾತ್ರ ತಮ್ಮ ಸಮಾಜಕ್ಕೆ ಹಾಗೂ ರಾಷ್ಟ್ರಕ್ಕೆ ಕೊಡುಗೆ ಸಲ್ಲಿಸಬಲ್ಲವು ಎಂಬ ನಂಬಿಕೆಯೇ, ಈ ಕ್ರಿಯಾ ಯೋಜನೆಯ ಯಶಸ್ಸಿಗೆ ಕಾರಣವಾಗಿರುವುದು. ಅಮೆರಿಕಾದ ಮಾಜಿ ರಕ್ಷಣಾ ಮಂತ್ರಿ ಕಾಲಿನ್ ಪೊವೆಲ್ ಹಾಗೂ ಹಾಲಿ ವಿದೇಶಾಂಗ ಮಂತ್ರಿ ಕಾಂಡೊಲಿನಾ ರೈಸ್ ಈ ಯೋಜನೆಯ ಉತ್ಕೃಷ್ಟ ಫಲಗಳು. ಜಾತಿ ವ್ಯವಸ್ಥೆಯ ಪೂರ್ವಾಗ್ರಹಗಳಿಲ್ಲದ ಸೂಕ್ತ ವಾತಾವರಣ ನಿರ್ಮಾಣವಾದಲ್ಲಿ , ಎಲ್ಲ ಮಾದರಿಗಳಿಗೂ ಅಮೆರಿಕಾದ ಕಡೆ ನೋಡುವ ಹಾಗೂ ಉದಾಹರಣೆ ನೀಡುವ ನಮ್ಮ ಖಾಸಗಿ ಉದ್ಯಮಪತಿಗಳನ್ನು ಈ ವಿಷಯದಲ್ಲಿ ಒಪ್ಪಿಸುವುದು ಕಷ್ಟವಾಗಲಾರದು. ಸರ್ಕಾರ ಹಾಗೂ ಸಾಮಾಜಿಕ ನ್ಯಾಯದ ಪರವಾದ ಸಂಘಟನೆಗಳು ಈ ದಿಸೆಯಲ್ಲಿ ಕೂಡಲೇ ಪ್ರಯತ್ನಗಳನ್ನು ಆರಂಭಿಸಬೇಕಿದೆ.

ಮೀಸಲಾತಿ ಪರವಾದಿಗಳ ಇನ್ನೊಂದು ಸಲಹೆ, ಜಾತಿ ಜನಸಂಖ್ಯೆಗನುಗುಣವಾಗಿ ಮೀಸಲಾತಿ. ಮೀಸಲಾತಿ ನೀತಿಯ ಅಸಮರ್ಪಕ ಅನುಷ್ಠಾನದಿಂದ ಉಂಟಾದ ಹತಾಶೆಯಿಂದ ಮೂಡಿರಬಹುದಾದ ಈ ಸಲಹೆ, ಸಮಾಜ ಹಾಗೂ ರಾಷ್ಟ್ರದ ಹಿತ ದೃಷ್ಟಿಯಿಂದ ಅತ್ಯಂತ ಅಪಾಯಕಾರಿ ಹಾಗೂ ಅವಪ್ರಗತಿ(retrograde)ಯಾದುದಾಗಿದೆ. ಏಕೆಂದರೆ ಇದು, ಮೀಸಲಾತಿಯನ್ನು ಅಗತ್ಯಗೊಳಿಸಿದ ಜಾತಿ ವ್ಯವಸ್ಥೆಯನ್ನು ಆರ್ಥಿಕವಾಗಿಯಲ್ಲದಿದ್ದರೂ, ಸಾಮಾಜಿಕವಾಗಿ ಸುಸ್ಥಿರಗೊಳಿಸುತ್ತದೆ ಹಾಗೂ ಸಮಾಜದಲ್ಲಿ ಜಾತಿ ಮೀರಿದ ಸಾರ್ವತಿಕ ಉನ್ನತೀಕರಣದ ಸ್ಫೂರ್ತಿಯನ್ನೇ ಇಲ್ಲವಾಗಿಸುತ್ತದೆ. ಇದರಿಂದ ದೀರ್ಘಕಾಲಿಕ ದೃಷ್ಟಿಯಿಂದ ಹೆಚ್ಚು ನಷ್ಟಕ್ಕೊಳಗಾಗುವವರು ಜಾತಿ-ಮೀಸಲಾತಿಯವರೇ. ಏಕೆಂದರೆ ಉನ್ನತೀಕರಣಕ್ಕಾಗಿ ಇಂದಿನ ವ್ಯವಸ್ಥೆ ಒಪ್ಪಿಕೊಂಡಿರುವ ದಕ್ಷತೆಯ ಮಟ್ಟದಲ್ಲಿ ಹಿಂದುಳಿದಿರುವುರಿಂದಲೇ ಅಲ್ಲವೆ,ಈ ಜಾತಿ-ವರ್ಗಗಳಿಗೆ ಮೀಸಲಾತಿ ಅಗತ್ಯವೆನಿಸಿರುವುದು? ಆದುದರಿಂದ ಈ ಜಾತಿ ವರ್ಗಗಳ ಹಿತ ದೃಷ್ಟಿಯಿಂದಲೇ ಸದ್ಯದ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಪ್ರಮಾಣದ ಮುಕ್ತ ಸ್ಪರ್ಧೆ ಅವಶ್ಯಕವೆನಿಸಿಕೊಳ್ಳುತ್ತದೆ. ಅಲ್ಲದೆ, ಸಾವಿರಾರು ಜಾತಿ ಉಪಜಾತಿಗಳಾಗಿ ಒಡೆದುಹೋಗಿರುವ ಭಾರತೀಯ ಸಮಾಜದಲ್ಲಿ, ಜಾತಿ ಜನಸಂಖ್ಯಾಧಾರಿತ ಮೀಸಲಾತಿ ನೀತಿಯು, ಅನುಷ್ಠಾನದ ನೆಲೆಯಲ್ಲಿ ಅನೇಕ

ಸಮಸ್ಯೆಗಳನ್ನು ಹುಟ್ಟು ಹಾಕುವುದಲ್ಲದೆ, ಅಲ್ಪಸಂಖ್ಯಾತ ಜಾತಿಗಳನ್ನು ಇನ್ನಷ್ಟು ಅವಕಾಶವಂಚಿತರನ್ನಾಗಿಸುವ ಸಾಧ್ಯತೆಗಳನ್ನೊಳಗೊಂಡಿದೆ.

ಇದು ಮೀಸಲಾತಿ ಪರವಾದಿಗಳು ಮಂಡಿಸುವ ಇನ್ನೊಂದು ವಾದದ ವಿರೋಧಾಭಾಸದೆಡೆಗೂ ನಮ್ಮ ಗಮನ ಸೆಳೆಯುತ್ತದೆ. ಅದೆಂದರೆ 'ಪ್ರತಿಭೆ'ಯ ಪುನರ್ನಿರೂಪಣೆ. ಆಧುನಿಕ ಜ್ಞಾನ ಗಳಿಕೆಗೆ ಬೇಕಾದ -ಮೇಲ್ಜಾತಿಗಳು ನಿರೂಪಿಸುವುವೆಂದು ಹೇಳಲಾದ- ಪ್ರತಿಭೆಗೆ ಪ್ರತಿಯಾಗಿ ಇವರು ನಿರೂಪಿಸುವ, ಯಾವ ಜ್ಯಾಮಿತೀಯ ಉಪಕರಣದ ನೆರವಿಲ್ಲದೆ ಹೊಲದಲ್ಲಿ ನೇರವಾಗಿ ಉಕ್ಕೆ ಹೊಡೆಯುವ ರೈತ ಮಕ್ಕಳ ಪ್ರತಿಭೆ ಹಾಗೂ ಹಲವು ಹಗಲು-ರಾತ್ರಿ ನಿರಂತರವಾಗಿ ಹಾಡಬಲ್ಲ ಜಾನಪದ ಗಾಯನ ಪ್ರತಿಭೆ ಮುಂತಾದ ಉದಾಹರಣೆಗಳು, ಇಂದಿನ 'ಪ್ರಗತಿಪರ ವ್ಯವಸ್ಥೆ'ಗೆ ಅಗತ್ಯವಾದ ದಕ್ಷತೆಯ ದೃಷ್ಟಿಯಿಂದ ಅಸಂಗತವೆನ್ನಿಸುತ್ತವೆ. ಅವು ಪ್ರತಿಭೆಗಳೇ ಹೌದು, ಆದರೆ ಈ ಆಧುನಿಕ ವಿಜ್ಞಾನಾಧಾರಿತ ವ್ಯವಸ್ಥೆಯನ್ನು ಕಟ್ಟಬಲ್ಲ ದಕ್ಷತೆಗೆ ಬೇಕಾದ ಪ್ರತಿಭೆಗಳಲ್ಲ. ಅಥವಾ ಅವು ಈವರೆಗೆ ಅಂತಹ ಸಾಧ್ಯತೆಗಳನ್ನು ಪ್ರಕಟಪಡಿಸಿಲ್ಲ. ನಿಜವಾಗಿ ಅಂತಹ ಪ್ರತಿಭೆಗಳೂ ಸಮಾಜವೊಂದರ ದಕ್ಷತೆಯ ಆಧಾರಗಳಾಗಬೇಕಾದರೆ, ಹಿಂದುಳಿದ ವರ್ಗಗಳು ಮೀಸಲಾತಿ ಹೋರಾಟವನ್ನು ನಿಲ್ಲಿಸಿ, 'ಪ್ರಗತಿಪರತೆ'ಯ ಬೇರೆಯೇ ವ್ಯಾಖ್ಯಾನವನ್ನು-ತನಗೆ ಸೂಕ್ತ ಕಂಡಂತಹುದನ್ನು-ಆಧರಿಸಿದ ಅಭಿವೃದ್ಧಿ ಮಾದರಿಯ ಮೇಲೆ ಕಟ್ಟಬೇಕಾದ ಹೊಸ ವ್ಯವಸ್ಥೆಗಾಗಿ ಹೋರಾಟ ರೂಪಿಸಬೇಕಾಗುತ್ತದೆ.

ಇದು ಸಾಧ್ಯವೇ?ಸಾರಾಸಗಟಾಗಿ ಮೀಸಲಾತಿ ಪರ ವಾದಿಸುವವರು ಯೋಚಿಸಬೇಕು. ಸಾಧ್ಯವಿಲ್ಲವೆಂದಾದರೆ, ಈವರೆಗಿನ ಅನುಭವದ ಆಧಾರದ ಮೇಲೆ ಒಟ್ಟಾರೆ ಸಮಾಜ ಹಾಗೂ ರಾಷ್ಟ್ರದ ಹಿತ ದೃಷ್ಟಿಯಿಂದ ಮೀಸಲಾತಿ ನೀತಿಯ ಇಂದಿನ ಗೊತ್ತು-ಗುರಿ ಹಾಗೂ ಸ್ವರೂಪಗಳನ್ನು ಮರುವಿಮರ್ಶೆಗೆ ಒಳಪಡಿಸಬೇಕು. ಈ ಮರು ವಿಮರ್ಶೆಯಲ್ಲಿ ಸದ್ಯದ ಮೀಸಲಾತಿ ನೀತಿಯು, ಮೀಸಲಾತಿಯನ್ನು ಅಗತ್ಯಗೊಳಿಸಿದ ಜಾತಿ ಪದ್ಧತಿಯನ್ನು ನಾಶಮಾಡಹೊರಟಿದೆಯೋ ಅಥವಾ ಅದನ್ನು ಇನ್ನೊಂದು ರೂಪದಲ್ಲಿ ಪೋಷಿಸ ಹೊರಟಿದೆಯೋ; ಸಮಾಜದ-ಕ್ರಿಯಾಶೀಲತೆಯ-ಒಟ್ಟು ದಕ್ಷತೆಯನ್ನು ಹೆಚ್ಚಿಸುತ್ತಿದೆಯೋ ಎಂಬುದರ ಪರಿಶೀಲನೆಯೂ ಒಳಗೊಂಡಿರಬೇಕು. ಇಂತಹ ಪರಿಶೀಲನೆಯ ಆಧಾರದ ಮೇಲೆ ಮೀಸಲಾತಿ ನೀತಿಯನ್ನು ಪುನರ್ರೂಪಿಸಬೇಕು.

ಹಾಗೇ, ಸದ್ಯದ ಚರ್ಚೆಯನ್ನು ಹುಟ್ಟು ಹಾಕಿರುವ ಮೀಸಲಾತಿ ವಿಸ್ತರಣೆ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬಹುದಾದ ರೀತಿ ನೀತಿಗಳ ಅಧ್ಯಯನ ಮಾಡುತ್ತಿರುವ ವೀರಪ್ಪ ಮೊಯ್ಲಿ ಸಮಿತಿಯು, ಎಲ್ಲರನ್ನೂ ಮೆಚ್ಚಿಸಲು ಹೋಗಿ-ಸೂಕ್ತ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗದೆಯೇ ಮತ್ತು ಪ್ರಸ್ತಾಪಿತ ಮೀಸಲಾತಿಯ ಅನುಷ್ಠಾನಕ್ಕಾಗಿಯೇ, ಶಿಕ್ಷಣ ಸಂಸ್ಥೆಗಳಲ್ಲಿನ ಸೀಟುಗಳನ್ನು ಹೆಚ್ಚಿಸಿ-ಶಿಕ್ಷಣದ

ಗುಣಮಟ್ಟವನ್ನು ಕೆಡಿಸುವಂತಹ ಕ್ರಮಗಳನ್ನು ಶಿಫಾರ್ಸು ಮಾಡಿ, ಮೀಸಲಾತಿ ನೀತಿಯನ್ನು ಇನ್ನಷ್ಟು ವಿವಾದಾಸ್ಪದಗೊಳಿಸದಂತೆ ನೋಡಿಕೊಳ್ಳಬೇಕಾಗಿದೆ.

('ಸುಧಾ' ೨೯ ಜೂನ್, ೨೦೦೬)

ಅನುಬಂಧ : 'ಕೆನೆಪದರ'ದ ಪ್ರಶ್ನೆ

ಮೀಸಲಾತಿಗೆ ಸಂಬಂಧಪಟ್ಟಂತೆ ಸರ್ವೋನ್ನತ ನ್ಯಾಯಾಲಯವು ೨೦೦೬ರ ಅಕ್ಟೋಬರ್ ರಂದು ಪರಿಶಿಷ್ಟಜಾತಿ-ಪಂಗಡಗಳ ಮೀಸಲಾತಿಯಲ್ಲೂ, ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಿರುವಂತೆ ' ಕೆನೆಪದರ'ದ (ಸಾಮಾಜಿಕ- ಶೈಕ್ಷಣಿಕದ ಜೊತೆಗೇ ಆರ್ಥಿಕ ಮಾನದಂಡದ) ತತ್ವವನ್ನು ಜಾರಿಗೆ ತರಬೇಕೆಂದು ಕೊಟ್ಟಿರುವ ತೀರ್ಪು ಮತ್ತೆ ವಿವಾದಗಳನ್ನೆಬ್ಬಿಸಿದೆ. ಅನೇಕ ರಾಜಕೀಯ ಪಕ್ಷಗಳು, ಜಾತಿಗುಂಪುಗಳು ಹಾಗೂ ಸಾಮಾಜಿಕ ನ್ಯಾಯ ಚಳುವಳಿಯ ನಾಯಕರನೇಕರು, ಈ ತೀರ್ಪನ್ನು ಟೀಕಿಸಿ, ವಿರೋಧಿಸಿ ಹೇಳಿಕೆಗಳನ್ನು ನೀಡುತ್ತಿದ್ದಾರಲ್ಲದೆ; ಸರ್ಕಾರ ಈ ತೀರ್ಪನ್ನು ಮಾನ್ಯ ಮಾಡುವ ಅಗತ್ಯವಿಲ್ಲವೆಂದೂ, ಮಾನ್ಯ ಮಾಡಿದಲ್ಲಿ ಮೀಸಲಾತಿಯ ಅರ್ಥೋದ್ದೇಶಗಳಿಗೇ ಭಂಗ ಬರುವುದೆಂದೂ ವಾದಿಸುತ್ತ ಅಚ್ಚರಿ ಹುಟ್ಟಿಸಿದ್ದಾರೆ. ಅವರ ವಾದಗಳ ನೆಲೆಗಳಲ್ಲಿ ಕೆಲವು ತಾತ್ವಿಕವಾದುದಾದರೆ, ಮತ್ತೆ ಕೆಲವು ತಾಂತ್ರಿಕವಾದವುಗಳಾಗಿವೆ. ತಾತ್ವಿಕವಾದ ವಾದಗಳಲ್ಲಿ ಮುಖ್ಯವಾದುದೆಂದರೆ-

೧. ಹಿಂದುಳಿದ ವರ್ಗಗಳನ್ನು ಸಾಮಾಜಿಕ ಹಾಗೂ ಶೈಕ್ಷಣಿಕ ಹಿಂದುಳಿದಿರುವಿಕೆ ಆಧಾರದ ಮೇಲೆ ನಿರೂಪಿಸಲಾಗಿರುವುದರಿಂದ, ಆ ವರ್ಗಗಳಲ್ಲಿ ಆ ಅಂಶಗಳ ಆಧಾರದ ಮೇಲೆ ಮೇಲ್ಮುಖ ಚಲನೆ ಸಾಧ್ಯವಾಗಿ 'ಕೆನೆ ಪದರ' ಸೃಷ್ಟಿಯಾಗುವ ಸಾಧ್ಯತೆ ಇರುವಂತೆ, ಪರಿಶಿಷ್ಟ ಜಾತಿ ಪಂಗಡಗಳ ವಿಷಯದಲ್ಲಿ ಅಂತಹ ಸಾಧ್ಯತೆಗೆ ಅವಕಾಶವೇ ಇಲ್ಲ. ಏಕೆಂದರೆ ಈ ಜಾತಿ-ಪಂಗಡಗಳು ನಿರೂಪಿತವಾಗಿರುವುದೇ ಅಸ್ಪೃಶ್ಯತೆ-ಪ್ರತ್ಯೇಕತೆಗಳೆಂಬ ಅಂಶಗಳ ಆಧಾರದ ಮೇಲೆ.

೨. 'ಕೆನೆ ಪದರ' ಷರತ್ತು ಜಾರಿಯಾದರೆ, ಮೀಸಲಾತಿಯನ್ನು ಆಡಳಿತ ದಕ್ಷತೆಗೆ ಧಕ್ಕೆಯಾಗದಂತೆ ಅನುಷ್ಠಾನಗೊಳ್ಳಬೇಕೆಂಬ ಸಾಂವಿಧಾನಿಕ ನಿರ್ದೇಶನಕ್ಕೆ ಭಂಗತಂದಂತಾಗುತ್ತದೆ.

೩. 'ಕೆನೆಪದರ'ದವರು ಅವಕಾಶವಿಹೀನರಾಗಿ, ಸಮಾನ ಅವಕಾಶದ ಸಾಂವಿಧಾನಿಕ ತತ್ವಕ್ಕೇ ಭಂಗ ಬಂದಂತಾಗುತ್ತದೆ.

ಇವುಗಳನ್ನು ಒಂದೊಂದಾಗಿ ನೋಡೋಣ. ಮೊದಲನೆಯ ವಾದವು

ಪರಿಶಿಷ್ಟರಲ್ಲಿ ಚಲನೆಯ ಸಾಧ್ಯತೆಯನ್ನೇ ಅಲ್ಲಗಳೆಯುತ್ತದೆ. ಇದು ಸಂವಿಧಾನವು ಮೀಸಲಾತಿ ತತ್ವವನ್ನು ಅಳವಡಿಸಿಕೊಂಡಿರುವುದರ ಉದ್ದೇಶವನ್ನೇ ಅಪ್ರಸ್ತುತಗೊಳಿಸಿ, ಮೀಸಲಾತಿಯನ್ನು ಪರಿಶಿಷ್ಟರಲ್ಲೇ ಒಂದು ಪ್ರತಿಷ್ಠಿತ ವರ್ಗದ ಸೃಷ್ಟಿ ಹಾಗೂ ವಿಸ್ತರಣೆಗಾಗಿ ಮಾತ್ರ ಬಳಕೆಯಾಗುವ ಶಾಶ್ವತ ಸೌಲಭ್ಯವನ್ನಾಗಿ ಪರಿವರ್ತಿಸುವ ಹುನ್ನಾರದಂತೆ ತೋರುತ್ತದೆ. ಮೀಸಲಾತಿಯ ಉದ್ದೇಶವೇ ಅವಕಾಶ ಹಾಗೂ ಪ್ರಾತಿನಿಧ್ಯದ ಅಸಮಾನತೆಗಳನ್ನು ನಿವಾರಿಸಲು ಅಸ್ಪೃಶ್ಯತೆ ಮತ್ತು ಪ್ರತ್ಯೇಕತೆಗಳ ಗೋಡೆಗಳನ್ನೊಡೆದು ಸಮಾಜದ ಏಕೀಕರಣವನ್ನು ಸಾಧಿಸುವುದಾಗಿರುವಾಗ, ಅದರ ಸಾಧ್ಯತೆಯನ್ನೇ ನಿರಾಕರಿಸುವುದು ಮೀಸಲಾತಿ ತತ್ವದ ಸ್ವಯಂ ವಿರೋಧವಾಗುತ್ತದೆ.

ಇನ್ನು 'ಕೆನೆಪದರ'ದವರನ್ನು ಬಿಟ್ಟರೆ ಆಡಳಿತ ದಕ್ಷತೆಗೆ ಧಕ್ಕೆಯುಂಟಾಗುತ್ತದೆ ಎಂಬ ವಾದವು ಮೀಸಲಾತಿ ತತ್ವಮೀಮಾಂಸೆಗೇ ವಿರುದ್ಧವಾಗಿದೆ. ಏಕೆಂದರೆ ಮೀಸಲಾತಿ ಮೀಮಾಂಸೆಯ ಮೊದಲ ತತ್ವವೇ 'ಅವಕಾಶವೇ ದಕ್ಷತೆಯ ಮೊದಲ ಮೆಟ್ಟಿಲು' ಎಂಬುದಾಗಿದೆ. ಕೆಲವರಿಗೆ ಪರೋಕ್ಷವಾಗಿ ಅವಕಾಶವನ್ನೇ ನಿರಾಕರಿಸುವ ಮೂಲಕ ಈ ವಾದ, ಸಮಾನ ಅವಕಾಶದ ತತ್ವವನ್ನು ಪ್ರತ್ಯಕ್ಷವಾಗಿ ನಿರಾಕರಿಸುತ್ತದೆ. ಈ ವಾದದ ಪ್ರಕಾರ ಈವರೆಗಿನ ಮೀಸಲಾತಿ 'ಕೆನೆಪದರ'ಕ್ಕೇ ಲಭ್ಯವಾಗಿದ್ದು, ಆ ಕಾರಣ ಆಡಳಿತ ದಕ್ಷತೆಗೆ ಧಕ್ಕೆಯಾಗಿಲ್ಲ! ಇದು ಈವರೆಗಿನ ಮೀಸಲಾತಿ ತತ್ವದ ಕ್ರಿಯಾಶೀಲತೆಯನ್ನೇ ವಿರೋಧಾಭಾಸಕ್ಕೆ ಈಡು ಮಾಡುತ್ತದೆ.

ಕೊನೆಯದಾಗಿ,'ಕೆನೆಪದರ'ದವರು ಅವಕಾಶವಿಹೀನರಾಗುವ ವಿಷಯ.ಏಕೆ ಅವರಿಗೆ ಶೇ.೫೦ ರಷ್ಟಿರುವ ಸಾರ್ವತ್ರಿಕ ಸ್ಪರ್ಧೆಯಲ್ಲಿ ಅವಕಾಶ ನಿಷೇಧಿಸಲಾಗಿದೆಯೇ? ಇಲ್ಲವಲ್ಲ!

ಇನ್ನು ತಾಂತ್ರಿಕ ನೆಲೆಯ ವಾದಗಳಿಗೆ ಬಂದರೆ, ಮುಖ್ಯವಾದದ್ದು: ಹಿಂದುಳಿದ ವರ್ಗಗಳಿಗೆ 'ಕೆನೆಪದರ' ತತ್ವವನ್ನು ಅನುಸರಿಸಬೇಕೆಂಬ ತೀರ್ಪುಕೊಟ್ಟ ಈ ಹಿಂದಿನ ಪೀಠವು, ಸದ್ಯದ ತೀರ್ಪುಕೊಟ್ಟಿರುವ ಪೀಠಕ್ಕಿಂತ ದೊಡ್ಡದಿದ್ದುದರಿಂದ ಮತ್ತು ಅದು ತನ್ನ ತೀರ್ಪು ಪರಿಶಿಷ್ಟ ಜಾತಿ -ಪಂಗಡಗಳಿಗೆ ಅನ್ವಯವಾಗದು ಎಂದು ಹೇಳಿರುವುದರಿಂದ, ಸದ್ಯದ ತೀರ್ಪು ತಪ್ಪಿನಿಂದ ಕೂಡಿದೆ ಎಂಬುದು. ಆದರೆ ಮೊದಲ ತೀರ್ಪು ಒಂದು ವಿಶಿಷ್ಟ ಪ್ರಕರಣ-ಸಂದರ್ಭಕ್ಕೆ ಸಂಬಂಧಪಟ್ಟುದುದು ಎಂಬುದನ್ನು ಮರೆತಂತೆ ತೋರುವ ಈ ವಾದವು, ಆ ಪೀಠ ತನ್ನ ತೀರ್ಪಿನ ಅನ್ವಯ ವ್ಯಾಪ್ತಿಯನ್ನು ಸ್ಪಷ್ಟೀಕರಿಸಲು ಮಾತ್ರ ಹೇಳಿದ ಮಾತನ್ನು ಸಾರ್ವತ್ರಿಕ ತೀರ್ಪನ್ನಾಗಿ ಪರಿವರ್ತಿಸಲು ಯತ್ನಿಸುತ್ತಿರುವಂತಿದೆ. ಹಾಗಾಗಿ ಈ ವಾದ -ದೊಡ್ಡ, ಚಿಕ್ಕಪೀಠದ ಮಾತೂ ಸೇರಿದಂತೆ- ಅಸಂಬದ್ಧವಾಗಿ ತೋರುತ್ತದೆ.

'ಕೆನೆಪದರ' ತತ್ವದ ವಿರೋಧಿಗಳು ಮಂಡಿಸುತ್ತಿರುವ ಮತ್ತೊಂದು ವಾದವೆಂದರೆ, ಸಂವಿಧಾನದ ೩೪೧ ಹಾಗೂ ೩೪೨ನೇ ಅನುಚ್ಛೇದಗಳ ಪ್ರಕಾರ ಪರಿಶಿಷ್ಟ ಜಾತಿ ಪಂಗಡಗಳ ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರ ಸಂಸತ್ತಿಗೆ ಮಾತ್ರ ಇರುವುದರಿಂದ, ಸರ್ವೋನ್ನತ ನ್ಯಾಯಾಲಯದ ತೀರ್ಪನ್ನು ಜಾರಿಗೆ ತರುವ ಜರೂರತ್ತು ಸರ್ಕಾರಕ್ಕೆ ಇರಬೇಕಾದ್ದಿಲ್ಲ ಎಂಬುದು. ಇದು ತೀರ್ಪನ್ನು ಉದ್ದೇಶಪೂರ್ವಕವಾಗಿ ಎಂಬಂತೆ, ತಿರುಗುಮುರುಗಾಗಿ ನೋಡುವ ಹಾಗೂ ಆ ಮೂಲಕ ನ್ಯಾಯಾಂಗ ಹಾಗೂ ಶಾಸಕಾಂಗಗಳ ನಡುವೆ ಸಲ್ಲದ ಸಂಘರ್ಷವನ್ನುಂಟು ಮಾಡುವ ಪ್ರಯತ್ನ. ಸರ್ವೋನ್ನತ ನ್ಯಾಯಾಲಯವನ್ನು ನಮ್ಮ ಸಂವಿಧಾನದ ಪ್ರಕಾರ ಶಾಸನ ಪರಾಮರ್ಶೆಯ ಅಂತಿಮ ವೇದಿಕೆಯೆಂದು ಒಪ್ಪಿಕೊಂಡಿರುವುದರಿಂದ, ಅದರ ತೀರ್ಪನ್ನು ಗೌರವದಿಂದ ಪರಿಶೀಲಿಸಬೇಕಾದದ್ದು ಸಂವಿಧಾನಿಕ ಧರ್ಮ. ಸಂಸತ್ತು ಅದನ್ನು ಪಾಲಿಸುವ ಜರೂರತ್ತು ಇಲ್ಲವೆಂದು ಹೇಳುವುದು ಸಂವಿಧಾನದ ಚೇತನದಲ್ಲೇ ಅಪನಂಬಿಕೆಯನ್ನು ಬಿತ್ತುವಂತಹ ಪ್ರಯತ್ನವಾಗುತ್ತದೆ. ಇದು ಒಟ್ಟಾರೆಯಾಗಿ ಯಾವ ಮೀಸಲಾತಿ ತತ್ವದಿಂದಾಗಿ ಸಾಂಪ್ರದಾಯಿಕ ಸಾಮಾಜಿಕ ಪಟ್ಟಭದ್ರ ಹಿತಾಸಕ್ತಿಗಳಿಂದ ರಕ್ಷಣೆ ಪಡೆದರೋ, ಅವರೇ ಇಂದು ಹೊಸ ಸಾಮಾಜಿಕ ಪಟ್ಟಭದ್ರ ಹಿತಾಸಕ್ತಿಗಳಾಗಿ ಮೂಡಿ ನಿಂತಿರುವ ದುರಂತ ಚಿತ್ರವಾಗಿದೆ. ಮೀಸಲಾತಿ ತತ್ವವನ್ನು ಚಲನಶೀಲಗೊಳಿಸಿ, ಅದರ ಆತ್ಯಂತಿಕ ಗುರಿಯನ್ನು ಸಾಧಿಸುವಂತೆ ಮಾಡುವ ರಾಷ್ಟ್ರೀಯ ಕರ್ತವ್ಯವನ್ನೇ ಮರೆತಂತಿರುವ ಇವರು, ಅಂತಿಮವಾಗಿ ಮೀಸಲಾತಿ ತತ್ವದ ಸಾರ್ವತ್ರಿಕ ವಿಶ್ವಾಸಾರ್ಹತೆಯನ್ನು ಹಾಳುಗೆಡಹುವುದರಲ್ಲಿ ಯಶಸ್ವಿಯಾದರೆ ಆಶ್ಚರ್ಯವೇನಿಲ್ಲ.

'ಕೆನೆಪದರ' ತತ್ವದ ನಿರ್ಬಂಧಗಳಿಂದಾಗಿ ಮೀಸಲು ಸ್ಥಾನಗಳು ಬಹುಕಾಲ ಖಾಲಿ ಉಳಿದು ಹೋಗುವ ಆತಂಕವೇನಾದರೂ ಈ 'ಕೆನೆಪದರ'ವಿರೋಧಿಗಳಲ್ಲಿದ್ದರೆ, ಹಾಗೆ ಉಳಿದು ಹೋಗದ ಹಾಗೆ ನೋಡಿಕೊಳ್ಳುವ ಉಪಕ್ರಮಗಳನ್ನು ಸೂಚಿಸುವುದು ಹೆಚ್ಚು ರಚನಾತ್ಮಕವಾದ ಪ್ರತಿಕ್ರಿಯೆ ಎನ್ನಿಸಿಕೊಳ್ಳುತ್ತದೆ. ಉದಾಹರಣೆಗೆ, ನೇಮಕಾತಿಯ ಮೊದಲ ಸುತ್ತಿನಲ್ಲಿ 'ಕೆನೆಪದರ' ದವರನ್ನು ಹೊರಗಿಟ್ಟು ನೋಡಿ, ನಂತರ ಅಗತ್ಯ ಬಿದ್ದರೆ ಒಂದು ಸೀಮಿತ ಅವಧಿಯೊಳಗೆ ಇನ್ನೊಂದು ಸುತ್ತಿನಲ್ಲಿ 'ಕೆನೆಪದರ'ದವರನ್ನೂ ನೇಮಕಾತಿಗೆ ಪರಿಗಣಿಸುವ ವ್ಯವಸ್ಥೆಯನ್ನು ಅಳವಡಿಸಬಹುದು. ಅಥವಾ 'ಕೆನೆಪದರ'ದಲ್ಲೇ ಎರಡು ಅಥವಾ ಮೂರು ವಿಭಾಗ ಮಾಡಿ, ಹಂತಾನುಹಂತವಾಗಿ ಈ ವಿಭಾಗಗಳನ್ನು, ಅಲಭ್ಯ ಅಭ್ಯರ್ಥಿಗಳು ಸ್ಥಾನಗಳನ್ನು ತುಂಬಲು, ಮೀಸಲಾತಿಗೆ ತೆರೆದಿಡಬಹುದು.

○

ವಂದೇಮಾತರಂ ಮತ್ತು ಸೆಕ್ಯುಲರಿಸಂ

ನಾವು ಇತ್ತೀಚಿನ ದಿನಗಳಲ್ಲಿ ನಮ್ಮದೇ ಆದ'ಸಾಮಾನ್ಯ ಭಾಷೆ'ಯಲ್ಲಿ ಮಾತನಾಡುವುದನ್ನು ಮರೆತಿದ್ದೇವೆ ಅನ್ನಿಸುತ್ತಿದೆ. ಬಾಯಿಬಿಟ್ಟರೆ ಬರುವುದು ನಾವು ನಂಬಿದ, ನಮ್ಮ ನಿಷ್ಠೆ ಇರುವ ರಾಜಕೀಯ ಪಕ್ಷದ ಪರಿಭಾಷೆಯೇ. ಆ ಪರಿಭಾಷೆಯೂ ಆ ಪಕ್ಷದ ತಾತ್ವಿಕತೆಯಿಂದ ಹುಟ್ಟಿದ್ದಲ್ಲ; ಬದಲಾಗಿ ಸದ್ಯದ ಪರಿಸ್ಥಿತಿಯಲ್ಲಿ ತನ್ನ ಎದುರಾಳಿ ಎನಿಸಿರುವ ರಾಜಕೀಯ ಪಕ್ಷದ ವಿಶ್ವಾಸಾರ್ಹತೆಯನ್ನು ನಾಶ ಮಾಡುವ ಗುರಿಯನ್ನಷ್ಟೇ ಹೊಂದಿದ ಪ್ರತಿಕ್ರಿಯಾತ್ಮಕ ಪರಿಭಾಷೆ ಅದು. ಇಂತಹ ಪರಿಭಾಷೆಯ ಬಳಕೆಯಿಂದ ಯಾವ ಚರ್ಚೆಯೂ ಬೆಳೆಯಲಾರದು; ಯಾವ ಸತ್ಯವನ್ನೂ ಬಿಚ್ಚಿಡಲಾಗದು. ಬದಲಾಗಿ ಸತ್ಯ ಮತ್ತಷ್ಟು ಮುಚ್ಚಿಹೋಗುವ ಸಂಭವವೇ ಹೆಚ್ಚು. ಇದಕ್ಕೆ ಉದಾಹರಣೆ, 'ವಂದೇ ಮಾತರಂ' ಬಗ್ಗೆ ಈಗ ನಾಡಿನಾದ್ಯಂತ ಹಿಂದೂ ರಾಷ್ಟ್ರೀಯವಾದಿ ಎಂದು ಹೇಳಲಾಗುವ ಬಿಜೆಪಿ ಮತ್ತು ಅದರ ಪರಿವಾರ ಹಾಗೂ ಸೆಕ್ಯುಲರ್ ಎಂದು ಹೇಳಲಾಗುವ ಕಾಂಗ್ರೆಸ್ ಮತ್ತು ಅದರ ಮಿತ್ರ(ಹಾಗೂ ಎಡಪಂಥೀಯ)ಪಕ್ಷಗಳ ನಡುವೆ ನಡೆಯುತ್ತಿರುವ ಪರೋಕ್ಷ ಚರ್ಚೆ.

ಮೊದಲಾಗಿ ಈ ಚರ್ಚೆಗೆ ಮೂಲಕಾರಣವಾದ ಸಂಗತಿಯೇ ಚರ್ಚಾರ್ಹವಾಗಿದೆ! ಇದೇ ಸೆಪ್ಟೆಂಬರ್ ೭ಕ್ಕೆ 'ವಂದೇ ಮಾತರಂ'ಗೆ ನೂರು ವರ್ಷವಂತೆ. ಯಾವ ಆಧಾರದ ಮೇಲೆ ಇದನ್ನು ನಿರ್ಧರಿಸಲಾಯಿತೋ ತಿಳಿಯದು. ಏಕೆಂದರೆ ಈ ಗೀತೆ ಒಳಗೊಂಡಿರುವ ಬಂಕಿಮಚಂದ್ರ ಚಟರ್ಜಿ ಅವರ ಬಂಗಾಳಿ ಕಾದಂಬರಿ ಮೊದಲ ಪ್ರಕಟವಾದದ್ದು ೧೮೮೨ರಲ್ಲಿ. ಆದರೆ ಈ ಗೀತೆಯನ್ನು ಕಾದಂಬರಿಯ ಭಾಗವಾಗಿ ಬರೆಯಲಾಗಲಿಲ್ಲ. ಅದಕ್ಕೆ ಆರು ವರ್ಷಗಳ ಮುಂಚೆಯೇ ಚಟರ್ಜಿ ಆ ಗೀತೆಯನ್ನು ಒಂದು ಸ್ವತಂತ್ರ ಭಕ್ತಿಗೀತೆಯಾಗಿ ಬರೆದು ಪ್ರಚುರಪಡಿಸಿದ್ದರು. ಅದು ಬಂಗಾಳಿ ಸಾರಸ್ವತ ಲೋಕದಲ್ಲಿ ಜನಪ್ರಿಯವಾದ ಪರಿಣಾಮವಾಗಿಯೇ ಏನೋ ಮತ್ತು ಆರು ವರ್ಷಗಳ ನಂತರ ತಾವು ಬರೆದ 'ಆನಂದ ಮಠ' ಕಾದಂಬರಿಯ ವಸ್ತುವಿಗೆ ಸೂಕ್ತವಾದುದು ಎಂದೆನ್ನಿಸಿಯೇ ಏನೋ, ಚಟರ್ಜಿ ಆ ಹಾಡನ್ನು ಆ ಕಾದಂಬರಿಯಲ್ಲಿ ಸ್ಫೂರ್ತಿ ಗೀತೆಯಾಗಿ ಬಳಸಿದರು. ಹೀಗಾಗಿ ಈ ಹಾಡಿಗೆ ಈಗ ೧೩೦ ವರ್ಷ. ಕಾದಂಬರಿಯನ್ನೇ ಲೆಕ್ಕಕ್ಕೆ ತೆಗೆದುಕೊಂಡರೆ, ೧೨೪ ವರ್ಷ. ಆದರೆ ಕೇಂದ್ರ ಮಾನವ ಸಂಪನ್ಮೂಲ ಸಚಿವ ಅರ್ಜುನ್‌ಸಿಂಗ್‌ರ ದಾಖಲೆಗಳ ಪ್ರಕಾರ ಈ ಗೀತೆಗೆ ಈಗ ಶತಮಾನೋತ್ಸವದ ಸಂಭ್ರಮ!

ಬಹುಶಃ ಗೀತೆ ಮೊದಲ ಬಾರಿಗೆ ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿ ಗೀತೆಯಾಗಿ ಬಳಕೆಯಾಗಿ ಒಂದುನೂರು ವರ್ಷಗಳಾಗಿರುವ ಸಂದರ್ಭವಿರಬಹುದು.(ಇದು ೧೯೦೬ರ ವಾರಾಣಾಸಿ ಕಾಂಗ್ರೆಸ್ ಸಮ್ಮೇಳನದಲ್ಲಿ ರವೀಂದ್ರನಾಥ ಠಾಕೂರರು ಈ ಗೀತೆಯನ್ನು ಹಾಡಿದ್ದರ ಶತಮಾನೋತ್ಸವವೆಂದೂ ಹೇಳಲಾಗುತ್ತದೆ.) ಒಂದು ನೂರು ವರ್ಷಗಳ ಹಿಂದಷ್ಟೆ(೧೯೦೮)ಪ್ರಥಮ ಬಾರಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಹಾಡಿನ ಬಳಕೆಯ ಬಗ್ಗೆ ಮುಸ್ಲಿಂ ಲೀಗ್ ತನ್ನ ಆಕ್ಷೇಪಣೆಯನ್ನು ವ್ಯಕ್ತಪಡಿಸಿತು. ಆದರೆ ಯಾರೂ ಇದನ್ನು ದಾಖಲೆಗಳೊಂದಿಗೆ ಸ್ಪಷ್ಟಗೊಳಿಸುವ ಗೋಜಿಗೆ ಹೋಗಿಲ್ಲ. ಬಿಜೆಪಿಯೊಂದಿಗೆ ರಾಷ್ಟ್ರಭಕ್ತಿ ಮೆರೆಯುವ ಸ್ಪರ್ಧೆಯ ತುರುಸಿನಲ್ಲಿ ಅರ್ಜುನ್ ಸಿಂಗ್‌ರಿಗೆ ಇದೆಲ್ಲ ಅಗತ್ಯವಾಗಿಯೇ ಕಂಡಿಲ್ಲ!

ಅರ್ಜುನ ಸಿಂಗರೇನೋ ರಾಷ್ಟ್ರಭಕ್ತಿ ಮೆರೆಯುವ ಹುರುಪಿನಲ್ಲಿ, ಸೆ.೭ರಂದು ರಾಷ್ಟ್ರದ ಎಲ್ಲಶಾಲೆಗಳಲ್ಲೂ 'ವಂದೇ ಮಾತರಂ' ಹಾಡಬೇಕು ಎಂಬ ಆದೇಶ ಹೊರಡಿಸಿದರು. ಆದರೆ ಈ ಆದೇಶದ ಬೆನ್ನಿಗೇ ಕೆಲವು ಮುಸ್ಲಿಂ ಧಾರ್ಮಿಕ ನಾಯಕರಿಂದ ಅಪಸ್ವರಗಳೂ ಕೇಳ ಹೊರಟವು. ಇದಕ್ಕೊಂದು ಹಿನ್ನೆಲೆಯೂ ಇತ್ತು. ೧೯೯೮ರಲ್ಲಿ ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ 'ವಂದೇಮಾತರಂ' ಗೀತೆಯನ್ನು ರಾಜ್ಯದ ಎಲ್ಲ ಶಾಲೆಗಳಲ್ಲೂ ಪ್ರತಿದಿನ ಹಾಡುವುದನ್ನು ಕಡ್ಡಾಯಗೊಳಿಸುವ ಆದೇಶ ಹೊರಡಿಸಿ, ಆಗಿನ ಪ್ರಧಾನಿ ವಾಜಪೇಯಿಯವರ ಮಧ್ಯಸ್ಥಿಕೆಯಲ್ಲಿ ಅದನ್ನು ವಾಪಸ್ ಪಡೆದಿತ್ತು. ಆಗ ಎತ್ತಿದ್ದ ಆಕ್ಷೇಪಣೆಗಳನ್ನೇ ಈಗಲೂ ಮುಸ್ಲಿಂ ಧಾರ್ಮಿಕ ನಾಯಕರು ಪುನರುಚ್ಚರಿಸುತ್ತಿದ್ದಾರೆ. ಅರ್ಜುನ್‌ಸಿಂಗ್‌ರೇನೋ ಈಗ ತಮ್ಮ ಆದೇಶದಲ್ಲಿ ಹಾಡುವುದು ಕಡ್ಡಾಯವೆಂದು ಹೇಳಿಲ್ಲ ಎಂದು ಸಮಜಾಯಿಷಿ ನೀಡಿ, ರಾಷ್ಟ್ರಭಕ್ತಿಯ ಜೊತೆಗೆ ಸ್ವಲ್ಪ ಸೆಕ್ಯುಲರಿಸಂನ್ನೂ ಬೆರೆಸಿ ಕಾಂಗ್ರೆಸ್ ನಿಲುವನ್ನು ಬ್ಯಾಲೆನ್ಸ್ ಮಾಡಲು ಹೊರಟಿದ್ದಾರೆ. ಆದರೆ ತಮ್ಮ ನಿಲುವಿನ ಬಗ್ಗೆ ತಮಗೇ ನಂಬಿಕೆ ಅಥವಾ ಭರವಸೆ ಇಲ್ಲದ್ದನ್ನು ಸೂಚಿಸುವ ಈ ಸಮಜಾಯಿಷಿ ಹುಟ್ಟು ಹಾಕಿರುವ ರಾಜಕಾರಣ, ಎಷ್ಟು ಅಪಾಯಕಾರಿ ಎಂಬುದರ ಪರಿವೆಯೇ ಅವರಿಗೆ ಇದ್ದಂತಿಲ್ಲ.

ದೆಹಲಿಯ ಷಾಹಿ ಇಮಾಂ 'ವಂದೇ ಮಾತರಂ' ಹಾಡುವುದು ಇಸ್ಲಾಂಗೆ ಬಗೆದ ದ್ರೋಹವೆಂದು ಘೋಷಿಸಿದ್ದಾರೆ. ಹೈದರಾಬಾದ್‌ನ ಇಬ್ಬರು ಮೌಲ್ವಿಗಳು, ಅದೆಷ್ಟೇ ಒಳ್ಳೆಯ ಗುಣಮಟ್ಟದ ಶಾಲೆಯಾಗಿದ್ದರೂ ಅಲ್ಲಿ 'ವಂದೇ ಮಾತರಂ' ಹಾಡುವಂತಿದ್ದರೆ, ಅಂತಹ ಶಾಲೆಗಳಿಂದ ನಮ್ಮ ಮಕ್ಕಳನ್ನು ಬಿಡಿಸಿಕೊಂಡು ಬರಲು ಸೂಚನೆ(ಫತ್ವಾ) ನೀಡಿದ್ದಾರೆ. ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಸದಸ್ಯರೊಬ್ಬರು- ಅವರು ಆಧುನಿಕ ವಿದ್ಯೆ ಪಡೆದವರು-ಪತ್ರಿಕೆಯೊಂದರಲ್ಲಿ ಪ್ರಕಟವಾದ 'ವಂದೇ ಮಾತರಂ' ವಿವಾದ ಕುರಿತ ವಿಶ್ಲೇಷಣಾತ್ಮಕ ಲೇಖನವು, ಲೇಖನದ ಜೊತೆಗೆ ಪ್ರಕಟವಾಗಿರುವ ಭಾರತಮಾತೆಯ

ಚಿತ್ರದ ಕಾರಣದಿಂದಾಗಿ ಮೈಲಿಗೆಗೊಂಡಿದೆ ಎಂದು ಟಿ.ವಿ.ಸಂದರ್ಶನವೊಂದರಲ್ಲಿ ಹೇಳುತ್ತಾರೆ.

ಬಿಜೆಪಿಯವರಂತೂ ರಾಷ್ಟ್ರಭಕ್ತಿಯು 'ವಂದೇ ಮಾತರಂ'ನಲ್ಲಿ ಮಾತ್ರ ಅಡಗಿರುವಂತೆ, ಮುಸ್ಲಿಂ ಧಾರ್ಮಿಕ ನಾಯಕರ ಅಸಮಾಧಾನವನ್ನು ಇಡೀ ಮುಸ್ಲಿಂ ಸಮಾಜದ ಮೇಲೆ ಹೊರಿಸಿ, ತನ್ನ ಹಿಂದೂ ರಾಷ್ಟ್ರೀಯವಾದಿ ರಾಜಕಾರಣ ಕುರಿತು ಇತ್ತೀಚೆಗೆ ತನ್ನಲ್ಲೇ ಉಂಟಾಗಿದ್ದ ಕೆಲವು ಅಪನಂಬಿಕೆಗಳನ್ನು ಪರಿಹರಿಸಿಕೊಳ್ಳಲು ಹಾತೊರೆಯುತ್ತಿದೆ. ಹಾಗಾಗಿಯೇ ಅದು ಈಗ ತಾನು ಆಳುತ್ತಿರುವ ರಾಜ್ಯಗಳಲ್ಲಿ 'ವಂದೇ ಮಾತರಂ' ಗೀತೆಯನ್ನು ಶಾಲೆಗಳಲ್ಲಿ ಕಡ್ಡಾಯ ಮಾಡಿ ಆದೇಶ ಹೊರಡಿಸಿದೆ. ಈ ಗೊಂದಲದ ಮಧ್ಯೆ ಎಡಪಂಥೀಯರೆನಿಸಿಕೊಂಡ ಕೆಲವರು ತಮ್ಮ ಉಗ್ರ ಕ್ರಾಂತಿಕಾರಕತೆಯ ಅಂಗವಾಗಿ ಅಲ್ಪ ಸಂಖ್ಯಾತರ ಹಿತರಕ್ಷಣೆಗೆ ಮುಂದಾಗುವ ಉತ್ಸಾಹದಲ್ಲಿ ಸೆಕ್ಯುಲರಿಸಂ ಹೆಸರಿನಲ್ಲಿ 'ವಂದೇ ಮಾತರಂ'ಹಾಡಿನ ಬಗ್ಗೆಯೇ ಜನರಲ್ಲಿ ತಪ್ಪು ತಿಳುವಳಿಕೆ ಉಂಟು ಮಾಡಲು ಯತ್ನಿಸಿರುವುದು ವಿಷಾದಕರ. 'ನಮ್ಮ ನಾಡು' ಪತ್ರಿಕೆಯ ಇದೇ ಸೆಪ್ಟೆಂಬರ್ ತಿಂಗಳ ನಾಲ್ಕರ ಸಂಚಿಕೆಯಲ್ಲಿ ಪ್ರಕಟವಾದ ಆರ್. ರಾಮಕೃಷ್ಣ ಎಂಬುವವರ 'ವಂದೇ ಮಾತರಂ ವಕ್ತಾರರು' ಎಂಬ ಶೀರ್ಷಿಕೆಯ ಲೇಖನ ಇದಕ್ಕೊಂದು ಉದಾಹರಣೆಯಾಗಿದೆ.(ಇಂತಹುದೇ ಲೇಖನಗಳು 'ಅಗ್ನಿ' ವಾರಪತ್ರಿಕೆ ಹಾಗೂ 'ಸಂವಾದ' ಮಾಸಿಕದಲ್ಲೂ ಪ್ರಕಟವಾಗಿವೆ.)

ಈ ಸಂಬಂಧ ಮೊದಲು ಸ್ಪಷ್ಟಪಡಿಸಬೇಕಾದದ್ದು 'ವಂದೇ ಮಾತರಂ' ಗೀತೆಗೆ 'ಆನಂದ ಮಠ' ಕಾದಂಬರಿಯ ಹೊರತಾಗಿಯೂ, ಅದು ಕಾದಂಬರಿ ರಚನೆಗೆ ಮುನ್ನವೇ ರಚಿತವಾಗಿ ಜನಪ್ರಿಯವಾಗಿದ್ದುದರಿಂದ, ಒಂದು ಸ್ವತಂತ್ರ ಅಸ್ತಿತ್ವವಿದೆ. ಅದು ಬಳಕೆಯಾಗಿರುವ 'ಆನಂದ ಮಠ', ಭಾರತವು ಒಂದು ರಾಷ್ಟ್ರವಾಗಿ (ನೇಷನ್ ಸ್ಟೇಟ್ ಅನ್ನುವ ಅರ್ಥದಲ್ಲಿ) ಕಲ್ಪನೆಗೆ ಬರುವ ಮುನ್ನವೇ ರಚಿತವಾದ ಕೃತಿಯಾಗಿದ್ದು, ಮುಘಲರ ಆಳ್ವಿಕೆಯ ಕೊನೆಯ ಘಟ್ಟದ ರಾಜಕೀಯ ಸ್ಥಿತ್ಯಂತರವನ್ನು ಆಗಿನ ಬಂಗಾಳದ ಸಂದರ್ಭದಲ್ಲಿ ಚಿತ್ರಿಸುವ ಒಂದು ಐತಿಹಾಸಿಕ ಕಾದಂಬರಿಯಾಗಿದೆ ಎಂಬುದನ್ನು. ಎರಡು ಸಂಸ್ಕೃತಿಗಳ ಘರ್ಷಣೆಯೇ ಇದರ ವಸ್ತು. ಹತ್ತೊಂಭತ್ತನೇ ಶತಮಾನದ ಬರವಣಿಗೆಯ ಭಾವನಾತ್ಮಕ ಶೈಲಿ ಹಾಗೂ ಐತಿಹಾಸಿಕ ಕಾದಂಬರಿ ಪ್ರಕಾರ ಬೇಡುವ ರಭಸಗತಿ, ಈ ಘರ್ಷಣೆಯನ್ನು ಅತಿ ಆವೇಶಭರಿತವನ್ನಾಗಿ ಮಾಡಿದೆಯಾದರೂ, ರಾಮಕೃಷ್ಣ ಅವರ ಲೇಖನ ತಿಳಿಸುವಂತೆ ಎಲ್ಲಿಯೂ ಮುಸ್ಲಿಮರ ರಕ್ತದೋಕುಳಿಯ ಸಂಭ್ರಮದಲ್ಲಿ ಹಿಂದೂಗಳು 'ವಂದೇ ಮಾತರಂ' ಹಾಡುವ ಹುಚ್ಚುತನ ಚಿತ್ರಿತವಾಗಿಲ್ಲ. ಎಲ್ಲ ಭಾರತೀಯ ಭಾಷೆಗಳ ಸಾಹಿತ್ಯದ ನವೋದಯಕ್ಕೆ ಸ್ಫೂರ್ತಿ ನೀಡಿದ ವಂಗ ನವೋದಯದ ಪಿತಾಮಹರೆನಿಸಿದ ಬಂಕಿಮರು ರೂಕ್ಷ ಲೇಖಕರಲ್ಲ.

ಕಾದಂಬರಿಯಲ್ಲಿ 'ವಂದೇ ಮಾತರಂ' ಬಳಕೆಯಾಗಿರುವುದು ಮುಸ್ಲಿಂ ಆಳ್ವಿಕೆ ವಿರುದ್ಧ ಹೋರಾಟಕ್ಕೆ ಜನರನ್ನು ಸಜ್ಜುಗೊಳಿಸುವ ಸ್ಫೂರ್ತಿಗೀತೆಯಾಗಿ. ಆದರೆ ಈ ಗೀತೆಯಲ್ಲೆಲ್ಲೂ, ರಾಮಕೃಷ್ಣ ಅವರು ತಿಳಿಸಿರುವಂತೆ ಮುಸ್ಲಿಮರನ್ನು ಮ್ಲೇಚ್ಛರು, ಯುವನರು ಎಂದು ಕರೆದು ಅವರನ್ನು ಕೊಚ್ಚು ಕಡಿ ಎಂದು ಕರೆ ಕೊಡುವ ಸಾಲುಗಳಿಲ್ಲ. ಇದ್ದರೆ ಯಾವ ಆವೃತ್ತಿಯಲ್ಲಿ ಎಂಬುದನ್ನು ದಯವಿಟ್ಟು ತೋರಿಸಿಕೊಡುವುದು ಒಳ್ಳೆಯದು. ಏಕೆಂದರೆ ಈ ಗೀತೆಯು ಕಾದಂಬರಿಗೆ ಹೊರತಾದ ಸ್ವತಂತ್ರ ರಚನೆಯಾಗಿದ್ದು, ತನ್ನ ಸಂದರ್ಭದ ರಾಷ್ಟ್ರ ಕಲ್ಪನೆ ಕುರಿತಾದ ಭಕ್ತಿ-ಶ್ರದ್ಧೆಗಳಷ್ಟೇ ಅಲ್ಲಿ ಪ್ರತಿಬಿಂಬಿತವಾಗಿವೆ. ವಿಷಾದವೆಂದರೆ, ಈ ಸಂದರ್ಭದಲ್ಲಿ ಈ ಗೀತೆಯನ್ನು ಬೆಂಬಲಿಸುವ ಮತ್ತು ಖಂಡಿಸುವ ಇಬ್ಬರಿಗೂ ಈ ಸಂಸ್ಕೃತ ಭೂಯಿಷ್ಠ ಗೀತೆಯ ಪೂರ್ಣಪಾಠದ ಪರಿಚಯವಾಗಲಿ, ಅದರ ವಿವಿಧ ಆವೃತ್ತಿ ಹಾಗೂ ಸಂಪಾದಿತ ರೂಪಗಳ ಹಿನ್ನೆಲೆಗಳಾಗಲೀ ತಿಳಿದಂತಿಲ್ಲ. ಆದರೆ ನಮ್ಮ 'ಪ್ರಗತಿಪರ'ರೆನ್ನಿಸಿಕೊಂಡ ಕೆಲ ಗೆಳೆಯರು ತಮ್ಮ ರಾಜಕೀಯಕ್ಕಾಗಿ ಈ ಗೀತೆಯನ್ನು ಖಂಡಿಸಲು ಮುಸ್ಲಿಂ ಧಾರ್ಮಿಕ ನಾಯಕರಿಗಿಂತ ಮುಂದೆ ಹೋಗಿದ್ದಾರೆ.... ನಮ್ಮದೇ ವಿಜಯನಗರ ಸಾಮ್ರಾಜ್ಯದ ಪತನದ ಕಥೆಯನ್ನು ಹಿಂದೂ-ಮುಸ್ಲಿಂ ಘರ್ಷಣೆಯ ಕಥೆಯನ್ನಾಗಿ ಪರಿಭಾವಿಸಬಾರದೆಂದು ಜನರಿಗೆ ವಿವೇಕ ಹೇಳುವ ನಾವು, ಬಂಗಾಳದ ಕಥೆ ಬಗ್ಗೆ ಏಕೆ ವಿವೇಕ ಕಳೆದುಕೊಂಡಂತೆ ವರ್ತಿಸುತ್ತೇವೆ? 'ಆನಂದ ಮಠ' ಕಾದಂಬರಿಯನ್ನು ಬಳಸಿಕೊಂಡು 'ವಂದೇ ಮಾತರಂ'ನ ಐತಿಹಾಸಿಕತೆಯನ್ನೇಕೆ ಅಲ್ಲಗಳೆಯಲು ಹೊರಟಿದ್ದೇವೆ? ಈ ಮೂಲಕ ನಾವು ಮಾಡುತ್ತಿರುವ ರಾಜಕಾರಣದ ಪರಿಣಾಮಗಳಾದರೂ ಎಂತಹವು? ಯೋಚಿಸಬೇಕಾಗಿದೆ.

ಇಪ್ಪತ್ತನೇ ಶತಮಾನದ ಆರಂಭದ ಹೊತ್ತಿಗೆ ವಂಗ ನವೋದಯ ಪ್ರಭಾವ ದೇಶಾದ್ಯಂತ ಆಗುತ್ತಿದ್ದಂತೆ, 'ವಂದೇ ಮಾತರಂ' ಆ ವೇಳೆಗೆ ಗರಿಗೆದರುತ್ತಿದ್ದ ಸ್ವಾತಂತ್ರ್ಯ ಆಂದೋಲನಕ್ಕೆ ಒಂದು ಘೋಷಣೆಯನ್ನು ನೀಡಿತಲ್ಲದೆ, ಸ್ಫೂರ್ತಿ ಗೀತೆಯೂ ಆಯಿತು. ಹಿಂದೂ-ಸಿಖ್- ಮುಸ್ಲಿಂ-ಕ್ರಿಶ್ಚಿಯರೆನ್ನದೇ ದೇಶಾದ್ಯಂತ ಜನಸ್ತೋಮ, ಈ ಘೋಷಣೆ-ಗೀತೆಯೊಂದಿಗೆ ಪ್ರಭಾತ್ ಫೇರಿಗಳನ್ನು ನಡೆಸುತ್ತಿತ್ತು. ಹಾಗೂ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಜನರನ್ನು ಸಂಘಟಿಸಲು ಇದೊಂದು ಭಾವನಾತ್ಮಕ ಸಾಧನವಾಗಿ ಪರಿಣಮಿಸಿತು. ೧೯೦೮ರಲ್ಲಿಯೇ ತನ್ನ ಅಮೃತಸರ ಸಮಾವೇಶದಲ್ಲಿ ಅಖಿಲ ಭಾರತ ಮುಸ್ಲಿಂ ಲೀಗ್ ಈ ಗೀತೆಯ ಬಗ್ಗೆ, ಅದರ ಧಾರ್ಮಿಕ ಸ್ವರೂಪದ ಬಗ್ಗೆ ಅಪಸ್ವರವೆತ್ತಿತ್ತಾದರೂ ಲೀಗ್ ಆಗಲಿ, ಸ್ವಾತಂತ್ರ್ಯ ಆಂದೋಲನದ ಮುಂಚೂಣಿಯಲ್ಲಿದ್ದ ಕಾಂಗ್ರೆಸ್ಸಾಗಲೀ, ಆಗ ಇನ್ನೂ ಪರಿಣಾಮಕಾರಿ ಸಂಸ್ಥೆ, ಸಂಘಟನೆಗಳಾಗಿ ಬೆಳೆದಿರಲಿಲ್ಲವಾದ್ದರಿಂದ ಅದೊಂದು ದೊಡ್ಡ ವಿವಾದವಾಗಿ ಬೆಳೆಯಲಿಲ್ಲ.

ಆದರೆ ಮೂವತ್ತರ ದಶಕದ ಹೊತ್ತಿಗೆ '*ವಂದೇ ಮಾತರಂ* 'ಬಳಕೆಯೂ,

ಕಾಂಗ್ರೆಸ್ಸೂ, ಮುಸ್ಲಿಂ ಲೀಗೂ ದೊಡ್ಡದಾಗಿ ಬೆಳೆದಿದ್ದವು. ಹಾಗಾಗಿ ವಿವಾದವೂ ದೊಡ್ಡದಾಯಿತು. ಆಗ ಕಾಂಗ್ರೆಸ್ ಈ ಬಗ್ಗೆ ನೆಹರೂ ಅಧ್ಯಕ್ಷತೆಯಲ್ಲಿ ಬಹುಧರ್ಮೀಯರ ಒಂದು ಪರಿಶೀಲನಾ ಸಮಿತಿ ನೇಮಿಸಿತು. ೧೯೩೭ರಲ್ಲಿ ಈ ಸಮಿತಿ 'ವಂದೇ ಮಾತರಂ'ಗೆ 'ಆನಂದ ಮಠ' ಕಾದಂಬರಿ ಹೊರತಾಗಿಯೂ ಸ್ವತಂತ್ರ ಅಸ್ತಿತ್ವವಿದೆಯೆಂದು ಘೋಷಿಸಿತಲ್ಲದೆ, ಈ ಗೀತೆ ಸ್ವಾತಂತ್ರ್ಯಾಂದೋಲನದ ಅವಿಭಾಜ್ಯ ಅಂಗವೆಂದು ಪರಿಗಣಿಸಿ, ಅದರ ಮೊದಲೆರಡು ಭಾಗಗಳು ಯಾವುದೇ ಧಾರ್ಮಿಕ ಸ್ವರೂಪ ಹೊಂದಿಲ್ಲವಾದ್ದರಿಂದ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಆ ಭಾಗಗಳನ್ನಷ್ಟೇ ಹಾಡಬಹುದಾಗಿದೆ ಎಂದು ಸಲಹೆ ಮಾಡಿತು. ಅಲ್ಲಿಯವರೆಗೆ ಕೂಡಾ, ಈ ಭಾಗಗಳು ಸಾಹಿತ್ಯಿಕವಾಗಿ ಲಲಿತ ಸುಂದರವೂ, ಸುಭಗವೂ ಮತ್ತು ಲಯ ಮಾಧುರ್ಯದಿಂದ ಕೂಡಿದ್ದು, ಮುಂದಿನ ಭಾಗಗಳು ಕ್ಲಿಷ್ಟವೂ ಬಹುಶಃ ಹಾಡಲು ಕಷ್ಟವೂ ಆಗಿದ್ದರಿಂದ, ಗೀತೆಯ ಮೊದಲೆರಡು ಭಾಗಗಳನ್ನಷ್ಟೇ ಹಾಡಲಾಗುತ್ತಿತ್ತು. ಈಗ ಅದಕ್ಕೆ ಅಧಿಕಾರ ಮುದ್ರೆ ಬಿದ್ದು ವಿವಾದಕ್ಕೆ ತೆರೆ ಎಳೆಯಲಾಯಿತಷ್ಟೆ.

ಸ್ವಾತಂತ್ರ್ಯ ಘೋಷಣೆಯ ಸಂದರ್ಭದಲ್ಲೂ ಸಂವಿಧಾನ ರಚನಾ ಸಭೆಯಲ್ಲಿ ಈ ಗೀತೆ ಚರ್ಚೆಗೆ ಬಂತು. ರಾಷ್ಟ್ರ ವಿಭಜನೆಯ ಕಹಿ ವಾತಾವರಣದ ಕಾರಣದಿಂದಾಗಿ ಆ ಹೊತ್ತಿಗಾಗಲೇ ವಾದ್ಯವೃಂದದಲ್ಲಿ 'ಭಾರತದ ರಾಷ್ಟ್ರೀಯ ಸೇನಾ(ಐ.ಎನ್.ಎ) ಗೀತೆ'ಯಾಗಿ ಜನಪ್ರಿಯವಾಗಿದ್ದ ಠಾಕೂರರ 'ಜನಗಣಮನ' ವನ್ನು ರಾಷ್ಟ್ರಗೀತೆಯನ್ನಾಗಿಯೂ, 'ವಂದೇ ಮಾತರಂ'ನ್ನು (ಮೊದಲೆರಡು ಭಾಗಗಳನ್ನಷ್ಟೇ ಒಳಗೊಂಡ ಸಂಪಾದಿತ ರೂಪವನ್ನು)ಸಮಾನ ಗೌರವದೊಡನೆ ರಾಷ್ಟ್ರೀಯ ಗೀತೆಯನ್ನಾಗಿಯೂ (*ನ್ಯಾಷನಲ್ ಸಾಂಗ್*)ಅಂಗೀಕರಿಸಲಾಯಿತು. ಆದುದರಿಂದ, ಅಧಿಕೃತವಾಗಿ ಈಗ 'ವಂದೇ ಮಾತರಂ' ಎಂದರೆ ಅದರ ಮೊದಲೆರಡು ಭಾಗಗಳಷ್ಟೇ. ರಾಷ್ಟ್ರದ ಅಧಿಕೃತ ಧ್ವನಿ ಎನಿಸಿರುವ ಆಕಾಶವಾಣಿ ಪ್ರತಿದಿನ ತನ್ನ ಕಾರ್ಯಕ್ರಮಗಳನ್ನು ಆರಂಭಿಸುವುದು 'ವಂದೇ ಮಾತರಂ'ನ ಈ ಆವೃತ್ತಿಯೊಂದಿಗೇ. ಮುಸ್ಲಿಂ ಧಾರ್ಮಿಕ ನಾಯಕರಿಗೆ ಈ ಬಗ್ಗೆಯೆಲ್ಲಾ ನಮ್ಮ 'ಪ್ರಗತಿಪರ' ಚಿಂತಕರಿಗಿಂತ ಹೆಚ್ಚು ಮಾಹಿತಿ ಇದ್ದಂತಿದೆ.

ಹಾಗಾಗಿಯೇ ಇವರು ಇಂದು ವಿರೋಧ ವ್ಯಕ್ತಪಡಿಸುತ್ತಿರುವುದು, 'ಆನಂದ ಮಠ' ಕಾದಂಬರಿಯ ಹಿನ್ನೆಲೆಯಲ್ಲಾಗಲೀ ಅಥವಾ ಗೀತೆಯ ಪೂರ್ಣಪಾಠದಲ್ಲಿ ದೇಶವನ್ನು ದುರ್ಗೆಯಾಗಿ ಕಂಡಿರುವ ಹಿಂದೂ ವಿಶಿಷ್ಟ ಗ್ರಹಿಕೆ ಬಗ್ಗೆಯಾಗಲೀ ಅಲ್ಲ. ಅವರ ವಿರೋಧವಿರುವುದು, ಗೀತೆಯ ಈ ಅಧಿಕೃತ ಆವೃತ್ತಿಯಲ್ಲೂ ದೇಶವನ್ನು 'ಮಾತೆ'ಯಾಗಿ ದೈವೀಕರಿಸಿ ಅದಕ್ಕೆ ವಂದನೆ ಸಲ್ಲಿಸುವ ಉಕ್ತಿ ಭಂಗಿ ಇರುವುದಕ್ಕಾಗಿ. ಏಕದೇವತಾ ಶ್ರದ್ಧೆಯ ಇಸ್ಲಾಂ ಧರ್ಮದಲ್ಲಿ ಅಲ್ಲಾಹ್ ಹೊರತಾಗಿ ಮಿಕ್ಕಾವ ದೈವಕ್ಕೂ

ವಂದನೆ ಸಲ್ಲಿಸುವ ಅವಕಾಶವಿಲ್ಲದಿರುವುದರಿಂದ, ಈ ಗೀತೆಯನ್ನು ಹಾಡುವುದು ಧರ್ಮದ್ರೋಹವೆನ್ನಿಸಿಕೊಳ್ಳುವುದು ಎಂಬುದು ಅವರ ವಾದ. ಸಾಮಾನ್ಯ ನೋಟಕ್ಕೆ, ನಾವು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವ ಹಾಗೂ ಸೆಕ್ಯುಲರ್ ತತ್ವಗಳ ಸಾಂವಿಧಾನಿಕ ನೆಲೆಯಲ್ಲಿ ಈ ವಾದ ಸರಿಯೆನಿಸುತ್ತದೆ. ಆದರೆ ಈ ವಾದದಲ್ಲಿರುವ ಜಡ ದೃಷ್ಟಿಕೋನವ ನ್ನೊಮ್ಮೆ ಭೇದಿಸಿ ನೋಡಿದಾಗ, ಇದು ಕೇವಲ ಮೊಂಡು ಹಠವೆನ್ನಿಸುತ್ತದೆ.

ಮುಸ್ಲಿಂ ಧರ್ಮದ ಪ್ರಕಾರ, ಇರುವುದೊಂದೇ ದೈವ-ಅಲ್ಲಾಹ್. ಈ ದೈವ ಅಮೂರ್ತ, ಅನಂತ. ಇಂತಹ ಅಮೂರ್ತ *ಅನಂತತೆ* , ಮುಸ್ಲಿಮರು ವಾಸಿಸುವ ಯಾವುದೇ ರಾಷ್ಟ್ರ ವ್ಯವಸ್ಥೆ (ಅಥವಾ ಜಾಗ ಎಂದೇ ಎನ್ನಿ)ಯೂ ಸೇರಿದಂತೆ ಸಕಲವನ್ನೂ ಒಳಗೊಂಡಿರಬೇಕಲ್ಲವೇ? ಹಾಗಿರುವಾಗ, ಇಂಥಹ ರಾಷ್ಟ್ರ ಕಲ್ಪನೆಗೆ ವಂದಿಸಿದರೆ ಆ ವಂದನೆ ಆ ಅಲ್ಲಾಹ್‌ಗೇ ಸಲ್ಲುವುದಲ್ಲವೇ? ಇನ್ನು ಮಾತೆ ಸ್ತ್ರೀಲಿಂಗವಾಗಿರುವುದರಿಂದ ಅಲ್ಲಾಹ್‌ಗೆ ಲಿಂಗಾರೋಪ ಮಾಡಲಾಗಿದೆ ಎನ್ನುವ ಕಾರಣಕ್ಕೂ ಕೆಲವರಿಂದ ವಿರೋಧ ವ್ಯಕ್ತವಾಗುತ್ತಿದೆ. ಗೀತೆ, ದೇಶದ ಪ್ರಕೃತಿ ಸೌಂದರ್ಯ ಹಾಗೂ ಭಾಷಾ ಮಾಧುರ್ಯಗಳನ್ನು ಕಾವ್ಯಭಾಷೆಯಲ್ಲಿ ಮಂಡಿಸುತ್ತಿರುವುದರಿಂದ, ಆ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಆ ವರ್ಣನೆಯ ವಸ್ತುವಿಗೆ ಸಹಜವಾಗಿಯೇ ಸ್ತ್ರೀಲಿಂಗ ಆರೋಪಿತವಾಗಿದೆ. ಧರ್ಮ ಈ ಕಾವ್ಯತರ್ಕವನ್ನೂ ಸಹಿಸಲಾಗದಷ್ಟು ಅಸೂಕ್ಷ್ಮವೂ, ಜಡವೂ ಆಗಿರಬಲ್ಲದೇ? ಇರಲಾರದು. ಆ ಅಸೂಕ್ಷ್ಮತೆ, ಜಡತೆ ವ್ಯಾಖ್ಯಾನಕಾರರದು- ಧಾರ್ಮಿಕ ನಾಯಕರದು. ಆದರೆ ಸೆಕ್ಯುಲರಿಸಂ ಹೆಸರಿನಲ್ಲಿ ಇದನ್ನು ಪ್ರೋತ್ಸಾಹಿಸುವುದು ಎಂತಹ ಮೂರ್ಖತನ!

ಮಹಮ್ಮದ್ ಪೈಗಂಬರರೇ ಜಗತ್ತಿನ ಕೊನೆಯ ಪ್ರವಾದಿ ಎಂದು ನಂಬಿರುವ ಇಸ್ಲಾಂ, ವ್ಯಾಖ್ಯಾನಗಳಿಗೆ ಅವಕಾಶವೀಯದೆ ಮುಚ್ಚಿಕೊಂಡ(closed)ಧರ್ಮ ಎನ್ನುವ ಸಾಮಾನ್ಯ ಅಭಿಪ್ರಾಯವಿದೆ. ಇದು ಇಸ್ಲಾಮನ್ನು ಅನ್ಯರ ಧರ್ಮವೆಂದು, ಹೊರಗಿನಿಂದಷ್ಟೇ ನೋಡುವವರ ಅಭಿಪ್ರಾಯವಿರಬಹುದು.ಆದರೆ ಇಸ್ಲಾಂನೊಳಗೇ ಎಲ್ಲ ಧರ್ಮಗಳಲ್ಲಿರುವಂತೆಯೇ ಉದಾರವಾದಿ ಹಾಗೂ ಜಡವಾದಿ ನಿರೂಪಣೆಗಳಲ್ಲದೆ, ಅವುಗಳ ನಡುವೆಯೇ ಅನೇಕ ಧಾರೆಗಳಿದ್ದು, ವೈವಿಧ್ಯಮಯ ಮುಸ್ಲಿಂ ಜೀವನ ಶೈಲಿ, ನಂಬಿಕೆಗಳಿಗೆ ಕಾರಣವಾಗಿದೆ. ಎಷ್ಟಾದರೂ ಧರ್ಮವನ್ನು ಬದುಕಲ್ಲಿ ಕಾರ್ಯಶೀಲಗೊಳಿಸಬೇಕಾದುದು, ಸ್ಪಂದನಶೀಲವಾದ ಜನಸಮೂಹವೇ ತಾನೇ? ಕಾಲ ದೇಶಗಳಿಗೆ ತಕ್ಕಂತೆ ಧರ್ಮ-ಸಂಹಿತೆ ಮರುವ್ಯಾಖ್ಯಾನಗೊಳ್ಳಬೇಕೆಂದು ಕುರ್ರಾನ್ ಗ್ರಂಥವೇ ತಿಳಿಸುತ್ತದೆಂದು ಹೇಳುವ ಉದಾರವಾದಿ ಧಾರೆಯೊಂದು -*ಇಜ್ತಿಹಾದ್*- ಇಸ್ಲಾಮೀ ಜಗತ್ತಿನಾದ್ಯಂತ ಕ್ರಿಯಾಶೀಲವಾಗಿದೆ. ಆದರೆ ಜಡವಾದಿ ಧಾರೆ ಇದನ್ನು 'ಪರಿಶುದ್ಧ ಇಸ್ಲಾಂ' ಹೆಸರಿನಲ್ಲಿ ದಮನ ಮಾಡುತ್ತಾ ಬರುತ್ತಿದೆ. ಈ ಪರಿಶುದ್ಧ ಇಸ್ಲಾಮಿಗಳ ಪ್ರಕಾರ ಕಾರ್ಗಿಲ್ ಯುದ್ಧ ಸಂದರ್ಭದಲ್ಲಿ 'ವಂದೇ ಮಾತರಂ' ಘೋಷಣೆ ಆಧರಿಸಿ ದೇಶಭಕ್ತಿ

ಗೀತೆಗಳನ್ನು ಬರೆದ ಜಾವೇದ್ ಅಖ್ತರ್ ನಿಜ ಮುಸ್ಲಿಮನೆ ಅಲ್ಲವಂತೆ!(ಹಾಗಾಗಿಯೇ ಆತ, ದೇವಬಂದಿ ಮೌಲ್ವಿಯು 'ವಂದೇ ಮಾತರಂ' ಹಾಡಬಾರದೆಂದರೆ ನಾನು ಅದನ್ನು ಎರಡು ಬಾರಿ ಹಾಡುತ್ತೇನೆ;ಸಂಘ ಪರಿವಾರದವರು ಹಾಡಲೇಬೇಕೆಂದು ಒತ್ತಾಯಿಸಿದರೆ ಒಮ್ಮೆಯೂ ಹಾಡುವುದಿಲ್ಲ ಎನ್ನುತ್ತಾನೆ!) ಇನ್ನು ಶತಮಾನಗಳ ಹಿಂದೆಯೇ ಸರಸ್ವತಿ ಸ್ತುತಿ ಬರೆದ ಬಿಜಾಪುರದ ಸುಲ್ತಾನನಿಂದ ಹಿಡಿದು, ಇತ್ತೀಚಿನ ನಮ್ಮ 'ನಟವರ ಗಂಗಾಧರ'ಖ್ಯಾತಿಯ ಕರೀಂ ಖಾನ್ ಹಾಗೂ ಕಾಶಿ ವಿಶ್ವನಾಥನ ಭಕ್ತರಾದ ಬಿಸ್ಮಿಲ್ಲಾಖಾನರ ಗತಿಯೇನು? ಹಾಗೇ 'ವಂದೇ ಮಾತರಂ' ನ್ನು ಧ್ಯಾನಸ್ಥರಾಗಿ ಹಾಡುವ ಸೂಫಿ ಗಾಯಕರಾದ ಖಾನ್ ಬಂಧುಗಳು ಮತ್ತು ಈ ಗೀತೆಗೆ ಆಧುನಿಕ ಲಯ ಅಳವಡಿಸಿ ಜನಪ್ರಿಯಗೊಳಿಸಿರುವ ಎ.ಆರ್.ರೆಹಮಾನ್?

ಹೀಗೆ ಮುಸ್ಲಿಮರೇ ಈ ಜಡವಾದಿ ವ್ಯಾಖ್ಯಾನವನ್ನು ಧಿಕ್ಕರಿಸುತ್ತಿರುವಾಗ, ನಾವು ಸೆಕ್ಯುಲರಿಸಂ ಹೆಸರಿನಲ್ಲಿ ಇವರನ್ನು ನಿಜವಾದ ಮುಸ್ಲಿಮರೇ ಅಲ್ಲ ಎಂದು ತೀರ್ಪು ನೀಡುವ ಸಂಪ್ರದಾಯವಾದಿಗಳೊಂದಿಗೆ ನಿಂತಿರುವುದು ಎಂಥ ವಿಚಿತ್ರ!ಬಹುಮುಖಿ ಸಂಸ್ಕೃತಿಯ ಪ್ರತಿಪಾದಕರೆನಿಸಿಕೊಂಡ ನಾವು ಎಡಪಂಥೀಯರು ನಿಜವಾಗಿ ಗುರುತಿಸಿಕೊಳ್ಳಬೇಕಾದ್ದು, ರಾಷ್ಟ್ರೀಯ ಹೋರಾಟದ ದಟ್ಟ ನೆನಪು ತಂದುಕೊಡುವ ಗೀತೆಯೊಂದರ ಶತಮಾನೋತ್ಸವ ಸಂದರ್ಭದಲ್ಲಿ ಅದನ್ನು ಹಾಡಿ ಸಂಭ್ರಮಿಸೋಣ ಎಂದೊಡನೆ, ಮತಾಂತರದ ಭೀತಿಗೊಳಗಾದವರಂತೆ ಆಡುವ ಮತೀಯ ವಾದಿಗಳೊಂದಿಗೋ ಅಥವಾ ಇವರನ್ನು ಧಿಕ್ಕರಿಸಿ ನಿಂತವರೊಂದಿಗೋ? ಇವರಲ್ಲಿ ಯಾರು ಸೆಕ್ಯುಲರಿಸ್ಟರು? ಬಲಪಂಥೀಯ ಎದುರಾಳಿ ರಾಜಕಾರಣವನ್ನು ಎದುರಿಸಲು, ಮತೀಯ ಬಲಪಂಥೀಯತೆಗೆ ಪ್ರೋತ್ಸಾಹ ನೀಡುವುದು ಎಡಪಂಥೀಯ ರಾಜಕಾರಣವೆನ್ನಿಸಿಕೊಳ್ಳುತ್ತದೆಯೇ?ಸೆಕ್ಯುಲರ್‌ರಾಜಕಾರಣವೆನ್ನಿಸಿಕೊಳ್ಳುತ್ತದೆಯೇ? ವಿಚಿತ್ರವೆಂದರೆ ಮತೀಯವಾದಿ ಗುಂಪುಗಳು ತಮ್ಮ ರಕ್ಷಣೆಗೆ ಬಳಸಿಕೊಳ್ಳುತ್ತಿರುವುದೇ 'ಸೆಕ್ಯುಲರಿಸಂ' ಅಸ್ತ್ರವನ್ನು. ಅವುಗಳ ಪ್ರಕಾರ ಸೆಕ್ಯುಲರಿಸಂ ಎಂದರೆ ಮತೀಯತೆಯ ಆಚರಣೆಯ ಸ್ವಾತಂತ್ರ್ಯ!

ಇದು ನಾವು ಕಳೆದ ಐವತ್ತು ವರ್ಷಗಳಿಂದೀಚೆಗೆ, 'ಸೆಕ್ಯುಲರಿಸಂ' ತತ್ವವನ್ನು ನಿರೂಪಿಸುತ್ತಾ, ಆಚರಿಸುತ್ತಾ ಬಂದ ರೀತಿ ನೀತಿಗಳ ಫಲವೇ ಆಗಿದೆ. ಸೆಕ್ಯುಲರಿಸಂ ಎಂಬ ಶಬ್ದಕ್ಕೆ ಸಮಾನಾಂತರವಾದ ಭಾರತೀಯ ಶಬ್ದದ ಬಗೆಗೆ ನಾವು ಈವರೆಗೆ ಒಮ್ಮತಕ್ಕೆ ಬರಲಾಗದಿರುವುದೇ ಈ ಬಿಕ್ಕಟ್ಟಿನ ಆಳವನ್ನು ಸೂಚಿಸುತ್ತದೆ. ನಾವೀಗ ಪರ್ಯಾಯ ಶಬ್ದಗಳಂತೆ ಬಳಸುವ ಜಾತ್ಯತೀತತೆ, ಸರ್ವಧರ್ಮ ಸಮಭಾವ, ಧರ್ಮ ನಿರಪೇಕ್ಷತೆ ಮುಂತಾದ ಶಬ್ದಗಳು ಹೊರಡಿಸುವ ಅರ್ಥಗಳೇ ಬೇರೆ ಬೇರೆ ನೆಲೆಯಾಗಿವೆ. ಏನಾದರೂ ಸೆಕ್ಯುಲರ್ ಎನ್ನುವ ಕಲ್ಪನೆಯೇ ಪಶ್ಚಿಮದ ಸಂಸ್ಕೃತಿಯಿಂದ ಕಡ ಪಡೆದುಕೊಂಡ ಕಲ್ಪನೆ.

ಇವನ್ನು ಈವರೆಗೆ ದೇಶೀಯಗೊಳಿಸಿಕೊಳ್ಳಲು ನಮಗೆ ಸಾಧ್ಯವೇ ಆಗಿಲ್ಲದಿರುವುದಕ್ಕೆ, ಆರಂಭದಲ್ಲೇ ಅದಕ್ಕೆ 'ದೀರ್ಘಾವಧಿ ರಾಜಕಾರಣವೇ ಧರ್ಮ;ಅಲ್ಪಾವಧಿ ಧರ್ಮವೇ ರಾಜಕಾರಣ' ಎಂದು ನಂಬಿದ್ದ ಗಾಂಧಿ ಮಾದರಿ ಇದ್ದರೂ, ಆಧುನೀಕರಣದ ಹುರುಪಿನಲ್ಲಿ ರಾಜಕಾರಣವನ್ನು ಧರ್ಮದಿಂದ ಪ್ರತ್ಯೇಕಿಸುವ ತತ್ವವೆಂದು ಅರ್ಥ ಕೊಟ್ಟುಕೊಂಡಿದ್ದೇ ಕಾರಣವಾಗಿದೆ. ನಮ್ಮ ಮೊದಲ ಪ್ರಧಾನಮಂತ್ರಿ ಹಾಗೂ ರಾಷ್ಟ್ರೀಯ ಹೀರೋ ನೆಹರೂ ತಮ್ಮನ್ನು ನಾಸ್ತಿಕನೆಂದು ಗುರುತಿಸಿಕೊಂಡಿದ್ದೂ ಇದಕ್ಕೆ ಕಾರಣವಿರಬಹುದು. ಆದರೆ ಭಾರತದ ಸರಾಸರಿ ಪ್ರಜೆ- ಆತ ಯಾವ ಧರ್ಮಕ್ಕೇ ಸೇರಿರಲಿ-ತನ್ನ ಧರ್ಮವನ್ನು ಮತಾಚರಣೆಗಳ ರೂಪದಲ್ಲಿ ತನ್ನ ವ್ಯಕ್ತಿತ್ವದ ಅವಿಭಾಜ್ಯ ಅಂಗ ಮಾಡಿಕೊಂಡ ಒಂದು ವಿಶಿಷ್ಟ ಸಾಂಸ್ಕೃತಿಕ ಪರಂಪರೆಗೆ ಸೇರಿದವನಾಗಿದ್ದಾನೆ. ಕಳೆದ ಐವತ್ತು ವರ್ಷಗಳ ಆಧುನೀಕರಣದ ಯಾವ ಶಕ್ತಿಯೂ, ಸಾಮಾನ್ಯ ಭಾರತೀಯನ ಮನೋಮಾತೃಕೆಯಲ್ಲಿನ ಈ ಮತ ಮೂಲವಾದ ಸಾಂಸ್ಕೃತಿಕ ಲಂಗರುಗಳನ್ನು ಕಳಚಿ ಹಾಕಲಾಗಿಲ್ಲ ಮತ್ತು ಆತನ ವ್ಯಕ್ತಿತ್ವದಿಂದ ಮತವನ್ನು ಪ್ರತ್ಯೇಕಗೊಳಿಸಲಾಗಿಲ್ಲ.

ಹೀಗಾಗಿ ಆಧುನಿಕ ಅರ್ಥದ *ಸೆಕ್ಯುಲರಿಸಂ* , ಭಾರತೀಯ ರಾಜಕಾರಣದ ಆಂತರಂಗಿಕ ಸತ್ಯಗಳಿಗೇ ಎರವಾಗಿದ್ದುಕೊಂಡು, ಈ ಕಾರಣದಿಂದಾಗಿಯೇ ತನ್ನ ಅರ್ಥೋದ್ದೇಶಕ್ಕೆ ವ್ಯತಿರಿಕ್ತವಾದ ಕೆಲಸಗಳನ್ನೇ ಪ್ರೇರೇಪಿಸುತ್ತಾ ಬಂದಿದೆ. ಸರ್ದಾರ್ ಪಟೇಲರು ಗುಜರಾತ್‌ನಲ್ಲಿ ಸರ್ಕಾರಿ ವೆಚ್ಚದಲ್ಲಿ ಕೈಗೊಂಡ ಸೋಮನಾಥ ದೇವಾಲಯದ ಪುನರುದ್ಧಾರದ ಕಾರ್ಯದಿಂದ ಹಿಡಿದು, ಕೇರಳದಲ್ಲಿ ಕಮ್ಯೂನಿಸ್ಟರು ಮುಸ್ಲಿಂ ಬಹು ಸಂಖ್ಯಾತ ಮಲಪ್ಪುರಂ ಜಿಲ್ಲೆ ನಿರ್ಮಾಣ ಮಾಡಿದ್ದು, ರಾಜೀವ್‌ಗಾಂಧಿ ಷಾ ಬಾನು ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪನ್ನೇ ಬುಡಮೇಲುಗೊಳಿಸಿದ್ದು ಹಾಗೂ ಆ ಅನಾಹುತವನ್ನು ಬ್ಯಾಲೆನ್ಸ್ ಮಾಡಲೆಂಬಂತೆ ಬಾಬ್ರಿ ಮಸೀದಿಯ ಬೀಗ ತೆಗೆಸಿ ಪೂಜೆಗೆ ಅವಕಾಶ ಮಾಡಿಕೊಟ್ಟಿದ್ದವರೆಗೆ, ಈ ಘನ ಕೆಲಸಗಳ ವೈವಿಧ್ಯ ಹಬ್ಬಿದೆ. ಇದಕ್ಕೆ ಕಾರಣ ಬಹುಧರ್ಮೀಯ ಸಂದರ್ಭದ ಸಮಾಜವೊಂದರಲ್ಲಿ ಮತಾಚರಣೆಗಳು ತಮ್ಮ ಸಾಂಸ್ಕೃತಿಕ ಆಶಯಗಳನ್ನು ಮೀರಿ, ರಾಜಕೀಯ ಶಕ್ತಿಯಾಗಿ ಪ್ರದರ್ಶಿತವಾಗುವ ಅಪಾಯದ ಬಗ್ಗೆ ಅರಿವೇ ಇರದಂತೆ, ನಮ್ಮ ರಾಜಕಾರಣವನ್ನು ಮತ-ಧರ್ಮಗಳ ಚಲನಶೀಲತೆಯಿಂದ ಬೇರ್ಪಡಿಸಿಟ್ಟು ಸರಳೀಕರಿಸುವುದು. ಇದರಿಂದಾಗಿ ಭಾರತೀಯ ರಾಜಕಾರಣ ತನ್ನ ದೃಷ್ಟಿಕೇಂದ್ರವನ್ನೇ ಕಳೆದುಕೊಂಡಿದೆ. ಹೀಗಾಗಿ ಕಳೆದ ೧೫-೨೦ ವರ್ಷಗಳಲ್ಲಿ ರಾಜಕಾರಣದ ಅರ್ಥ-ಆದ್ಯತೆಗಳೇ ಬುಡಮೇಲುಗೊಂಡು, ಕೋಮುವಾದಿ ರಾಜಕಾರಣ ಕ್ರಮೇಣ ಜನಸಮೂಹದ ವಿಶ್ವಾಸಾರ್ಹತೆ ಹಾಗೂ ಮಾನ್ಯತೆ ಗಳಿಸಿಕೊಂಡು ರಾಷ್ಟ್ರಜೀವನದ ಮಧ್ಯರಂಗಕ್ಕೆ ಬರುವಂತಾಗಿರುವುದು ಮತ್ತು

ಇದರ ಸಂಕೀರ್ಣ ಪರಿಣಾಮವಾಗಿ ಈಗ ಇಡೀ ದೇಶ ಮತೀಯ ಭಯೋತ್ಪಾದನೆಗೆ ಸಿಕ್ಕಿ ತಲ್ಲಣಗೊಂಡಿರುವುದು; ಸದಾ ತನ್ನ ಕಟ್ಟೆಚ್ಚರದಲ್ಲಿರುವ ಭಯಂಕರ ಶಿಕ್ಷೆಗೆ ಒಳಗಾಗಿರುವುದು.

ಆದುದರಿಂದ ಈಗಲಾದರೂ ನಾವು 'ಸೆಕ್ಯುಲರಿಸಂ' ತತ್ವವನ್ನು ಪುರ್ನನಿರೂಪಿಸುವ ಕಡೆ ಗಮನಹರಿಸಬೇಕಿದೆ. ಅದು ತನ್ನ ಪಾಶ್ಚಿಮಾತ್ಯ ಆಧುನಿಕ ಅರ್ಥದಲ್ಲಿ, ರಾಷ್ಟ್ರ ವಿಭಜನೆಯ ಉದ್ವಿಗ್ನ ಸಂದರ್ಭದಲ್ಲಿ ತನ್ನ ವಿಶಿಷ್ಟ ಕೊಡುಗೆ ಸಲ್ಲಿಸಿ; ನಂತರ ಒಂದು ರಾಜಕೀಯ ಸಾಧನವಾಗಿ ಅವನತಿಗೊಂಡು, ತನ್ನ ಮೂಲ ಆಶಯಕ್ಕೆ ವ್ಯತಿರಿಕ್ತವಾದ ರಾಜಕಾರಣಕ್ಕೆ ದಾರಿ ಮಾಡಿಕೊಟ್ಟಿದೆ. ಈಗ ಅದಕ್ಕೆ ಅಂತರ್ಧರ್ಮೀಯ ಸಂದರ್ಭದ ಮತ ವಿಶಿಷ್ಟ ಭಾರತೀಯ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡು ರಾಜಕೀಯವನ್ನು ನಿರ್ವಹಿಸುವ, ಒಂದು ಸಾಂಸ್ಕೃತಿಕ ಗ್ರಹಿಕೆಯ ಆಯಾಮವನ್ನು ನೀಡಬೇಕಾಗಿದೆ. ಧರ್ಮವನ್ನು ಒಂದು ಏಕಶಿಲಾ ರೂಪದ ಜಡಶಕ್ತಿಯಾಗಿ ನೋಡಿ ಅದು ಪ್ರಜಾಪ್ರಭುತ್ವವಾದಿ ರಾಜಕಾರಣಕ್ಕೆ ಕಂಟಕವೆಂದು ಭಾವಿಸುವ ತಪ್ಪು ಮಾಡದೆ, ಅದರೊಳಗಿನ ಬಹುಮುಖಿ ಚಲನಶೀಲತೆಯನ್ನು ಪ್ರಜಾಪ್ರಭುತ್ವವಾದಿ ರಾಜಕಾರಣದ ಗುರಿ ಸಾಧನೆಗೆ ಬಳಸುವ ಪ್ರತಿಭೆಯನ್ನು ಅದಕ್ಕೆ ರೂಢಿಸಿಕೊಡಬೇಕಿದೆ.

ಇದಕ್ಕೆ ಮೊದಲಾಗಿ ನಮ್ಮ ಜಾತ್ಯತೀತವಾದಿಗಳು ಹಾಗೂ ಪ್ರಗತಿಪರರು ಎನ್ನಿಸಿಕೊಂಡವರು, ಧರ್ಮ ಕುರಿತ ತಮ್ಮ ಇಬ್ಬಂದಿ ನಿಲುವನ್ನು ಪರಿಹರಿಸಿಕೊಳ್ಳಬೇಕಿದೆ. ಆಗ ಮಾತ್ರ ಧರ್ಮದ ಹೆಸರಲ್ಲಿ ನಡೆಯುವ ಮತೀಯ ರಾಜಕಾರಣವನ್ನು ಅದರೆಲ್ಲ ಅವತಾರಗಳಲ್ಲಿ ಸ್ಪಷ್ಟವಾಗಿ ಗುರುತಿಸಿ ಎದುರಿಸಲು ಸಾಧ್ಯವಾಗುತ್ತದೆ: ಶಿವಮೊಗ್ಗೆಯ ಬೀದಿ ಬೀದಿಗಳಲ್ಲಿ ಗಣಪತಿ ವಿಸರ್ಜನೆ ಸಂದರ್ಭದಲ್ಲಿ ಹತ್ತು-ಹನ್ನೆರಡು ವರ್ಷಗಳ ಬಾಲಕರೂ ಕೆಂಪು ತಿಲಕವಿಟ್ಟು ಕೇಸರಿ ತಲೆಪಟ್ಟಿ ಕಟ್ಟಿಕೊಂಡು ರಸ್ತೆಗಳಲ್ಲಿ ಉದ್ರಿಕ್ತವಾಗಿ ಕುಣಿಯುವುದನ್ನು ಕಂಡಾಗ ಆಗುವಷ್ಟೇ ಗಾಬರಿ; ಬೀದಿ ಬೀದಿಗಳಲ್ಲಿ ಹೆಚ್ಚುತ್ತಿರುವ ಬುರ್ಖಾ, ಗಡ್ಡ, ಟೋಪಿಗಳನ್ನು ಕಂಡಾಗಲೂ ಆಗತೊಡಗುತ್ತದೆ. ಇವೆರಡೂ ದೃಶ್ಯಗಳು ಇತ್ತೀಚಿನವರೆಗೆ ಭಾರತದ ಹೆಮ್ಮೆ ಎನಿಸಿದ್ದ ಬಹುಮುಖಿ ಧಾರ್ಮಿಕ ಸಂಸ್ಕೃತಿಯ ಸ್ಥಾನವನ್ನು ಏಕಮುಖಿ ಧಾರ್ಮಿಕ ರಾಜಕಾರಣ ಆಕ್ರಮಿಸಿಕೊಳ್ಳುತ್ತಿರುವುದರ ದ್ಯೋತಕಗಳೇ ಆಗಿವೆ. ಇವು ಪ್ರಜಾಪ್ರಭುತ್ವ ಹಾಗೂ ಸಮಾಜವಾದಿ ಆದರ್ಶ-ಆಶಯಗಳಿಗೆ ಮಾರಕವೇ ಆಗಿವೆ. ಇದರ ಬಗ್ಗೆ ತಾತ್ವಿಕ ಸ್ಪಷ್ಟತೆ ಹಾಗೂ ರಾಜಕೀಯ ಮುನ್ನೋಟ ಇದ್ದುದರಿಂದಲೇ ಸಮಾಜವಾದಿ ನಾಯಕ ಡಾ||ರಾಮಮನೋಹರ ಲೋಹಿಯಾ ಅವರು ಏಕರೂಪದ ನಾಗರೀಕ ಸಂಹಿತೆಯನ್ನು ೧೯೬೭ರಲ್ಲಿ ಚುನಾವಣಾ ವಿಷಯವನ್ನಾಗಿ ಮಾಡಿಕೊಂಡು, ಅದರ ಪರವಾಗಿ ಪ್ರಚಾರ ನಡೆಸುವ ದಿಟ್ಟತನ ತೋರಿಸಿದ್ದರು. ಇದರಿಂದಾಗಿ ಗಣನೀಯ ಮುಸ್ಲಿಂ ಜನ ಸಂಖ್ಯೆ ಇದ್ದ ಕ್ಷೇತ್ರಗಳಲ್ಲಿ

ಅವರ ಪಟ್ಟ ಶಿಷ್ಯ ಕಿಷನ್ ಪಟ್ನಾಯಕ್ ಸೇರಿದಂತೆ ಅವರ ಅನೇಕ ಅಭ್ಯರ್ಥಿಗಳು ಸೋತರು. ಆದರೆ ರಾಜಕೀಯ ಮುತ್ಸದ್ದಿಯಾಗಿದ್ದ ಲೋಹಿಯಾಗೆ ರಾಜಕಾರಣವೆಂದರೆ ಬರೀ ಪಕ್ಷ ಕಟ್ಟುವುದಲ್ಲ, ದೇಶ ಕಟ್ಟುವುದೂ ಆಗಿತ್ತು;ನಿಜವಾದ ರಾಜಕಾರಣವೆಂದರೆ ದೇಶ ಕಟ್ಟುವುದರ ಅಂಗವಾಗಿ ಪಕ್ಷ ಕಟ್ಟುವುದೇ ಆಗಿದೆ ಎಂಬುದು ಗೊತ್ತಿತ್ತು.

ಆದರೆ ನಾವು ಇದನ್ನು ಅರ್ಥ ಮಾಡಿಕೊಳ್ಳಲು ಸತತವಾಗಿ ನಿರಾಕರಿಸುತ್ತಾ *ಸೆಕ್ಯುಲರಿಸಂ* ನ ಈಚಿನ ಆವೃತ್ತಿ ಪ್ರಕಾರ, 'ಹಿಂದೂ ಒಬ್ಬ ದುಷ್ಟ ಶತ್ರು; ಅವನನ್ನು ನಮ್ಮ ಪುರಾತನರು ಅವನ ಪುರಾತನರನ್ನು ದಮನ ಮಾಡಲು ಬಳಸಿಕೊಂಡ ಬಲ ಪ್ರಯೋಗದ ಮೂಲಕವೇ ನಿಗ್ರಹಿಸಬೇಕು' ಎಂಬ ಘೋಷಣಾ ಸಾಹಿತ್ಯವನ್ನು ಹಂಚಿ ಲಷ್ಕರನ್ನು ಬೆಳೆಸಿದ ಹಫೀಜ್ ಮಹಮ್ಮದ್ ಸಯೀದ್‌ನನ್ನು ಒಬ್ಬ ರಾಷ್ಟ್ರ ದ್ರೋಹಿ ಎಂದು ಪರಿಗಣಿಸದೆ, ಒಬ್ಬ ತಲೆ ಕೆಟ್ಟ ಮತೀಯವಾದಿ ಎಂದಷ್ಟೇ ಲಘುವಾಗಿ ಪರಿಗಣಿಸಿ ಉದಾಸೀನವಾಗಿರಲು ಸಾಧ್ಯವಾಯಿತು. ಇಂತಹ ರಾಜಕೀಯ ಅಪಾರ್ಥದಿಂದಾಗಿ ಉಂಟಾದ ವಾತಾವರಣದಿಂದಾಗಿಯೇ, ೧೯೯೯ರಲ್ಲಿ ಔರಂಗಾಬಾದ್‌ನಲ್ಲಿ 'ನಮ್ಮ ದೇಶ ಇಸ್ಲಾಂ;ಭಾರತವಲ್ಲ' ಎಂಬ ಭಾಷಣ-ಘೋಷಣೆಗಳು ಮೊಳಗಿದ ಸಿಮಿ (SIMI)ಸಮ್ಮೇಳನ ಯಾರ ಗಮನವನ್ನೂ ಸೆಳೆಯದೆ ನಡೆಯಲು ಸಾಧ್ಯವಾದದ್ದು. ಈ ಸಮ್ಮೇಳನದಲ್ಲಿಯೇ ಈಚಿನ ಅಮಾನವೀಯ ಮುಂಬೈ ರೈಲು ಸರಣಿಸ್ಫೋಟ ದುರಂತದವರೆಗೆ ಮುಟ್ಟಿರುವ ಭಯೋತ್ಪಾದನಾ ಕಾರ್ಯಕ್ರಮದ ಹಿಂದಿರುವ ಜಾಲದ ರಚನೆ ಆರಂಭವಾದದ್ದು ಎಂದು ಹೇಳಲಾಗಿದೆ. ಇದನ್ನು ಗುಪ್ತಚರ ಇಲಾಖೆಯೂ ಈಗ ಖಚಿತಪಡಿಸಿದೆ.(ವಿವರಗಳಿಗೆ ನೋಡಿ: ಜುಲೈ ೨೮, ೨೦೦೬ ರ '*ಫ್ರಂಟ್ ಲೈನ್*') ಅಷ್ಟೇ ಅಲ್ಲ, ಮುಂಬೈ ರೈಲು ಸರಣಿ ಸ್ಫೋಟಗಳ ನಂತರ ಹಬ್ಬಿದ 'ಎಲ್ಲಾ ಮುಸ್ಲಿಮರೂ ಭಯೋತ್ಪಾದಕರಲ್ಲ; ಆದು ಭಯೋತ್ಪಾದಕರೆಲ್ಲರೂ ಮುಸ್ಲಿಮರೇ' ಎಂಬ ಎಸ್ಸೆಮ್ಮೆಸ್‌ಗೆ ಈಗ ಅಧಿಕೃತ ಮುದ್ರೆಯೂ ಬಿದ್ದಿದೆ: ಸ್ಥಳೀಯ ಮುಸ್ಲಿಮರ ಸಹಕಾರವಿಲ್ಲದೆ ಹೊರಗಿನವರು ಇಷ್ಟು ವ್ಯವಸ್ಥಿತವಾಗಿ ಹಾಗೂ ಕರಾರುವಾಕ್ಕಾಗಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಸಾಧ್ಯವಿಲ್ಲವೆಂದು ಭಯೋತ್ಪಾದನಾ ನಿಗ್ರಹ ದಳವೇ ಈಗ ಹೇಳಿದೆ. ಇದು ನಿಜವಾದ ದುರಂತ. ಮುಸ್ಲಿಂ ಸಮಾಜದ ದುರಂತ ಹಾಗೂ ನಮ್ಮೆಲ್ಲರ ದುರಂತ-ರಾಷ್ಟ್ರೀಯ ದುರಂತ.

ಇದಕ್ಕೇನು ಕಾರಣ?ಸೆಕ್ಯುಲರಿಸಂ ಹೆಸರಿನಲ್ಲಿ ಮುಸ್ಲಿಂ ಸಮಾಜವನ್ನು ಒಂದು 'ಪ್ರತ್ಯೇಕ ಖಂಡ' ಎಂದು ನೋಡಿ, ಅದರೊಳಗಿನ ಸಂಪರ್ಕಶೀಲ ಬಹುಮುಖಿ ಸಂಸ್ಕೃತಿ ಸ್ರೋತವನ್ನು ಗುರುತಿಸಿ ಪ್ರೋತ್ಸಾಹಿಸದೇ ಹೋಗಿದ್ದು. ಈಗಲೂ ಅಲ್ಲಲ್ಲಿ ಈ ಸಮಾಜದಲ್ಲಿ ಅಂತಹ ಸಂಸ್ಕೃತಿಯ ಕಿಡಿಗಳು ಕಾಣುವುವಾದರೂ, ಅವು ಪೂರಕ ವಾತಾವರಣವಿಲ್ಲದೆ ಕ್ಷಣಿಕವಾಗಿ ಉರಿದು ಆರುತ್ತಾ, ಒಟ್ಟಾಗಿ ಒಂದು ಶಕ್ತಿಯಾಗಿ ಹೊರಹೊಮ್ಮಲಾಗದೆ ಉಳಿದಿವೆ. ಹಾಗೆ ಸಾಧ್ಯವಿದ್ದುದಾದರೆ ಸದ್ಯದ ಪರಿಸ್ಥಿತಿ

ನಿಭಾಯಿಸಲು ಭಯೋತ್ಪಾದನಾ ಚಟುವಟಿಕೆಗಳ ಮೇಲೆ ನಿಗಾ ಇಡಲು ಮುಸ್ಲಿಂ ಸಮಾಜದೊಳಗೇ ಒಂದು ಜಾಗೃತಿ ಆಂದೋಲನ ಉಂಟಾಗಬೇಕಿತ್ತು; ಆದಂತೆ ತೋರುತ್ತಿಲ್ಲ. ಆದರೆ ಇಂದು ಇದು ಒಂದು ರಾಷ್ಟ್ರೀಯ ಅಗತ್ಯವಾಗಿದೆ. ಏಕೆಂದರೆ ಮತೀಯ ಉಗ್ರವಾದಿ ಗುಂಪುಗಳೊಂದಿಗೆ ರಾಜಕೀಯ ಉಗ್ರಗಾಮಿ ಗುಂಪುಗಳು ಸಂಪರ್ಕ ಸಾಧಿಸುತ್ತಿವೆಯೆಂದು ಹೇಳಲಾಗುತ್ತಿದೆ. ಆದುದರಿಂದ ಇದನ್ನು ತುರ್ತಾಗಿ- ಮುಸ್ಲಿಂ ಲೇಖಕರ, ಚಿಂತಕರ, ಪ್ರಗತಿಪರ ಧಾರ್ಮಿಕ ನಾಯಕರ ಮುತುವರ್ಜಿಯಲ್ಲಿ- ಎಲ್ಲರೂ ಸೇರಿ ರೂಪಿಸಬೇಕಾಗಿದೆ. ಆಗ ಅದು ಇಡೀ ಭಾರತೀಯ ಸಮಾಜದ ಹೊಸ ಜಾಗೃತಿ ಆಂದೋಲನವಾಗಿ ವಿಸ್ತರಿಸಬಲ್ಲದು. ಅದಕ್ಕಾಗಿ ನಮ್ಮ ಹಳೆಯ ಸೆಕ್ಯುಲರ್ ಹ್ಯಾಂಗೋವರ್‌ಗಳಿಂದ ಕಳಚಿಕೊಂಡ ಒಂದು ಹೊಸ ಮನೋಭೂಮಿಕೆಯೇ ಸಿದ್ಧವಾಗಬೇಕಿದೆ. ಅದುವೇ ಹೊಸ *ಸೆಕ್ಯುಲರಿಸಂ* ನ ನಿಜವಾದ ಉದಯ. ಅಲ್ಲಿಂದಲೇ 'ವಂದೇ ಮಾತರಂ'ನ್ನು ಕಡ್ಡಾಯಗೊಳಿಸಲು ಹಾತೊರೆಯುವ ಮನಸ್ಸುಗಳ ಪ್ರತೀಕವೆನಿಸುವ ರಾಜಕಾರಣದ ಅಸ್ತಮಾನ ಕೂಡಾ.

('ಹೊನ್ನಾರು', ಅಕ್ಟೋಬರ್ ೨೦೦೬)

ಮತ್ತೆ ನೆನಪಾಗುತ್ತಿರುವ ಗಾಂಧಿ

ನಮ್ಮ ಪುರಾತನರೊಬ್ಬರು ನಮ್ಮ ಸದ್ಯದ ಬದುಕಿನ ರೀತಿ ನೀತಿಗಳನ್ನು ನೋಡುವ ಕುತೂಹಲದಿಂದ ಈಗ ನಮ್ಮ ಮಧ್ಯೆ ಬಂದಿಳಿದರೆನ್ನಿ. ಅವರು ಆಶ್ಚರ್ಯ ಪಡುವುದು, ಇವುಗಳಲ್ಲಿ ಯಾವುದನ್ನು ಕಂಡು: ನಮ್ಮ ದಂತ ವೈದರ ಕೌಶಲ್ಯ-ಪರಿಣಿತಿಗಳನ್ನೋ ಅಥವಾ ನಮ್ಮ ಹಲ್ಲುಗಳ ವ್ಯಾಪಕ ಹುಳುಕುತನವನ್ನೋ? ನಮ್ಮ ಸಾರಿಗೆ-ಸಾಧನಗಳ ವೇಗ ವೈವಿಧ್ಯವನ್ನೋ ಅಥವಾ ನಾವು ನಮ್ಮ ಕೆಲಸದ ಸ್ಥಳಕ್ಕೆ ಹೋಗಿ ಬರಲು ತೆಗೆದುಕೊಳ್ಳುವ ಕಾಲ ಹಾಗೂ ಪಡುವ ಪಾಡನ್ನೋ? ನಮ್ಮ ಔಷದ ಪದ್ಧತಿಯ ವೈವಿಧ್ಯಮಯ ಆವಿಷ್ಕಾರಗಳನ್ನೋ ಅಥವಾ ಆಸ್ಪತ್ರೆಗಳಲ್ಲಿನ ಜನ-ಜಂಗುಳಿಯನ್ನೋ?ಚಂದ್ರನ ಮೇಲೆ ಕಾಲಿಡುವಂತಾದ ನಮ್ಮ ವೈಜ್ಞಾನಿಕ ಸಾಮರ್ಥ್ಯವನ್ನೋ ಅಥವಾ ಕೆಲಸ ಮಾಡ ಬಯಸುವ ಜನರಿಗೆ ಉದ್ಯೋಗ ಒದಗಿಸಿಕೊಡಲಾಗದ ನಮ್ಮ ತಾಂತ್ರಿಕ ಅಸಾಮರ್ಥ್ಯವನ್ನೋ? ನಮ್ಮ ಯಂತ್ರಗಳ ದಕ್ಷತೆಯನ್ನೋ ಅಥವಾ ನಮ್ಮ ಇಡೀ ವ್ಯವಸ್ಥೆಯ ಅದಕ್ಷತೆಯನ್ನೋ?

ಈ ಪ್ರಶ್ನೆಯನ್ನು ಕೇಳಿದಾತ, ಕಳೆದ ಶತಮಾನದ ಮಧ್ಯಭಾಗದಲ್ಲಿ ತನ್ನ 'ಸಣ್ಣದು ಸುಂದರ' (Small is Beautiful) ಎಂಬ ಬಹು ಆಯಾಮುಗಳ ಅರ್ಥಶಾಸ್ತ್ರೀಯ ಕೃತಿಯ ಮೂಲಕ ವಿಶ್ವದ ಗಮನ ಸೆಳೆದಿದ್ದ ಜರ್ಮನಿಯ ಅರ್ಥಶಾಸ್ತ್ರಜ್ಞ,ಷುಮೇಕರ್. ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳ ನಿರಂತರ ಅನ್ವಯಗಳನ್ನಾಧರಿಸಿದ ಬೃಹತ್ ಯಾಂತ್ರಿಕ ಉತ್ಪಾದನೆಯ ಮೂಲಕ ಸದಾ ಏರುತ್ತಲೇ ಹೋಗುವ ಜೀವನ ಮಟ್ಟದ ಆದರ್ಶವನ್ನು, ತನ್ನ ಸ್ಫೂರ್ತಿ ಶಕ್ತಿಯನ್ನಾಗಿ ಮಾಡಿಕೊಂಡಿರುವ ಪ್ರಚಲಿತ ಆಧುನಿಕ ನಾಗರೀಕತೆಯನ್ನು ವಿಮರ್ಶಿಸುತ್ತಾ, ಆತ ಕೇಳಿದ ಪ್ರಶ್ನೆಯಿದು. ಸುಮಾರು ಮುವ್ವತ್ತೈದು ವರ್ಷಗಳ ಹಿಂದೆ, ವಾರಣಾಸಿಯ ಗಾಂಧಿ ಅಧ್ಯಯನ ಕೇಂದ್ರದಲ್ಲಿ ಷುಮೇಕರ್ ನೀಡಿದ ಗಾಂಧಿ ಸ್ಮಾರಕ ಉಪನ್ಯಾಸದ ಭಾಗವಾಗಿ ಕೇಳಲಾದ ಈ ಪ್ರಶ್ನೆ, ಇಂದೂ ಪ್ರಸ್ತುತವೆನಿಸುವುದಿಲ್ಲವೇ? ಅಥವಾ ಅಂದಿಗಿಂತ ಇಂದು ಪ್ರಸ್ತುತವೆನಿಸುವುದೋ?

ಉತ್ತರ ಹೇಳಲು ಕಷ್ಟವೆನಿಸುತ್ತಿದೆಯೇ? ಇರಬಹುದು-ಏಕೆಂದರೆ, ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ದೇಶ ಸಾಧಿಸಿದೆಯೆಂದು ಹೇಳಲಾದ 'ಅದ್ಭುತ ಪ್ರಗತಿ'ಯ ಆಕರ್ಷಣೆ-ಆವೇಗಗಳಲ್ಲಿ ನಾವು ಎಷ್ಟರ ಮಟ್ಟಿಗೆ ಸಿಲುಕಿಕೊಂಡಿದ್ದೇವೆಂದರೆ, ಇದೇ ಅವಧಿಯಲ್ಲಿ ದೇಶಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಅದು ಇನ್ನೂ ಎಡೆಬಿಡದೆ ಮುಂದುವರೆಯುತ್ತಿದೆ ಎಂಬ ಸಂಗತಿ

ನಮ್ಮ ಆತ್ಮಸಾಕ್ಷಿಯನ್ನು ಕೆಣಕಲು ಸಾಧ್ಯವೇ ಆಗಿಲ್ಲ- ಇದು ದೇಶಕ್ಕೆ ತಗುಲಿರುವ ಯಾವ ರೋಗದ ಲಕ್ಷಣ ಎಂದು ಯೋಚಿಸುವ ವ್ಯವಧಾನವೂ ನಮಗಿಲ್ಲ. ಪ್ರಗತಿ ಪ್ರಕ್ರಿಯೆಯ ಈ ತುರಾತುರಿಯಲ್ಲಿ, ರೋಗ ಲಕ್ಷಣವನ್ನೇ ರೋಗವೆಂದು ಬಗೆದು - ಇವೆಲ್ಲಾ ಪ್ರಸ್ತುತ ಕ್ಷಿಪ್ರ ಆಧುನೀಕರಣದ ಹಾದಿಯಲ್ಲಿನ ಅನಿವಾರ್ಯ ಅನಾಹುತಗಳೆಂಬಂತೆ- ಅದಕ್ಕೆ ಚಿಕಿತ್ಸೆಯ ರೂಪದಲ್ಲಿ ಒಂದಷ್ಟು ಸರ್ಕಾರಿ ರಿಯಾಯಿತಿಗಳನ್ನು ಘೋಷಿಸಿ ನಿರಾಳಗೊಂಡಿದ್ದೇವೆ. "ಮನೆಯಲ್ಲಿ ಹೆಣ್ಣು ಮಕ್ಕಳು ಮದುವೆಗೆ ಬೆಳೆದು ನಿಂತಿದ್ದಾರೆ, ಭೂಮಿಯಲ್ಲಿ ನೀರು ಬತ್ತಿ ಹೋಗಿದೆ, ಅಷ್ಟೋ ಇಷ್ಟೋ ಬೆಳೆದ ಬೆಳೆಗೆ ಸ್ಥಿರವಾದ ಬೆಲೆಯಿಲ್ಲ, ಸಾಲ ಕೊಟ್ಟ ಲೇವಾದೇವಿಯವರು ನಮ್ಮ ಹಿಂದೆ ಬಿದ್ದಿದ್ದಾರೆ ಮತ್ತು ಬ್ಯಾಂಕುಗಳು ಹರಾಜು ನೋಟೀಸು ಕಳಿಸಿ ಹೆದರಿಸುತ್ತಿದ್ದಾರೆ... ನಾವಿನ್ನೇನು ಮಾಡಬೇಕು ಹೇಳಿ?" ಎಂದು ಕೇಳುವ ವಿದರ್ಭದ ರೈತನ ಆರ್ತ ಅಸಹಾಯಕತೆಯ ಹಿಂದಿರುವ ದುರಂತ ಕಥೆಯನ್ನು, ಇದು ನಮಗೆ ಸಂಬಂಧವೇ ಪಡದ ಕಥೆಯೆಂಬಂತೆ, ನಿಂತು ಆಲಿಸಲು ನಿರಾಕರಿಸುವಷ್ಟು ಅಸೂಕ್ಷ್ಮರಾಗಿದ್ದೇವೆ.

ಹಾಗಾಗಿಯೇ, ದೇಶ ಶೇಕಡಾ ಎಂಟರ ವಾರ್ಷಿಕ ಬೆಳವಣಿಗೆ ದರದತ್ತ ದಾಪುಗಾಲು ಹಾಕುತ್ತಿದೆ;ನಮ್ಮ ಒಟ್ಟು ವಿದೇಶಿ ಸಾಲ ಯಾವ ಗತಿಯಲ್ಲಿ ಮತ್ತು ಯಾವ ಷರತ್ತುಗಳ ಮೇಲೆ ಬೆಳೆಯುತ್ತಿದೆ ಎಂಬುದರ ಪರಿವೆಯೇ ಇಲ್ಲದೆ, ದೇಶದ ವಿದೇಶಿ ವಿನಿಮಯ ಮೀಸಲು ದಾಖಲೆ ಮಟ್ಟವನ್ನು ಮುಟ್ಟುತ್ತಿದೆ; ಒಟ್ಟಾರೆ ರಾಷ್ಟ್ರೀಯ ಉತ್ಪನ್ನ ಹಾಗೂ ತಲಾ ಸರಾಸರಿ ಆದಾಯ ಹೊಸ ಎತ್ತರಗಳಿಗೆ ಜಿಗಿಯುತ್ತಿದೆ; ಎಲ್ಲಕ್ಕಿಂತ ಹೆಚ್ಚಾಗಿ, ಅತ್ಯಂತ ಹೆಚ್ಚು ಕೋಟ್ಯಾಧೀಶ್ವರರನ್ನು ಹೊಂದಿರುವ ದೇಶಗಳಲ್ಲಿ ಭಾರತ ಎಂಟನೇ ಸ್ಥಾನದಲ್ಲಿದೆ ಎಂದೆಲ್ಲಾ ನಮ್ಮ ಕ್ಷಿಪ್ರ ಪ್ರಗತಿಯ ದಾಖಲೆ ಪತ್ರವನ್ನು ಹೆಮ್ಮೆಯಿಂದ ಮುಂದಿಡುತ್ತಾ, ಈ ಎಲ್ಲ ಅಂಕಿ ಅಂಶಗಳನ್ನು ಒಮ್ಮೆಗೇ ಅಸಂಗತಗೊಳಿಸಿಬಿಡುವ ಈ ದಾಖಲೆ ಪತ್ರದ ಇನ್ನೊಂದು ಅಂಶದ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದೇ ಹೋಗಿದ್ದೇವೆ: ಜಗತ್ತಿನ ೧೭೭ ದೇಶಗಳ ಬಡತನ, ನಿರುದ್ಯೋಗ, ಶಿಕ್ಷಣ, ಲಿಂಗ ಸಮಾನತೆ, ಕುಡಿಯುವ ನೀರು-ಆರೋಗ್ಯ ಸೌಲಭ್ಯಗಳ ಲಭ್ಯತೆ, ಶಿಶು ಮರಣ ದರ ಇತ್ಯಾದಿ ಪ್ರಮಾಣಗಳನ್ನಾಧರಿಸದ ಮಾನವ ಸಂಪನ್ಮೂಲ ಅಭಿವೃದ್ಧಿ ಸೂಚಿ ತಃಖ್ತೆಯಲ್ಲಿ ನಾವು ೧೨೭ನೇ ಸ್ಥಾನದಲ್ಲಿದ್ದೇವೆ... ಅಲ್ಲದೆ, ಕಳೆದ ಎರಡು ಮೂರು ವರ್ಷಗಳಿಂದೀಚೆಗೆ ಬಾಂಗ್ಲಾದೇಶ ಮತ್ತು ಉಗಾಂಡಾಗಳಂತಹ ದೇಶಗಳು ಈ ತಃಖ್ತೆಯಲ್ಲಿ ನಮ್ಮನ್ನು ದಾಟಿ ಮೇಲೇರಿ ಹೋಗಿದ್ದರೆ, ನಾವು ಮೂರು ಸ್ಥಾನಗಳಷ್ಟು ಕೆಳಗಿಳಿದಿದ್ದೇವೆ!

ಇನ್ನೊಂದು ವಿಶೇಷವೆಂದರೆ, ನಿರುದ್ಯೋಗ ದರ ವರ್ಷೇ ವರ್ಷೇ ಏರುತ್ತಲೇ ಇದೆ. ಖಾಸಗಿ ಉದ್ಯಮದಲ್ಲಿ ತಿಂಗಳಿಗೆ ೧೦ಲಕ್ಷ ರೂಪಾಯಿಗಳವರೆಗೆ ಸಂಬಳ ಕೊಡಲು

ಅವಕಾಶವಿರುವಷ್ಟರ ಮಟ್ಟಿಗೆ ನಮ್ಮ ಅರ್ಥ ವ್ಯವಸ್ಥೆಯನ್ನು 'ಉದಾರೀ'ಕರಿಸುವ ನಾವು, ಬಡತನ ರೇಖೆಯನ್ನು ನಿರ್ಧರಿಸುವಾಗ ಮಾತ್ರ ದಿನವಹಿ ಆದಾಯವನ್ನು ೪೫ ರೂಪಾಯಿಗಳಿಗೆ ನಿಗದಿಪಡಿಸುವಷ್ಟರ ಮಟ್ಟಿಗೆ ಅಶ್ಲೀಲರಾಗಿ, ಸ್ವಾತಂತ್ರ್ಯ ಬಂದಾಗಿನಿಂದೀಚೆಗೆ ಬಡತನವನ್ನು ಶೇಕಡಾ ೫೪ ರಿಂದ ೨೫ ಕ್ಕೆ ಇಳಿಸಿದ್ದೇವೆ ಎಂದು ನಮ್ಮನ್ನು ನಾವೇ ನಂಬಿಸಿಕೊಳ್ಳತೊಡಗಿದ್ದೇವೆ. ಈ 'ಬಡತನ'ದ ಈ ಲೆಕ್ಕಾಚಾರದ ಪ್ರಕಾರವೇ, ಈಗಲೂ ನಮ್ಮ ಸುತ್ತಮುತ್ತಲೇ ೩೦ ಕೋಟಿಯಷ್ಟು ಬೃಹತ್ ಜನಸ್ತೋಮವು ದಿನವಹಿ ೪೫ ರೂ.ಗಳ ವೈದೃಶ ಬಡತನದಲ್ಲಿ ಆಕ್ರಾಂತವಾಗಿ ನಮ್ಮನ್ನು ಗಮನಿಸುತ್ತಿದೆ ಎಂಬುದರ ಪರಿವೆಯೇ ಇಲ್ಲದೆ, ಇನ್ನ ಕೆಲವೇ ವರ್ಷಗಳಲ್ಲಿ ನಾವು ಜಗತ್ತಿನ ಅತಿ ದೊಡ್ಡ ಮೂರೋ ನಾಲ್ಕೋ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿ ಒಡಮೂಡುವ ಆತ್ಮವಿಶ್ವಾಸದಿಂದ ವೈವಿಧ್ಯಮಯ ಗ್ರಾಹಕ ವಸ್ತುಗಳಿಂದ ಝಗಝಗಿಸುವ ಮಾರುಕಟ್ಟೆಗಳನ್ನು ವಿಸ್ತರಿಸುತ್ತಾ, 'ನಡೆ ಮುಂದೆ ನಡೆ ಮುಂದೆ' ಎಂದು ಮುನ್ನುಗ್ಗುತ್ತಿದ್ದೇವೆ. ಈ ಮುನ್ನಡೆಯ ನಮ್ಮ ಕಣ್ಮುಂದಿನ ಒಂದು ಪ್ರತೀಕದಂತಿರುವ ಬೆಂಗಳೂರಿನಲ್ಲಿ, ರಾಜಕುಮಾರ್ ಎಂಬ 'ಬಡವರ ಬಂಧು' ರೂಪಕವು ಸಾವು ಕಂಡಾಗ ಜನವೇಕೆ ಸಮುದ್ರದಂತೆ ಉಕ್ಕೇರಿ ಬೀದಿಗಳನ್ನು ತುಂಬಿಕೊಳ್ಳುತ್ತದೆ ಎಂದು ಯೋಚಿಸುವ ಗೋಜಿಗೇ ಹೋಗದೆ; ಮತ್ತು ಆ ಜನ ಮಧ್ಯದಿಂದ ಹರಕು ಸೀರೆಯ ಮುದುಕಿಯೊಬ್ಬಳು ದೊಡ್ಡ ಕಲ್ಲನ್ನೆತ್ತಿಕೊಂಡು ಪೋಲೀಸರತ್ತ ಅರ್ಥಾತ್ ಅವರು ಕಾಪಾಡಲು ನಿಂತಿರುವ ವ್ಯವಸ್ಥೆಯತ್ತ ಬೀಸುವ, ವಾಸ್ತವ ಚಿತ್ರದ ಸಂದೇಶವನ್ನು ಲೆಕ್ಕಿಸದೆ!

ಇದನ್ನು ಆಧುನೀಕರಣದ ಮಾಯೆ ಎನ್ನೋಣವೇ? ತಾತ್ವಿಕವಾಗಿಯಷ್ಟೇ ನೋಡಿದಾಗ ಮಾಯೆ ಎನಿಸುತ್ತದೆ. ಆದರೆ ಅದರ ತೊತ್ತಳದುಳಿತಕ್ಕೆ ಸಿಕ್ಕ ಅಭ್ಯಾಗತರ ನೋವು ನಿಟ್ಟುಸಿರುಗಳಿಗೆ ಸ್ಪಂದಿಸುವ ಹೃದಯವಿದ್ದವರಿಗೆ ಅದು ಕ್ರೌರ್ಯವೆನಿಸುತ್ತದೆ. ಅಂತಹ ಹೃದಯವಿದ್ದ ಗಾಂಧೀಜಿಗೆ ಸಹಜವಾಗಿಯೇ, ಈ ಆಧುನೀಕರಣವನ್ನು ಪ್ರತಿನಿಧಿಸುವ ಪಶ್ಚಿಮದ ನಾಗರೀಕತೆ ಕ್ರೌರ್ಯದಿಂದ ಕೂಡಿದೆ ಎಂದೆನಿಸಿತ್ತು. ಅದು, ಸ್ವತಃ ತಾನೇ ನಿಜವಾಗಿ ಏನನ್ನೂ ಉತ್ಪಾದಿಸದೆ, ಒಬ್ಬರಿಂದ ಕದ್ದು ಇನ್ನೊಬ್ಬರಿಗೆ ಕೊಡುವ ತರ್ಕದ ಮೇಲೆ ನಿಂತ ಲೋಭದ ನಾಗರೀಕತೆಯಾಗಿದೆ. ಹಾಗಾಗಿ ಅದು ಜಗತ್ತಿನಲ್ಲಿ ಬಡತನ ಮತ್ತು ಶ್ರೀಮಂತಿಕೆ ಎಂಬ ಎರಡು ಪರಸ್ಪರ ವಿರೋಧಿ ಸ್ಥಿತಿಗಳನ್ನು ಸ್ಥಾಯಿಗೊಳಿಸುತ್ತದೆ; ಮತ್ತು ಆ ಮೂಲಕ ಜಗತ್ತಿನ ಜನಸ್ತೋಮವನ್ನು ಸದಾ ಎರಡಾಗಿ ಒಡೆದಿಟ್ಟು, ಸಮಾಜದಲ್ಲಿ ನಿರಂತರ ಸಂಘರ್ಷವೇರ್ಪಡಿಸುತ್ತದೆ ಎಂದವರು ವಿಶ್ಲೇಷಿಸಿದ್ದರು. ಹೀಗಾಗಿ ಈ ನಾಗರೀಕತೆಯ ಶೀಲವೇ ಹಿಂಸೆಯಾಗಿದ್ದು, ಇದರ ಮಧ್ಯೆ ಅಶಾಂತನಾದ ಮನುಷ್ಯ ತನ್ನನ್ನು ತಾನು ಕಂಡುಕೊಳ್ಳುವ ಆಧ್ಯಾತ್ಮಿಕ ಗುರಿಯಿಂದ ವಂಚಿತನಾಗುತ್ತಾನೆ ಹಾಗೂ ಇದರ ಅತ್ಯಂತಿಕ ಪರಿಣಾಮವೆಂದರೆ ಮಾನವತೆಯ ನಾಶ

ಎಂಬುದು ಗಾಂಧೀಜಿಯ ಕಾಣ್ಕೆಯಾಗಿತ್ತು. ಗಾಂಧೀಜಿಯ ಕೊಲೆಯಾದ ದಿನದಿಂದಲೂ ಈ ಕಾಣ್ಕೆ ನಮಗೆ ಹೆಚ್ಚೆಚ್ಚು ಪ್ರಸ್ತುತವಾಗುತ್ತಿದೆ- ಎರಡು ವಿಶ್ವ ಯುದ್ಧಗಳು ಆರಂಭಿಸಿದ ಜಾಗತಿಕ ಹಿಂಸೆ, ಒಂದಲ್ಲ ಒಂದು ರೂಪದಲ್ಲಿ ನಿರಂತರವಾಗಿ ಜಗತ್ತನ್ನು ಕಾಡುತ್ತಲೇ ಬಂದಿದೆ. ಸದ್ಯಕ್ಕೆ ಅದು ಜಾಗತಿಕ ಭಯೋತ್ಪಾದನೆಯ ರೂಪ ತಾಳಿ ನಿಂತಿದೆ. ಮೇಲ್ನೋಟಕ್ಕೆ ಇದು ಧರ್ಮ ಸಂಬಂಧಿ ಹಿಂಸೆಯಾಗಿ ಕಾಣುತ್ತಿದ್ದರೂ, ಅದು ಜಗತ್ತಿನ ಒಂದು ನಿರ್ದಿಷ್ಟ ನಾಗರೀಕತೆಯ ಪ್ರಭುತ್ವ ಸ್ಥಾಪನೆಯ ಪ್ರಯತ್ನಗಳು, ಜಗತ್ತಿನಾದ್ಯಂತ ಉಂಟು ಮಾಡುತ್ತಿರುವ ಹಲವು-ಆರ್ಥಿಕ. ಸಾಮಾಜಿಕ, ಸಾಂಸ್ಕೃತಿಕ-ನೆಲೆಗಳಲ್ಲಿನ ಒತ್ತಡಗಳು ಪಡೆದುಕೊಂಡಿರುವ ಹಿಂಸಾತ್ಮಕ ಅಭಿವ್ಯಕ್ತಿಯೇ ಆಗಿದೆ.

ಆಧುನಿಕತೆಯ ಅರ್ಥದ ಮೂಲ ನೆಲೆಗಳನ್ನು ಗಮನಿಸಿದರೆ, ಗಾಂಧೀಜಿ ಆಧುನಿಕರಲ್ಲಿ ಆಧುನಿಕರು-ಅತ್ಯಾಧುನಿಕರು ಎಂಬುದು ಗೊತ್ತಾಗುತ್ತದೆ: ಯೂರೋಪಿನ ೧೯ನೇ ಶತಮಾನದ ಉಳಿಗಮಾನ್ಯ ವ್ಯವಸ್ಥೆ ಜನತೆಯ, ನಿರ್ದಿಷ್ಟವಾಗಿ ಭಾರತದ ಸಮಸ್ತ ಜನತೆಯ ಲೌಕಿಕ ಹಾಗೂ ಆಧ್ಯಾತ್ಮಿಕ ಅಭಿವೃದ್ಧಿಗಳೆರಡಕ್ಕೂ ಮಾರಕವಾಗುವುದೆಂದು ವಿಶ್ಲೇಷಿದರು . ಅದಕ್ಕಾಗಿ ಅಲ್ಪ ಸಂಖ್ಯಾತ ಉಳ್ಳವರ. ಪ್ರತಿಷ್ಠರ ಅಧಿಕಾರ ಹಂಚಿಕೆಯ ಸಂಧಾನ ವೇದಿಕೆ ಮಾತ್ರವಾಗಿದ್ದ ಕಾಂಗ್ರೆಸ್ಸನ್ನು, ರೈತ ಕೂಲಿಕಾರರು, ಅಸ್ಪೃಶ್ಯರು ಮತ್ತು ಮಹಿಳೆಯರನ್ನೂ ಕೂಡಿಸಿಕೊಂಡು ಸಮಸ್ತ ಭಾರತೀಯರ ಆತ್ಮ ಗೌರವದ ಅಳಿವು-ಉಳಿವುಗಳ ಪ್ರಶ್ನೆಯನ್ನಾಧರಿಸಿದ, ಜನತಾ ಆಂದೋಲನವನ್ನಾಗಿ ಪರಿವರ್ತಿಸಿದರು. ಈ ಪರಿವರ್ತನೆಯ ಪ್ರಯತ್ನದಲ್ಲಿ, ಜಡಗೊಂಡಿದ್ದ ಎಲ್ಲ ಆರ್ಥಿಕ-ಸಾಮಾಜಿಕ-ಧಾರ್ಮಿಕ ನಿಲುವುಗಳನ್ನೂ , ಸಂರಚನೆಗಳನ್ನೂ ಪ್ರಶ್ನಿಸಿದರು ಮತ್ತು ವರ್ತಮಾನದ ಅಗತ್ಯಗಳಿಗೆ ತಕ್ಕಂತೆ ಅವನ್ನು ಪುನರ್ನಿರೂಪಿಸದರು. ಹೀಗೆ, ಆಧುನಿಕತೆಯ ಅರ್ಥವನ್ನು, ಅದರ ಭೌತಿಕ ಆವರಣದಾಚೆಗೆ ತಂದು, ವಿಶ್ವದ ನೆಲೆಯಲ್ಲಿ ಒಂದು ಸಮಾನತೆಯ ಮೌಲ್ಯವಾಗಿ ಕಂಡರಿಸಿದರು.

ಪಶ್ಚಿಮದ ಯಂತ್ರ ನಾಗರೀಕತೆಯನ್ನು ಪ್ರತಿನಿಧಿಸುವ ಆಧುನಿಕತೆಯು ಸಾರ್ವತ್ರಿಕವಾಗಿ ಮನುಷ್ಯನ ಅಸ್ತಿತ್ವದ ಘನತೆಯನ್ನೇ, ನಿರ್ದಿಷ್ಟವಾಗಿ ಭಾರತೀಯನ ಅಸ್ಮಿತೆಯನ್ನೇ ಬುಡಮೇಲುಗೊಳಿಸುವಂತಹುದು ಎಂಬುದನ್ನವರು ಅರಿತಿದ್ದರು. ೧೯೦೮ರ ಹೊತ್ತಿಗೇ, ಇಂಗ್ಲೆಡ್‌ನಿಂದ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣಿಸುತ್ತಿದ್ದಾಗ ಬರೆದ-ಗಾಂಧೀವಾದದ 'ಬೈಬಲ್' ಎಂದೇ ಪರಿಗಣಿಸಲ್ಪಟ್ಟಿರುವ- 'ಹಿಂದ್ ಸ್ವರಾಜ್'ನಲ್ಲಿಯೇ ಅದನ್ನವರು ವಿವರಿಸಿದ್ದರು. ಆಗ ಅವರಿಗೆ ಭಾರತದ ಸ್ವಾತಂತ್ರ್ಯಾಂದೋಲನದ ಮುಂಚೂಣಿಯಲ್ಲಿ ತಾವು ನಿಲ್ಲಬೇಕಾಗುತ್ತದೆ ಎಂಬುದರ ಕಲ್ಪನೆಯೂ ಇರಲಿಲ್ಲ. ಹಾಗಾಗಿಯೇ ಅವರು ಆ ಕೃತಿಯಲ್ಲಿ ನಾಗರೀಕತೆ ಎಂಬುದನ್ನೇ, ಶರೀರ ಸುಖ ವರ್ಧನೆಯಷ್ಟೇ ಅದರ ಗುರಿಯಾಗಿರುವುದರಿಂದ, ಅದೊಂದು ರೋಗವಾಗಿದೆ ಎಂದು

ಗುರುತಿಸಿದ್ದರು. ಆದರೆ ಸ್ವಾತಂತ್ರ್ಯಾಂದೋಲನದ ಮಧ್ಯದಲ್ಲಿ, ದೇಶವನ್ನು ಅದರೆಲ್ಲ ನೆಲೆಗಳಲ್ಲಿ ಪುನಾರಚಿಸುವ ಅಗತ್ಯ-ಜವಾಬ್ದಾರಿಗಳೂ ಮೂಡತೊಡಗಿದಾಗ, ಗಾಂಧೀಜಿ ಅವರಲ್ಲಿ-ಆ ಪುನಾರಚನೆಯ ಅವಕಾಶದಲ್ಲಿ-ಹೊಸ ನಾಗರೀಕತೆಯೊಂದರ ಅಸ್ತಿವಾರದ ಹೊಳಹು ಕಂಡರು. ಅದೇ ಗ್ರಾಮ ಸ್ವರಾಜ್ಯದ ಮೂಲ ಕಲ್ಪನೆ. ಆ ಕಲ್ಪನೆಯ ವಿಕಾಸದ ಹಿನ್ನೆಲೆಯಲ್ಲೇ ಅವರು ತಮ್ಮ ಸಾವಿನ ದಿನಗಳ ಹೊತ್ತಿಗೆ, ಯಂತ್ರ ಪರಿಕಲ್ಪನೆ ಕುರಿತಂತೆ 'ಶರೀರವೆಂಬುದೇ ಒಂದು ಯಂತ್ರ, ಹಾಗಾಗಿ ನಾನು ಯಂತ್ರ ವಿರೋಧಿಯಲ್ಲ ; ಮನುಷ್ಯನ ಆತ್ಮ ಕಳೆದು ಹೋಗುವಂತಹ ಯಂತ್ರ ವ್ಯವಸ್ಥೆಯನ್ನು ಮಾತ್ರ ನಾನು ವಿರೋಧಿಸುತ್ತೇನೆ. ವಾಸ್ತವವಾಗಿ, ನಮ್ಮ ಹಳ್ಳಿಗಳ ಪ್ರತಿ ಮನೆಯಲ್ಲೂ ಹಬೆಯಿಂದಲೋ, ವಿದ್ಯುತ್ತಿನಿಂದಲೋ ಚಲಿಸಬಲ್ಲ ಯಂತ್ರಗಳ ಅನುರಣವನ್ನು ನಾನು ಕೇಳಬಯಸುತ್ತೇನೆ' ಎಂದು ಹೇಳುವಷ್ಟು, ವಾಸ್ತವವಾದಿಯಾಗಿದ್ದರು.

ಗಾಂಧೀಜಿ ಕಲ್ಪಿಸಿಕೊಂಡಿದ್ದ ಹೊಸ ನಾಗರೀಕತೆಗೆ ಭಾರತೀಯ ಸಂಸ್ಕೃತಿಯೇ ಮೂಲ ದ್ರವ್ಯವಾಗಿತ್ತು. ಅದನ್ನು ಅವರು 'ದೇಶಿ' ಎಂದು ಕರೆದರು. ಪ್ರತಿಯೊಂದು ಸಮುದಾಯವೂ ತಾನು ವಾಸಿಸುವ ಪ್ರದೇಶದ ಸಮುದಾಯವೂ ತಾನು ವಾಸಿಸುವ ಧಾರಣ ಶಕ್ತಿ (Carrying power)ಗೆ ತಕ್ಕಂತೆ ಬದುಕುವ ಕ್ರಮವದು. ಭಾರತೀಯರು ಬಹು ಪುರಾತನ ಕಾಲದಿಂದಲೂ, ಸುತ್ತಲಿನ ಜನ ಮತ್ತು ನಿಸರ್ಗದೊಂದಿಗೆ ಸಮರಸದಲ್ಲಿರುವ ಇಂತಹುದೊಂದು ಜೀವನ ಕ್ರಮವನ್ನು ರೂಪಿಸಿಕೊಂಡು, ತಮ್ಮ ನೆಮ್ಮದಿಯಲ್ಲಿ ತಾವಿದ್ದರು. ಅವರು ಪರಾಕ್ರಮಣಕ್ಕೆ ಒಳಗಾಗುತ್ತಾ ಬಂದಿದ್ದೇ ಈ ಜೀವನ ಕ್ರಮವನ್ನು ಉಲ್ಲಂಘಿಸಿ, ಪರಾಕರ್ಷಣೆಗಳಿಗೆ ತಮ್ಮನ್ನು ತಾವು ತೆತ್ತುಕೊಳ್ಳುತ್ತಾ ಹೋದುದರ ದೌರ್ಬಲ್ಯದಿಂದಾಗಿ. ಇದರ ಪರಿಣಾಮವಾಗಿಯೇ ಈ ಜೀವನ ಕ್ರಮದ ಆಧಾರಗಳಾಗಿದ್ದ ಉತ್ಪಾದನಾ ತಂತ್ರ-ಕೌಶಲ್ಯಗಳು, ಸಾಮಾಜಿಕ ಸಂಸ್ಥೆಗಳು ಹಾಗೂ ಸಾಂಸ್ಕೃತಿಕ ಪ್ರತೀಕಗಳು ವಿಕೃತಿಗೊಂಡದ್ದು ಮತ್ತು ಆ ಮೂಲಕ ಎಲ್ಲ ಸಾಂಸ್ಥಿಕ ಸ್ವಾಯತ್ತತೆ ಹಾಗು ವೈಯುಕ್ತಿಕ ಸ್ವಾತಂತ್ರ್ಯಗಳನ್ನು ಕಳೆದುಕೊಂಡದ್ದು. ಹಾಗಾಗಿ, ಈಗ ಸ್ವಾತಂತ್ರ್ಯವೆಂದರೆ ನಮ್ಮ ಅಗತ್ಯಗಳಿಗೆ ಒಂದು ಮಿತಿ ಹಾಕಿಕೊಳ್ಳುವುದು ಮತ್ತು ಆ ಮಿತಿಯನ್ನು ತನ್ನ ಸಮುದಾಯದ ಒಟ್ಟಾರೆ ಒಳಿತಿನ ಒರೆಗಲ್ಲಿನಲ್ಲಿ ನಿರ್ಧರಿಸಿಕೊಳ್ಳುವ ನೈತಿಕತೆಗೆ ಬದ್ಧವಾಗುವುದು ಎಂದೇ ಅರ್ಥ. ಮನುಷ್ಯನ ನೈತಿಕತೆ ವಿಕಾಸಗೊಳ್ಳಬೇಕಾದ್ದು ಈ ನೆಲೆಯಿಂದಲೇ ಎಂದು ಗಾಂಧೀಜಿ ನಂಬಿದ್ದರು. ಅವರ ಪ್ರಕಾರ ಇಂತಹ ನೈತಿಕತೆಯಿಂದ ಪುಟಿಯುವ ಸ್ವಾತಂತ್ರ್ಯದ ಲೌಕಿಕ ರೂಪವೇ ಸ್ವರಾಜ್ಯ: "ತನ್ನನ್ನು ತಾನು ಅಂಕೆಯಲ್ಲಿಟ್ಟುಕೊಳ್ಳುವುದೇ ಸ್ವರಾಜ್ಯ . ಸ್ವಯಂ ನೀತಿಯನ್ನು ಪಾಲಿಸುವವನು, ಇತರರನ್ನು ವಂಚಿಸದವನು, ತಾಯಿ-ತಂದೆ-ಹೆಂಗಸರು-ಮಕ್ಕಳು-ಆಳುಕಾಳು-ನೆರೆಹೊರೆ ಎಲ್ಲರ ಬಗ್ಗೆಯೂ ತನ್ನ ಕರ್ತವ್ಯವನ್ನು ಪಾಲಿಸುವವನು. ಇಂಥವನಿಗೆ ಮಾತ್ರ ಅದು ಲಭ್ಯ. ಇಂಥವನು ಎಲ್ಲೇ ಇರಲಿ, ಯಾವ ದೇಶದಲ್ಲೇ

ಇರಲಿ, ಅವನು ಯಾವಾಗಲೂ ಸ್ವರಾಜ್ಯದ ಪ್ರಜೆಯೇ! ಇಂಥವರು ಎಲ್ಲಿ ಎಷ್ಟು ಜನರಿದ್ದಾರೋ ಅಲ್ಲಿ ಅಷ್ಟು ಸ್ವರಾಜ್ಯ."

ಇಂಥಹ ಸ್ವರಾಜ್ಯದ ಕಲ್ಪನೆಯ ಮೂಸೆಯಲ್ಲಿಯೇ ಅವರ 'ದೇಶೀ' ಆಶಯವು ಸ್ವಾತಂತ್ರ್ಯಾಂದೋಲನವನ್ನು ಕಟ್ಟಿದ ಅಹಿಂಸಾತ್ಮಕ ಸತ್ಯಾಗ್ರಹ, ಹಿಂದೂ ಮುಸ್ಲಿಂ ಏಕತೆ, ಅಸ್ಪೃಶತಾ ನಿವಾರಣೆ ಮುಂತಾದ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಒಂದು ಆತ್ಯಂತಿಕ ಗುರಿಯೆಡೆಗೆ ಸಂಘಟಿಸುವ 'ಸ್ವದೇಶಿ' ಎಂಬ ಒಂದು ಚಳುವಳಿಯಾಗಿ ರೂಪು ತಳೆದದ್ದು . ಅದರ ಪರಿಣಾಮ ಸ್ವರೂಪವಾಗಿಯೇ ಗ್ರಾಮ ಸ್ವರಾಜ್ಯದ ಚಿತ್ರ ಮೂಡಿ ನಿಂತದ್ದು. ಗಾಂಧೀಜಿ ಸ್ವದೇಶಿ ಎಂಬುದನ್ನು, ಬ್ರಿಟಿಷ್ ವಸಾಹತುಶಾಹಿಯ ಚೇತನವನ್ನು- ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಯ ಪ್ರೇರಕ ಶಕ್ತಿಯಾಗಿದ್ದ ಅಲ್ಲಿನ ಆಧುನಿಕ ಕೈಗಾರಿಕೆಗಳ, ವಿಶೇಷವಾಗಿ ಹತ್ತಿ ಗಿರಣಿಗಳ ಗಡಿಯಾಚೆಯ ಮಾರುಕಟ್ಟೆಯನ್ನು- ಅಡಗಿಸುವ ಆರ್ಥಿಕ ಅಸ್ತ್ರವನ್ನಾಗಿ ರೂಪಿಸಿದ್ದರೆ ; ಗ್ರಾಮ ಸ್ವರಾಜ್ಯವನ್ನು ವಸಾಹತುಶಾಹಿಯ ಮುಂದಿನ ಎಲ್ಲ ಅವತಾರಗಳ ಆಕರ್ಷಣೆಗಳಿಂದ ಸ್ವತಂತ್ರ ಭಾರತವನ್ನು ರಕ್ಷಿಸುವ, ಸ್ವಸಂಪೂರ್ಣ ರಾಜಕೀಯ ಅಸ್ತ್ರವನ್ನಾಗಿ ರೂಪಿಸಿದ್ದರು: ತನ್ನ ಅಗತ್ಯಗಳನ್ನು ಸಮುದಾಯದ ವ್ಯವಸ್ಥಿತ ಬದುಕಿಗೆ ಪೂರಕವಾಗಿರುವ ಮಟ್ಟಿಗೆ ಮಾತ್ರ ನಿರೂಪಿಸಿಕೊಂಡು, ಅವನ್ನು ಆದಷ್ಟೂ ಮಟ್ಟಿಗೆ ನೆರೆಹೊರೆಯ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡೇ ಪೂರೈಸಿಕೊಳ್ಳುವ ಮತ್ತು ಅತ್ಯಗತ್ಯವಾದಾಗ ಮಾತ್ರ ಸಮುದಾಯದ ಹೊರ ಘಟಕಗಳೊಂದಿಗೆ-ಹತ್ತಿರದ ಹಳ್ಳಿಯೋ ಪಟ್ಟಣವೋ- ಸರಕು ಅಥವಾ ಸೇವೆಯನ್ನು ವ್ಯಾಪಾರ ವಿನಿಮಯ ಮಾಡಿಕೊಳ್ಳುವುದಕ್ಕೆ ಬದ್ಧವಾದ ವ್ಯವಸ್ಥೆಯದು.

ಹಳ್ಳಿಯನ್ನು ಮೂಲ ಘಟಕವನ್ನಾಗಿ ಹೊಂದಿರುವ ಈ ವ್ಯವಸ್ಥೆ, ನಿಸರ್ಗವನ್ನು ಸೂರೆಗೊಂಡು ಹೆಚ್ಚುವರಿ ಸರಕು ಉತ್ಪಾದನೆ ಮಾಡಿ, ಜನರ ಬಯಕೆಗಳನ್ನು ಕೆರಳಿಸುವ ಮೂಲಕ ಅನಗತ್ಯ ಮಾರುಕಟ್ಟೆ ಸೃಷ್ಟಿಸುವ; ಹಾಗೂ ಆ ಮೂಲಕ ಮನುಷ್ಯನ ಬದುಕನ್ನು ಅನಗತ್ಯವಾಗಿ ಜಟಿಲಗೊಳಿಸಿ ಅವನನ್ನು ಅಶಾಂತನನ್ನಾಗಿ ಮಾಡುವಂತಹ ಸರಕು ಆರ್ಥಿಕತೆಗೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಗಾಂಧೀಜಿ ನಂಬಿದ್ದರು . ಈ ಹಿನ್ನೆಲೆಯಲ್ಲಿ ಅವರು ಒಂದು ಸಮಾಜದ ಭೌತಿಕ ಅಗತ್ಯಗಳು ಹಾಗೂ ಅವುಗಳ ಉತ್ಪಾದನೆ ನಡುವಣ ತಾರ್ಕಿಕ ಸಂಬಂಧವನ್ನು ಕಡಿದು ಹಾಕಿ, ಹೆಚ್ಚುವರಿ ಉತ್ಪಾದನೆಗೆ ಅವಕಾಶ ಮಾಡಿ ಕೊಡುವ ಯಂತ್ರಗಳನ್ನು, ಸಾಮಾಜಿಕ ಅಗತ್ಯಗಳಗನುಸಾರ ಪುನರ್ವಿನ್ಯಾಸಗೊಳಿಸುವ ಅನಿವಾರ್ಯತೆಯನ್ನು ಮನಗಂಡರು. ಆಗ ಕಣ್ಮುಂದೆ ಬಂದದ್ದೇ ಚರಕಾ-ಸಾಂಪ್ರದಾಯಿಕ ರಾಟೆಯ ಪರಿಷ್ಕೃತ ರೂಪ. ಸಮೂಹ ಉತ್ಪಾದನೆಯನ್ನಾಧರಿಸಿದ ಪಶ್ಚಿಮದ ಸರಕು ಅರ್ಥಶಾಸ್ತ್ರಕ್ಕೆ ಪ್ರತಿಯಾಗಿ, ಸಮೂಹದಿಂದ

ಉತ್ಪಾದನೆಯನ್ನು ಆಧರಿಸಿ ಜನತಾ ಅರ್ಥಶಾಸ್ತ್ರವನ್ನು ರೂಪಿಸಲು ಆಧಾರವಾದ ಈ ಚರಕ. ಗಾಂಧೀಜಿ ಮಾತುಗಳಲ್ಲೇ ಹೇಳುವುದಾದರೆ, ಗ್ರಾಮ ಸ್ವರಾಜ್ಯದ ಕಾರ್ಯಶೀಲತೆಗೆ ಒಂದು ಸಂಕೇತವಾಗುಳಿದಿದೆ: "ಚರಕದ ಮೂಲಕ ಭಾರತ ತನ್ನ ಸಂಕೋಲೆಗಳನ್ನು ಕಿತ್ತೊಗೆಯಲು ಪ್ರಯತ್ನಶೀಲವಾಗಿದೆ. ಈ ಪ್ರಯತ್ನದಲ್ಲಿ ಮಾನವ ಕೋಟಿಯ ವಿಮೋಚನೆಯ ತಿಳುವಳಿಕೆಯೂ ಇದೆ. ಭಾರತದ ಆತ್ಮ ವಿಕಾಸವೂ ಆಗುತ್ತದೆ. ಚರಕದ ದಿವ್ಯ ಸಂಗೀತ, ಆತ್ಮಕ್ಕೆ ಸಾಂತ್ವನ ಅಮೃತ. ನೂಲಲು ಪ್ರಾರಂಭಿಸಿ ನೋಡಿ-ಮನಃಶಾಂತಿಗೆ ಅದೆಷ್ಟು ಸಹಾಯಕ ಎಂದು ತಿಳಿದೀತು. ನಮ್ಮ ಜೀವನದ ಅಸ್ತವ್ಯಸ್ತತೆಗಳೆಲ್ಲ ಹಾಸುಹೊಕ್ಕು ತೀರಿಯಾಗಿಸುವ ಶಕ್ತಿ ಆ ನೂಲು ಮತ್ತು ಆ ನೂಲುವ ಕ್ರಿಯೆಯಲ್ಲಡಗಿದೆ. ಸಮಸ್ತ ಜೀವ ರಾಶಿಯೂ ಅಹಿಂಸೆಯ ಆಧಾರದ ಮೇಲೆಯೇ ನಿಂತಿದೆ. ಚರಕ ಆ ಬೃಹತ್ ಜೀವನ ಚಕ್ರದ ಸಂಕೇತ"

ಮನುಷ್ಯ ತನ್ನ ದೈವತ್ವವನ್ನು ಕಂಡುಕೊಳ್ಳುವುದೇ ಜೀವನದ ಪರಮೋದ್ದೇಶವೆಂದು ನಂಬಿದ್ದ ಗಾಂಧೀಜಿ, ಅವನು ಈ ದೈವತ್ವದ ಅರಿವಿನಲ್ಲೇ ಸೃಷ್ಟಿಯ ಏಕತೆ ಕಾಣಬಲ್ಲ ಹಾಗೂ ಸರ್ವಸಮತೆಯಲ್ಲಿರಬಲ್ಲನಾದ್ದರಿಂದ, ಅದಕ್ಕೆ ಪೂರಕವಾದ ದುಡಿಮೆಯ ಪದ್ಧತಿಯನ್ನು ·ಅಳವಡಿಸಿಕೊಳ್ಳುವುದೇ ಮನುಷ್ಯ ಧರ್ಮವಾಗಿದೆ ಎಂದು ಪ್ರತಿಪಾದಿಸಿದರು. ಈ ಹಿನ್ನೆಲೆಯಲ್ಲಿಯೇ ಅವರು ನಿಜವಾದ ಅರ್ಥಪೂರ್ಣ ಜೀವನಕ್ಕೆ -ವಿಶೇಷವಾಗಿ ಜನಬಲವೇ ಬಂಡವಾಳವಾಗಿರುವ ಭಾರತದ ಸಂದರ್ಭದಲ್ಲಿ-ಯಾವ ಪ್ರಮಾಣದ ಕೈಗಾರಿಕೆ ಸೂಕ್ತ ಎಂಬ ಚರ್ಚೆಗೆ ಉತ್ತರ ನೀಡಿದ್ದು, 'ಮನುಷ್ಯ ಪ್ರಮಾಣ'ದ ಕೈಗಾರಿಕೆಯ ಪ್ರತಿಪಾದನೆಯ ಮೂಲಕ. ಮನುಷ್ಯನ ದೇಹ ಮತ್ತು ಆತ್ಮಗಳೆರಡರೊಂದಿಗೆ ಸಮರಸದಲ್ಲಿರಬಹುದಾದ ಇಂತಹ ಯಂತ್ರಗಳಿಂದ ಸಾಮಾಜಿಕವಾಗಿ ಸಜ್ಜಾದ ಗ್ರಾಮಗಳು, ಭಾರತವನ್ನು ಒಂದು ಗ್ರಾಮ ಗಣರಾಜ್ಯವನ್ನಾಗಿ ರೂಪಿಸಿ, ಹೊರಗಿನ ಯಾವುದೇ ತೆರನ ದಾಳಿಯ-ಮಿಲಿಟರಿ ದಾಳಿಯೂ ಸೇರಿದಂತೆ-ವಿರುದ್ಧ ಸ್ವಯಂ ರಕ್ಷಣೆ ಒದಗಿಸಬಲ್ಲುದು ಎಂದು ಅವರು ನಂಬಿದ್ದರು: ಆರ್ಥಿಕ ಶಕ್ತಿ ಕೇಂದ್ರಗಳು ಭೌಗೋಳಿಕವಾಗಿ ಹರಡಿ ಹೋಗಿರುವುದರಿಂದ ಯಾವುದೇ ತೆರನ ಅಥವಾ ಪ್ರಮಾಣದ ಶಸ್ತ್ರಾಸ್ತ್ರ ದಾಳಿ ರಾಷ್ಟ್ರವನ್ನು ನಿಶ್ಚೇಷ್ಟಿತಗೊಳಿಸಲಾಗುವುದಿಲ್ಲ. ಅಲ್ಲದೆ ಬಡತನವೆಂಬುದು ಸರಕು ಆಧಾರಿತ ಪಶ್ಚಿಮದ ಅರ್ಥಶಾಸ್ತ್ರದ ಆವಿಷ್ಕಾರವಾಗಿದ್ದು, ಜನತಾ ಅರ್ಥಶಾಸ್ತ್ರ ಅದನ್ನು ಕೆಲಸದಿಲ್ಲದಿರುವಿಕೆ ಎಂದು ನಿರೂಪಿಸಿಕೊಂಡು, ಅದರ ಪರಿಹಾರವನ್ನಷ್ಟೇ ತನ್ನ ಗುರಿಯನ್ನಾಗಿಸಿಕೊಳ್ಳಬೇಕು;ಇಲ್ಲದೇ ಹೋದರೆ ದೇಶ, ಪರಿಹಾರವಾದಷ್ಟೂ ಹೆಚ್ಚುತ್ತಾ ಹೋಗುವ- ಸರಕು ಅರ್ಥಶಾಸ್ತ್ರದ ರಾಜಕಾರಣ ಸೃಷ್ಟಿಸುವ- ನಿರಂತರ ಬಡತನದ ಚಕ್ರಕ್ಕೆ ಸಿಲುಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ವೈವಿಧ್ಯಮಯ ಆಕರ್ಷಣೆಗಳೊಂದಿಗೆ ಮುನ್ನುಗ್ಗುತ್ತಿದ್ದ ಪಶ್ಚಿಮದ ಯಂತ್ರ

ನಾಗರೀಕತೆಯ ಎದುರು- ಅದೂ ಶತಮಾನಗಳ ದಾರಿದ್ರ್ಯದಿಂದ ತಪ್ತವಾಗಿದ್ದ ಭಾರತೀಯ ಸಮಾಜದ ಮಧ್ಯೆ- ಇಂತಹ ಅಭಿಪ್ರಾಯ ಪ್ರತಿಪಾದಿಸಲು ಯಾರಿಗಾದರೂ ಎಂಟೆದೆಯೇ ಬೇಕು. ಆದರೆ ಗಾಂಧೀಜಿಗೆ ಆಳವ ಸತ್ಯದ ಅರಿವಿತ್ತು; ಅದರ ಕೇಂದ್ರದಿಂದಲೇ ಹೊರಹೊಮ್ಮಿದ್ದ ನೈತಿಕ ಸ್ಥೈರ್ಯವೂ ಅವರ ಬೆಂಬಲಕ್ಕಿತ್ತು. ಹಾಗಾಗಿಯೇ ಅವರು ಪಶ್ಚಿಮದ ನಾಗರೀಕತೆ ಬಗ್ಗೆ ಖಚಿತ ಶಬ್ದಗಳಲ್ಲಿ ಹೀಗೆ ಹೇಳಲು ಸಾಧ್ಯವಾಯಿತು: "ಮನುಷ್ಯನಿಗೆ ಒಂದು ಮಟ್ಟದ ಸುಖ-ಸೌಲಭ್ಯಗಳು ಅಗತ್ಯವೇ ನಿಜ. ಆದರೆ ಒಂದು ನಿರ್ದಿಷ್ಟ ಮಟ್ಟದಾಚೆಗೆ ಅವು ಸೌಲಭ್ಯವಾಗುಳಿಯದೇ ಬಂಧನಗಳೇ ಆಗುತ್ತವೆ. ಹಾಗಾಗಿ ಮಿತಿಯಿಲ್ಲದ ಅಗತ್ಯಗಳನ್ನು ಸೃಷ್ಟಿಸಿಕೊಳ್ಳುತ್ತಾ ಮತ್ತು ಅವುಗಳನ್ನು ಪೂರೈಸಿಕೊಳ್ಳುತ್ತಾ ಹೋಗುವ ಆರ್ಥಿಕತೆಯ ಆದರ್ಶವು ಒಂದು ಭ್ರಮೆ ಹಾಗೂ ವ್ಯೂಹದಂತಷ್ಟೇ ನನಗೆ ತೋರುತ್ತದೆ. ಮನುಷ್ಯನ ಭೌತಿಕ ಅಗತ್ಯಗಳ ಪೂರೈಕೆ ವ್ಯವಸ್ಥೆಯು ಭೌತಿಕ ಅಶ್ಲೀಲತೆಯಾಗಿ ಅವನತಿಗೊಳ್ಳುವ ಮುನ್ನ, ಒಂದಲ್ಲ ಒಂದು ಹಂತದಲ್ಲಿ ಪೂರ್ಣಾಂತ್ಯಕ್ಕೆ ಬರಬೇಕು. ಯೂರೋಪಿಯನ್ನರು ತಾವು ಗುಲಾಮರಾಗುತ್ತಿರುವ ಐಷಾರಾಮಗಳ ಭಾರದಡಿಯಲ್ಲಿ ಕುಸಿದು ಹೋಗಬಾರದೆಂದಿದ್ದರೆ ,ಅವರು ತಮ್ಮ ಜೀವನ ದೃಷ್ಟಿಯನ್ನು ಪುನರ್‍ರೂಪಿಸಿಕೊಳ್ಳಬೇಕು."

ಈ ಮಾತುಗಳನ್ನು ಯೂರೋಪಿಯನ್ನರಾದರೂ, ತಮ್ಮ ಧ್ಯಾನಸ್ಥ ಸ್ಥಿತಿಯಲ್ಲಿ ಸಹಾನುಭೂತಿಯಿಂದ ಕೇಳಿರಬಹುದು. ಆದರೆ ಗಾಂಧೀಜಿಯ ಆಪ್ತ ಶಿಷ್ಯರಲ್ಲೊಬ್ಬರಾದ ರಾಷ್ಟ್ರದ ಪ್ರಥಮ ಪ್ರಧಾನ ಮಂತ್ರಿಯಾದ ಜವಹರಲಾಲ್ ನೆಹ್ರೂ ಅವರಿಗೆ, ಇದೆಲ್ಲ ಅಂದಿನ ಜಾಗತಿಕ ಸಂದರ್ಭದಲ್ಲಿ ಅಸಂಗತವೂ ಅಪ್ರಸ್ತುತವೂ ಆಗಿ ಕಂಡಿತು! ಅರ್ಥಶಾಸ್ತ್ರ ಹಾಗೂ ರಾಜಕಾರಣಗಳ ಗುರಿಗಳೆಂದರೆ, ಮನುಷ್ಯನ ಭೌತಿಕ ಅಗತ್ಯಗಳನ್ನು ಪೂರೈಸುತ್ತಾ ಜೀವನ ಮಟ್ಟವನ್ನು ಸುಧಾರಿಸುವುದೇ ಆಗಿದೆ ಎಂಬ 'ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್'ನ ಐರೋಪ್ಯ ಅರ್ಥಶಾಸ್ತ್ರೀಯ ನಂಬಿಕೆಗಳಿಗೆ ಮಾರು ಹೋಗಿದ್ದ ಅವರು, ಆಧುನಿಕ ತಂತ್ರಜ್ಞಾನದ ದಕ್ಷತೆ ಮಾತ್ರ ಭಾರತದ 'ಹಿಂದುಳಿದಿರುವಿಕೆ'ಯ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲುದೆಂದು ದೃಡವಾಗಿ ನಂಬಿದ್ದರು. ಹಾಗಾಗಿಯೇ ಅವರು ೧೯೪೫ರಲ್ಲಿ ಗಾಂಧೀಜಿ, ತಮ್ಮಿಬ್ಬರಲ್ಲಿ ದೇಶ ಕಟ್ಟುವ ವಿಷಯದಲ್ಲಿ ಭಿನ್ನಮತ ಹೆಚ್ಚುತ್ತಿದೆಯೆಂಬ ಆತಂಕದಿಂದ *ಗ್ರಾಮ ಸ್ವರಾಜ್ಯದ* ತಾತ್ವಿಕತೆಯ ಕಡೆ ಗಮನ ಸೆಳೆದು ತಮಗೆ ಬರೆದ ಪತ್ರಕ್ಕೆ ಉತ್ತರವಾಗಿ, ಸದಾ ಹಿಂದಕ್ಕೆ ನೋಡುವ ಮನೋಧರ್ಮದ ಗ್ರಾಮ ಸಂಸ್ಕೃತಿಯ ಆಧಾರದ ಮೇಲೆ ಆಧುನಿಕ ರಾಷ್ಟ್ರವನ್ನು ಕಟ್ಟಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದರು.

ಆದರೆ ಐರೋಪ್ಯ ಮಾದರಿಯ ಆಧುನೀಕರಣದ ಅವಸರದಲ್ಲಿದ್ದ ನೆಹ್ರೂ ತಮ್ಮ ಗುರು ಬಹು ಹಿಂದೆಯೇ, "ನನ್ನ ಆದರ್ಶ ಗ್ರಾಮದಲ್ಲಿ ಅತ್ಯಂತ ಬುದ್ಧಿವಂತ

ಮಾನವಜೀವಿಗಳಿರುತ್ತಾರೆ..... ಸ್ವತಂತ್ರ ಸ್ತ್ರೀ ಪುರುಷರಾಗಿ ಜಗತ್ತಿನ ಮಾನವರೆಲ್ಲರ ಸರಿಸಮಾನರಾಗಿ ಬಾಳುತ್ತಾರೆ.. ಅಲ್ಲಿ ಆಧುನಿಕ ಸೌಕರ್ಯಗಳಾದ ಅಂಚೆ-ತಂತಿ-ಸಾರಿಗೆ ಮುಂತಾದವು ಇರುವ ಸಾಧ್ಯತೆಯನ್ನೂ ನಾನು ಊಹಿಸಿಕೊಳ್ಳಬಲ್ಲೆ... ನನ್ನ ಆದರ್ಶಗ್ರಾಮ ಅತ್ಯುತ್ತಮ ಸ್ವಚ್ಛತಾ ವ್ಯವಸ್ಥೆ ಹೊಂದಿರುತ್ತದೆ... ಗಾಳಿ ಬೆಳಕು ಧಾರಾಳವಾಗಿರುವಂತೆ ಸ್ಥಳೀಯ ಸಾಮಗ್ರಿಗಳಿಂದ ಕಟ್ಟಲ್ಪಟ್ಟ ಪ್ರತಿ ಕುಟೀರವೂ ಹಿತ್ತಲು, ಕೊಟ್ಟಿಗೆ,ತರಕಾರಿ ಬೆಳೆಯಲು ಜಾಗ ಹೊಂದಿರುತ್ತದೆ.... ನಿರ್ಮಲವಾದ ಅಗಲ ರಸ್ತೆಗಳು, ಸರ್ವರಿಗೂ ತೆರೆದಿರುವ ಬಾವಿಗಳು, ಸರ್ವಧರ್ಮ ಪ್ರಾರ್ಥನಾ ಮಂದಿರ, ಸಾರ್ವಜನಿಕ ಸಭಾಂಗಣ, ಗೋಮಾಳ, ಸಹಕಾರಿ ಗೋಶಾಲೆ, ಔದ್ಯೋಗಿಕ ಶಿಕ್ಷಣ ನೀಡುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಮತ್ತು ಸ್ಥಳೀಯ ನ್ಯಾಯ ಪಂಚಾಯ್ತಿ ಇರುತ್ತದೆ..." ಎಂದು, ತಮ್ಮ ಗ್ರಾಮ ಸ್ವರಾಜ್ಯದ ಕಲ್ಪನೆ ನಿಜವಾದ ಭಾರತದ ಅವಶೇಷ ಮಾತ್ರಗಳಂತಿರುವ ಸದ್ಯದ ಹಳ್ಳಿಗಳನ್ನು ಆಧರಿಸಿದ್ದಲ್ಲ; ಬದಲಿಗೆ ಈ ಹಳ್ಳಿಗಳು ಹೀಗೇಕಾದವು ಎಂಬ ಧ್ಯಾನದಲ್ಲಿ ಹುಟ್ಟಿದುದು ಎಂದು ಸ್ಪಷ್ಟಪಡಿಸಿದ್ದರ ಕಡೆ ಗಮನವೇ ಇದ್ದಂತಿರಲಿಲ್ಲ.

ಇದೆಲ್ಲದರ ಪರಿಣಾಮ, ಇಂದು ಹಲವು ಹಿಂಸಾತ್ಮಕ ರೂಪಗಳಲ್ಲಿ ನಮ್ಮ ಕಣ್ಮುಂದೆಯೇ ಇದೆ: ಭವಿಷ್ಯ ಭಾರತದ ಭವ್ಯ ದೇಗುಲಗಳೆಂದು ನೆಹ್ರೂ ವರ್ಣಿಸಿ, ನಿರ್ಮಿಸಿದ ಭಾಕ್ರಾ-ನಂಗಲ್ ಬೃಹತ್ ಅಣೆಕಟ್ಟುಗಳ ಅಚ್ಚುಕಟ್ಟು ಪ್ರದೇಶಗಳು, ಅವು ಒತ್ತಾಯಿಸಿದ ಕೃಷಿ ಪದ್ಧತಿಗಳು ಸೃಷ್ಟಿಸಿದ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ವಿರೋಧಾಭಾಸಗಳಿಂದಾಗಿ ಇಂದು ರೈತ ಸಮುದಾಯದ ಪಾಲಿಗೆ ಅಕ್ಷರಶಃ ರುದ್ರಭೂಮಿಗಳಾಗಿ ಪರಿವರ್ತಿತವಾಗುತ್ತಿವೆ: ಆಧುನೀಕರಣದ ಚಕ್ರ ಒಂದು ಸುತ್ತನ್ನು ಪೂರ್ಣಗೊಳಿಸುತ್ತಿರುವಂತಿದೆ: ಮತ್ತೆ ಗಾಂಧೀಜಿ ನೆನಪಾಗುತ್ತಿದ್ದಾರೆ. ನೆನಪಾಗುವುದೇನು, ರಾಷ್ಟ್ರ ಜೀವನದ ಸುಪ್ತ ಮನಸ್ಸಿನಲ್ಲಿ ಒಂದು ಕೈಗೂಡದ ಆಶಯದ ಪ್ರತೀಕವಾಗಿ ಎಂದೆಂದೂ ನೆಲೆಸಿಯೇ ಇದ್ದಾರೆಂದು ತೋರುತ್ತದೆ. ಹಾಗಾಗಿಯೇ ಈ ಆಧುನೀಕರಣದ ಗೌಜು ಗದ್ದಲಗಳ ನಡುವೆಯೂ ಮೌನದ ಮಣಿಗಳಂತೆ ಅಲ್ಲಲ್ಲಿ ಹಲವರು ತಮ್ಮದೇ ರೀತಿ ಹಾಗೂ ಮಿತಿಗಳಲ್ಲಿ ಗಾಂಧೀಜಿಯ ಪುನರನ್ವೇಷಣೆಯಲ್ಲಿ ತೊಡಗಿದ್ದಾರೆ. ಈಗ ತನ್ನ ಸ್ವಯಂವಿರೋಧಗಳನ್ನು ಮೀರಿ ಬೆಳೆಯಲಾಗದೆ, ಗಂಭೀರ ಬಿಕ್ಕಟ್ಟಿನಲ್ಲಿರುವಂತೆ ತೋರುತ್ತಿರುವ ಆಧುನಿಕ ನಾಗರೀಕತೆಯನ್ನು ಪ್ರತಿನಿಧಿಸುವ ನಗರೀಕರಣಕ್ಕೆ ಪರ್ಯಾಯವಾದ ರಾಷ್ಟ್ರ ನಿರ್ಮಾಣದ ಮಾದರಿಗಳ ಪ್ರಾಯೋಗಿಕತೆ, ಹಲವು ರೂಪಗಳಲ್ಲಿ-ಸಂಶೋಧನೆ, ಸಂಘಟನೆ, ಪ್ರತಿಭಟನೆ-ಅವರಿಂದ ನಡೆದಿವೆ. ಅವುಗಳಲ್ಲಿ ನಮ್ಮ ಹತ್ತಿರದ ಮತ್ತು ಕುತೂಹಲಕಾರಿ ಪ್ರಯೋಗವೆಂದರೆ ಭೀಮನಕೋಣೆಯ *ಚರಕ*.

ಕರ್ನಾಟಕದ ಖ್ಯಾತ ರಂಗಕರ್ಮಿ, ಬಹುಮುಖ ಪ್ರತಿಭೆಯ ಪ್ರಸನ್ನ ತೊಂಭತ್ತರ ದಶಕದ ಆರಂಭದಲ್ಲಿ ಹಲವು ಅವತಾರ-ಅವಾಂತರಗಳ ನಂತರ ನೆಮ್ಮದಿಯನ್ನರಸಿಕೊಂಡು

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಹೆಗ್ಗೋಡಿನಲ್ಲಿ ನೆಲೆ ನಿಂತಿರು
ಹೆಗ್ಗೋಡೆಂದರೆ ಕೆ.ವಿ. ಸುಬ್ಬಣ್ಣನವರ ನೀನಾಸಂ ಮಾತ್ರ. ಆ ನೀನಾಸಂ ಚಿತ್ರ
ನಾಟಕ, ಸಾಹಿತ್ಯ, ಚಿತ್ರಕಲೆ, ಸಂಗೀತ ಮುಂತಾದ ಸೃಜನಶೀಲ ಚಟುವಟಿಕೆಗ
ತೊಡಗಿಕೊಂಡಿದ್ದ ಪ್ರಸನ್ನ, ಅಲ್ಲಿನ ಗೆಳೆಯರೊಡಗೂಡಿ ಸಾಮೂಹಿಕ ರಂಗ
ಚಟುವಟಿಕೆಗಳಿಗಾಗಿ ಕವಿ ಕಾವ್ಯ ಟ್ರಸ್ಟ್ ಸ್ಥಾಪಿಸಿದರು. ಈ ಟ್ರಸ್ಟ್‌ನ ಕೆಲಸಗಳ ವ್ಯಾ
ವ್ಯಾಪ್ತಿ ಹೆಚ್ಚುತ್ತಾ ಹೋದಂತೆ, ಪ್ರಸನ್ನ ಹಾಗೂ ಅವರ ಗೆಳೆಯರಿಗೆ ತಾವು ಬದುಕುತ್ತಿರು
ಗ್ರಾಮ ಪರಿಸರದ ಜೀವನ ಕ್ರಮವನ್ನು ಪುನಾರಚಿಸುವ ಅಗತ್ಯ ಕಂಡಿತು. ಆಗ ಹುಟ್ಟಿ
ಚರಕಾ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಂಘ. ೧೯೯೬ರಲ್ಲಿ ಕವಿಕಾವ್ಯ ಟ್ರಸ್ಟ್
ಅಂಗ ಸಂಸ್ಥೆಯಾಗಿ ರೂಪುಗೊಂಡ ಚರಕಕ್ಕೆ ಬಯಸದೇ ಭಾಗ್ಯದಂತೆ ದೊರೆತ
ಹೆಗ್ಗೋಡಿನ ಪಕ್ಕದ ಭೀಮನ ಕೋಣೆಯಲ್ಲಿ ಪಾಳು ಬಿದ್ದಿದ್ದ ಸರ್ಕಾರೀ ಕೈಗಾರಿ
ಷೆಡ್ಡು. ಸರ್ಕಾರಿ ಯೋಜನೆಯೊಂದರಡಿಯಲ್ಲಿ ಅಲ್ಲಿ ಮಹಿಳೆಯರಿಗೆ ಹೊಲಿ
ತರಬೇತಿಯೊಂದಿಗೆ ಆರಂಭವಾದ ಚರಕದ ಕೆಲಸ ಕಾರ್ಯಗಳು, ಇಂದು ಸುತ್ತಮುತ್ತ
ಗ್ರಾಮಗಳ ೧೫೦ಕ್ಕೂ ಹೆಚ್ಚು ವಿವಿಧ ವಯೋಮಾನದ ಹಾಗೂ ಸಾಮಾಜಿಕ ಹಿನ್ನೆಲೆ
ಮಹಿಳೆಯರನ್ನು ನೂಲುವುದು, ನೇಯುವುದು, ಬಣ್ಣಗಾರಿಕೆ, ಚಿತ್ರಕಲೆ, ಕಸೂ
ಮುದ್ರಣ, ಮಾರಾಟ ಮುಂತಾದ ಬಹುಮುಖಿ ಕ್ರಿಯಾಶೀಲತೆಯಲ್ಲಿ ತೊಡಗಿಸಿಕೊಂ
ಗಾಂಧೀಜಿ ಕಲ್ಪನೆಯ ಗ್ರಾಮ ಸ್ವರಾಜ್ಯದ ಒಂದು ಜೀವಂತ ಘಟಕದಂತೆ ಎಲ್ಲರ ಗಮ
ಸೆಳೆಯುತ್ತಿದೆ.

ಕನಸಿನೊಂದಿಗೆ ಬುದ್ಧಿ, ಬದ್ಧತೆ, ಶ್ರಮ, ಶಿಸ್ತುಗಳೂ ಇದ್ದ
ಸ್ತ್ರೀಯರಾಗಿಯೇ ಏನೆಲ್ಲಾ ಸಾಧಿಸಬಹುದೆಂಬುದಕ್ಕೆ ಚರಕ ಉದಾಹರಣೆಯಾಗಿ
ಕೈಗಾರಿಕೆಗಳೇ ಇಲ್ಲದ ಮಲೆನಾಡಿನ ಈ ಪ್ರದೇಶದಲ್ಲಿ ಅನಿವಾರ್ಯವಾದ ಉತ್ಪಾ
ಕೃಷಿಯು, ಕಾಡನ್ನೇ ನಾಶ ಮಾಡತೊಡಗಿದ್ದಾಗ, ಜನರಿಗೆ ಬೇರೆ ಉದ್ಯೋಗ ಒದಗಿ
ಕೊಟ್ಟು, ಆ ಮೂಲಕ ಕಾಡನ್ನು ರಕ್ಷಿಸುವ ಹಾಗೇ, ಜನರನ್ನು ಒಂದು ಹೊಸ ಅರಿವಿನೆಡೆ
ಒಯ್ಯುವ ಆಧ್ಯಾತ್ಮಿಕ ಕಾರ್ಯಕ್ರಮದಂತೆ ತೋರುವ ಚರಕ, ಅದರ ಸದಸ್ಯರ ಪಾಲಿ
ಒಂದು ಹೊಸ ಜೀವನ ಕ್ರಮದ ಪ್ರತೀಕವೇ ಆಗಿದೆ. ಹಾಗಾಗಿ ಇಲ್ಲಿನ ಮಹಿಳೆಯರ
ಸದಾ ಹಸನ್ಮುಖಿಗಳು. ಅವರಿಗೆ ಆರ್ಥಿಕ ಭದ್ರತೆಯ ಜೊತೆಗೆ ಹೊಸ ಜೀವನ ಶೈಲಿಯ
ಸಂಭ್ರಮವೂ ಇದೆ. ಅವರು ಒಟ್ಟಿಗೆ ಪ್ರಾರ್ಥನೆ ಮಾಡುತ್ತಾರೆ; ಹಾಡು-ಹಸೆ, ಕೋಲಾಟ
ಯಕ್ಷಗಾನ-ತಾಳಮದ್ದಲೆ, ಬೀದಿ ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನ
ಹಮ್ಮಿಕೊಳ್ಳುತ್ತಾರೆ. ಕೆಲಸದ ಪ್ರಮಾಣಕ್ಕೆ ತಕ್ಕಂತೆ ಪ್ರತಿಫಲ ಪಡೆಯುವ ಈ ಸದಸ್ಯ
ತಿಂಗಳಿಗೆ ಒಂದು ಸಾವಿರ ರೂಪಾಯಿಗಳಿಂದ ಮೂರು ಸಾವಿರ ರೂಪಾಯಿಗಳವರೆ
ಸಂಪಾದಿಸಬಲ್ಲವರಾಗಿದ್ದಾರೆ. ರಿಯಾಯಿತಿ ದರದ ಮಧ್ಯಾಹ್ನದ ಊಟ, ಪ್ರಾವಿಡೆಂ

ಪಿಫ್. ವರ್ಷಕೊಮ್ಮೆ ಲಾಭಾಂಶವನ್ನನುಸರಿಸಿ ಬೋನಸ್ -ಇವು ಅವರಿಗೆ ದೊರೆಯುವ ಇತರ ಸೌಲಭ್ಯಗಳು. ಆರ್ಥಿಕ ಸಬಲೀಕರಣದ ಮೂಲಕ ಮಹಿಳೆಯರಲ್ಲಿ ನಾಯಕತ್ವ ರೂಪಿಸುವ ಆಶಯ ಹೊಂದಿರುವ ಚರಕಕ್ಕೆ ಈಗ ಹೊನ್ನೇಸರದ ಶ್ರೀಮತಿ ಪಾರ್ವತಿ ಅಧ್ಯಕ್ಷರು ಹಾಗೂ ಭೀಮನ ಕೋಣೆಯ ಶ್ರೀಮತಿ ಮಹಾಲಕ್ಷ್ಮಿ ಕಾರ್ಯದರ್ಶಿ. ಹಸೆ ಕಲಾವಿದೆ ಗೌರಮ್ಮ, ಮಲೆನಾಡಿನಲ್ಲಿ ಮರತೇ ಹೋಗುತ್ತಿದ್ದ ಪಾರಂಪರಿಕ ಹಸೆ ಚಿತ್ತಾರ ಕಲೆಯನ್ನು ಸೃಜನಶೀಲಗೊಳಿಸಿ, ಹಳ್ಳಿ ಪಟ್ಟಣಗಳೆನ್ನದೆ ಬೆಳಗುವಂತೆ ಮಾಡಿ, ಚರಕಕ್ಕೆ ವಿಶಿಷ್ಟ ಶೋಭೆ ತಂದಿರುವ ಇನ್ನೋರ್ವ ಮಹಿಳೆ.

ಚರಕ ಪೂರ್ತಿ ಸ್ಥಳೀಯ ಹಾಗೂ ಪರಿಸರ ಪ್ರಿಯ ಉದ್ಯಮ. ಅದರ ಬಣ್ಣಗಾರಿಕೆಯೂ ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳನ್ನಾಧರಿಸಿದೆ. ಮಳೆ ಕೊಯ್ಲು ಹಾಗೂ ಇಂಗುಗುಂಡಿಗಳ ಮೂಲಕ ನೀರಿನ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ವಿವಿಧ ಉದ್ದೇಶಗಳಿಗಾಗಿ ಸೌರ ಶಕ್ತಿಯನ್ನೂ ಅಳವಡಿಸಲಾಗುತ್ತಿದೆ. ಮಣ್ಣಿನ ಗೋಡೆ ಹಾಗೂ ಹೆಂಚಿನ ಮಾಡುಗಳುಳ್ಳ ಚರಕದ ವಾಸ್ತುವೇ ಸ್ಥಳೀಯ ಪ್ರಾಕೃತಿಕ ಪರಿಸರದೊಂದಿಗೆ ಸಮರಸದಲ್ಲಿದ್ದಂತಿದೆ! ಮಣ್ಣಿನಿಂದ ಹೊರಬಂದ ಹತ್ತಿ, ಇಲ್ಲಿನ ಸುಮಾರು ೬೦ ನಮೂನೆಯ ಚರಕಗಳು, ೧೪೦ ಕೈಮಗ್ಗಗಳು ಹಾಗೂ ೪೦ ಹೊಲಿಗೆ ಯಂತ್ರಗಳ ಅನುರಣನದಲ್ಲಿ, ವಿವಿಧ ಬಣ್ಣಗಳು ಹಾಗೂ ಕಲಾ ವಿನ್ಯಾಸಗಳಿಂದ ಜುಬ್ಬಾ,ಪೈಜಾಮ, ಚೂಡಿದಾರ, ಕೌದಿ, ಕೈಚೀಲ, ಕರವಸ್ತ್ರ ಮುಂತಾದ ಸುಮಾರು ೪೦ ನಮೂನೆಯ ಸಿದ್ಧ ವಸ್ತ್ರೋತ್ಪನ್ನಗಳಾಗಿ ರೂಪು ತಳೆದು, ಇದಕ್ಕಾಗಿಯೇ ರಚಿಸಲಾಗಿರುವ ಬೆಂಗಳೂರಿನಲ್ಲಿರುವ 'ದೇಸೀ ಟ್ರಸ್ಟ್' ಮೂಲಕ ಮಾರುಕಟ್ಟೆಗೆ ಬರುತ್ತದೆ. ಮಾರುಕಟ್ಟೆಗೆ ಬಂದುದೆಲ್ಲವೂ ತನ್ನ ಗುಣಮಟ್ಟದಿಂದಾಗಿಯೇ ಮಾರಾಟವಾಗುತ್ತದೆ. ಚರಕದ ಹೋದ ವರ್ಷದ ಒಟ್ಟು ವಾರ್ಷಿಕ ವಹಿವಾಟು ೩೭ ಲಕ್ಷ ರೂಪಾಯಿಗಳು. ಲಾಭ,ಮೂರು ಲಕ್ಷ ರೂಪಾಯಿಗಳು. ಇದನ್ನು ಸಂಸ್ಥೆಯ ಅಭಿವೃದ್ಧಿಗೆ ಹಾಗೂ ತನ್ನ ಗ್ರಾಮೀಣಾಭಿವೃದ್ಧಿ ವೇದಿಕೆಯ ತರಬೇತಿ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಬಳಸಲಾಗುತ್ತದೆ. ಹೀಗಾಗಿ ಈಗ ಹೆಗ್ಗೋಡು ಎಂದರೆ ನೀನಾಸಂ ಮಾತ್ರವಲ್ಲ. ಚರಕ ಕೂಡಾ ಅಲ್ಲಿದೆ.

ಗಾಂಧೀಜಿ ನಂತರ ಸುಮಾರು ಈ ಅರವತ್ತು ವರ್ಷಗಳಲ್ಲಿ ಆಧುನಿಕ ನಾಗರೀಕತೆಯ ಪ್ರತೀಕತೆ ಯೂರೋಪ್‌ನಿಂದ ಅಮೆರಿಕಾಕ್ಕೆ ಸ್ಥಾನಾಂತರಗೊಂಡಿದೆ. ಯೂರೋಪಿಗೆ ಒಂದು ದೀರ್ಘ ಪರಂಪರೆಯಿದ್ದು ಅದರಲ್ಲಿ ಅನೇಕ ವಿಶಿಷ್ಟ ಸಂಸ್ಕೃತಿಗಳು ಅಂತರ್ಗತವಾಗಿದ್ದುದರಿಂದ, ಅಲ್ಲಿ ಆಧುನಿಕ ನಾಗರೀಕತೆಯು ವಿಪರೀತಗಳಿಗೆ ಹೋಗದೆ ಸಾಂಸ್ಕೃತಿಕ ವಿವೇಕದೊಂದಿಗೆ ಒಂದು ಸಂಯಮದಲ್ಲಿರಲು ಸಾಧ್ಯವಾಗಿದೆ. ಆದರೆ ದೀರ್ಘ ಪರಂಪರೆಯಾಗಲೀ ಆಳವಾದ ಸಂಸ್ಕೃತಿಯಾಗಲೀ ಇಲ್ಲದ-ಇದ್ದ ಮೂಲ ನಿವಾಸಿ ಸಂಸ್ಕೃತಿಯನ್ನು ನಾಶಮಾಡಿ ಕೂತಿರುವ-ಅಮೆರಿಕಾ, ಆಧುನಿಕ ನಾಗರೀಕತೆಯ

ಆಕ್ರಮಣಕಾರಿ ಪ್ರವೃತ್ತಿಯನ್ನು ಸಹಜವೆಂಬಂತೆ ಅಳವಡಿಸಿಕೊಂಡು, ತನ್ನೆಲ್ಲಾ ಸೃಜನಶೀಲತೆಯನ್ನು ಅಸಭ್ಯ ನಿಯಮೋಲ್ಲಂಘನೆಗಳಲ್ಲೇ ವ್ಯಯಿಸುತ್ತಿದೆ. ಈ ನಿಯಮೋಲ್ಲಂಘನೆಗಳು ಮೇಲ್ನೋಟಕ್ಕೆ ಕಾಣುವಂತೆ ಉದ್ಯಮಶೀಲತೆಯ ಸಾಹಸಗಳಾಗಿರದೆ, ಜಗತ್ತಿನ ಒಟ್ಟು ಜನಸಂಖ್ಯೆಯ ಶೇ. ೫.೬ರಷ್ಟಿರುವ ಈ ದೇಶದ ಜನ ಸಮುದಾಯವು ಜಗತ್ತಿನ ಶೇ. ೪೦ರಷ್ಟು ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುವ ಜೀವನ ಶೈಲಿಯನ್ನು ಉಳಿಸಿಕೊಂಡು ಹೋಗಲು ನಡೆಸುತ್ತಿರುವ ಹಿಂಸಾಚಾರವೇ ಆಗಿದೆ. ಇದು ಗಾಂಧೀಜಿ ಮುನ್ನೋಡಿದ್ದ ಆಧುನಿಕ ನಾಗರೀಕತೆ ತಲುಪಬಹುದಾದ ವಿಕ್ಷಿಪ್ತತೆ. ಹಾಗಾಗಿಯೇ ಅವರು ಈ ಆಧುನಿಕತೆಯನ್ನು ವಸಾಹತುಶಾಹಿಯ ಉಪಕರಣ ಎಂದು ಕರೆದಿದ್ದರು. ಇಂದು ಬಹುವಾಗಿ ಚರ್ಚಿತವಾಗುತ್ತಿರುವ ಜಾಗತೀಕರಣವು ಜಗತ್ತಿನ ಅಮೆರಿಕನ್ನೀಕರಣದ ಈ ಪ್ರಯತ್ನವೇ ಆಗಿರುವುದರಿಂದ, ಜಗತ್ತಿನಾದ್ಯಂತ ಈ ಜೀವನ ಶೈಲಿಯ ಅಳವಡಿಕೆಯ ಸದ್ಯದ ರಾಜಕೀಯ ಪ್ರಯತ್ನ ಹಾಗೂ ಅದಕ್ಕೆ ಸಿಗುತ್ತಿರುವ ಸಾರ್ವತಿಕ ಮಾನ್ಯತೆಯು; ಇನ್ನೆಂತಹ ಭಯಂಕರ ಜಾಗತಿಕ ರಾಜಕಾರಣವನ್ನು ಹುಟ್ಟು ಹಾಕಬಹುದು ಮತ್ತು ಅದರ ಪರಿಣಾಮಗಳು ಯಾವ ಪ್ರಮಾಣದ ಮತ್ತು ರೀತಿಯ ಹಿಂಸಾಚಾರಕ್ಕೆ ಕಾರಣವಾಗಬಹುದು ಎಂಬುದನ್ನು ಊಹಿಸಲೂ ಅಸಾಧ್ಯವಾಗಿದೆ.

ಈಗಲಾದರೂ ಮಾನವತೆ, ಗಾಂಧೀಜಿ ಕಂಡ ಹೊಸ ಜಗತ್ತಿನ ಕಾಣ್ಕೆಯನ್ನು ಸಾವಧಾನದಿಂದ ಪರಿಶೀಲಿಸಬೇಕಿದೆ. ಈ ದೃಷ್ಟಿಯಿಂದ, ಇಷ್ಟು ವರ್ಷಗಳ ಕಾಲ ಅಲ್ಲಲ್ಲಿ ಹರಡಿಕೊಂಡಿದ್ದ ಗಾಂಧಿ ಚಿಂತನೆ ಕುರಿತ ಕುತೂಹಲ, ಈಗ ಜಾಗತಿಕ ಮಟ್ಟದಲ್ಲಿ ಒಂದು ಕೇಂದ್ರ ಬಿಂದುವಿಗೆ ಬರುತ್ತಿರುವಂತೆ ಕಾಣುತ್ತಿದೆ. 'ವಿಶ್ವ ಸಾಮಾಜಿಕ ವೇದಿಕೆ' (World Social Forum)ಯೆಂಬ ಹೊಸ ಸಮಾಜವಾದಿ ಆಂದೋಲನದ ಪ್ರಭಾವ ವಲಯದಲ್ಲೇ, 'ಇನ್ನೊಂದು ಜಗತ್ತು ಸಾಧ್ಯ' (Another World is Possible) ಎಂಬ ಚಳುವಳಿಯೊಂದು ಲ್ಯಾಟಿನ್ ಅಮೆರಿಕಾದಲ್ಲಿ ಆರಂಭವಾಗಿ, ಜಗತ್ತಿನಾದ್ಯಂತ ಸಮಾನ ಮನಸ್ಕ ಸಣ್ಣ ಪುಟ್ಟ ಗುಂಪುಗಳ ರೂಪದಲ್ಲಿ ಹರಡುತ್ತಾ 'ಸಾಮಾಜಿಕ ಶೃಂಗ ಸಭೆ' (Social Summit)ಗಳನ್ನು ನಡೆಸುತ್ತಾ ಬೆಳೆಯುತ್ತಿದೆ. ಮುಖ್ಯವಾಗಿ ಜಗತ್ತಿನ ನೆಲ-ನೀರು-ಆಕಾಶಗಳನ್ನು ನಿಗಮೀಕರಿಸುವ-ಲಿಮಿಟೆಡ್ ಕಂಪನಿಗಳ ವಶಕೊಪ್ಪಿಸುವ-ವಿನಾಶಕಾರಿ ಆರ್ಥಿಕ ನೀತಿಯ ಹಿಂದಿರುವ ಜಾಗತಿಕ ರಾಜಕಾರಣವನ್ನು ವಿರೋಧಿಸುವ ಪ್ರಯತ್ನವಾಗಿ ಆರಂಭವಾದ ಈ ಆಂದೋಲನ: ಆಧುನೀಕರಣದ ಪರಮೋಚ್ಚ ಘಟ್ಟದಂತೆ ತೋರುವ ಜಾಗತೀಕರಣದ ಆಧಾರ ಸ್ತಂಭಗಳಾದ ಜಾಗತಿಕ ವ್ಯಾಪಾರ ಹಾಗೂ ಪರಿಸರ ಒಪ್ಪಂದಗಳ ಸಂಬಂಧ ನಡೆಯುವ ಸಭೆಗಳ ವಿರುದ್ಧ, ಜಗತ್ತಿನಾದ್ಯಂತ ಬೃಹತ್-ಆದರೆ ಅಹಿಂಸಾತ್ಮಕವಾದ-ಪ್ರತಿಭಟನೆಗಳನ್ನು ನಡೆಸುತ್ತಾ ತನ್ನ ರಾಜಕೀಯ ದರ್ಶನವನ್ನು ರೂಪಿಸಿಕೊಳ್ಳುತ್ತಿದೆ. ಆ ಮೂಲಕ ಅದು, ಮಾನವತೆ ಈಗ ನಾಗರೀಕತೆಗಳ

ಸಂಘರ್ಷದ ಹಿಂಸಾಚಾರಕ್ಕೆ ಸಿಲುಕಿರುವುದಕ್ಕೆ ಕಾರಣವಾಗಿರುವ ಜೀವನ ದೃಷ್ಟಿ, ಶೈಲಿ ಹಾಗೂ ಮೌಲ್ಯಗಳಿಗೆ ಪರ್ಯಾಯವಾದ ದೃಷ್ಟಿ, ಶೈಲಿ ಹಾಗೂ ಮೌಲ್ಯಗಳನ್ನು ಅನ್ವೇಷಿಸುತ್ತಾ, ಸಾರತಃ ಗಾಂಧೀಜಿಯನ್ನು ಪುನರನ್ವೇಷಿಸುವ ಆಂದೋಲನವಾಗಿ ರೂಪುಗೊಳ್ಳುತ್ತಿದೆ.

ಈಗ ಹೇಳಿ, ಯಾರು ಹೇಳಿದರು ಗಾಂಧಿ ಅವಾಸ್ತವಿಕ, ಅಪ್ರಸ್ತುತ ಎಂದು? ಹಾಗೆ ನೋಡಿದರೆ, ಗಾಂಧೀಜಿಯೇ ಹೇಳಿದ್ದರು: ನನ್ನ ಗ್ರಾಮ ಸ್ವರಾಜ್ಯದ ಕಲ್ಪನೆ ಯೂಕ್ಲಿಡ್‌ನ ಜ್ಯಾಮಿತಿಯ ಬಿಂದುವಿದ್ದಂತೆ; ಯಾವ ಜ್ಯಾಮಿತೀಯ ಉಪಕರಣದಿಂದಲೂ ಅದನ್ನು ಮೂಡಿಸಲಾಗುವುದಿಲ್ಲ. ಹಾಗಾಗಿ ಅದೊಂದು ಕಲ್ಪನೆ; ಅವಾಸ್ತವಿಕ. ಆದರೆ ಆ ಬಿಂದುವಿಲ್ಲದಿದ್ದರೆ ಜ್ಯಾಮಿತಿಯೇ ಇಲ್ಲ! ಬಹುಶಃ ಜಗತ್ತು ಸಹ ತನ್ನ ಜ್ಯಾಮಿತಿಯನ್ನು -ಸಹಜ ಸುಸ್ಥಿರತೆಯನ್ನು- ಕಂಡುಕೊಳ್ಳುವವರೆಗೂ ಗ್ರಾಮ ಸ್ವರಾಜ್ಯವೂ ಅವಾಸ್ತವಿಕ ಕಲ್ಪನೆಯೇ!

(*'ಸುಧಾ', ೫ ಅಕ್ಟೋಬರ್, ೨೦೦೬*)

ನಮ್ಮ ಶಿಕ್ಷಣ ನೀತಿ ಮತ್ತು ಇಂಗ್ಲಿಷ್

ನಮ್ಮ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆನ್ನುವ ಪ್ರಸ್ತಾಪವನ್ನು ಇದ್ದಕ್ಕಿದ್ದಂತೆ ಸರ್ಕಾರ ಸಾರ್ವಜನಿಕರ ಮುಂದಿಟ್ಟಿದೆ. (ಇದರ ಹಿಂದೆ, ಕರ್ನಾಟಕದಲ್ಲಿ ಶಾಲಾ ಶಿಕ್ಷಣ ಮತ್ತು ಆರ್ಥಿಕ ಪ್ರಗತಿಗಾಗಿ ಹೊಸ ಕಾರ್ಯಕ್ರಮ ಸಕ್ಷೆ ಎಂಬ ವಿಶ್ವ ಬ್ಯಾಂಕ್ ವರದಿ ನಂ. ೨೪೨೦೮ಐ. ಎನ್. ನಲ್ಲಿನ ತೀರ್ಮಾನ ಶಿಫಾರ್ಸುಗಳ ಒತ್ತಡವೂ ಇದ್ದೀತು) ಆಶ್ಚರ್ಯವೆಂಬಂತೆ, ಇತ್ತೀಚಿನವರೆಗೆ ಕನ್ನಡ ಚಳುವಳಿಯ ಒಂದು ಭಾಗವಾಗಿದ್ದು, ನಮ್ಮ ಜನ ಜೀವನದ ಸರ್ವಕ್ಷೇತ್ರಗಳಲ್ಲೂ ಕನ್ನಡದ ಏಳಿಗೆಗೆ ಬದ್ಧವಾಗಿದ್ದ ಕೆಲವು ಸಾಹಿತಿ ಚಿಂತಕರ ಗುಂಪೊಂದು, ಈಗಿರುವ ಸ್ಥಿತಿಯಲ್ಲಿ ಕನ್ನಡಕ್ಕೆ ಮಾರಕವಾಗಿ ಪರಿಣಮಿಸುವ ಸರ್ವ ಸಾಧ್ಯತೆಗಳನ್ನೂ ಒಳಗೊಂಡಿರುವ, ಸರ್ಕಾರದ ಈ ಪ್ರಸ್ತಾಪವನ್ನು ಬೆಂಬಲಿಸಿದೆ ಮಾತ್ರವಲ್ಲ, ಅದರ ಪರವಾಗಿ ಚಳುವಳಿ ಸಂಘಟಿಸಲೂ ಮುಂದಾಗಿ, ಕನ್ನಡದ ಪ್ರಶ್ನೆಯನ್ನು ಜಾತಿವರ್ಗಗಳ ಪ್ರಶ್ನೆಯಾಗಿಯೂ ಪರಿವರ್ತಿಸಲು ಪ್ರಯತ್ನಿಸಿವೆ. ಈ ಬೆಳವಣಿಗೆಗಳು ಆತ್ಯಂತಿಕವಾಗಿ ಕನ್ನಡ ಭಾಷಾ ಸಮುದಾಯದ ಮೂಲಾಧಾರಗಳನ್ನೇ ಸಡಿಲಿಸಿ, ಅದರ ಒಟ್ಟಾರೆ ಅಸ್ಮಿತೆಯನ್ನೂ, ಸೃಜನಶೀಲತೆಯನ್ನೂ ನಾಶಮಾಡುವ ಅಪಾಯವನ್ನು ಒಳಗೊಂಡಿದೆ. ಅಲ್ಲದೆ,ಈ ಮೂಲಕ ಆರಂಭವಾಗುವ ಒಂದು ಭಾಷೆಯ ಅಪ್ರಸ್ತುತೀಕರಣವು ಒಂದು ಜ್ಞಾನ ಪರಂಪರೆಯ ಹಲವು ಜ್ಞಾನಕೋಶಗಳ ನಾಶದ ಆರಂಭ ಎಂಬುದನ್ನು ಗಮನಿಸಲಿಕ್ಕಾಗದಷ್ಟು ಎಚ್ಚರ ತಪ್ಪುತ್ತಿದ್ದೇವೆ.ಇಂತಹ ಅಪಾಯಗಳನ್ನು ಸೂಚಿಸುವ ವಿಶ್ಲೇಷಣೆ-ಎಚ್ಚರಿಕೆಗಳ ಪರಿಣಾಮವೋ ಏನೋ ಎಂಬಂತೆ ಸರ್ಕಾರದ ಈ ಪ್ರಸ್ತಾವನೆ ಹಿಂದೆ ಸರಿದಿದ್ದಂತೆ ಕಾಣುತ್ತಿದ್ದ ಹೊತ್ತಿನಲ್ಲೇ, ಹೊಸ ಸಮ್ಮಿಶ್ರ ಸರ್ಕಾರ ದಿಢೀರನೆ ಈ ಬಗ್ಗೆ ಅಧಿಕೃತ ಆಜ್ಞೆಯೊಂದನ್ನು ಹೊರಡಿಸಿ ಕನ್ನಡ ಜನಮನದಲ್ಲಿ ಸಂಚಲನ ಉಂಟುಮಾಡಿದೆ.

ಈ ಕುರಿತು ನನ್ನ ಚಿಂತನೆಗಳನ್ನು, ಈ ಬೆಳವಣಿಗೆಗಳಿಗೆ ಪ್ರತಿಕ್ರಿಯೆಗಳ ರೂಪದಲ್ಲಿ ಪತ್ರಿಕೆಗಳಲ್ಲಿ ಮತ್ತು ವಿಚಾರ ಸಂಕಿರಣಗಳಲ್ಲಿ ದಾಖಲಿಸಿದ್ದನ್ನು, ಇಲ್ಲಿ ನಿಮ್ಮ ಮುಂದಿಡುತ್ತಿದ್ದೇನೆ.ಇವು ಬೇರೆ ಬೇರೆ ಸಂದರ್ಭಗಳಲ್ಲಿ,ಬೇರೆ ಬೇರೆ ಪ್ರಶ್ನೆ- ವಾದಗಳಿಗೆ ಉತ್ತರಿಸಲು ಬರೆದುವಾದವುಗಳಿಂದ.ಅಲ್ಲಲ್ಲಿ ಕಂಡುಬರಬಹುದಾದ ಸಣ್ಣಪುಟ್ಟ ವಿಷಯಗಳ ಪುನರಾವರ್ತನೆಗೆ ಕ್ಷಮೆ ಇರಲಿ.

೧. ಇಂಗ್ಲಿಷ್ ಕಲಿಕೆ: ಹೊಸ ಗೊಂದಲ ಬೇಡ

ಕನ್ನಡ ಮಾಧ್ಯಮ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ರಾಜ್ಯ ಸರ್ಕಾರದ ಪ್ರಸ್ತಾವನೆ ರಾಜ್ಯಾದ್ಯಂತ ಒಂದು ದೊಡ್ಡ ಚರ್ಚೆ, ಸಂಚಲನವನ್ನೇ ಉಂಟುಮಾಡಿದೆ. ಸರ್ಕಾರ ತನ್ನ ಹೊಸ ಪ್ರಸ್ತಾವನೆಯನ್ನು ಹೀಗೆ ಇದ್ದಕ್ಕಿದ್ದಂತೆ ಯಾವ ಆಧಾರದ ಮೇಲೆ ಮಂಡಿಸಿತು ಎನ್ನುವುದರ ಬಗ್ಗೆ ಮೇಲ್ನೋಟಕ್ಕೆ, ಸಂಬಂಧಿತ ಸಚಿವರ ವೈಯುಕ್ತಿಕ ಆಲೋಚನೆಗಳಂತೆ ತೋರುವ ಅಭಿಪ್ರಾಯಗಳ ಹೊರತಾಗಿ, ಯಾವ ಸಮೀಕ್ಷೆ ಅಥವಾ ಅಭಿಪ್ರಾಯ ಸಂಘಟನೆಯ ಸುಳಿವೂ ಇಲ್ಲ. ಈ ಹಿನ್ನಲೆಯಲ್ಲಿ ರಾಜ್ಯದ ಅನೇಕ ಸಾಂಸ್ಕೃತಿಕ ಹಾಗೂ ಸಾಮಾಜಿಕ ಗುಂಪುಗಳು ತಂತಮ್ಮದೇ ವಾದ ಸರಣಿಯನ್ನು ಮಂಡಿಸುತ್ತಾ, ಸರ್ಕಾರದ ಪ್ರಸ್ತಾವನೆಯನ್ನು ಬೆಂಬಲಿಸುವ ಅಥವಾ ವಿರೋಧಿಸುವ ನಿಲುವು ತಾಳುತ್ತಿವೆ. ಭಾಷಾ ಕಲಿಕೆಯ ಪ್ರಶ್ನೆ ಯಾವುದೇ ಸರ್ಕಾರದ ಶಿಕ್ಷಣ ನೀತಿಯ ಅತಿ ಮೂಲಭೂತವಾದ ಅಂಶವಾಗಿರುವುದರಿಂದ, ಇಂತಹ ಪ್ರಸ್ತಾವನೆಯನ್ನು ಯಾವುದೇ ಶಾಸ್ತ್ರೀಯ ಸಮೀಕ್ಷೆ ಅಥವಾ ತಜ್ಞ ಅಭಿಪ್ರಾಯ ಸಂಘಟನೆಯ ಸಿದ್ಧತೆಯಿಲ್ಲದೆ ಸಾರ್ವಜನಿಕ ಚರ್ಚೆಗೆ ಇಡುವುದು, ಶಿಕ್ಷಣ ಕುರಿತ ಸರ್ಕಾರದ ಹವ್ಯಾಸಿ ಮನೋಭಾವದ ಪ್ರತೀಕವಾಗಿದೆಯಷ್ಟೇ ಎಂದು ಹೇಳದೆ ವಿಧಿಯಿಲ್ಲ. ಹೀಗಾಗಿಯೇ ಈ ಕುರಿತ ಸಾರ್ವಜನಿಕ ಚರ್ಚೆ, ಗೊಂದಲದ ಗೂಡಾಗಿದೆ.

ಮೊದಲಾಗಿ, ಶಿಕ್ಷಣ ಮಾಧ್ಯಮ ಕುರಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲೂ, ಉಚ್ಚನ್ಯಾಯಾಲಯ ಅದಕ್ಕೆ ನೀಡಿರುವ ತಡಾಯಾಜ್ಞೆಯನ್ನು ತೆರವು ಗೊಳಿಸುವಲ್ಲಿ ಸರ್ಕಾರ ತೋರಿಸುತ್ತಿರುವ ನಿರಾಸಕ್ತಿಯನ್ನು ಈಗ ಸಾರ್ವಜನಿಕ ಚರ್ಚೆಯಲ್ಲಿ ತೊಡಗಿರುವವರು, ವಿಶೇಷವಾಗಿ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಪರವಾಗಿ ವಾದಿಸುತ್ತಿರುವವರು ಗಮನಿಸಬೇಕು. ಹಾಗೂ ಈ ನಿರಾಸಕ್ತಿಯ ಹಿನ್ನಲೆಯಲ್ಲಿ ಸರ್ಕಾರದ ಹೊಸ ಪ್ರಸ್ತಾವನೆಯ ಹಿಂದಿರಬಹುದಾದ ಉದ್ದೇಶವನ್ನೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಹಾಗೆ ಮಾಡಿದಾಗ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಪರವಾದ ವಾದವು, ಮಾತೃಭಾಷಾ ಅಥವಾ ಪ್ರಾದೇಶಿಕ ಭಾಷಾ ಮಾಧ್ಯಮವನ್ನು ಶಾಲಾ ಶಿಕ್ಷಣದ ಮಟ್ಟಿಗಾದರೂ ಕಡ್ಡಾಯ ಮಾಡಿ ಏಕರೂಪದ ಶಿಕ್ಷಣ ಕ್ರಮವನ್ನು ಜಾರಿಗೆ ತರಲು ಯತ್ನಿಸದೇ ಯಥಾಸ್ಥಿತಿಯಲ್ಲೇ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಜಾರಿಗೆ ತರಲು ಸರ್ಕಾರದ ಮೇಲೆ ನವ ಶಿಕ್ಷಣೋದ್ಯಮಿಗಳು ಹಾಗೂ ಕೈಗಾರಿಕೋದ್ಯಮಿಗಳು ಹೇರುತ್ತಿರಬಹುದಾದ ಒತ್ತಡಕ್ಕೆ ಪೂರಕವಾಗಿ ಕೆಲಸ ಮಾಡಬಹುದಾದ ಸಾಧ್ಯತೆ ಸ್ಪಷ್ಟವಾಗಿ ಗೋಚರವಾಗುವುದು. ಹಾಗೆ ನೋಡಿದರೆ ಹೊಸ ಅಥವಾ ಬದಲಾದ ಪರಿಸ್ಥಿತಿಯಲ್ಲಿ ನಮ್ಮ ಭಾಷಾ ಕಲಿಕೆ ನೀತಿಯನ್ನೂ

ಬದಲಿಸಿಕೊಳ್ಳಬೇಕೆನ್ನುವ 'ವಾಸ್ತವಿಕ ಪ್ರಶ್ನೆ'ಯನ್ನು ಆಧರಿಸಿದ್ದೆಂದು ಹೇಳಲಾಗುವ 'ವ್ಯಾವಹಾರಿಕ' ಅಭಿಪ್ರಾಯವನ್ನು ಶಿಕ್ಷಣ ಮಾಧ್ಯಮ ಮತ್ತು ಏಕರೂಪದ ಶಿಕ್ಷಣ ಕ್ರಮಕ್ಕೂ ಅನ್ವಯಿಸಬಹುದಲ್ಲವೇ? ಹೇಗೂ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಪರ ವಾದಿಸುತ್ತಿರುವವರಿಗೆ ಏಕರೂಪದ ಶಿಕ್ಷಣ ಜಾರಿ ಅಥವಾ ಮಾತೃಭಾಷಾ ಶಿಕ್ಷಣ ಮಾಧ್ಯಮವನ್ನು ಕಡ್ಡಾಯ ಮಾಡುವುದು ತುರ್ತು ಅಗತ್ಯವಾಗಿ ಕಂಡುಬಂದಿಲ್ಲವಲ್ಲ...... ಸರ್ಕಾರ ತನ್ನ ಹೊಸ ಪ್ರಸ್ತಾವನೆಯನ್ನು ಸಾರ್ವಜನಿಕ ಚರ್ಚೆಗೆ ಇಟ್ಟಿರುವುದರ ದೂರಗಾಮಿ ಉದ್ದೇಶವಾದರೂ ಇದೇ ಇರಬಹುದಲ್ಲವೇ? ಸರ್ಕಾರದ ಹೊಸ ಪ್ರಸ್ತಾವನೆಯ ಹಿಂದೆ ಕೇವಲ ಸಚಿವರ ಅಥವಾ ಸಂಪುಟ ಸದಸ್ಯರ ವೈಯುಕ್ತಿಕ ಅಭಿಪ್ರಾಯ ಮಾತ್ರ ಕೆಲಸ ಮಾಡಿದೆ ಎಂದು ತಿಳಿಯುವುದು 'ಹೊಸ' ಅಥವಾ 'ಬದಲಾದ ಪರಿಸ್ಥಿತಿ'ಯಲ್ಲಿ ಎಷ್ಟು ಸರಿಯೆನಿಸೀತು?

ಜಾಗತೀಕರಣದ ಇಂದಿನ ಹೊಸ ಸನ್ನಿವೇಶದಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವುದು ಅನಿವಾರ್ಯ ಅಥವಾ ಈ ಕ್ರಮದ ಮೂಲಕ ಪೋಷಕರ ಇಂಗ್ಲಿಷ್ ವ್ಯಾಮೋಹವನ್ನು ತಣಿಸಿ ಕನ್ನಡವನ್ನು ಉಳಿಸಬಹುದು ಎನ್ನುವ ವಾದಗಳು, ನಗ್ನ ನೃತ್ಯ ಮಾಡಬಯಸುವವರು ತಮ್ಮ ಕೊನೆಯ ಒಂದೋ ಎರಡೋ ಬಟ್ಟೆಗಳನ್ನು ಕಳಚಿ ಎಸೆಯಲು ನೆಪ ಹುಡುಕಲು ಪ್ರಯತ್ನಿಸಿದಷ್ಟೆ ಹಾಸ್ಯಾಸ್ಪದವಾಗಿದೆ. ಏಕೆಂದರೆ ಇಂಗ್ಲಿಷ್ ಕಲಿಕೆ, ಮೆಕಾಲೆ ಕಾಲದಿಂದಲೂ ನಮ್ಮ ಔಪಚಾರಿಕ ಶಿಕ್ಷಣ ಕ್ರಮದ ಅವಿಭಾಜ್ಯ ಅಂಗವಾಗಿ ಮುಂದುವರೆದಿದ್ದು; ಹಾಗೆ ಶಿಕ್ಷಣ ಪಡೆದವರೆಲ್ಲರೂ ಇಂಗ್ಲಿಷ್ ಅನಿವಾರ್ಯವೆಂಬಂತೆಯೇ ಇಂಗ್ಲಿಷ್ ಕಲಿಯುತ್ತಲೇ ಬಂದಿದ್ದಾರೆ. ಹೀಗೆ ಕಲಿತವರೆಲ್ಲರೂ ಇಂಗ್ಲಿಷ್ ಮೇಲೆ ಪ್ರಭುತ್ವ ಸಾಧಿಸಿಲ್ಲದಿರಬಹುದು. (ಒಂದನೇ ತರಗತಿಯಿಂದ ಕಲಿತ ಎಲ್ಲರಿಗೂ ಇದು ಸಾಧ್ಯವಾಗಿಲ್ಲ.) ಆದರೆ ಎಲ್ಲರೂ ಸಮಕಾಲೀನ ಬದುಕಿಗೆ ಬೇಕಾದಷ್ಟು; ಇಂಗ್ಲಿಷ್ ಕಲಿತು ಬದುಕು ಸಾಗಿಸಿದ್ದಾರೆ. ಇಂಗ್ಲಿಷೇ ತೊಡಕಾಗಿ ವಿಶೇಷ ಪರಿಣತಿಯಿಂದ ವಂಚಿತರಾದ ಉದಾಹರಣೆಗಳನ್ನು ಸುಮಾರು ಐವತ್ತು ವರ್ಷಗಳ ಹಿಂದೆ ಶಿಕ್ಷಣ ಪ್ರವೇಶ ಮಾಡಿದ ನಾನಂತೂ ಕಂಡಿಲ್ಲ. ನನ್ನೊಂದಿಗೆ ಎಲ್ಲ ರೀತಿಯ ಸಾಮಾಜಿಕ ಆರ್ಥಿಕ ಹಿನ್ನಲೆಯ ವಿಧ್ಯಾರ್ಥಿಗಳೂ ಸಾಗಿ ಬಂದಿದ್ದಾರೆ.

ಅಕ್ಷರ ಜ್ಞಾನದ ಬಲವಿಲ್ಲದ ಸಾಮಾಜಿಕ ಹಿನ್ನಲೆಗೆ ಸೇರಿದ, ಇಂಗ್ಲಿಷ್ ಜ್ಞಾನಕ್ಕೆ ತೆರೆದುಕೊಳ್ಳದ ಪ್ರಾಥಮಿಕ ಶಾಲಾ ಉಪಾಧ್ಯಾಯರೊಬ್ಬರ ಮಕ್ಕಳಾದ ನಾನು ಮತ್ತು ನನ್ನ ಸಹೋದರ ಶಾಲಾ ಶಿಕ್ಷಣವನ್ನು ಕನ್ನಡದಲ್ಲೇ ಪೂರೈಸಿ, ಇಂಗ್ಲಿಷ್ ಬಳಕೆ ಅನಿವಾರ್ಯವಾಗಿರುವ ಕ್ಷೇತ್ರಗಳಲ್ಲಿ ಸಮರ್ಥವಾಗಿ ಕೆಲಸ ಮಾಡುವಲ್ಲಿ ಯಶಸ್ವಿಯಾಗಿದ್ದೇವೆ. ಹಾಗೇ ನಮ್ಮ ಜೊತೆಯಲ್ಲೇ ಶಿಕ್ಷಣ ಪಡೆದ ವಿವಿಧ ಸಾಮಾಜಿಕ ಆರ್ಥಿಕ ನೆಲೆಗಳಿಗೆ ಸೇರಿದ ಗೆಳೆಯರೂ ಅವರವರ ಕ್ಷೇತ್ರದಲ್ಲಿ ಯಶಸ್ವಿಯಾಗಿರುವುದನ್ನು ನಾನು ನೋಡಿದ್ದೇನೆ. ಐದನೇ ತರಗತಿಯಿಂದ ಇಂಗ್ಲಿಷ್ ಕಲಿಯುವ ಶಾಲಾ ಶಿಕ್ಷಣದ

ಸಂದರ್ಭದಲ್ಲಿ ಇಂಗ್ಲಿಷ್‌ನಲ್ಲಿ ಅನುತ್ತೀರ್ಣರಾಗಿ ಶಾಲೆ ಬಿಟ್ಟವರ ಉದಾಹರಣೆಗಳುಂಟು. ಈಗ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಕೆ ಆರಂಭವಾದರೆ, ಇಂತಹವರು ಏಳನೇ ತರಗತಿಯ ಹೊತ್ತಿಗೆ ಶಿಕ್ಷಣಕ್ಕೆ ಸಲಾಂ ಹೊಡೆಯಬಹುದಷ್ಟೆ. ಇದು ಆಸಕ್ತಿ, ಶ್ರದ್ಧೆ, ಛಲ, ಮತ್ತು ಅಗತ್ಯಗಳ ಪ್ರಶ್ನೆ. ಎಷ್ಟಾದರೂ ಇಂಗ್ಲಿಷ್ ಅನ್ಯ ಸಂಸ್ಕೃತಿಯ ಭಾಷೆ-ಅದರ ಜಾಯಮಾನವೇ ಭಾರತೀಯ ಭಾಷೆಗಳ ಜಾಯಮಾನಕ್ಕಿಂತ ಬಹು ಭಿನ್ನ. ಅದನ್ನು ಐದನೆಯ ತರಗತಿಯ ಬದಲು ಒಂದನೇ ತರಗತಿಯಿಂದಲೇ ಕಲಿಸಲಾರಂಭಿಸಿದ ಮಾತ್ರಕ್ಕೆ ಈ ಅನ್ಯತೆ, ಜಾಯಮಾನ ಬದಲಾಗದು. ಬದಲಿಗೆ ಮಕ್ಕಳ ಕಲಿಕೆಯಲ್ಲಿ ಜಟಿಲತೆಗಳುಂಟಾಗಿ, ಶಿಕ್ಷಣದ ಆರಂಭದಲ್ಲೇ ಶಿಕ್ಷಣವು ಬಹಳ ಜನ ಮಕ್ಕಳಿಗೆ ಹೊರೆಯೆನ್ನಿಸಬಹುದು. ಅಷ್ಟೇ ಅಲ್ಲ, ಈಗ ಪೋಷಿಸಲಾಗುತ್ತಿರುವ ಇಂಗ್ಲಿಷ್ ಪ್ರತಿಷ್ಠೆಯ ವಾತಾವರಣದಲ್ಲಿ ಮಕ್ಕಳ ಮನಸ್ಸಿನಲ್ಲಿ ಮಾತೃಭಾಷೆಯ ಬಗೆಗೆ ಕೀಳರಿಮೆ ಮೂಲದ ಔದಾಸೀನ್ಯವೂ ಉಂಟಾಗಬಹುದು. ಇದರಿಂದ ಸಾಮಾಜಿಕ ನ್ಯಾಯದ ಕಲ್ಪನೆಯೇ ವಕ್ರವಾಗುವ ಸಾಧ್ಯತೆ ಇದೆ.

ಬದಲಾದ ಇಂದಿನ ಪರಿಸ್ಥಿತಿಯ ಬಗೆಗೆ ಮಾತನಾಡುವವರು, ಈವರೆಗಿನ ಪರಿಸ್ಥಿತಿ ಜಡವಾಗಿತ್ತೆಂದೇ ನಂಬಿದವರೆಂದು ತೋರುತ್ತದೆ. ಪರಿಸ್ಥಿತಿ ಸದಾ ಬದಲಾಗುತ್ತಲೇ ಇರುತ್ತದೆ. ಇದನ್ನು ಗಮನಿಸದೇ ಹೋದಾಗ, ಪರಿಸ್ಥಿತಿ ಸಾಮಾನ್ಯಕ್ಕಿಂತ ಸ್ವಲ್ಪ ಕ್ಷಿಪ್ರಗತಿಯಲ್ಲಿ ಬದಲಾದಾಗ, ಅದು ಮಾತ್ರ ಬದಲಾವಣೆ ಎಂಬಂತೆ ಭಾಸವಾಗುತ್ತದೆ. ಒಂದನೇ ತರಗತಿಯಿಂದಲೇ ಇಂಗ್ಲಿಷ್ ಅನಿವಾರ್ಯವಾಗಿರುವ ಹೊಸ ಪರಿಸ್ಥಿತಿಗೆ ಪ್ರತೀಕವಾಗಿರುವುದೆಂದು ಹೇಳಲಾಗುವ ಜಾಗತೀಕರಣವು ಒಂದು ದೀಢೀರ್ ವಿದ್ಯಮಾನವಾಗಿರದೆ, ಕಳೆದ ಐವತ್ತು ವರ್ಷಗಳಲ್ಲಿ ಆಗುತ್ತಿದ್ದ ಬದಲಾವಣೆಯ ನಿರ್ಣಾಯಕ ಘಟ್ಟ ಮಾತ್ರ ಎಂಬ ಅರಿವು ಉಂಟಾದರೆ, ಪರಿಷ್ಕೃತ ಇಂಗ್ಲಿಷ್ ಕಲಿಕೆ ನೀತಿಯ ಹಿಂದಿರುವ ತಪ್ಪು ಗ್ರಹಿಕೆಗಳೂ ಅರಿವಿಗೆ ಬರಬಹುದು. ಈಗ ಅನಾವರಣಗೊಂಡಿರುವ ಜಾಗತೀಕರಣದ ಸ್ವರೂಪವನ್ನು ಒಪ್ಪಿಕೊಂಡವರು ಮಾತ್ರ ಇಂಗ್ಲಿಷ್ ಅನಿವಾರ್ಯತೆಯ ಪರಿಷ್ಕೃತ ವಾದವನ್ನು ಒಪ್ಪಿಕೊಳ್ಳಲು ಸಾಧ್ಯ.

ಒಂದು ನೆಲೆಯಲ್ಲಿ ಇಂಗ್ಲಿಷ್ ಅನಿವಾರ್ಯತೆಯನ್ನು ನಮ್ಮ ಸಮಾಜ ಎಂದೋ ಒಪ್ಪಿಕೊಂಡಾಗಿದೆ. ಹಾಗೆಂದೇ ಅದು ಇಂಗ್ಲಿಷ್ ಕಲಿಕೆಯನ್ನು ಒಂದು ನೆಲೆಯಲ್ಲಿ ನಮ್ಮ ಶಿಕ್ಷಣ ಕ್ರಮದಲ್ಲಿ ಅಳವಡಿಸಿಕೊಂಡಿದೆ. ಆದರೆ ಇಂಗ್ಲಿಷ್ ವ್ಯಾಮೋಹದ ಪ್ರಶ್ನೆಯೇ ಬೇರೆ ನೆಲೆಯದ್ದು. ಅದು ಜಾಗತೀಕರಣವು ಸೃಷ್ಟಿಸಿದೆಯೆಂದು ಹೇಳಲಾಗುವ ಉದ್ಯೋಗ ಸೃಷ್ಟಿಯ ಹೊಸ ವಿನ್ಯಾಸಕ್ಕೆ ಸಂಬಂಧವೇ ಪಡದಂತಹದ್ದು. ಆ ವ್ಯಾಮೋಹ, ಜಾಗತೀಕರಣ ಎಂಬ ಶಬ್ದ ನಮ್ಮ ಕಿವಿಗೆ ಬೀಳುವ ಮುಂಚಿನ ಬಹುದಿನಗಳಿಂದಲೂ ಇರುವಂತಹದ್ದು. ಬದುಕು ಕೇವಲ ವ್ಯಾವಹಾರಿಕ ನೆಲೆಯದ್ದು ಮಾತ್ರ; ಆ ನೆಲೆಯ ಯಶಸ್ಸೇ ಆತ್ಯಂತಿಕ ಯಶಸ್ಸು ಎಂದು ಮೂಲಭೂತವಾಗಿ ನಂಬಿದ

ಜನವರ್ಗವೊಂದು ಪೋಷಿಸಿಕೊಂಡು ಬಂದಿರುವ ವ್ಯಾಮೋಹದ ಈ ಚಾರಿತ್ರವನ್ನು, ಅದು ನಮ್ಮ ಸಮಾಜ-ಸಂಸ್ಕೃತಿ ಮತ್ತು ರಾಜಕಾರಣಗಳಿಗೆ ಆತ್ಯಂತಿಕವಾಗಿ ಉಂಟುಮಾಡುವ ಆಘಾತವನ್ನು, ಗಾಂಧೀಜಿ-ಲೋಹಿಯಾ-ಕುವೆಂಪುರಂತಹ ಚಿಂತಕರಿಂದ ಹಿಡಿದು ಚಾಮ್‌ಸ್ಕಿಯಂತಹ ಅತ್ಯಾಧುನಿಕ ಮನೋವಿಜ್ಞಾನಿ, ಶಿಕ್ಷಣ ತಜ್ಞರವರೆಗೆ ಎಲ್ಲ ಸಾರ್ವತ್ರಿಕ ಚಿಂತಕರೂ ತಂತಮ್ಮ ಶಾಸ್ತ್ರೀಯ ನೆಲೆಗಳಲ್ಲಿ ವಿಶ್ಲೇಷಿಸಿ ಎಚ್ಚರಿಕೆ ನೀಡಿದ್ದರೂ, ಆ ವ್ಯಾಮೋಹವನ್ನು ನಿವಾರಿಸಲಾಗಿಲ್ಲ ಎಂಬುದೇ, ವಿಚಿತ್ರವೆನಿಸಿದರೂ ವಾಸ್ತವ ಸತ್ಯವಾಗಿದೆ. ಹಾಗಾಗಿಯೇ ಕಳೆದ ಹತ್ತು ವರ್ಷಗಳಲ್ಲಿ ಕ್ರಮೇಣ ಮಾತೃಭಾಷಾ ಶಿಕ್ಷಣದ ಶಾಲೆಗಳು ಅವನತಿಗೊಂಡು ಇಂಗ್ಲಿಷ್ ಮಾಧ್ಯಮಗಳ ಶಾಲೆಗಳು ತಲೆ ಎತ್ತಿ, ಇಂದು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸ ಬಯಸುವ ನಗರ ಪ್ರದೇಶಗಳ ಪೋಷಕರು ಒಳ್ಳೆಯ ಶಾಲೆಗಾಗಿ ಪರದಾಡಬೇಕಾದ ಪರಿಸ್ಥಿತಿ ಉಂಟಾಗಿದೆ.

ಈ ಇಂಗ್ಲಿಷ್ ವ್ಯಾಮೋಹ ಕೇವಲ ಭಾಷಾ ಕಲಿಕೆಯ ವ್ಯಾಮೋಹವಲ್ಲ. ಹಾಗಿದ್ದಲ್ಲಿ ನಮ್ಮ ಪೋಷಕರು, ಇಂಗ್ಲಿಷ್ ಕಲಿಕೆಗೂ ಸ್ಥಾನವಿರುವ-ಅರವತ್ತು ಎಪ್ಪತ್ತರ ದಶಕದವರೆಗೂ ಯಶಸ್ವಿಯಾಗಿ ನಡೆಯುತ್ತಿದ್ದ-ಮಾತೃಭಾಷಾ ಮಾಧ್ಯಮದ ಶಾಲಾ ಶಿಕ್ಷಣ ಪದ್ಧತಿ ಬಗೆಗೆ ತಿರಸ್ಕಾರ ಬೆಳೆಸಿಕೊಳ್ಳುತ್ತಿರಲಿಲ್ಲ. ಬದಲಾಗಿ ಈ ವ್ಯಾಮೋಹ ಒಂದು ಸಾಮಾಜಿಕ ಮೇಲ್ಮುಖ ಚಲನೆಯ ಭಾಗವಾಗಿ ಗ್ರಹೀತವಾಗಿ, ಸಾಮಾಜಿಕ ಪ್ರತಿಷ್ಠೆಯ ಆಯಾಮವನ್ನು ಪಡೆದುಕೊಂಡುಬಿಟ್ಟಿದೆ. ಇದಕ್ಕೆ, ಸಾಮಾಜಿಕ ಮೇಲ್ಮುಖ ಚಲನೆ ಇಂಗ್ಲಿಷ್ ಕಲಿಕೆಯಿಂದ ಮಾತ್ರ ಸಾಧ್ಯ ಮತ್ತು ಇಂಗ್ಲಿಷ್ ಕಲಿಕೆಯ ಮೂಲಕ ಒದಗುವ ಚಲನೆಯೇ ನಿಜವಾದ ಮೇಲ್ಮುಖ ಚಲನೆ ಎಂಬ ನಂಬಿಕೆಯ ವಾತಾವರಣವನ್ನು ನಿರ್ಮಿಸಿ ಕಾಪಾಡಿಕೊಂಡು ಬರುತ್ತಿರುವ ನಮ್ಮ ಆಡಳಿತಶಾಹಿಯೂ, ಅದರ ಹಿಂದಿರುವ 'ಪ್ರತಿಷ್ಠಿತ' ವರ್ಗಗಳ ಹಿತಾಸಕ್ತಿಯೂ ಕಾರಣವಾಗಿದೆ. ಹೀಗಿರುವಾಗ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಕೆ ಜಾರಿಗೆ ತಂದೊಡನೆ ಎಲ್ಲರೂ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳ ಕಡೆಗೆ ಓಡಿಸುತ್ತಾರೆ ಮತ್ತು ಆ ಮೂಲಕ ಕನ್ನಡ ಉಳಿಯುತ್ತದೆ ಎಂದು ನಂಬುವುದು ಹಸಿ ಮುಗ್ಧತೆ ಮಾತ್ರವಾದೀತು. ಯಾವಾಗಲೂ ಪೋಷಕರ ಕಣ್ಮುಂದೆ ಇರುವುದು ಮೊದಲು ತಮ್ಮ ಮಕ್ಕಳ ಲೌಕಿಕ ಯಶಸ್ಸು; ಮಾತೃಭಾಷಾ ಶಿಕ್ಷಣ ಮಾಧ್ಯಮ ಪ್ರೇರಿಸುವ ನಿಸರ್ಗ ಮೂಲವಾದ ಮೌಲ್ಯಗಳನ್ನಾಧರಿಸಿದ ಶಿಕ್ಷಣದ ಆಧ್ಯಾತ್ಮಿಕ ಆಯಾಮ ಏನಿದ್ದರೂ ಆಮೇಲೆ. ಯಾಕೆಂದರೆ ಇಂಗ್ಲಿಷ್ ವ್ಯಾಮೋಹ ಒಂದು ನಾಗರೀಕತೆಯ ವ್ಯಾಮೋಹವೂ ಹೌದು ಮತ್ತು ಆ ನಾಗರೀಕತೆಯ ಮೌಲ್ಯಗಳು ಮತ್ತು ಆದ್ಯತೆಗಳಿಗೆ ನೀಡುವ ಒಪ್ಪಿಗೆಯೂ ಹೌದು. ಇಷ್ಟು ವ್ಯಾಪಕವಾದ ಪ್ರಶ್ನೆಯನ್ನು ಅಷ್ಟೇ ವ್ಯಾಪಕವಾದ ನೆಲೆಗಳಿಂದ ಪ್ರಶ್ನಿಸಬೇಕೇ ಹೊರತು, ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ನಮ್ಮ ನಿಲುವನ್ನು ಬದಲಿಸಿಕೊಳ್ಳಹೊರಡುವುದು; ಅದಕ್ಕೆ (ಮನೋ)ವೈಜ್ಞಾನಿಕ ಸಾಮಾಜಿಕ ಕಾರಣಗಳನ್ನು ಹುಡುಕ ಹೊರಡುವುದು, ಶಿಕ್ಷಣ ಕುರಿತ ಸರ್ಕಾರದ

ವಸ್ತಾಹತೀಕರಣಕ್ಕೆ ನಾವೂ ವಸಾಹತುಗಳಂತೆ ಪ್ರತಿಕ್ರಿಯಿಸಿ ಬಿಡುವ ಅಪಾಯವಿದೆ ಎನ್ನುವುದಕ್ಕೆ ಇದೊಂದು ಉದಾಹರಣೆ.

ಜಾಗತೀಕರಣದ ಹಿನ್ನಲೆಯ ಉದ್ಯೋಗ ಸೃಷ್ಟಿಯ ಹೊಸ ವಿನ್ಯಾಸ ಇಂಗ್ಲಿಷನ್ನು ಅನಿವಾರ್ಯವಾಗಿಸಿದೆ, ನಿಜ. ಆದರೆ ಅಷ್ಟೇ ನಿಜ, ಅದಕ್ಕೆ ಅಗತ್ಯವಾದಷ್ಟು ಇಂಗ್ಲಿಷ್ ಕಲಿಕೆ ಸದ್ಯದ ಶಿಕ್ಷಣ ಕ್ರಮದಲ್ಲೇ ಅಂತರ್ಗತವಾಗಿದೆ ಎನ್ನುವುದು. ಅದು ವಾಸ್ತವಿಕ ನೆಲೆಯಲ್ಲಿ ವಿಫಲವಾಗಿದೆ ಎನಿಸುತ್ತಿದ್ದರೆ, ಅದಕ್ಕೆ ಇಡೀ ಶಿಕ್ಷಣ ವ್ಯವಸ್ಥೆಯನ್ನು ಆವರಿಸಿರುವ ಅದಕ್ಷತೆಯೇ ಕಾರಣ. ಹಾಗಾಗಿ ಈ ನೆಪದಲ್ಲಾದರೂ ಅದನ್ನು ಸುಧಾರಿಸುವ ಕಡೆ ನಮ್ಮೆಲ್ಲರ ಗಮನ ಹರಿಯಲಿ: ಸರ್ಕಾರಿ/ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮೂಲ ಸೌಲಭ್ಯಗಳ ಮತ್ತು ಅವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಬೋಧನೆಯ ಗುಣಮಟ್ಟದ ಸುಧಾರಣೆಗೆ ಹೋರಾಟ ರೂಪುಗೊಳ್ಳಲಿ; ಬದಲಾಗಿ ಕನ್ನಡಕ್ಕೆ ಕುತ್ತು ತರುವ ರೀತಿಯಲ್ಲಿ ಅದನ್ನು ಬದಲಿಸುವುದು ಬೇಡ. ಕನ್ನಡಕ್ಕೆ ಕುತ್ತು ಎಂದರೆ ಅದು ಕೇವಲ ಕನ್ನಡಾಭಿಮಾನದ ಅಥವಾ ಭಾವಾವೇಶದ ವಿಷಯವಲ್ಲ;ಬದಲಾಗಿ, ಪರೋಕ್ಷವಾಗಿ ಆಕ್ರಮಣ ಮಾಡುತ್ತಿರುವ ನವ ವಸಾಹತುಶಾಹಿಗೆ ಪ್ರತ್ಯಕ್ಷ ಪ್ರವೇಶ ನೀಡುವ ಉಪಕ್ರಮವೇ ಆದೀತು.

ನಮ್ಮ ಮಕ್ಕಳಿಗೆ ಒಂದನೇ ತರಗತಿಯಿಂದಲೇ ಕನ್ನಡ ಕಲಿಸಿದರೆ ಒಳ್ಳೆಯದಾದೀತೇನೋ ಎಂದು ಭಾವಿಸತೊಡಗಿರುವ ಮನಸ್ಸು, ತನ್ನ ಲಂಗರುಗಳನ್ನು ಬದಲಾಯಿಸಿಕೊಳ್ಳಲು ಸುಪ್ತವಾಗಿ ಅಣಿಯಾಗುತ್ತಿರುವ ಮನಸ್ಸು. ಕನ್ನಡ ಚಳುವಳಿಯ, ಪ್ರಜ್ಞೆಯ ಒಂದು ಅಮೂಲ್ಯ ಭಾಗವಾಗಿದ್ದ ಈ ಮನಸ್ಸು ಈಗ ಹೀಗೆ ವಿಚಲಿತಗೊಂಡಿರುವುದು ಖೇದಕರ. ಅದೇನೇ ಇರಲಿ, ಒಂದನೇ ತರಗತಿ, ಮೂರನೇ ತರಗತಿ ಅಥವಾ ಐದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯ ಪರ ಅಥವಾ ವಿರೋಧವಿರುವವರೆಲ್ಲರೂ ಮೊದಲು ಮಾಡಬೇಕಾದದ್ದು ಉಚ್ಚನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಿ ಏಳನೇ ತರಗತಿವರೆಗೆ ರಾಜ್ಯದ ಎಲ್ಲ ಶಾಲೆಗಳಲ್ಲಿ ಕನ್ನಡ ಮಾತೃಭಾಷಾ ಮಾಧ್ಯಮವನ್ನು ಜಾರಿಗೊಳಿಸುವಂತೆ ಸರ್ಕಾರವನ್ನು ಒಕ್ಕೊರಲಿನಿಂದ ಒತ್ತಾಯಿಸುವುದು; ನಂತರವಷ್ಟೇ ಮಿಕ್ಕ ವಿಷಯಗಳ ಬಗ್ಗೆ ಚರ್ಚೆ ಸಾಧ್ಯ ಎಂದು ದೃಢವಾಗಿ ಹೇಳುವುದು.

○

('ಸುಧಾ', ಜುಲೈ ೭, ೨೦೦೫)

ii. ಭಾಷೆ, ಜಾತಿ ಮತ್ತು ಸೃಜನಶೀಲತೆ

ರಾಜ್ಯದಲ್ಲಿ ಒಂದು ಭಾಷೆಯಾಗಿ ಇಂಗ್ಲಿಷನ್ನು ಒಂದನೇ ತರಗತಿಯಿಂದಲೇ ಎಲ್ಲ ಮಾಧ್ಯಮಗಳ ಶಾಲೆಗಳಲ್ಲಿ ಕಲಿಸಬೇಕು ಎಂದು ಬೆಂಗಳೂರಿನಲ್ಲಿ ೫. ೭. ೨೦೦೫ ರಂದು ನಡೆದ ಸಾಹಿತಿಗಳ, ಚಿಂತಕರ ಸಭೆಯು ನಿರ್ಣಯವನ್ನು ಅಂಗೀಕರಿಸಿತು ಎಂಬ ಪತ್ರಿಕಾ ಸುದ್ದಿ ಆತಂಕಕಾರಿಯಾಗಿದೆ. ಇನ್ನೂ ಆತಂಕಕಾರಿ ಸುದ್ದಿ ಎಂದರೆ ಈವರೆಗೆ ಇಂತಹ ನಿರ್ಣಯದ ದೂರಗಾಮಿ ಪರಿಣಾಮಗಳನ್ನು ತಾತ್ವಿಕವಾಗಿ ವಿಶ್ಲೇಷಿಸಿ, ಅದನ್ನು ಖಂಡತುಂಡವಾಗಿ ಧಿಕ್ಕರಿಸುತ್ತಿದ್ದ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರೂ ಈ ನಿರ್ಣಯ ಕೈಗೊಂಡ ಸಭೆಯಲ್ಲಿ ಹಾಜರಿದ್ದರು ಎಂಬುದು. ಇದೇ ಸಭೆಗೆ ಸಂಬಂಧಪಟ್ಟ ಇನ್ನೊಂದು ವರದಿಯಲ್ಲಿ ತೇಜಸ್ವಿಯವರು ತಾವೂ ಈ ಮೊದಲು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವಿಕೆಯ ವಿರುದ್ಧವಾಗಿದ್ದುದಾಗಿಯೂ, ಆದರೆ ಈ ಸಭೆಯನ್ನು ಆಯೋಜಿಸಿವರು ಮಂಡಿಸಿದ ಅಂಕಿ-ಅಂಶಗಳನ್ನು ನೋಡಿದ ಮೇಲೆ ತಮ್ಮ ಅಭಿಪ್ರಾಯವನ್ನು ಬದಲಾಯಿಸಿರುವುದಾಗಿ ಹೇಳಿದರೆಂದು ತಿಳಿಸಲಾಗಿದೆ. ಈ ಆಯೋಜಕರು ಮುಖ್ಯಮಂತ್ರಿಗಳು ೭.೭. ೨೦೦೫ ರಂದು ಈ ಸಮಸ್ಯೆ ಕುರಿತು ಸಮಾಲೋಚನೆಗಾಗಿ ಕರೆದಿದ್ದ ಸಭೆಯಲ್ಲೂ ಇಂತಹ ಅಂಕಿ-ಅಂಶಗಳನ್ನು ಮಂಡಿಸಿರುವುದು ಪತ್ರಿಕೆಗಳಿಂದ ತಿಳಿದು ಬರುತ್ತದೆ.

ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಕೆ ಪರ 'ಬೂಸಾ ಚಳುವಳಿ' ಮಾದರಿಯ ಚಳುವಳಿ ನಡೆಸುವುದಾಗಿ ಹೇಳಿರುವ ಈ ಸಭೆಯು ಆಯೋಜಕರು ಮಂಡಿಸಿರುವ ಅಂಕಿ-ಅಂಶಗಳನ್ನು, ಪತ್ರಿಕೆಗಳು ಈ ಹಿಂದೆಯೇ ಸ್ಥೂಲವಾಗಿಯಾದರೂ ವರದಿ ಮಾಡಿವೆ. ಅವೆಂದರೆ ಜ್ಞಾನಪೀಠ ಪ್ರಶಸ್ತಿ ಪಡೆದವರೂ ಸೇರಿದಂತೆ ಕನ್ನಡದ ಪ್ರಮುಖ ಸಾಹಿತಿಗಳೆಲ್ಲರೂ ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಿಗೆ ಕಳಿಸುತ್ತಿದ್ದಾರೆ; ಉನ್ನತ/ವೃತ್ತಿಪರ ವ್ಯಾಸಂಗಕ್ಕಾಗಿ ಆಯ್ಕೆಯಾಗುತ್ತಿರುವವರಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಇಂಗ್ಲಿಷ್ ಮಾಧ್ಯಮ/ಶಾಲೆಗಳಲ್ಲಿ ಓದಿದವರು ಎಂಬುದು. ಇದರ ಜೊತೆಗೆ ಕೆಲವು ಹಿಂದುಳಿದ ಮತ್ತು ಪರಿಶಿಷ್ಟ ಜಾತಿ-ವರ್ಗಗಳ ಸಂಘಟನೆಗಳು ಭಾಷಾ ಪ್ರಶ್ನೆಗೆ ಜಾತಿಯನ್ನು ತಳಕು ಹಾಕಿ, ಕನ್ನಡದ ಪ್ರಶ್ನೆಯನ್ನು ಸಾಮಾಜಿಕ ನ್ಯಾಯದ ಪ್ರಶ್ನೆಯನ್ನಾಗಿಯೂ ಪರಿವರ್ತಿಸಿ ಈವರೆಗಿನ ಭಾಷಾ ನೀತಿ ಕುರಿತ ಚರ್ಚೆಯನ್ನು ಇನ್ನಷ್ಟು ಜಟಿಲಗೊಳಿಸಿವೆ.

ಈ ಜಟಿಲತೆಯನ್ನುಂಟುಮಾಡಿರುವ, ಮೇಲೆ ತಿಳಿಸಿದ ಅಂಶಗಳನ್ನು ಪರಿಶೀಲಿಸೋಣ. ಮೊದಲಾಗಿ, ಬಹುಶಃ ಜ್ಞಾನಪೀಠ ಪ್ರಶಸ್ತಿ ಪಡೆದ ಕೊನೆಯ ಇಬ್ಬರನ್ನು ಹೊರತುಪಡಿಸಿದರೆ ಉಳಿದ ಐವರೂ ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳಿಸಿದವರು. ಕೊನೆಯ ಇಬ್ಬರು ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಕಳಿಸಿದ್ದಾರೆ, ಏಕೆಂದು ಅವರನ್ನೇ

ಕೇಳಿ ಕಾರಣಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ಆ ಕಾರಣಗಳು ಸದ್ಯದ ಇಂಗ್ಲಿಷ್ ಕಲಿಕೆವಾದಿಗಳು ಪ್ರತಿಪಾದಿಸುತ್ತಿರುವ 'ಉದ್ಯೋಗ ದೃಷ್ಟಿ'ಯಿಂದ ಮೂಡದಿರುವ ಸಾಧ್ಯತೆಗಳೂ ಇವೆ. ಇನ್ನು ಕನ್ನಡ ಸಾಹಿತಿಗಳೆಲ್ಲರ ಮಕ್ಕಳೂ ಇಂಗ್ಲಿಷ್ ಶಾಲೆಗಳಿಗೆ ಹೋಗುತ್ತಿದ್ದಾರೆ ಎಂಬುದು ಸತ್ಯ ಸಂಗತಿಯೂ ಅಲ್ಲ; ಅದು ಸತ್ಯವೇ ಆಗಿದ್ದರೂ, ಅದು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಪರವಾದ ಸಮರ್ಥನೆ ಆಗಲಾರದು. ಹಾಗೆ ನೋಡಿದರೆ, ಮೈಸೂರಿನಲ್ಲಿ ನಡೆಸಿದ ಒಂದು ಸ್ಥೂಲ ಸಮೀಕ್ಷೆಯ ಪ್ರಕಾರ, ಒಂದೆರೆಡು ಅಪವಾದಗಳನ್ನು ಬಿಟ್ಟರೆ; ಕನ್ನಡದ ಎಲ್ಲ ಪ್ರಮುಖ ಸಾಹಿತಿಗಳ ಹಾಗೂ ಬಹುತೇಕ ಕನ್ನಡ ಪರ ಕಾರ್ಯಕರ್ತರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೇ ಕಳಿಸಿದ್ದಾರೆ. ಅಷ್ಟೆ ಅಲ್ಲ, ಶಿಕ್ಷಣ ಮುಗಿಸಿರುವ ಇಂತಹ ಮಕ್ಕಳು ಕನ್ನಡ ಶಾಲೆಯಲ್ಲಿ ಕಲಿತವರೆಂಬ ಕಾರಣದಿಂದ ತಮ್ಮ ವಿದ್ಯಾರ್ಹತೆಗೆ ತಕ್ಕ ಉದ್ಯೋಗಗಳಿಂದ ವಂಚಿತರಾದ ಉದಾಹರಣೆಗಳೂ ಇಲ್ಲ. ಇದರಲ್ಲಿ ಎಲ್ಲ ಜಾತಿಯವರೂ ಸೇರಿದ್ದಾರೆ.

ಇನ್ನು ಉನ್ನತ/ವೃತ್ತಿಪರ ವ್ಯಾಸಂಗಕ್ಕಾಗಿ ಆಯ್ಕೆಯಾದವರ ಶೇಕಡಾವಾರು ಪ್ರಶ್ನೆ. ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ತಾಲ್ಲೂಕು-ಹೋಬಳಿ ಕೇಂದ್ರಗಳಾಚೆಗೂ ಇಂಗ್ಲಿಷ್ ಶಾಲೆಗಳ ವಾಣಿಜ್ಯ ಜಾಲ ವಿಸ್ತರಿಸಿಕೊಂಡು, ರೂಢಿಗತ ಪ್ರತಿಷ್ಠಾ ಮೂಲದ ಇಂಗ್ಲಿಷ್ ವ್ಯಾಮೋಹದ ಕಾರಣದಿಂದಾಗಿ ಸ್ವಲ್ಪ ಅನುಕೂಲವಿದ್ದವರೂ ತಮ್ಮ ಮಕ್ಕಳನ್ನು ಇಂತಹ ಇಂಗ್ಲಿಷ್ ಶಾಲೆಗಳಿಗೆ ಕಳಿಸುತ್ತಿದ್ದಾರೆ. ಹೀಗಾಗಿ ಕಡು ಬಡವರ ಅಥವಾ ಶಿಕ್ಷಣದ ಬಗ್ಗೆ ನಿರ್ದಿಷ್ಟ ಗಮನವೇ ಇಲ್ಲದಂತಹವರ ಮತ್ತು ಪ್ರಜ್ಞಾಪೂರ್ವಕ ಕನ್ನಡವಾದಿ ತಂದೆ ತಾಯಂದಿರ ಮಕ್ಕಳು ಮಾತ್ರ ಸರ್ಕಾರಿ/ಕನ್ನಡ ಮಾಧ್ಯಮ ಶಾಲೆಗಳಿಗೆ ಬರುವಂತಾಗಿದೆ. ಇವರಲ್ಲಿಯೂ, ಮುಂದೆ ವೃತ್ತಿಪರ ವ್ಯಾಸಂಗವೂ ಸೇರಿದಂತೆ ಉನ್ನತ ವಿಜ್ಞಾನ ವಿದ್ಯಾಭ್ಯಾಸದ ಗುರಿ ಇಟ್ಟುಕೊಂಡವರು ಪ್ರೌಢಶಾಲಾ ಮಟ್ಟದಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಆಯ್ದುಕೊಳ್ಳುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಉನ್ನತ/ವೃತ್ತಿಪರ ವ್ಯಾಸಂಗಕ್ಕೆ ಆಯ್ಕೆಯಾಗುವವರ ಸಂಖ್ಯೆಯಲ್ಲಿ ಶೇಕಡಾವಾರು ಪಾಲು ಇಂಗ್ಲಿಷ್ ಶಾಲೆ/ ಮಾಧ್ಯಮಗಳವರದ್ದೇ ಹೆಚ್ಚಾಗಿರುವುದು ಸಹಜವೇ ಆಗಿರುತ್ತದೆ.

ಹೀಗೆ ಚಾರಿತ್ರಿಕ ಕಾರಣಗಳಿಂದಾಗಿ ಹೇರಲ್ಪಟ್ಟ ಇಂಗ್ಲಿಷನ್ನು ಪೋಷಿಸಿಕೊಂಡೇ ಬರುವ ಪ್ರತಿಷ್ಠೆಯ ವಾತಾವರಣವನ್ನು ಮುಗುಂ ಆಗಿ ಒಪ್ಪಿಕೊಂಡು, ಈಗ ಕನ್ನಡವು ತಮ್ಮ ಮಕ್ಕಳ ಭವಿಷ್ಯಕ್ಕೆ ಕುತ್ತಾಗಿದೆ ಎಂದು ಬೊಬ್ಬೆ ಹೊಡೆಯುತ್ತಿರುವ ಎಷ್ಟು ಜನರ ಮಕ್ಕಳು ಹೀಗೆ ಇಂಗ್ಲಿಷ್ ವಂಚಿತ ಕನ್ನಡ ಶಾಲೆಗಳಲ್ಲಿ ಓದಿ 'ಭವಿಷ್ಯ' ಹಾಳುಮಾಡಿಕೊಂಡಿದ್ದಾರೆ/ಮಾಡಿಕೊಳ್ಳುತ್ತಿದ್ದಾರೆ ಎಂದು ಕೇಳುವ ಕಾಲ ಈಗ ಬಂದಿದೆ ಎನಿಸುತ್ತದೆ. ಅಲ್ಲದೆ ಈ ಹೊಸ ಇಂಗ್ಲಿಷ್‌ವಾದಿಗಳು ತಮ್ಮ ವಾದವನ್ನು ಸಮರ್ಥಿಸಲು ವಿಜ್ಞಾನ ಮೂಲ ವ್ಯಾಸಂಗ ಕ್ರಮಗಳ ಕಡೆಗಷ್ಟೇ ಏಕೆ ತಮ್ಮ ಗಮನ ಹರಿಸುತ್ತಾರೆ ಎಂದೂ ಕೇಳಬೇಕಾಗುತ್ತದೆ. ಇಂದು ಕಲೆ ಮತ್ತು ಮಾನವಿಕ ವಿಷಯಗಳ ಅಭ್ಯಾಸ ಮಾಡುತ್ತಿರುವ

ವಿದ್ಯಾರ್ಥಿಗಳು ಮೂಲತಃ ಯಾವ ಶಾಲೆಗಳಿಂದ/ಮಾಧ್ಯಮದಿಂದ ಬಂದವರು, ಒಟ್ಟಾರೆ ವಿದ್ಯಾರ್ಥಿ ಸಮುದಾಯದಲ್ಲಿ ಅವರ ಪಾಲೆಷ್ಟು, ಅವರೆಲ್ಲ ಭವಿಷ್ಯಹೀನರೇ? ಈ ಪ್ರಶ್ನೆಗಳನ್ನೇಕೆ ಇವರು ಪರಿಶೀಲಿಸುವುದಿಲ್ಲ?

ಇಂದು ನಗರ-ಗ್ರಾಮಾಂತರಗಳ ಭೇದವಿಲ್ಲದೆ ಇಂಗ್ಲಿಷ್ ಶಾಲೆಗಳಲ್ಲಿನ ಮಕ್ಕಳ ಸಮೀಕ್ಷೆ ನಡೆಸಿದರೆ, ಎಲ್ಲ ಜಾತಿಯವರಂತೆ, ಸಾಮಾಜಿಕವಾಗಿ ಹಿಂದುಳಿದವರೆಂದು ಗುರುತಿಸಲ್ಪಟ್ಟಿರುವ ವರ್ಗಗಳೂ ಮಕ್ಕಳೂ ಗಣನೀಯ ಸಂಖ್ಯೆಯಲ್ಲಿ ಅಲ್ಲಿ ದಾಖಲಾಗಿರುವುದು ಕಂಡುಬರುತ್ತದೆ. ಪರಿಸ್ಥಿತಿ ಹೀಗಿರುವಾಗ, ಮೇಲ್ಮುಖ ಸಾಮಾಜಿಕ ಚಲನೆಯ ಧಾವಂತ-ಒತ್ತಡಗಳಿಗೆ ಸಿಲುಕಿ, ತಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಎಲ್ಲವನ್ನೂ ಜಾತೀಯಗೊಳಿಸುತ್ತಿರುವ ಕೆಲವು ಸ್ವಯಂಘೋಷಿತ ಹಿಂದುಳಿದ ವರ್ಗಗಳ ನಾಯಕರು ಈಗ ಭಾಷೆಯನ್ನೂ ಜಾತೀಯಗೊಳಿಸ ಹೊರಟಿರುವುದು ವಿಷಾದದ ಸಂಗತಿಯಾಗಿದೆ. ವಸಾಹತುಶಾಹಿ ಆಳ್ವಿಕೆಯ ಶಾಪವೆಂಬಂತೆ ನಮ್ಮ ಸಮಾಜಕ್ಕೆ ತಾಗಿದ ಇಂಗ್ಲಿಷ್ ವ್ಯಾಮೋಹದಿಂದಾಗಿ ನಮ್ಮ ಸರ್ಕಾರಿ ಸಾರ್ವಜನಿಕ ಶಾಲೆಗಳು 'ಜನಬೆಂಬಲ'ವಿಲ್ಲದೆ ಹಾಳಾಗತೊಡಗಿದ್ದಾಗ, ಅದಕ್ಕೂ ತಮಗೂ ಸಂಬಂಧವೇ ಇಲ್ಲ ಎನ್ನುವಂತೆ ಸಾಮಾಜಿಕ ಕರ್ತವ್ಯದಿಂದ ವಿಮುಖರಾದ ಈ ಜನ, ಈಗ ಸಾಮಾಜಿಕ ನ್ಯಾಯದ ಮಾತನ್ನಾಡುತ್ತಿರುವುದು ಮತ್ತು ತಮ್ಮ ಅಭಿಪ್ರಾಯವನ್ನು ಒಪ್ಪದವರನ್ನು ಸಾರಾಸಗಟಾಗಿ ಹಿಂದಿನ 'ಸಂಸ್ಕೃತವಾದಿ'ಗಳೊಂದಿಗೆ ಹೋಲಿಸಿ ಟೀಕೆ ಮಾಡುತ್ತಿರುವುದು ಇವರ ಸಾಮಾಜಿಕ ನ್ಯಾಯದ ಪರಿಕಲ್ಪನೆ ತಲುಪಿರುವ ವಿಕ್ಷಿಪ್ತ ಹಂತಕ್ಕೆ ಸಾಕ್ಷಿಯಾಗಿದೆಯಷ್ಟೆ. ಇದರಿಂದುಂಟಾಗಿರುವ ದುರಂತವೆಂದರೆ ಇಂದು ಹಲವು ಕಡೆ, ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಸೇರಿಸಬಯಸುವವರಿಗೆ ಒಳ್ಳೆಯ ಗುಣಮಟ್ಟದ ಶಾಲೆಗಳೇ ಕಾಣದಂತಾಗಿ, ಅವರು ಅನಿವಾರ್ಯವೆಂಬಂತೆ ಇಂಗ್ಲಿಷ್ ಶಾಲೆಗಳ ಮೊರೆ ಹೋಗುವಂತಾಗಿರುವುದು ಮತ್ತು ಹೀಗೆ ಇಂಗ್ಲಿಷ್ ಶಾಲೆಗಳ ವ್ಯಾಪಾರಿ ವಿಷವ್ಯೂಹ ವಿಸ್ತರಿಸುತ್ತಾ ಹೋಗುತ್ತಿರುವುದು. ಇದಕ್ಕಿರುವ ಏಕೈಕ ಪರಿಹಾರವೆಂದರೆ ಮಾತೃಭಾಷಾ ಮಾಧ್ಯಮವನಾಧರಿಸಿದ ಏಕರೂಪದ ಶಿಕ್ಷಣಕ್ಕಾಗಿ ಒತ್ತಾಯಿಸುವುದೇ ಹೊರತು, ಈ ವಿಷವ್ಯೂಹ ಸೃಷ್ಟಿಸಿರುವ ವಿಕ್ಷಿಪ್ತ ವಾಸ್ತವಕ್ಕೆ ಅಧಿಕೃತ ಮಾನ್ಯತೆ ನೀಡುವುದಲ್ಲ.

ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಕೆ ಪರವಾಗಿರುವವರೇನೋ ಕನ್ನಡ ಮಾಧ್ಯಮವನ್ನು ಏಳನೇ ತರಗತಿಯವರೆಗೂ ವಿಸ್ತರಿಸಬೇಕು ಎಂಬ ಎರಡನೇ ನಿರ್ಣಯವನ್ನು ಅಂಗೀಕರಿಸಿದ್ದಾರೆ; ಈಗಾಗಲೇ ಕನ್ನಡ ಮಾಧ್ಯಮ ನಾಲ್ಕನೇ ತರಗತಿವರೆಗೆ ರಾಜ್ಯದ ಶಾಲೆಗಳಲ್ಲಿ ಕಡ್ಡಾಯವಾಗಿರುವ ಹಾಗೆ! ಆದರೆ ಇವರು ತಮ್ಮ ಮೊದಲ ನಿರ್ಣಯದಲ್ಲಿ, ಇಂಗ್ಲಿಷ್ ಕಲಿಕೆಯನ್ನು ಒಂದನೇ ತರಗತಿಯಿಂದಲೇ 'ಎಲ್ಲ ಮಾಧ್ಯಮಗಳ ಶಾಲೆಗಳಲ್ಲಿ' ಆರಂಭಿಸಬೇಕೆಂದು ಹೇಳಿರುವುದು ('ಪ್ರಜಾವಾಣಿ':೬. ೦೭. ೦೫) ಮತ್ತು ಇದನ್ನು ಮಾತೃಭಾಷಾ ಶಿಕ್ಷಣ ಮಾಧ್ಯಮದ ಜಾರಿ ಪ್ರಶ್ನೆಯೊಂದಿಗೆ

ತಳುಕು ಹಾಕಬಾರದೆಂದು ಮುಖ್ಯಮಂತ್ರಿಗಳೊಡನೆ ನಡೆದ ಸಭೆಯಲ್ಲಿ ಆಗ್ರಹಿಸಿರುವುದು, ಬಹು ಮಾಧ್ಯಮ/ಇಂಗ್ಲಿಷ್ ಮಾಧ್ಯಮ ಶಾಲೆಗಳ ಯಥಾಸ್ಥಿತಿ ಮುಂದುವರಿಕೆಯನ್ನು ಒಪ್ಪಿಕೊಂಡಿರುವುದನ್ನು ಸೂಚಿಸುತ್ತದೆ. ಮೂಲತಃ ಕನ್ನಡಪರ ಮನಸ್ಸುಗಳೇ ಆದ ಈ ಗುಂಪಿನ ವಕ್ತಾರರು ಜಾಗತೀಕರಣದ ಸದ್ಯದ ಒತ್ತಡಗಳಿಂದ ವಿಚಲಿತರಾದಂತೆ ತೋರುತ್ತದೆ.

ಕನ್ನಡ ಭಾಷೆಯ ಪ್ರಶ್ನೆ ಕೇವಲ ಭಾಷಾಭಿಮಾನದ, ಭಾವಾವೇಶದ ಪ್ರಶ್ನೆಯಲ್ಲ; ವಾಸ್ತವದ ಪ್ರಶ್ನೆಯೂ ಹೌದು. ಆದರೆ ಎಲ್ಲಕ್ಕಿಂತ ಮುಖ್ಯವಾದುದು, ಒಂದು ಭಾಷೆಯ ಬೀಜದಿಂದಲೇ ಹೊರ ಹೊಮ್ಮುವ ಒಂದು ಸಮುದಾಯದ ಅನನ್ಯ ಸೃಜನಶೀಲತೆಯ ಪ್ರಶ್ನೆ. ಇಂದು ತತ್ಕಾಲೀನ ಪರಿಸ್ಥಿತಿಯ ಒತ್ತಡಗಳಿಂದ ಒಂದು ಭಾಷೆಯಾಗಿ ಇಂಗ್ಲಿಷನ್ನು ಒಂದನೇ ತರಗತಿಯಿಂದಲೇ ಕಲಿಸಬೇಕೆನ್ನುವವರ ಇಂದಿನ ವಾದವು, ಇಂಗ್ಲಿಷನ್ನು ಮಾಧ್ಯಮವಾಗಿ ಸಾರ್ವತ್ರಿಕಗೊಳಿಸದೇ ಅನ್ಯಮಾರ್ಗವೇ ಇಲ್ಲ ಎಂಬ ನಾಳಿನ ವಾದವೇ ಆಗಿದ್ದು,ಮುಂದಿನ ದಿನಗಳಲ್ಲಿ ಅದು ಈ ವಾದವನ್ನು 'ವೈಜ್ಞಾನಿಕ'ವಾಗಿ ಮಂಡಿಸುತ್ತಿರುವ ನಾಯಕರ ಕೈಮೀರಿ ಹೋಗಿ, ಕನ್ನಡ ಭಾಷೆಯನ್ನೇ 'ವಾಸ್ತವದ ಮಟ್ಟ'ದಲ್ಲಿ 'ನಿಷ್ಪ್ರಯೋಜಕ ಭಾಷೆ'ಯನ್ನಾಗಿ ಬಿಂಬಿಸುವ ಪರಿಸ್ಥಿತಿಯನ್ನುಂಟು ಮಾಡುವ ಅಪಾಯವನ್ನೊಳಗೊಂಡಿದೆ ಎಂಬುದನ್ನು ನಮ್ಮ ಮಿತ್ರರು ಅರಿಯಬೇಕಿದೆ. (ಮುಖ್ಯಮಂತ್ರಿಗಳೊಂದಿಗೆ ನಡೆದ ಸಭೆಯ ಬಗ್ಗೆ ಕನ್ನಡ ಪತ್ರಿಕೆಗಳು 'ಒಮ್ಮತಕ್ಕೆ ಬರದ ಸಭೆ' ಎಂಬರ್ಥದ ಶೀರ್ಷಿಕೆಗಳನ್ನು ನೀಡಿ ವರದಿ ಮಾಡಿದ್ದರೆ, ಇಂಗ್ಲಿಷ್ ಪತ್ರಿಕೆಗಳು 'ಸಭೆಯಲ್ಲಿ ಇಂಗ್ಲಿಷ್ ಪರ ಒಲವು' ಎಂಬರ್ಥದ ಶೀರ್ಷಿಕೆಗಳನ್ನು ನೀಡಿ ವರದಿಗಳನ್ನು ಪ್ರಕಟಿಸಿ, ಇಂಗ್ಲಿಷ್ ಕೇವಲ ಒಂದು ಭಾಷೆಯಲ್ಲ- ಒಂದು ಮನೋಭೂಮಿಕೆ ಕೂಡಾ ಎಂಬುದನ್ನು ಸಾಬೀತುಪಡಿಸಿವೆ.) ಇದು ಒಂದು ಭಾಷಾ ಸಮುದಾಯದ ಅಸ್ಮಿತೆಯನ್ನೂ, ಆತ್ಮ ವಿಶ್ವಾಸ, ಕ್ರಿಯಾಶೀಲತೆಗಳನ್ನೂ ನಾಶ ಮಾಡುವಂತಹ ಅಪಾಯವೇ ಆಗಿದೆ. ಚರಿತ್ರೆಯನ್ನು ನಿರ್ಮಾಣ ಮಾಡಿದ ಒಂದು ಸಮುದಾಯ, ಚರಿತ್ರೆಯ ಒಂದೆರಡು ಗುದ್ದುಗಳಿಗೇ ಮಣಿಯುತ್ತಿರುವಂತೆ ತೋರುತ್ತಿರುವುದು, ಈ ಸಮುದಾಯದ ಸೃಜನಶೀಲತೆಯೇ ಬತ್ತಿ ಹೋಗುತ್ತಿರುವುದರ ದ್ಯೋತಕವಾಗಿರಬಹುದೇ?

○

('ಅಗ್ನಿ', ಜುಲೈ ೨೧,೨೦೦೫)

iii. ಕನ್ನಡ-ಇಂಗ್ಲಿಷ್ ಕಲಿಕೆ: ಒಂದು ಬಿನ್ನಹ

ನಮ್ಮ ರಾಜ್ಯದ ಪ್ರಾಥಮಿಕ ಶಿಕ್ಷಣ ಸಚಿವರು ಯಾವುದೇ ಅಧಿಕೃ
ಆಧಾರವಿಲ್ಲದೇ, ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆಂಬ ಪ್ರಸ್ತಾವವೊಂದನ
ಸರ್ಕಾರದ ಪರವಾಗಿ ಸಾರ್ವಜನಿಕವಾಗಿ ಪ್ರಕಟಿಸಿ, ಈಗಾಗಲೇ ಬಿಕ್ಕಟ್ಟಿನಲ್ಲಿರುವ
ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಇನ್ನಷ್ಟು ಗೊಂದಲಕ್ಕೆ ಸಿಲುಕಿಸುವ ಪ್ರಯತ
ಮಾಡಿದ್ದಾರೆ. ಈ ಪ್ರಯತ್ನಕ್ಕೆ ಕೆಲವು ಸಾಹಿತಿ-ಚಿಂತಕರು, ಸಂಘಟನೆಗಳು ಹೊ
ಉದ್ಯೋಗ ಪರಿಸ್ಥಿತಿ, ಸಾಮಾಜಿಕ ನ್ಯಾಯ ಮುಂತಾದ ಕಾರಣಗಳನ್ನು ನೀಡಿ ಬೆಂಬ
ನೀಡುತ್ತಿದ್ದಾರೆ. ಇದೆಲ್ಲವೂ, ಈಗಾಗಲೇ ಅನೇಕ ರಾಜಕೀಯ, ಸಾಮಾಜಿ
ಕಾರಣಗಳಿಂದಾಗಿ ರಾಜ್ಯದಲ್ಲಿ ಅಧೋಗತಿ ಮುಟ್ಟುತ್ತಿರುವ ಕನ್ನಡದ ಅಧಿಕೃ
ಸ್ಥಾನಮಾನಗಳನ್ನು ಅಂತಿಮವಾಗಿ ಕೊನೆಗಾಣಿಸುವ ಕೈಂಕರ್ಯಕ್ಕೆ ನಾಂದಿ ಹಾಡುವುದರಲ
ಸಂಶಯವಿಲ್ಲ. ನಮ್ಮ ಈ ಅಭಿಪ್ರಾಯವು ಕೇವಲ ಕನ್ನಡ ಭಾಷಾಭಿಮಾನವನ್ನು ಆಧರಿಸಿ
ಭಾವನಾತ್ಮಕ ನೆಲೆಗಳಿಂದ ಮೂಡಿದ್ದಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸಬಯಸುತ್ತೇವ

ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಸಾಹತುಶಾಹಿಯಿಂದ ಪ್ರೇರಣೆ ಪಡೆದ ಆಡಳಿ
ಹಾಗೂ ಅಭಿವೃದ್ಧಿ ನೀತಿಯೇ ಮುಂದುವರಿದಿದೆ. ಇದರ ಅಂಗವಾಗಿಯೇ ಪ್ರಜಾಪ್ರಭುತ್ವ
ಮೂಲಭಾವನೆಗೆ ತದ್ವಿರುದ್ಧ ಕೆಲಸ ಮಾಡುವ ರೀತಿಯಲ್ಲೇ ಇಂಗ್ಲೀಷನ್ನು ನಮ್ಮ ಆಡಳಿ
ಹಾಗೂ ಶಿಕ್ಷಣ ವ್ಯವಸ್ಥೆಗಳಲ್ಲಿ ಮುಂದುವರಿಸಿಕೊಂಡು ಬರಲಾಗುತ್ತಿದೆ. ಇದರ ವಿರು
ಅನೇಕ ರಾಜಕೀಯ, ಸಾಮಾಜಿಕ ಹಾಗೂ ಸಂಸ್ಕೃತಿ ಚಿಂತಕರು ಧ್ವನಿ ಎತ್ತುತ್ತಲ
ಬಂದಿದ್ದಾರೆ ಹಾಗೂ ಇದಕ್ಕೆ ಪೂರಕವಾಗಿ ಅನೇಕ ಚಳುವಳಿಗಳು ನಡೆದಿವೆ. ಈ ಧ್ವ
ಹಾಗೂ ಚಳುವಳಿಗಳ ಹಿಂದಿದ್ದ ಅಭಿವೃದ್ಧಿ, ಸಾಮಾಜಿಕತೆ, ಸಂಸ್ಕೃತಿ ಹಾಗ
ಜನಸಮುದಾಯ-ಇವುಗಳ ನಡುವಣ ಸಮರಸ ಸಂಬಂಧದ ಸಮಗ್ರತೆಯ ಪ್ರಶ್ನೆಯನ
ಅರ್ಥ ಮಾಡಿಕೊಳ್ಳುವ ವ್ಯವಧಾನವನ್ನಾಗಲೀ, ವಿವೇಕವನ್ನಾಗಲಿ ನಮ್ಮ ಆಡಳಿತಶಾ
ಹೊಂದಿಲ್ಲ. ಹೀಗಾಗಿಯೇ ಇದರ ಈವರೆಗಿನ ರೀತಿ-ನೀತಿಗಳಿಂದಾಗಿ ದೇಶವು ನಮ
ಆಡಳಿತ, ಅಭಿವೃದ್ಧಿ, ಶಿಕ್ಷಣ, ಸಂಸ್ಕೃತಿಗಳ ಬೇರುಗಳನ್ನೇ ಅಲ್ಲಾಡಿಸುವಂತಹ ಒಪ್ಪಂದ
ಒತ್ತಡಗಳಿಗೆ ಸಿಲುಕಿದೆ.

ಈ ಹಿನ್ನಲೆಯಲ್ಲಿ, ರಾಷ್ಟ್ರ ಜೀವನದ ಮೂಲಾಧಾರಗಳ ಸುಭದ್ರತೆಯ
ದೃಷ್ಟಿಯಿಂದ ಮತ್ತು ಅಭಿವೃದ್ಧಿ ಪ್ರಕ್ರಿಯೆಯ ವ್ಯಾಪ್ತಿಯಿಂದ ಇನ್ನೂ ಹೊರ
ಉಳಿದುಹೋಗಿರುವ ಬಹುಸಂಖ್ಯಾತ ಜನಸಮುದಾಯಗಳ ಹಿತದೃಷ್ಟಿಯಿಂದ, ಈ
ಒಪ್ಪಂದ-ಒತ್ತಡಗಳನ್ನು ಎದುರಿಸಿ ಪಳಗಿಸುವ ಬಗೆಗಳ ಬಗ್ಗೆ ಆಲೋಚಿಸಿ
ಕಾರ್ಯಕ್ರಮಗಳನ್ನು ರೂಪಿಸುವ ಹೊಣೆ ಎಲ್ಲ ಜವಬ್ದಾರಿಯುತ ಪ್ರಜೆಗಳ ಕರ್ತವ್ಯವಾಗಿ
ಇದರಲ್ಲಿ, ಈಗಾಗಲೇ ಸೂಚಿಸಲಾಗಿರುವ ಚಾರಿತ್ರಿಕ ಕಾರಣಗಳಿಂದಾಗಿ ಇಂಗ್ಲಿಷ

ಒತ್ತಡಕ್ಕೆ ಸಿಲುಕಿ ಎಲ್ಲ ಹಂತಗಳಲ್ಲೂ ಅದ್ಯತೆ ಮತ್ತು ಆ ಮೂಲಕ ತಾಳಿಕೆ ಬಾಳಿಕೆಗಳ ಸಾಮರ್ಥ್ಯ ಕಳೆದುಕೊಳ್ಳುತ್ತಿರುವ ನಮ್ಮ ಭಾಷೆಗಳನ್ನು ಇಂಗ್ಲಿಷ್‌ನಿಂದ ಇನ್ನಷ್ಟು ಒತ್ತಡಕ್ಕೆ ಸಿಲುಕದಂತೆ ನೋಡಿಕೊಳ್ಳುವುದೂ ಸೇರಿದೆ. ಆದರೆ ಇದಕ್ಕೆ ಬದಲಾಗಿ ಇಂದು ಕಾಣುತ್ತಿರುವುದು, ಆಡಳಿತಶಾಹಿಯ ಕಳೆದ ಐವತ್ತು ವರ್ಷಗಳ ತಪ್ಪು ಹೆಜ್ಜೆಗಳಿಂದಾಗಿ ಸೃಷ್ಟಿಯಾಗಿರುವ ವಾತಾವರಣದಲ್ಲಿ ನಮ್ಮ ಪ್ರಜಾವರ್ಗದ ಒಂದು ಭಾಗ ಇಂಗ್ಲಿಷ್ ಒತ್ತಡಕ್ಕೆ ಮಣಿಯುತ್ತಿರುವುದು.

ಜಾಗತೀಕರಣದಿಂದಾಗಿ ಹೊಸ ಆವೇಗ ಪಡೆದಿರುವ ಉದ್ಯೋಗ ಮತ್ತು ಸಾಮಾಜಿಕ ಪ್ರತಿಷ್ಠೆಯ ಸಮಸ್ಯೆಯನ್ನು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಪ್ರಯತ್ನವು ಪರಿಹರಿಸುವುದೆಂಬ ಈ ಜನವರ್ಗದ ಆಶಯವನ್ನು ನಾವು ಸಹಾನುಭೂತಿಯಿಂದ ಪರಿಗಣಿಸಿದ್ದೇವೆ. ಆದರೆ ಇದು ಕೇವಲ ಪರಿಸ್ಥಿತಿಯ ಒತ್ತಡದಿಂದ ಉಂಟಾದ ಉದ್ವೇಗದಲ್ಲಿ ಹುಟ್ಟಿದ ಅಲ್ಪಕಾಲಿಕ ದೃಷ್ಟಿಯ ಪರಿಹಾರೋಪಾಯ ಮಾತ್ರವಾಗಿದೆ ಎಂದು ಅವರಿಗೆ ತಿಳಿಸಬಯಸುತ್ತೇವೆ. ಅಲ್ಲದೆ ಇದರಿಂದ ಕಾಲಕ್ರಮೇಣ ಸಮಸ್ಯೆಯು -ಅದರ ಮೂಲ ಕಾರಣಗಳಿಂದಾಗಿಯೇ- ಇನ್ನಷ್ಟು ಸಂಕೀರ್ಣವೂ, ಜಟಿಲವೂ ಆಗಿ, ರಾಷ್ಟ್ರ ಜೀವನಕ್ಕೆ ಒಂದು ಧಾರಣ ಶಕ್ತಿ ನೀಡಿರುವ ನಮ್ಮ ಭಾಷಾ ಸಮುದಾಯಗಳ ವೈಶಿಷ್ಟ್ಯಗಳೇ ನಶಿಸಿ ಹೋಗುವ ಅಪಾಯವನ್ನು ಒಳಗೊಂಡಿದೆ ಎಂಬ ನಮ್ಮ ಆತಂಕವನ್ನೂ, ಈ ಮಿತ್ರ ವರ್ಗಕ್ಕೆ ಈ ಮೂಲಕ ತಲುಪಿಸಬಯಸುತ್ತೇವೆ.

ಗಾಂಧಿ-ಲೋಹಿಯಾ- ಕುವೆಂಪುರಂತಹ ಧೀಮಂತರು ಇಂದು ಸೃಷ್ಟಿಯಾಗಿರುವ ನಿರ್ಣಾಯಕವೆನ್ನಿಸುವ ಬಿಕ್ಕಟ್ಟನ್ನು ಮುನ್ನೋಡಬಲ್ಲವರಾಗಿದ್ದರಿಂದಲೇ, ಭಾರತೀಯ ಭಾಷೆಗಳ ಸ್ಥಾನಮಾನದ ಬಗ್ಗೆ ಅಷ್ಟೊಂದು ಬದ್ಧತೆ, ತೀವ್ರತೆ ಹಾಗೂ ಆಳವಾದ ತಾತ್ವಿಕತೆಗಳೊಂದಿಗೆ ತಮ್ಮ ಚಿಂತನೆಗಳನ್ನು ದಾಖಲಿಸಿರುವರೆಂಬುದನ್ನು ನಾವು ಮರೆಯದಿರೋಣ; ಹಾಗೇ ಈ ಮುವ್ವರೂ ಸಾಮಾಜಿಕ ನ್ಯಾಯದ ಪರಮ ಪ್ರತಿಪಾದಕರಾಗಿದ್ದರು ಎಂಬುದನ್ನೂ ನೆನಪಿಟ್ಟುಕೊಳ್ಳೋಣ. ಈ ಹಿನ್ನಲೆಯಲ್ಲಿ ನಾವು ರಾಜ್ಯ ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಮಾತೃಭಾಷಾ ಶಿಕ್ಷಣ ಮಾಧ್ಯಮ ಕುರಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಷ್ಠಾನಕ್ಕೆ ರಾಜ್ಯದ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಕೂಡಲೇ ಉಪಕ್ರಮಗಳನ್ನು ಕೈಗೊಳ್ಳಬೇಕು. ನಂತರ ಬೇಕಾದರೆ, ಇಂಗ್ಲೀಷ್ ಕಲಿಕೆಯ ಪ್ರಸ್ತುತ ವ್ಯವಸ್ಥೆಯ ಬದಲಾವಣೆಯ ಅಗತ್ಯ ಕುರಿತಂತೆ ತಜ್ಞರ ಅಭಿಪ್ರಾಯ ಪಡೆಯಲು ಭಾಷಾ, ಶಿಕ್ಷಣ ತಜ್ಞರ, ಮನೋವಿಜ್ಞಾನಿಗಳ, ಸಮಾಜ ವಿಜ್ಞಾನಿಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಿ ಮುಂದಿನ ಕ್ರಮ ಕೈಗೊಳ್ಳಲಿ.

○

(ಮೈಸೂರಿನ ಕೆಲವು ಗಣ್ಯರು ಸಹಿ ಹಾಕಿ ನೀಡಿದ ಸಾರ್ವಜನಿಕ ಹೇಳಿಕೆಗಾಗಿ ಸಿದ್ಧಪಡಿಸಿದ ಕರಡು)

(ಪ್ರಜಾವಾಣಿ, ಜುಲೈ ೮, ೨೦೦೫)

iv.'ಕನ್ನಡ'ದ ಬಿಕ್ಕಟ್ಟು: ಒಂದು ಟಿಪ್ಪಣಿ

ಕನ್ನಡದ ಜನ ಕನ್ನಡ ಮಾಧ್ಯಮದ ಶಿಕ್ಷಣದ ಸುಖವಿಲ್ಲ ಎಂದು ತೀರ್ಮಾನಿಸಿರುವಂತೆ ತೋರುತ್ತಿದೆ. ಇದಕ್ಕೆ ತಕ್ಕುದಾಗಿ ಕರ್ನಾಟಕ ಸರ್ಕಾರ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಲು ಉತ್ಸುಕತೆ ತೋರುತ್ತಿದೆ. ಒಂದಷ್ಟು ಜನ 'ಬುದ್ಧಿವಾದಿ'ಗಳು ಹಾಗೂ 'ಶ್ರಮವಾದಿ'ಗಳು, ಕನ್ನಡವನ್ನು ನಂಬಿ ಹಿಂದುಳಿದಿದ್ದು ಸಾಕು ಎಂದು ಕೂಗು ಹಾಕುತ್ತಿದ್ದಾರೆ. ಜನತೆಯನ್ನು ಪ್ರತಿನಿಧಿಸುವ ವಿಧಾನ ಮಂಡಲದ ಎರಡೂ ಸಭೆಗಳಲ್ಲಿ ಈ ಕೂಗಿಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಹತ್ತು ವರ್ಷಗಳ ಹಿಂದಷ್ಟೇ ಕನ್ನಡದ ಹೋರಾಟ ಎಂದರೆ ಶಿಕ್ಷಣ, ಆಡಳಿತ, ವ್ಯವಹಾರ, ಆಚಾರ, ವಿಚಾರ ಎಲ್ಲವೂ ಕನ್ನಡದಲ್ಲೇ ಎಂಬ ತತ್ವದ ಅನುಷ್ಠಾನ ಎಂಬಂತಿದ್ದು, ಇಂದು ಕನ್ನಡವು ಮನೆಯೊಳಗಷ್ಟೇ ಇದ್ದರೆ ಚೆನ್ನ ಎಂಬ 'ವಾಸ್ತವ'ಕ್ಕೆ ಕ್ರಮೇಣ ಜಾರುತ್ತಿದೆ. ಭಾಷೆಯನ್ನು ಯಾರೂ ಹಠ-ಅಭಿಮಾನಗಳಿಂದ, ಹಾರಾಟ-ಹೋರಾಟಗಳಿಂದ ಉಳಿಸಲಾಗದು, ಯೋಗ್ಯತೆ ಇದ್ದುದು ಮಾತ್ರ ಉಳಿಯುತ್ತದೆ ಎಂಬ 'ಕಟು ವಾಸ್ತವ'ವೆಂದು ಹೇಳಲಾಗುವ ಮಾತನ್ನು ಆಡಲಾಗುತ್ತಿದೆ. ಹಾಗಾದರೆ ಕನ್ನಡದ ಕಾಲ ಮುಗಿಯುತ್ತಾ ಬಂದಿತೆ? ಜಾಗತೀಕರಣ ಎಂಬ ರಾಕ್ಷಸನು ಕನ್ನಡವನ್ನು ತಿಂದು ತೇಗುವ ಕಾಲ ಸನ್ನಿಹಿತವಾಗಿ ಬಿಟ್ಟಿದೆಯೇ? ಹಾಗೆಂದೇ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಮಾನದ ಮನ್ನಣೆ ಒದಗಿಸಿ, ಅದಕ್ಕೆ ಚರಿತ್ರೆಯ ಗುಡಿಯಲ್ಲಿ ಪೂಜಾರ್ಹತೆಯನ್ನು ಸ್ಥಾಪಿಸಿ ಕೊಡುವ ತುರಾತುರಿ ಕಾಣಬರುತ್ತಿದೆಯೇ?

ಈ ಎಲ್ಲ ಅನ್ನಿಸಿಕೆ - ಅಭಿಪ್ರಾಯ - ವಿಚಾರ - ಪ್ರಶ್ನೆಗಳ ಹಿಂದೆ ಇರುವುದು ಒಂದೇ ಆತಂಕ: ಸಾಹಿತ್ಯ- ಸಂಸ್ಕೃತಿಗಳ ಕನಿಷ್ಠ ಒಂದು ಸಾವಿರ ವರ್ಷಗಳ ಇತಿಹಾಸವಿರುವ ಒಂದು 'ಭಾಷೆ'ಯನ್ನು ಕೇವಲ ಹತ್ತು ವರ್ಷಗಳ ಅವಧಿಯಲ್ಲಿ ಹೀಗೆ ಹಿಗ್ಗಾ ಮುಗ್ಗಾ ದಾಳಿಗೆ ಈಡುಮಾಡಿರುವ ಈ ಜಾಗತೀಕರಣ, ಆ 'ಭಾಷೆ'ಯಲ್ಲೇ ತನ್ನ ವ್ಯಕ್ತಿತ್ವ ರೂಢಿಸಿಕೊಂಡು ಬಂದಿರುವ ಸಮುದಾಯಕ್ಕೆ ಯಾವ ಗತಿ ಕಾಣಿಸೀತು? ವಸಾಹತೀಕರಣ ಉಂಟು ಮಾಡಿದ 'ವಿಸ್ಮೃತಿ'ಯಿಂದ ನಾವು ಎಚ್ಚೆತ್ತುಕೊಳ್ಳಬೇಕಾದ ಅರಿವಿಗೆ ತೆರೆದು ಕೊಳ್ಳುತ್ತಿರುವ ಸಂದರ್ಭದಲ್ಲಿಯೇ, ನಾವು ಜಾಗತೀಕರಣವೆಂಬ ನವ ವಸಾಹತು ಶಾಹಿಯು ಉಂಟು ಮಾಡುತ್ತಿರುವ ಇನ್ನೊಂದು ರೀತಿಯ 'ವಿಸ್ಮೃತಿ' ಗೇನಾದರೂ ನಾವು ಬೀಳುತ್ತಿದ್ದೇವೆಯೋ? ನೆನಪಿರಲಿ, ಆ ವಸಾಹತೀಕರಣ ಆರಂಭವಾದದ್ದು ವ್ಯಾಪಾರದ ರೂಪದಲ್ಲಿ; ಈ ನವ ವಸಾಹತೀಕರಣವು ಆರಂಭವಾಗುತ್ತಿರುವುದೂ ವ್ಯಾಪಾರದ ರೂಪದಲ್ಲಿ. ವ್ಯಾಪಾರ ಎಂದರೆ ಮೂಲಾರ್ಥದಲ್ಲಿ ವಿನಿಮಯ-ಒಂದನ್ನು ಕೊಟ್ಟು ಇನ್ನೊಂದನ್ನು ತೆಗೆದುಕೊಳ್ಳುವುದು ಅಥವಾ ನಮ್ಮಲ್ಲಿ ಅಗತ್ಯವಿರುವುದಕ್ಕಿಂತ

ಹೆಚ್ಚಿರುವುದನ್ನು ಕೊಟ್ಟು; ನಮ್ಮಲ್ಲಿಲ್ಲದ, ಆದರೆ ಅಗತ್ಯವಾಗಿರುವುದನ್ನು ತೆಗೆದುಕೊಳ್ಳುವುದು. ಅಂದರೆ ವ್ಯಾಪಾರ ನಡೆಯಬೇಕಾದುದು 'ಅಗತ್ಯ'ಗಳ ಮೇಲೆ. ಹಾಗಾದರೆ ಆ ವ್ಯಾಪಾರವು ವಸಾಹತೀಕರಣವಾದುದು ಹೇಗೆ? ಈ 'ಅಗತ್ಯ'ಗಳ ಮೂಡುವಿಕೆಯಲ್ಲಿಯೇ ಏನೋ ಹೆಚ್ಚುಕಮ್ಮಿಯಾಗಿರಬೇಕು ಅಲ್ಲವೇ?

ನಾವಿಂದು ಜಾಗತೀಕರಣದ ಸಂದರ್ಭದಲ್ಲಿ ಕನ್ನಡದ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳಬಯಸುವವರು ಈ 'ಅಗತ್ಯ'ಗಳ ರಾಜಕಾರಣವನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ನಮಗೆ ಯಾವುದು ಅಗತ್ಯ? ಅದು ಏಕೆ ಅಗತ್ಯ ಎಂಬ ಪ್ರಶ್ನೆಗಳನ್ನು ವಸಾಹತೀಕರಣದ ಇತಿಹಾಸದ ಹಿನ್ನೆಲೆಯಲ್ಲಿ ಆಳವಾಗಿ ಕೇಳಿಕೊಂಡು ಉತ್ತರಗಳನ್ನು ಪಡೆದುಕೊಳ್ಳಬೇಕಾಗಿದೆ. ಮನುಷ್ಯನ ಮೂಲಭೂತ ದ್ವಂದ್ವ ಅನ್ನ - ಸ್ವಾತಂತ್ರ್ಯದ ನಡುವಣದ್ದಾಗಿದೆ. ಮಿಕ್ಕೆಲ್ಲಾ ದ್ವಂದ್ವಗಳು ಈ ದ್ವಂದ್ವದಿಂದಲೇ ಹುಟ್ಟಿದ್ದಾಗಿವೆ. ಹಾಗಾಗಿ ಅನ್ನದ ಅರ್ಥ ಹಾಗೂ ಅಗತ್ಯದ ವ್ಯಾಪ್ತಿಗಳನ್ನು ಮತ್ತು ಸ್ವಾಂತಂತ್ರ್ಯದ ಅರ್ಥ ಹಾಗೂ ಅಗತ್ಯದ ವ್ಯಾಪ್ತಿಗಳನ್ನು , ಪರಸ್ಪರ ಘಾಸಿಗೊಳ್ಳದ ರೀತಿಯಲ್ಲಿ ಎಷ್ಟು ಹಿಗ್ಗಿಸಬಹುದಾಗಿದೆ ಎಂಬುದೇ ಇಲ್ಲಿ ನಿರ್ಣಾಯಕ ಪ್ರಶ್ನೆಯಾಗಿದೆ. ಇದು, ಒಂದು ಸಮುದಾಯದ ಸಂಸ್ಕೃತಿಯ ತಾಳಿಕೆ-ಬಾಳಿಕೆಗಳನ್ನು ನಿರ್ಣಯಿಸುವ ಮತ್ತು ಎಲ್ಲಿ ವ್ಯಾಪಾರವು ವಸಾಹತೀಕರಣವಾಗಿ ಪರಿವರ್ತಿತವಾಗಲಾರಂಭಿಸುವುದು ಎಂಬುದನ್ನು ನಿರ್ಧರಿಸುವ defining moment of history, ಒಂದು ಸಮುದಾಯದ ಪಾಲಿಗೆ.

ಜಾಗತೀಕರಣದ ಶಬ್ದಾರ್ಥವೇನೇ ಇರಲಿ, ಅದು ಅನ್ನದ ಹಾಗೂ ದೇಹ ಸುಖದ ಅರ್ಥ ಮತ್ತು ಅಗತ್ಯಗಳನ್ನು ವಿಸ್ತರಿಸಿ ನಮ್ಮ ಮುಂದೆ ಇಟ್ಟಿದೆ. ಹಾಗಾಗಿಯೇ ಅದು ನಮ್ಮ ಸ್ವಾತಂತ್ರ್ಯದ ಅಭಿವ್ಯಕ್ತಿ ರೂಪಗಳ ತಾಯಿ ಸ್ಥಾನದಲ್ಲಿರುವ ನಮ್ಮ 'ಭಾಷೆ'ಗೆ - 'ಕನ್ನಡ'ಕ್ಕೆ- ಘಾಸಿ ತಂದಿಟ್ಟಿದೆ. 'ಕನ್ನಡ'ದ ಅಗತ್ಯ ನಮಗೆ ಕಡಿಮೆ ಎನಿಸತೊಡಗಿದೆ. ಇಲ್ಲಿ 'ಕನ್ನಡ' ಎಂದರೆ ಒಂದು ಜೀವನ ಕ್ರಮ, ಒಂದು ಜೀವನ ದೃಷ್ಟಿಕೋನ -ಕವಿರಾಜ ಮಾರ್ಗಕಾರನು ನಿರೂಪಿಸಿದ -'ಆ ಕನ್ನಡದೊಳ್ ಭಾವಿಸಿದ ಜನಪದಂ'. ಅದು 'ವಸುಧಾ ವಲಯ ವಿಲೀನ ವಿಶದ ವಿಷಯ ವಿಶೇಷ' ಕೂಡ. ಅಂದರೆ ಕನ್ನಡದ ಅಪರೂಪದ ಸಂಸ್ಕೃತಿ ಚಿಂತಕ ಕೆ. ವಿ. ಸುಬ್ಬಣ್ಣ ಸೃಷ್ಟಿಶೀಲವಾಗಿ ವ್ಯಾಖ್ಯಾನಿಸಿರುವ ಹಾಗೆ, ಈ 'ಕನ್ನಡ'ವು ವಿಶಾಲವಾದ ವಿಶ್ವದಲ್ಲಿ ಲೀನವಾಗಿದ್ದರೂ ತನ್ನಲ್ಲೇ ವಿಶಾಲವಾದ ವಿಶ್ವವನ್ನು ಲೀನಗೊಳಿಸಿಕೊಂಡಿದೆ. ಒಂದು ಸಾವಿರ ವರ್ಷಗಳಷ್ಟು ಹಿಂದಿನ ಈ ಅರಿವನ್ನು 'ಕನ್ನಡ' ಕಳೆದುಕೊಳ್ಳುವುದು ಎಂದರೆ ಏನು? ಹಾಗಾದಲ್ಲಿ ಆ ಜನಪದದಲ್ಲಿ ಉಳಿಯುವುದಾದರೂ ಏನು?.

'ಕನ್ನಡ'ವೆನ್ನುವುದರಲ್ಲೇ ಜಗತ್ತು ಹಾಸುಹೊಕ್ಕಾಗಿ ಬೆಳೆದಿದೆ. ಹೀಗಾಗಿ ಕನ್ನಡದ ಬೆಳವಣಿಗೆ ಎಂದರೆ ವಿಶ್ವದ ಬೆಳವಣಿಗೆ ಹಾಗೂ ವಿಶ್ವದ ಬೆಳವಣಿಗೆ

ಬೆಳವಣಿಗೆ. ಇದರರ್ಥ, ಕನ್ನಡವನ್ನು ಕಳೆದುಕೊಳ್ಳುವುದೆಂದರೆ ವಿಶ್ವವನ್ನೇ ಕಳೆದುಕೊಂಡಂತೆ. ವಿಶ್ವ ಎಂದರೆ ಅದರೆಲ್ಲ ಅರ್ಥದಲ್ಲಿ- ಅಲ್ಲಿ ಹುಟ್ಟುವ ಅನ್ನದ ಸತ್ವ ಮತ್ತು ರುಚಿ ಎರಡನ್ನೂ ಸೃಷ್ಟಿಸುವ ನೆಲೆ ಎಂಬರ್ಥದಲ್ಲಿ- ಈ ಕನ್ನಡದ ಸತ್ವ ಮತ್ತು ರುಚಿ ಕಳಕೊಂಡ ಜನಪದಕ್ಕೆ ಆ ವಿಶ್ವದ ಸತ್ವ ಮತ್ತು ರುಚಿ ದಕ್ಕದು. ಈ ಆಳದ ಸತ್ವವನ್ನು ಶೋಧಿಸಿಕೊಳ್ಳುವಷ್ಟು ವಿವೇಕ 'ಕವಿ-ರಾಜ-ಮಾರ್ಗ' ಸೃಷ್ಟಿಸಿಕೊಂಡ ಕನ್ನಡಕ್ಕೆ ಇಲ್ಲ ಎಂದರೆ ನಂಬುವುದು ಕಷ್ಟ. ನಂಬಿಕೆಯೊಂದೇ ಕಷ್ಟದ-ಬಿಕ್ಕಟ್ಟಿನ-ಕಾಲದ ಊರುಗೋಲು.

○

('ಶೈನಾ' ವಿಶೇಷಾಂಕ, ೨೦೦೫-೦೬)

v.ಇಂಗ್ಲಿಷ್ ಕಲಿಕೆ: ಎಲ್ಲಿಂದ...? ಹೇಗೆ...?

ನಾನು ಇಂದು ಮಾತನಾಡಬೇಕಾಗಿರುವ "ಇಂಗ್ಲೀಷ್ ಕಲಿಕೆ ಎಲ್ಲಿಂದ? ಹೇಗೆ? " ಎಂಬ ವಿಷಯವು ಮೊದಲ ನೋಟಕ್ಕೆ, ಶೈಕ್ಷಣಿಕ ಚೌಕಟ್ಟಿನಲ್ಲಿನ ಒಂದು ತಾಂತ್ರಿಕ ವಿಷಯವಾಗಿ ಮಾತ್ರ ಕಾಣುತ್ತದೆ. ಆದರೆ ಈ ವಿಷಯ ಇಂದೇಕೆ ದಿಢೀರ್ ಮಹತ್ವ ಪಡೆದುಕೊಂಡಿದೆ ಎಂಬ ಪ್ರಶ್ನೆ, ಈ ವಿಷಯದ ಹಿಂದಿರುವ ಸಾಂದರ್ಭಿಕತೆಯ ಅನೇಕ ಆಯಾಮಗಳನ್ನು ತೆರೆದಿಡುತ್ತದೆ. ಮೊದಲಾಗಿ ಈ ವಿಷಯ 'ಕನ್ನಡ ಮನಸ್ಸು: ಪ್ರಚಲಿತ ಪ್ರಶ್ನೆಗಳು' ಎಂಬ ವಿಶಾಲ ವಿಷಯ ಭಿತ್ತಿಯ ಹಿನ್ನೆಲೆಯಲ್ಲಿ, 'ಆಧುನಿಕ ವಿದ್ಯಮಾನಗಳ ನಡುವೆ ಶಿಕ್ಷಣದ ಸವಾಲುಗಳು' ಎಂಬ ಉಪ ಶೀರ್ಷಿಕೆಯಡಿ ಚರ್ಚಿತವಾಗುತ್ತಿರುವುದರಿಂದ, ನನ್ನ ಮಾತುಗಳು ಶೈಕ್ಷಣಿಕ ಚೌಕಟ್ಟಿನ ತಾಂತ್ರಿಕ ಅಂಶಗಳಿಗೆ ಸೀಮಿತವಾದರೆ, ವಿಷಯದ ಹಿಂದಿನ ಸಮಸ್ಯೆ ಪೂರ್ಣಗ್ರಹಿಕೆಗೆ ಸಿಗಲಾರದು ಎಂದೇ ನನ್ನ ಭಾವನೆ. ಉದಾಹರಣೆಗೆ ನೋಡಿ, 'ಇಂಗ್ಲೀಷ್ ಕಲಿಕೆ ಎಲ್ಲಿಂದ ಹೇಗೆ? ಎಂಬ ವಿಷಯದ ಚರ್ಚೆಯೇ, ಸಂದರ್ಭದ ಹೊರಗಿನಿಂದ ನೋಡಿದವರಿಗೆ, ಈಗ ನಮ್ಮ ಶಿಕ್ಷಣ ಕ್ರಮದಲ್ಲಿ ಇಂಗ್ಲೀಷ್ ಕಲಿಕೆಗೆ ಅವಕಾಶವೇ ಇಲ್ಲವೇನೋ ಎಂಬ ಅಭಿಪ್ರಾಯವನ್ನು ಹುಟ್ಟಿಸುವಂತಿದೆ. ಹಾಗಾಗಿ ಇಂತಹ ಪ್ರಶ್ನೆ ಅಥವಾ ಪ್ರಶ್ನೆಗಳನ್ನು- ಎಲ್ಲಿಂದ ? ಹೇಗೆ? ಎಂಬ ಪ್ರಶ್ನೆಗಳನ್ನು- ಹುಟ್ಟು ಹಾಕಿದ ಸಂದರ್ಭದ ಪರಿಶೀಲನೆಯಿಲ್ಲದೆ, ಈ ವಿಷಯದ ಚರ್ಚೆ ಪೂರ್ಣವಾಗದೆಂದೇ ನನ್ನ ಭಾವನೆ. ಆದುದರಿಂದ ನಾನು ಮೊದಲು, ಈ ಪ್ರಶ್ನೆಗಳು ಹೊಸದೆಂಬಂತೆ ಹುಟ್ಟಿದ ಸಂದರ್ಭ, ಆ ಸಂದರ್ಭಕ್ಕೆ ಬೆಂಬಲವಾಗಿ ಮಂಡಿಸಲ್ಪಟ್ಟ ವಾದಗಳು ಮತ್ತು ಅವುಗಳ ಪರಿಶೀಲನೆ, ನಂತರ ಈ ಪರಿಶೀಲನೆಯ ಹಿನ್ನೆಲೆಯಲ್ಲಿ ಈ ಪ್ರಶ್ನೆಗಳಿಗೆ ಉತ್ತರ- ಹೀಗೆ ನಾಲ್ಕು ಹಂತಗಳಲ್ಲಿ ವಿಷಯವನ್ನು ಮಂಡಿಸಲಿಚ್ಛಿಸುತ್ತೇನೆ.

ಇಂದು ಇಂಗ್ಲೀಷ್ ಕಲಿಕೆ ಕುರಿತಂತೆ, ಕರ್ನಾಟಕ ಸರ್ಕಾರದ ಹೊಸ ಆಜ್ಞೆಗೆ ಕಾರಣವಾಗಿರುವ ಮತ್ತು ಇಂದಿನ ಈ ಚರ್ಚೆ ಹುಟ್ಟು ಹಾಕಿರುವ ಇಂಗ್ಲೀಷ್ ಕಲಿಕೆಯ ಹೊಸ ಪ್ರಸ್ತಾವನೆ ಮೊದಲ ಬಾರಿಗೆ ಸಾರ್ವಜನಿಕ ಗಮನಕ್ಕೆ ಬಂದದ್ದು, ಬೆಂಗಳೂರಿನ 'ಗ್ರಾಮರಾಜ್ಯ' ಎಂಬ ಸಂಸ್ಥೆಯೊಂದು ಈ ಬಗ್ಗೆ ಸರ್ಕಾರಕ್ಕೆ ಒಂದು ಔಪಚಾರಿಕ ಮನವಿ ಸಲ್ಲಿಸಿದಾಗ.ಈ ಸಂಸ್ಥೆ ಮೂಲತಃ ಹಳ್ಳಿಗಳಿಂದ ಉದ್ಯೋಗ ನಿಮಿತ್ತ ವಲಸೆ ಬಂದು ಬೆಂಗಳೂರಿನಲ್ಲಿ ನೆಲಸಿರುವ ಕೆಲವು ಬುದ್ಧಿಜೀವಿಗಳಿಂದ ರಚಿತವಾಗಿರುವುದು. ಇವರು ಒಂದು ನಿಯೋಗದಲ್ಲಿ ಒಂದೂವರೆ ವರ್ಷಗಳ ಹಿಂದೆ, ಆಗಿನ ರಾಜ್ಯ ಶಿಕ್ಷಣ ಮಂತ್ರಿ ಶ್ರೀ ರಾಮಲಿಂಗಾರೆಡ್ಡಿಯವರಿಗೆ (ಇವರು ಬೆಂಗಳೂರಿನ ರಾಜಕಾರಣಿಯಾಗಿದ್ದು, ಬೆಂಗಳೂರು ಹಾಗೂ ಅದರ ಸುತ್ತಮುತ್ತ ಒಂದು ದೊಡ್ಡ ದಂಧೆಯಾಗಿ ಬೆಳೆಯುತ್ತಿರುವ ಇಂಗ್ಲೀಷ್ ಶಾಲೆಗಳ ಅಧಿಪತಿಗಳ ಪ್ರಭಾವ ವಲಯದ ಮಧ್ಯೆ ಇರುವವರು ಎಂಬುದು

ಗಮನಾರ್ಹ.) ಮನವಿ ಸಲ್ಲಿಸಿ, ಈ ಕೂಡಲೇ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲೀಷ್ ಕಲಿಸಲಾರಂಭಿಸದೇ ಹೋದಲ್ಲಿ, ಗ್ರಾಮಾಂತರ ಶಾಲೆಗಳ ಬಡ ಮಕ್ಕಳು ಇಂದಿನ ಸ್ಪರ್ಧಾ ಜಗತ್ತಿನಲ್ಲಿ ಎಲ್ಲ ರೀತಿಯಲ್ಲೂ ಶಾಶ್ವತವಾಗಿ ಹಿಂದೆ ಬಿದ್ದು ಹೋಗುತ್ತಾರೆ ಎಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದರು. ಈ ಮನವಿಗೆ ಯಾವುದಾದರೂ ಅಂಕಿ ಅಂಶಗಳ ಅಥವಾ ಸಮೀಕ್ಷೆಯ ಬೆಂಬಲವಿತ್ತೋ, ಯಾರಿಗೂ ತಿಳಿಯದು. ವಿಚಿತ್ರವೆಂದರೆ, ಇಂತಹ ಸಾರ್ವಜನಿಕ ಮನವಿಗಳ ಪರಿಶೀಲನೆಗೆ ತನ್ನದೇ ಕಾಲ ತೆಗೆದುಕೊಳ್ಳುವ ಸರ್ಕಾರ ಈ ನಿರ್ದಿಷ್ಟ ಮನವಿಯನ್ನು, ಅದಕ್ಕಾಗಿ ತಾನೂ ಕಾಯುತ್ತಿದ್ದಂತೆ ತಕ್ಷಣ ಪರಿಶೀಲನೆಗೆ ತೆಗೆದುಕೊಂಡು, ಸಚಿವ ಸಂಪುಟದಲ್ಲಿ ಚರ್ಚಿಸಿ ತತ್‌ಕ್ಷಣದಿಂದಲೇ ಜಾರಿಗೆ ತರುವ ಇಂಗಿತ ವ್ಯಕ್ತಪಡಿಸಿತು. ಕೂಡಲೇ ಹಲವಾರು ಕಡೆಗಳಿಂದ ಇದಕ್ಕೆ ವಿರೋಧ ವ್ಯಕ್ತವಾಯಿತು. ಜಾಗತೀಕರಣದ ಹೆಸರಲ್ಲಿ, ಕನ್ನಡದ ನಿರ್ನಾಮದ ಆರಂಭವಿದು ಎಂಬುದು ಈ ವಿರೋಧದ ತಾತ್ವಿಕತೆಯಾಗಿತ್ತು. ಹೀಗೆ ವಿರೋಧ ವ್ಯಕ್ತಪಡಿಸಿದವರಲ್ಲಿ ಕನ್ನಡದ ಹಿರಿಯ ಸಾಹಿತಿಗಳು, ಚಿಂತಕರು ಹೋರಾಟಗಾರರು ಸೇರಿದ್ದರಿಂದ, ಸರ್ಕಾರ ಒಂದು ಹೆಜ್ಜೆ ಹಿಂದಿಟ್ಟಿತು. ಸಂಬಂಧಪಟ್ಟವರೆಲ್ಲರೊಂದಿಗೆ ಚರ್ಚೆ ನಡೆಸಿದ ನಂತರವೇ, ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಳ್ಳುವುದೆಂದು ಪ್ರಕಟಿಸಿತು.

ಇದರಿಂದ ಕೆರಳಿದಂತೆ ತೋರಿದ 'ಗ್ರಾಮರಾಜ್ಯ' ಗುಂಪಿನವರು ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವವರು ಬಹುತೇಕ, ದಲಿತ ಮತ್ತು ಹಿಂದುಳಿದ ಜಾತಿಗಳಿಗೆ ಸೇರಿದ ಬಡ ಮಕ್ಕಳಾದುದರಿಂದ, ತಮ್ಮ ವಾದ ಈ ಜನವರ್ಗಗಳ ಹಿತ ದೃಷ್ಟಿಯಿಂದ ಪ್ರೇರಿತವಾಗಿದೆ ಎಂದು ಸೂಚಿಸುತ್ತಾ, ಇಂದು ಕನ್ನಡದ ಪರವಾಗಿ ಮಾತನಾಡುತ್ತಿರುವವರೆಲ್ಲರ ಮಕ್ಕಳೂ ಇಂಗ್ಲೀಷ್ ಶಾಲೆಗಳಲ್ಲಿ ಓದಿದವರು ಅಥವಾ ಓದುತ್ತಿದ್ದಾರೆ ಎಂಬ ಎದುರು ಪಕ್ಷದ ವಿಶ್ವಾಸಾರ್ಹತೆ ಹಾಳುಮಾಡುವ ಆರೋಪದ ಶೈಲಿಯ ಪ್ರತಿದಾಳಿ ಆರಂಭಿಸಿದರು. ಇದರಿಂದಾಗಿ ತಜ್ಞ ಚರ್ಚೆಯ ಮೂಲಕ, ಅಗತ್ಯವಾದರೆ ಅಧಿಕೃತ ಸಮೀಕ್ಷೆಗಳ ಮೂಲಕ ಇತ್ಯರ್ಥವಾಗಬೇಕಿದ್ದ ವಿಷಯ, ಭಾವಾವೇಶದ ವಾದ-ಪ್ರತಿವಾದಗಳ ವಸ್ತುವಾಯಿತು. ಇಂಗ್ಲೀಷ್ ಕಲಿಕೆಯ ಹೊಸ ಪ್ರಸ್ತಾವನೆಯ ವಿರೋಧಿಗಳನ್ನು ಕನ್ನಡದ ಅಂಧಾಭಿಮಾನಿಗಳೆಂದೋ, ಸಂಪ್ರದಾಯವಾದಿ ಚಿಂತಕರೆಂದೋ ಅಥವಾ ಇಂಗ್ಲೀಷ್‌ನಿಂದ ಎಲ್ಲ ಲಾಭ ಪಡೆದು ಈಗ ದಲಿತರಿಗೆ -ಹಿಂದುಳಿದವರಿಗೆ ಆ ಲಾಭ ನಿರಾಕರಿಸುತ್ತಿರುವ ಪಟ್ಟ ಭದ್ರರೆಂದೋ ಗುರುತಿಸುವ, ಹಳಿಯುವ ಗುಂಪೊಂದು ಸೃಷ್ಟಿಯಾಯಿತು. ಇದರಿಂದ ವಿಚಲಿತರಾಗಿಯೋ ಅಥವಾ ಈ ವಾದವನ್ನು ನಂಬಿಯೋ, ಪ್ರಸ್ತಾವನೆಯ ವಿರುದ್ಧ ಕನ್ನಡದ ರಕ್ಷಣೆಗೆ ನಿಂತಿದ್ದ ಹಲವರು ತಮ್ಮ ನಿಲುವನ್ನು ಬದಲಿಸಿಕೊಂಡರು. ಅವರಲ್ಲಿ ಪ್ರಸ್ತುತ ಸಮಾವೇಶದ ಅಧ್ಯಕ್ಷತೆ ವಹಿಸಿರುವ ಡಾ|| ಚಂದ್ರಶೇಖರ ಕಂಬಾರ*, ಹಂಪನಾ ದಂಪತಿಗಳು ಹಾಗೂ ಶಿಕ್ಷಣ ಮಾಧ್ಯಮ ಕುರಿತ ತಮ್ಮ ವರದಿಯಲ್ಲಿ ಮೂರನೇ ತರಗತಿಯಿಂದ ಮಾತ್ರ

*ಈ ಸಮಾವೇಶದಲ್ಲೇ ಕಂಬಾರರು ನನ್ನೊಂದಿಗೆ ಮಾತನಾಡುತ್ತಾ, ತಮ್ಮ ಮೌನವು ತಮ್ಮ ನಿಲುವಿನ ಬದಲಾವಣೆಯನ್ನೇನೂ ಸೂಚಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಅನೌಪಚಾರಿಕವಾಗಿ ಇಂಗ್ಲೀಷ್ ಕಲಿಸಬೇಕೆಂದು ಶಿಫಾರಸ್ಸು ಮಾಡಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬರಗೂರು ರಾಮಚಂದ್ರಪ್ಪನವರು ಮುಖ್ಯರು.ಇವರ ಪ್ರಕಾರ, ಆರಂಭದಿಂದಲೇ ಇಂಗ್ಲಿಷ್ ಕಲಿಕೆಯಿಂದ ವಂಚಿತರಾಗಿ ಸರ್ಕಾರಿ ಅಥವಾ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಲ್ಲಿ ಹಿಂದುಳಿದ ಜಾತಿಯ ಮಕ್ಕಳೇ ಹೆಚ್ಚು.ಈ ಮಕ್ಕಳಿಗೆ ಮುಂದೆ ಉದ್ಯೋಗ ಸ್ಪರ್ಧೆಯಲ್ಲಿ ತೊಂದರೆಯಾಗುವುದೇ, ಆರಂಭದಿಂದಲೇ ಇಂಗ್ಲಿಷ್ ಕಲಿತ ಮಕ್ಕಳಿಂದ ಎಂಬುದು ಇವರ ಆತಂಕ. ಆದರೆ ಈ ಆತಂಕ ಶಿಕ್ಷಣ, ಸಾಮಾಜಿಕ ನ್ಯಾಯ ಹಾಗೂ ಉದ್ಯೋಗಾವಕಾಶದ ಪರಿಪ್ರೇಕ್ಷ್ಯವನ್ನು ಕುರಿತ ಸರಳ ಗ್ರಹಿಕೆಗಳಿಂದ ಉಂಟಾದುದು ಎಂದು ಹೇಳದೇ ವಿಧಿಯಿಲ್ಲ.

ಸರ್ಕಾರಿ ಅಥವಾ ಕನ್ನಡ ಮಾಧ್ಯಮ ಶಾಲೆಗಳಿಗೆ ಮಕ್ಕಳನ್ನು ಕಳಿಸುವವರು ಹಿಂದುಳಿದ ಜಾತಿಯವರೇ ಹೆಚ್ಚು ಎಂಬ ಅಭಿಪ್ರಾಯವು, ನಮ್ಮ ಸಮಾಜದ ಜನಸಂಖ್ಯೆಯಲ್ಲಿ ಅವರ ಸಂಖ್ಯೆಯೇ ಹೆಚ್ಚು ಮತ್ತು ಇಂಗ್ಲಿಷ್ ಶಾಲೆಗಳಲ್ಲೂ ಆ ಜಾತಿಗಳ ಮಕ್ಕಳೇ ಹೆಚ್ಚು ಕಾಣುತ್ತಾರೆ ಎಂಬ ವಾಸ್ತವದ ಹಿನ್ನಲೆಯಲ್ಲಿ ಅಸಂಬದ್ಧವೆನಿಸುತ್ತದೆ. ಅಲ್ಲದೆ, ಸರ್ಕಾರಿ ಅಥವಾ ಕನ್ನಡ ಮಾಧ್ಯಮ ಶಾಲೆಗಳ ಪ್ರವೇಶಾತಿಯು ಜಾತಿ-ಬಡತನಗಳಿಂದಷ್ಟೇ ನಿರ್ಧಾರಿತವಾಗುವುದು ಎಂದು ಭಾವಿಸುವುದು ಸುಲಭದ ತೀರ್ಮಾನವೆನಿಸುತ್ತದೆ. ಹಾಗೇ, ಈ ಶಾಲೆಗಳಿಂದ ಕಲಿತವರೆಲ್ಲರೂ ಇವರು ಊಹಿಸಿರುವಂತಹ ಉದ್ಯೋಗ ಮಾರುಕಟ್ಟೆಗೇ ಬಂದು ಬಸವಳಿಯುತ್ತಾರೆ ಎಂದು ನಂಬುವುದು ಅವಾಸ್ತವಿಕವೆನಿಸುತ್ತದೆ. ಅದೇನೇ ಇರಲಿ,ಈ ವಾದದಿಂದ ಇಂಗ್ಲಿಷ್ ಕಲಿಕೆ ವಾದಿಗಳು ಸಾಮಾಜಿಕ ನ್ಯಾಯವಾದಿಗಳ ಅಸ್ವಸ್ಥತೆಗೆ ಹೊಸ ಕಾರಣ ಹುಡುಕಿ ಕೊಟ್ಟು, ಅವರ ಬಾಯ್ಬಲದ ಬೆಂಬಲವನ್ನು ಗಳಿಸಿಕೊಂಡಿದ್ದಂತೂ ನಿಜ! ಆದರೆ ಇದರಿಂದಾಗಿ ಈಗಾಗಲೇ ದುರ್ಬಲಗೊಳ್ಳುತ್ತಿರುವ ಕನ್ನಡ ಚಳುವಳಿಗೆ ಪುಂಡಾಟಿಕೆ, ಮೂಲಭೂತವಾದಗಳ ಜೊತೆಗೆ ಜಾತೀಯತೆಯ ಸೋಂಕೂ ತಗುಲುವಂತಾದುದು ದುರದೃಷ್ಟಕರ.ಕನ್ನಡ ಎಂದರೆ ಕನ್ನಡ ಜನ-ಅವರ ಉನ್ನತಿಯಾದರೆ ಕನ್ನಡದ ಉನ್ನತಿಯೂ ಆದಂತೆ ಎಂಬ ವಾದವನ್ನೂ ಇಂಗ್ಲಿಷ್ ಕಲಿಕೆವಾದಿಗಳು ಮುಂಡಿಸುತ್ತಿದ್ದಾರೆ...ಹೌದು,ಕನ್ನಡವೆಂದರೆ ಕನ್ನಡ ಜನವೇ; ಆದರೆ ಅವರು ಬರೀ ಜನವಲ್ಲ, ಕನ್ನಡದ ಜನ ಎಂಬುದು ಅವರ ಗ್ರಹಿಕೆಯಿಂದ ನುಣುಚಿಹೋದಂತೆ ತೋರುತ್ತದೆ!

ಈ ಬೆಳವಣಿಗೆಯ ನಂತರ, ಇಂಗ್ಲೀಷ್ ಕಲಿಕೆಯ ಪ್ರಶ್ನೆ ಶೈಕ್ಷಣಿಕ ಪ್ರಶ್ನೆಯಾಗುಳಿಯದೆ ಸಾಮಾಜಿಕ ನ್ಯಾಯದ, ರಾಜಕೀಯ ಪ್ರಶ್ನೆಯಾಗಿ ಪರಿವರ್ತಿತವಾಯಿತು. ಈ ಗೊಂದಲದಲ್ಲಿ ಒಬ್ಬರ ವಾದವನ್ನು ಇನ್ನೊಬ್ಬರ ಸಂಯಮದಿಂದ ಕೇಳುವ, ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳುವ, ಆ ವಾದಗಳನ್ನು ಅಂಕಿ ಅಂಶಗಳ ಆಧಾರದ ಮೇಲೆ ಸಮರ್ಥಿಸುವ ಅಥವಾ ಅಲ್ಲಗಳೆಯುವ; ಇಂತಹ

ಚರ್ಚೆಗಿರಬೇಕಾದ ಶೈಕ್ಷಣಿಕ ಗಾಂಭೀರ್ಯ- ಜವಾಬ್ದಾರಿಯೇ ಕಾಣೆಯಾಯಿತು. ಅಭಿಪ್ರಾಯ- ಅನ್ನಿಸಿಕೆಗಳೇ, ಕಿವಿ ಮೇಲೆ ಬಿದ್ದ ಮಾತುಗಳೇ ಬೀದಿಗಳಲ್ಲಿ, ಸಾರ್ವಜನಿಕ ವೇದಿಕೆಗಳಲ್ಲಿ, ಶಾಸನ ಸಭೆಯಲ್ಲಿ ಚರ್ಚೆಯನ್ನು ಬೆಳೆಸಿದವು. ಭಾಷಾತಜ್ಞರ ಹಾಗೂ ಮಕ್ಕಳ ಶಿಕ್ಷಣ ತಜ್ಞರ ಅಭಿಪ್ರಾಯಗಳನ್ನು ತಿರುಚಿ ಹಿನ್ನೆಲೆಗೆ ಸರಿಸಲಾಯಿತು. ದೊಡ್ಡ ಗಂಟಲಿನ ಕೂಗೇ ವಾಸ್ತವದ ಪ್ರತಿಬಿಂಬ ಹಾಗೂ ಸತ್ಯದ ಪ್ರತಿಪಾದನೆ ಎಂಬ ವಾತಾವರಣ ಸೃಷ್ಟಿಯಾಯಿತು. ಈ ಮಧ್ಯೆ ಇಂಗ್ಲೀಷ್ ಕಲಿಕೆಯ ಹೊಸ ಪ್ರಸ್ತಾವನೆಯನ್ನು ಮಂಡಿಸಿದ ಬುದ್ಧಿ ಜೀವಿಗಳ ಪೈಕಿ ಹಲವರಿಗೆ, ಬೆಂಗಳೂರು ನಗರಪಾಲಿಕೆ ಪರವಾಗಿ ಕೆಂಪೇಗೌಡ ಪ್ರಶಸ್ತಿ ಪ್ರದಾನವೂ ಆಯಿತು.

ಈ ಮಧ್ಯೆ ಶೈಕ್ಷಣಿಕ ವರ್ಷ ಆರಂಭವಾಗಿ ಬಿಟ್ಟುದುದರಿಂದ, ಈ ಹೊಸ ಪ್ರಸ್ತಾವನೆಯ ಜಾರಿಯನ್ನು ಮರುವರ್ಷಕ್ಕೆ ಮುಂದೂಡಿದ ಸರ್ಕಾರ, ತದನಂತರ ಅಧಿಕಾರ ಕಳೆದುಕೊಂಡಿತು. ಬಂದ ಹೊಸ ಸಮ್ಮಿಶ್ರ ಸರ್ಕಾರ, ಈ ಹಳೆಯ ಚರ್ಚೆಗಳೇ ತನ್ನ ನಿರ್ಧಾರಕ್ಕೆ ಸಾಕೆಂದು ಹೇಳಿ, ಅದರ ಶಿಕ್ಷಣ ಮಂತ್ರಿಯ ವಿರೋಧ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಅಭಿಪ್ರಾಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ ನೇತೃತ್ವದ ಹಿರಿಯ ಸಾಹಿತಿಗಳ,ಚಿಂತಕರ,ಹೋರಾಟಗಾರರ ಪ್ರತಿಭಟನೆಯನ್ನು ಲೆಕ್ಕಿಸದೆ,ಇಂಗ್ಲೀಷ್ ಕಲಿಕೆಯ ಹೊಸ ಪ್ರಸ್ತಾವನೆಯನ್ನು ಆಜ್ಞೆಯನ್ನಾಗಿ ಪ್ರಕಟಿಸಿದೆ.ಇದರಲ್ಲಿ ಹೊಸ ಸೇರ್ಪಡೆ ಎಂದರೆ,ಕೇಂದ್ರ ಪಠ್ಯ ಕ್ರಮದ ಶಾಲೆಗಳಲ್ಲೂ ಕನ್ನಡ ಕಡ್ಡಾಯದ ಪ್ರಸ್ತಾವನೆ. ಸರ್ಕಾರವು ತನ್ನ ಈ ಕ್ರಮವನ್ನು ಗ್ರಾಮಾಂತರ ಜನರ, ಬಡವರ, ಹಿಂದುಳಿದವರ ಕಲ್ಯಾಣಕ್ಕಾಗಿ ರೂಪಿಸಲಾಗಿರುವ, ವ್ಯಾವಹಾರಿಕ ನೀತಿ ಮಾತ್ರ ಎಂದು ಸಮರ್ಥಿಸಿಕೊಂಡಿದೆ.

ಈ ಅಂತಿಮ ಸಮರ್ಥನೆಯ ಹಿಂದೆ ಕೆಲಸ ಮಾಡಿರುವ ವಾದ-ವಾಸ್ತವ-ಅಭಿಪ್ರಾಯ-ಅನ್ನಿಸಿಕೆಗಳನ್ನು ಪರಿಶೀಲಿಸುವ ಮೊದಲು ಪರಿಶೀಲನೆಗೆ ಒಳಗಾಗಬೇಕಾದದ್ದು, ಈ ಇಂಗ್ಲೀಷ್ ಕಲಿಕೆಯ ಹೊಸ ಪ್ರಸ್ತಾವನೆಯು ಮೂಡಿದ್ದಾದರೂ ಏಕೆ, ಹೇಗೆ- ಇದರ ಹಿಂದೆ ಇದ್ದ ಪ್ರೇರಣೆಯಾದರೂ ಏನು? ಎಂಬುದು. ಸರ್ಕಾರಿ ಶಾಲೆಗಳ ಮಕ್ಕಳು ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಕೆಯಿಂದ ವಂಚಿತರಾಗಿ, ಜಾಗತೀಕರಣಗೊಳ್ಳುತ್ತಿರುವ ಜಗತ್ತಿನಲ್ಲಿ ಅಬಲರಾಗಿ ಬಿಡುತ್ತಾರೆಂಬ ಆತಂಕವೇ? ಹಾಗಾದರೆ, ಈ ಆತಂಕಕ್ಕೆ ಇರುವ ಕಾರಣಗಳೇನು ಮತ್ತು ಈ ಆತಂಕದ ಹಿಂದಿರುವ ಜಾಗತೀಕರಣದ ಬಗೆಗಿನ ಪ್ರತಿಕ್ರಿಯೆ ಎಷ್ಟರಮಟ್ಟಿಗೆ ಸರಿ ಎಂಬ ಮುಖ್ಯ ಪ್ರಶ್ನೆಗಳಿಗೂ ಮುನ್ನ ಉತ್ತರ ಬೇಡುವ ಇನ್ನೊಂದು ಬಹುಮುಖ್ಯ ಪ್ರಶ್ನೆ ಎಂದರೆ: ಕೆಲವರ ಇಂತಹ ಆತಂಕವೇ, ಸರ್ಕಾರವು ಮಕ್ಕಳ ಶಿಕ್ಷಣದಂತಹ ಮಹತ್ವದ ವಿಷಯದಲ್ಲಿ ನೀತಿ ಬದಲಾವಣೆಗೆ ಮುಂದಾಗಲು ಕಾರಣವಾಗಬಲ್ಲದೇ ಎಂಬುದು.

ಈ ಸಹಜ ಸಂಶಯದ ಹಿನ್ನೆಲೆಯಲ್ಲಿ ಎದ್ದು ಕಾಣುವುದು ಎರಡು ಸಂಗತಿಗಳು. ವಿಶ್ವಬ್ಯಾಂಕ್ ಪ್ರೇರಿತ ಹೊಸ ಅಭಿವೃದ್ಧಿ ಮಾದರಿಯ ಪ್ರಬಲ ಸಮರ್ಥಕರಾದ ಇನ್ಫೋಸಿಸ್‌ನ ಎನ್.ಆರ್. ನಾರಾಯಣ ಮೂರ್ತಿಯವರು ಎರಡು ವರ್ಷಗಳ ಹಿಂದಿನಿಂದ ಕರ್ನಾಟಕ ಸರ್ಕಾರಕ್ಕೆ, ರಾಜ್ಯದ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮವನ್ನು ಕಡ್ಡಾಯಮಾಡುವಂತೆ ಕಿವಿಮಾತು ಹೇಳುತ್ತಿರುವುದು ಮತ್ತು ಇದಕ್ಕೆ ಪೂರಕ ಮಾಹಿತಿಯಂತೆ ವಿಶ್ವ ಬ್ಯಾಂಕ್, 'ಕರ್ನಾಟಕದಲ್ಲಿ ಶಾಲಾ ಶಿಕ್ಷಣ ಮತ್ತು ಆರ್ಥಿಕ ಪ್ರಗತಿಗಾಗಿ ಹೊಸ ಕಾರ್ಯಕ್ರಮ ನಕ್ಷೆ' ಎಂಬ ವರದಿಯಲ್ಲಿ (ಸಂ. ೨೪೨೦೮ - ಐ. ಎನ್) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವು ಶಾಲೆಗಳ ಹಾಗೂ ಕಾರ್ಯಾಗಾರಗಳ ಸಮೀಕ್ಷೆ ಮಾಡಿ, ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳಿಗಿಂತ, ಇಂಗ್ಲೀಷ್ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳು ತಾಂತ್ರಿಕ ವಿಷಯಗಳಲ್ಲಿ ಹೇಗೆ ಹೆಚ್ಚು ಸಮರ್ಥರಿರುತ್ತಾರೆ ಎಂಬುದನ್ನು ವಿಷದ ಪಡಿಸುತ್ತಾ ನೀಡಿರುವ ಸೂಚನೆಗಳು. ಈ ಸಮೀಕ್ಷಾ ವರದಿ ಎಷ್ಟು ವಸ್ತುನಿಷ್ಠ ಹಾಗೂ ವೈಜ್ಞಾನಿಕ (ಶಾಲಾ ಶಿಕ್ಷಣಕ್ಕೆ ಒಂದೇ - ಕರ್ನಾಟಕದಲ್ಲಿ ಕನ್ನಡ-ಮಾಧ್ಯಮ ಇರುವಂತಾದಾಗ ಇಂತಹ ಸಮೀಕ್ಷೆಗಳೇ ಅಸಂಬದ್ಧವೆನಿಸಿಕೊಳ್ಳುತ್ತವೆಯಲ್ಲವೇ ?) ಎಂಬ ಪ್ರಶ್ನೆ ಒಂದು ಕಡೆ ಇದ್ದರೆ, ಇಂತಹ ಸಮೀಕ್ಷೆಗಳ ಉದ್ದೇಶವಾದರೂ ಏನು ಮತ್ತು ವಿಶ್ವಬ್ಯಾಂಕ್‌ನಂತಹ ಹೊರಗಿನ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಇಂತಹ ಕೆಲಸಗಳಿಗೆ ಕೈಹಾಕುವುದರ ಮರ್ಮವಾದರೂ ಏನು? ನಮ್ಮ ಅಭಿವೃದ್ಧಿಯ ಸ್ವರೂಪ, ಮಾದರಿ, ಗತಿ- ಲಯಗಳನ್ನು ಇವರು ನಿರ್ಧರಿಸುವಂತಹ ರಾಜಕಾರಣ, ನಮ್ಮನ್ನು ಒಂದು ದೇಶವಾಗಿ ಎಲ್ಲಿಗೆ ಕೊಂಡೊಯ್ಯುತ್ತದೆ ಎಂಬ ಪ್ರಶ್ನೆಗಳು ಇನ್ನೊಂದು ಕಡೆ ಇವೆ.

ಈ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಲಾರಂಭಿಸಿಲ್ಲವಾದ್ದರಿಂದಲೇ ಹೊಸ ಜಾಗತಿಕ ಸಂದರ್ಭದಲ್ಲಿ ಇಂಗ್ಲಿಷ್ = ಅಭಿವೃದ್ಧಿ ಎಂಬ ಸರಳ ಸೂತ್ರಕ್ಕ ಬಲಿಯಾಗಿದ್ದೇವೆ. ಇದೇನೂ ಹೊಸ ಸೂತ್ರವಲ್ಲ. ನವ ಭಾರತದ ದೇಸಿ ಶಿಕ್ಷಣ ತಜ್ಞರು, ಯಾವುದನ್ನು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಬಾಗಿಲು ಕಾಯುವ (Gate keeping) ಶಿಕ್ಷಣ ಕ್ರಮವೆಂದು ಕರೆದರೋ, ಆ ಮೆಕಾಲೆ ಪ್ರಣೀತ ಶಿಕ್ಷಣ ಕ್ರಮ ಎಂದಿನಿಂದ ಜಾರಿಗೆ ಬಂದಿತೋ, ಅಂದಿನಿಂದ ಈ ಸೂತ್ರ ನಮ್ಮ ದೇಶದಲ್ಲಿ ಜಾರಿಯಲ್ಲಿದೆ. ಸ್ವಾತಂತ್ರ್ಯ ಬಂದ ಮೇಲೂ ಈ ಬಾಗಿಲು ಕಾಯುವ ಕೆಲಸ, ಆ ಸಾಮ್ರಾಜ್ಯವನ್ನು ಕಟ್ಟಿದ ತಂತ್ರಜ್ಞಾನವನ್ನು ನಮ್ಮ ದೇಶವನ್ನು ಕಟ್ಟಲು ಮಾದರಿಯಾಗಿ ಸ್ವೀಕರಿಸಿದ್ದರಿಂದಾಗಿ, ಪರೋಕ್ಷವಾಗಿ ಮುಂದುವರೆದಿದೆ. ಇಲ್ಲಿ ನಾನು ತಂತ್ರಜ್ಞಾನ ಎಂಬುದನ್ನು ವೈಜ್ಞಾನಿಕ ತಾಂತ್ರಿಕತೆ ಎಂಬರ್ಥದಲ್ಲಿ ಮಾತ್ರವಲ್ಲದೆ, ವೈಚಾರಿಕ ಆಕೃತಿಗಳು ಎಂಬರ್ಥದಲ್ಲೂ ಬಳಸುತ್ತಿರುವೆ. ಉದಾಹರಣೆಗೆ *ಸೆಕ್ಯುಲರಿಸಂ* ಎಂಬ ವೈಚಾರಿಕ ಆಕೃತಿಯೊಂದಿಗೆ ನಾವು ನಡೆಸುತ್ತಿರುವ ರಾಜಕೀಯ ಅನುಸಂಧಾನ ಎಷ್ಟು ಗೊಂದಲಗಳನ್ನು ಸೃಷ್ಟಿಸಿದೆ

ಎಂಬುದನ್ನು ಗಮನಿಸಬಹುದು. ಗಾಂಧೀಜಿ ಇದರ ವಿರುದ್ಧ ಎಚ್ಚರಿಸಿದ್ದರು. ಅಂತಹ ತಂತ್ರಜ್ಞಾನದ ಮೂಲಕ ನಮ್ಮದು ಎನ್ನುವ ಮತ್ತು ನಮ್ಮದಾಗಿ ಉಳಿಯುವ ದೇಶವನ್ನು ಕಟ್ಟಲಾಗದು ಎಂದಿದ್ದ ಅವರು, ಒಂದಲ್ಲ ಒಂದು ದಿನ ಆತ್ಯಂತಿಕ ಬಿಕ್ಕಟ್ಟಿಗೆ ಸಿಲುಕಿಸುವಂತಹ, ಸದಾ ಏರುತ್ತಾ ಹೋಗುವ ಜೀವನ ಮಟ್ಟದ ತಂತ್ರಕ್ಕಿಂತ ನಮ್ಮ ಮಿತಿಗಳಲ್ಲೇ ಸಂತೋಷಪಡುವ ಒಂದು ಸಭ್ಯ ಜೀವನ ಮಟ್ಟವನ್ನು ಸಾಧ್ಯಮಾಡುವ ತಂತ್ರವಾಗಿ, ದೇಶಿ ತಂತ್ರಜ್ಞಾನರ ವಿಕಾಸದ ಪ್ರತಿಪಾದನೆ ಮಾಡಿದ್ದರು.

ಆದರೆ ಹೊಸ ಜಗತ್ತಿನಲ್ಲಿ ಅದೆಲ್ಲ ಅವಾಸ್ತವಿಕ, ಅಸಾಧ್ಯ, ಎಂದು ಭಾವಿಸಿದ ನಾವು ನೆಹರೂ ಸ್ಫೂರ್ತಿಯೊಂದಿಗೆ, ವಿಜ್ಞಾನದ ನಿರಂತರ ಅನ್ವಯವನ್ನಾಧರಿಸಿದ ಆಧುನಿಕ ತಂತ್ರಜ್ಞಾನದ ನೆರವಿನಿಂದ ದೇಶವನ್ನು ಕಟ್ಟಿಯೇ ಕಟ್ಟಿದೆವು -೧೫ ವರ್ಷಗಳ ಹಿಂದೆ ನಮ್ಮ ದೇಶದ ಕಾಪು ದಾಸ್ತಾನು ಚಿನ್ನವನ್ನೆಲ್ಲ ವಿಶ್ವಬ್ಯಾಂಕ್ ಬಳಿ ಅಡವಿಟ್ಟು, ದೇಶ ಕಟ್ಟುವುದಿರಲಿ, ನಡೆಸುವ ಖರ್ಚಿಗೆ ಹಣ ಸಾಲ ಪಡೆಯುವ ದುಃಸ್ಥಿತಿಗೆ ಈಡಾಗುವವರೆಗೆ. ಇಂತಹ ಅಭಿವೃದ್ಧಿಯ ಭಾಷೆ ಇಂಗ್ಲೀಷ್ ಆಗಿತ್ತು. ಈ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು, ಅದರ ಫಲಗಳನ್ನುಣ್ಣಲು ಇಂಗ್ಲಿಷ್ ಸಹಜವಾಗಿ ಅಗತ್ಯವಾಗಿತ್ತು. ಏಕೆಂದರೆ, ಈ ಅಭಿವೃದ್ಧಿಯ ಮಾಧ್ಯಮವನ್ನು ಭಾರತೀಯ ಭಾಷೆಗಳಿಗೆ ಅಳವಡಿಸಿಕೊಳ್ಳುವ ಮನಃಪೂರ್ವಕ ಪ್ರಯತ್ನಗಳು ಬೇರೆ ದೇಶಗಳಲ್ಲಾದಂತೆ - ಉದಾಹರಣೆಗೆ ಏಷಿಯಾದ ದೇಶಗಳೇ ಆದ ಚೀನಾ, ಜಪಾನ್, ಕೊರಿಯಾ- ನಮ್ಮ ದೇಶದಲ್ಲಿ ಆಗಲೇ ಇಲ್ಲ. ಮೆಕಾಲೆ ಶಿಕ್ಷಣಕ್ರಮದ ಮೂಲಕ ಶಿಕ್ಷಣದ ಅರ್ಥೋದ್ದೇಶಗಳನ್ನೇ ಮೂಲಭೂತವಾಗಿ ಬದಲಿಸಿಕೊಂಡಿದ್ದ ನಾವು ಎಂತಹ ವಸಾಹತುಶಾಹಿ ಮಂಕಿಗೆ ಒಳಗಾಗಿದ್ದುವೆಂದರೆ, ನಮಗೆ ಇಂಗ್ಲಿಷ್ ಒಂದು ಭಾಷೆ ಮಾತ್ರವಲ್ಲ, ಒಂದು ಮನೋಭೂಮಿಕೆಯೇ ಆಗಿತ್ತು. ಹಾಗಾಗಿಯೆ, ಕಳೆದ ಅರವತ್ತು ವರ್ಷಗಳಲ್ಲಿ ಎಷ್ಟೋ 'ಇಂಗ್ಲಿಷ್ ತೊಲಗಿಸಿ' ಆಂದೋಲನಗಳು ನಡೆದಿದ್ದರೂ, ಇಂಗ್ಲಿಷ್ ನಮ್ಮ ಶಿಕ್ಷಣ ಕ್ರಮದ ಒಂದು ಅವಿಭಾಜ್ಯ ಅಂಗವಾಗಿ ಉಳಿದುಕೊಂಡೇ ಬಂದಿದೆ ಮತ್ತು ದೇಶದ ಹೆಚ್ಚೆಚ್ಚು ಜನಭಾಗ ಅದನ್ನೊಂದು ಭಾಷೆಯಾಗಿ ಕಲಿಯುವುದಷ್ಟೇ ಅಲ್ಲ, ಅದನ್ನು ಶಿಕ್ಷಣ ಮಾಧ್ಯಮವನ್ನಾಗಿಯೂ ಸ್ವೀಕರಿಸುತ್ತಿದೆ.

ಈ ಪ್ರವೃತ್ತಿಯು ಶಿಕ್ಷಣದ ಗುಣಮಟ್ಟದ ಮೇಲೆ ಹಾಗೂ ರಾಷ್ಟ್ರದ ಮನಸ್ಸಿನ ಮೇಲೆ ಉಂಟುಮಾಡುವ ದುಷ್ಪರಿಣಾಮಗಳ ಬಗ್ಗೆ ಭಾಷಾ ತಜ್ಞರು, ಶಿಕ್ಷಣ ತಜ್ಞರು, ಸಂಸ್ಕೃತಿ ಚಿಂತಕರು ಆಗಾಗ್ಗೆ ಎಚ್ಚರಿಸುತ್ತಲೇ ಬಂದಿದ್ದರೂ; ಸರ್ವೋನ್ನತ ನ್ಯಾಯಾಲಯವೂ ಪ್ರಾಥಮಿಕ ಶಿಕ್ಷಣವನ್ನು ಮಾತೃ ಅಥವಾ ರಾಜ್ಯ ಭಾಷೆಯಲ್ಲಿಯೇ ನಡೆಸಬೇಕಾದ ಸರ್ಕಾರದ ಹಕ್ಕು- ಕರ್ತವ್ಯಗಳನ್ನು ಸಂವಿಧಾನಿಕ ಎಂದು ಎತ್ತಿ ಹಿಡಿದಿದ್ದರೂ, ನಮ್ಮಲ್ಲಿ ಇಂಗ್ಲೀಷ್ ಹಪಾಹಪಿ ದಿನೇ ದಿನೇ ಹೆಚ್ಚುತ್ತಲೇ ಇದೆ.

ಜನರ ಹಪಾಹಪಿಯ ಜೊತೆಗೆ ಸರ್ಕಾರದ ಹಪಾಹಪಿಯೂ ಈಗ ಸೇರಿಕೊಂಡು, ಸಮಸ್ಯೆ ಇನ್ನಷ್ಟು ಬಿಗಡಾಯಿಸಿದೆ. ಭಾರತೀಯ ಭಾಷಾ ಆಂದೋಲನಕಾರರೂ, ಶಿಕ್ಷಣ ತಜ್ಞರೂ ಸೇರಿ ಹಲವಾರು ವರ್ಷಗಳ ಕಾಲ ವಿವಿಧ ನ್ಯಾಯಾಲಯಗಳಲ್ಲಿ ವಾದಿಸಿ-ಪ್ರತಿವಾದಿಸಿ, ಕೊನೆಗೂ ಸರ್ವೋನ್ನತ ನ್ಯಾಯಾಲಯದಿಂದ ಮಾತೃಭಾಷಾ ಶಿಕ್ಷಣ ಮಾಧ್ಯಮ ಪರವಾದ ತೀರ್ಪನ್ನು ಸಾಧಿಸಿದರೂ, ಅದರ ಜಾರಿಗೆ ಇಲ್ಲಿನ ಶಿಕ್ಷಣೋದ್ಯಮಿಗಳು ರಾಜ್ಯ ಉಚ್ಚನ್ಯಾಯಾಲಯದಲ್ಲಿ ತಂದ ತಡೆಯಾಜ್ಞೆಯನ್ನು ತೆರವುಗೊಳಿಸುವ ಯಾವುದೆ ಉಪಕ್ರಮವನ್ನು ಕಳೆದ ೧೩ ವರ್ಷಗಳಿಂದ ನಮ್ಮ ರಾಜ್ಯ ಸರ್ಕಾರ ತೆಗೆದುಕೊಳ್ಳಲಿಲ್ಲ. ಈಗ ಒಂದನೇ ತರಗತಿಯ ಇಂಗ್ಲೀಷ್ ಉಪಕ್ರಮದ ತರಾತುರಿಯನ್ನು ಕೆಲವರು ಪ್ರಶ್ನಿಸಿದಾಗಲಷ್ಟೇ, ಅದು ಉಂಟುಮಾಡಿದ ಬಿಗುವನ್ನು ಉಪಶಮನಗೊಳಿಸಲು ಈ ತಡೆಯಾಜ್ಞೆ ಪ್ರಕರಣವನ್ನು ಸರ್ಕಾರ ಕೈಗೆತ್ತಿಕೊಂಡಿದೆ. ಈ ಪ್ರಕರಣದ ವಾದ ಪ್ರತಿವಾದಗಳು ಅಂತಿಮ ಹಂತದಲ್ಲಿದ್ದು, ಅನತಿಕಾಲದಲ್ಲೇ ತೀರ್ಪು ಹೊರಬೀಳಲಿದೆ. ಹೀಗಿರುವಾಗ ಈ ತೀರ್ಪಿಗೂ ಕಾಯದೆ, ಇಂಗ್ಲಿಷ್ ಕಲಿಕೆ ಕುರಿತ ಹೊಸ ಆಜ್ಞೆಯನ್ನು ಹೊರಡಿಸಿದ ಸರ್ಕಾರದ ತುರ್ತು, ಹಲವು ನೆಲೆಗಳಲ್ಲಿ ಪ್ರಶ್ನಾರ್ಹವಾಗಿದೆ.

ಕೇವಲ ಹತ್ತು ವರ್ಷಗಳ ಹಿಂದಿನವರೆಗೆ, ಇಂಗ್ಲಿಷ್ ಭಾಷೆ ಗ್ರಾಮಾಂತರದ ಮಕ್ಕಳಿಗೆ ಒಂದು ಕುತ್ತಾಗಿ ಪರಿಣಮಿಸಿದೆ; ಇದು ಶಾಲಾ ಮಟ್ಟದಲ್ಲಿಯೇ ಮಕ್ಕಳು ಶಿಕ್ಷಣ ನಿಲ್ಲಿಸುವುದಕ್ಕೆ ಕಾರಣವಾಗಿದೆ- ಆದುದರಿಂದ ಇಂಗ್ಲೀಷ್ ಭಾಷಾ ಕಲಿಕೆ ಕಡ್ಡಾಯವನ್ನು ಶಿಕ್ಷಣ ಕ್ರಮದಿಂದ ತೆಗೆದು ಹಾಕಬೇಕೆಂದು ಹೇಳುತ್ತಾ ಚಳುವಳಿಯನ್ನು ನಡೆಸಿದ್ದ ದಲಿತ ಹಿಂದುಳಿದ ವರ್ಗಗಳ ನಾಯಕತ್ವದ ಒಂದು ಭಾಗ ಇಂದು ಇದಕ್ಕೆ ತದ್ವಿರುದ್ಧ ದಿಕ್ಕಿನಲ್ಲಿ, ಒಂದನೇ ತರಗತಿಯಿಂದಲೇ ಇಂಗ್ಲಿಷ್‌ನ್ನು ಕಡ್ಡಾಯ ಮಾಡಬೇಕೆಂದು ಒತ್ತಾಯಿಸುತ್ತಿರುವುದರ ಮರ್ಮವಾದರೂ ಏನು? ಹಲವು ರೀತಿಯ ಸಂಕಷ್ಟ- ಸಂದಿಗ್ಧಗಳಲ್ಲಿರುವ ಸರ್ಕಾರವು ಈ ಜನವರ್ಗಗಳ ಸಹಾನುಭೂತಿಯನ್ನು ಗಳಿಸಿಕೊಳ್ಳುವ ರಾಜಕೀಯ ಹುನ್ನಾರವೇನಾದರೂ ಈ ತುರ್ತಿನ ಹಿಂದೆ ಕೆಲಸ ಮಾಡಿದೆಯೇ? ಅತಿ ಲಾಭ ತರುವಂತಹ ಸರಕಿನ ಉತ್ಪತ್ತಿಯಲ್ಲಿ ತೊಡಗಿರುವ ತನ್ನ ಉದ್ಯಮಗಳಿಗೆ, ಉದ್ಯೋಗ ಹಾಗೂ ಮಾರುಕಟ್ಟೆ- ಈ ಎರಡೂ ವಿಷಯಗಳಲ್ಲಿ ಅನುಕೂಲವಾಗುವಂತಹ ಸಾಮಾಜಿಕ ವಾತಾವರಣ ನಿರ್ಮಾಣ ಮಾಡಿಕೊಳ್ಳಬಯಸುವ ಉದ್ಯಮಪತಿಗಳ ವ್ಯಾಪಾರಿ ಹಿತಾಸಕ್ತಿಯ ಒತ್ತಡಗಳು ಇಲ್ಲಿ ಕೆಲಸ ಮಾಡಿವೆಯೇ? ಅಥವಾ ಇವೆಲ್ಲವನ್ನೂ ಒಳಗೊಂಡಂತಿರುವ ವಿಶ್ವಬ್ಯಾಂಕ್ ನಿರ್ದೇಶನದ ಅಭಿವೃದ್ಧಿ ಮಾದರಿಯ, ಜಾಗತೀಕ ರಾಜಕಾರಣದ ಒತ್ತಡಗಳೇನಾದರೂ ಕೆಲಸ ಮಾಡಿವೆಯಾ ?

ಹಾಗೆ ನೋಡಿದರೆ, ಈ ಎಲ್ಲ ಒತ್ತಡಗಳೂ ಒಂದೇ ಮೂಲದಿಂದ ಬಂದಂತಹವು- ಅದೇ ಜಾಗತೀಕರಣ. ಈ ಜಾಗತೀಕರಣವು ತಾನು ಈ ಹಿಂದೆ

ಪ್ರಸ್ತಾಪಿಸಿದ ಆಧುನೀಕರಣದ ಹೊಸ ರೂಪವೇ ಆಗಿದೆ. ನಮ್ಮ ಚಿನ್ನವನ್ನೆಲ್ಲ ವಿಶ್ವಬ್ಯಾಂಕ್ ಬಳಿ ಅಡವಿಡುವಂತೆ ಮಾಡಿದ ಆಧುನೀಕರಣವು ಆ ದುಃಸ್ಥಿತಿ ತಲುಪಲು ಅದು ಸಮಾಜವಾದಿ ದೃಷ್ಟಿಕೋನವನ್ನು ಹೊಂದಿದುದೇ ಕಾರಣವೆಂದು ಜಾಗತೀಕರಣ ರೂಪದ ಆಧುನೀಕರಣವು ಹೇಳುತ್ತಿದೆ. ಅದೀಗ ಮುಕ್ತ ಸ್ಪರ್ಧೆ- ಮುಕ್ತ ಮಾರುಕಟ್ಟೆಯನ್ನು ಎತ್ತಿ ಹಿಡಿಯುತ್ತಾ ಮತ್ತು ಮಾಹಿತಿ ಹಾಗೂ ಜೈವಿಕವೆಂಬ ಎರಡು ಹೊಸ ತಂತ್ರಜ್ಞಾನಗಳ ಸವಾರಿ ಮಾಡುತ್ತಾ; ನಮ್ಮ ಮಧ್ಯಮ ವರ್ಗಗಳಲ್ಲಿ ಬಣ್ಣದ ಕನಸುಗಳನ್ನು ಸೃಷ್ಟಿಸುತ್ತಾ ನಮ್ಮೆದುರು ಬಂದು ನಿಂತಿದೆ. ಮೊದಲ ಸುತ್ತಿನ ಆಧುನೀಕರಣ ಇಂಗ್ಲಿಷ್ ಪ್ರೇಮವನ್ನಷ್ಟೆ ಸೃಷ್ಟಿಸಿದ್ದರೆ, ಜಾಗತೀಕರಣವೆಂಬ ಈ ಎರಡನೇ ಸುತ್ತಿನ ಆಧುನೀಕರಣ ಇಂಗ್ಲೀಷ್ ಕಾಮವನ್ನು ಸೃಷ್ಟಿಸಿದೆ. 'ಕಾಮಾತುರಾಣಾಂ ನಲಜ್ಜಃ ನಭಯಃ ' ಎಂಬಂತೆ ಈ ಇಂಗ್ಲಿಷ್ ಕಾಮ, ನಮ್ಮನ್ನು ಯಾವುದೇ ಸಾಮಾಜಿಕ ಮರ್ಯಾದೆಯೆದುರು ನಿರ್ಲಜ್ಜರನ್ನಾಗಿಯೂ, ಯಾವುದೇ ರಾಷ್ಟ್ರೀಯ ಅಪಾಯದ ಎದುರು ನಿರ್ಭಯರನ್ನಾಗಿಯೂ ಮಾಡಿ, ವಿಷಯ ತಜ್ಞರ ಪರಿಣತಿಯ ಹಾಗೂ ವಿವೇಕದ ಮಾತು ತಲೆಯೊಳಗೇ ಹೋಗದಷ್ಟು ಮರುಳು ಸೃಷ್ಟಿಸಿದೆ.

ಹೀಗಾಗಿಯೇ ಒಂದನೇ ತರಗತಿಯಿಂದ ಇಂಗ್ಲಿಷ್ ಬೇಡ ಎಂದರೆ, ಇವರ ಕಿವಿಗಳಿಗೆ ಇಂಗ್ಲಿಷೇ ಬೇಡ ಎಂದಂತೆ ಕೇಳಿಸುತ್ತದೆ. ಭಾರತದ ಸದ್ಯದ ಶ್ರೇಷ್ಠ ವಿಜ್ಞಾನಿ ಡಾ. ಸಿ. ಎನ್. ಆರ್. ರಾವ್ ಅವರೇ, ಮೊದಲು ಕನ್ನಡ, ನಂತರವಷ್ಟೇ ಇಂಗ್ಲಿಷ್ ಎಂದು ಹೇಳಿದ್ದು ಇವರ ಕಿವಿಗೆ ಬೀಳದೇ ಹೋಗುತ್ತದೆ. ಭಾಷಾ ತಜ್ಞರು ಮಗು ಏಳನೇ ವಯಸ್ಸಿನವರೆಗೆ ಒಂದು ಭಾಷೆಯನ್ನು ಮಾತ್ರ ತನ್ನೊಳಗೆ ಅಂತರ್ಗತ ಮಾಡಿಕೊಳ್ಳಬಹುದು ಎಂದರೆ,ಅದೆಲ್ಲ ಹಳೆಯ ಶಾಸ್ತ್ರ ಎನ್ನುತ್ತಾರೆ-ತಾವೇ ಒಂದು ಭಾಷಾಶಾಸ್ತ್ರವನ್ನು ಆವಿಷ್ಕರಿಸಿಕೊಂಡಿರುವ ಹಾಗೆ! ಶಿಕ್ಷಣ ತಜ್ಞರು, ಮಗು ಆರಂಭದಲ್ಲಿ ತನ್ನ ಮಾತೃ ಅಥವಾ ಪರಿಸರ ಭಾಷೆಯಲ್ಲಿ ಜ್ಞಾನಕ್ಕೆ ತೆರೆದುಕೊಂಡರೆ ಮಾತ್ರ ಮುಂದಿನ ಶಿಕ್ಷಣ ಸುಗಮವಾಗುತ್ತದೆ ಎಂದರೆ; ನೀವಿನ್ನೂ ಜ್ಞಾನದ ಯುಗದಲ್ಲಿದ್ದೀರಿ -ಇದು ಉದ್ಯೋಗ ಯುಗ ಎಂದು, ಉದ್ಯೋಗಕ್ಕೂ ಜ್ಞಾನಕ್ಕೂ ಸಂಬಂಧ ಕಳಚಿ ಹೋಗಿರುವ ಕಟು ಸತ್ಯವನ್ನು ನಿಮ್ಮ ಮುಖಕ್ಕೆ ರಾಚಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಾರೆ! ಐದನೇ ತರಗತಿಗೆ ಬದಲಾಗಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವಂತಾದರೆ, ಗ್ರಾಮಾಂತರದ ದಲಿತ- ಹಿಂದುಳಿದ ವರ್ಗಗಳ ಮಕ್ಕಳೂ ಜಾಗತೀಕರಣದ ಫಲಗಳನ್ನು ಉಣ್ಣಲು ಶಕ್ತರಾಗುತ್ತಾರೆ ಎಂದು ಹುಂಬ ಹುಂಬಾಗಿ ನಂಬುತ್ತಾರೆ.

ಇಲ್ಲಿ ಜಾಗತೀಕರಣದ ಲಾಭ-ನಷ್ಟಗಳ ಬಗ್ಗೆ ಸಾರಾಸಗಟಾಗಿ ಏನನ್ನೂ ಹೇಳದೆ, ಈಗ ಭಾರತದಲ್ಲಿ ಜಾರಿಯಾಗುತ್ತಿರುವ ಜಾಗತೀಕರಣದ ಆವೃತ್ತಿಯ ಬಗ್ಗೆ ಜಾಗತೀಕರಣದ ವಿರೋಧಿಗಳೇನೂ ಅಲ್ಲದ, ಜಗತ್ತಿನ ಶ್ರೇಷ್ಠ ಅರ್ಥಶಾಸ್ತ್ರಜ್ಞರೆನ್ನಿಸಿರುವ,

ಅಮಾರ್ತ್ಯಸೇನರ ಈ ಮಾತನ್ನು ಉಲ್ಲೇಖಿಸಬಯಸುವೆ: "ಇಂದು ಭಾರತದ ಮೂರನೇ ಒಂದು ಭಾಗ ಕ್ಯಾಲಿಫೋರ್ನಿಯಾ ಆಗುತ್ತಿದ್ದರೆ, ಮೂರನೇ ಎರಡು ಭಾಗ ಇಥಿಯೋಪಿಯಾ ಆಗುತ್ತಿದೆ." ಇದು ಸತ್ಯವೇ ಆಗಿದ್ದರೆ, ಅದು ಉಂಟುಮಾಡಬಹುದಾದ ಅನಾಹುತಗಳು ಊಹಾತೀತವೇ ಸರಿ. ಸದ್ಯದ ಸಂದರ್ಭದ ಅಶಾಂತಿ, ಅಭದ್ರತೆ, ಹಿಂಸಾಚಾರಗಳ ವೈವಿಧ್ಯವೇ ಈ ಅನಾಹುತಗಳ ಮುನ್ಸೂಚನೆಗಳೂ ಆಗಿರಬಹುದು. ಈ ಎಲ್ಲ ಬೆಳವಣಿಗೆಗಳ ಹಿಂದೆ ಎದ್ದು ಕಾಣುವ ಒಂದು ಮುಖ್ಯ ಸತ್ಯವೆಂದರೆ, ಅನ್ಯಭಾಷೆಯೊಂದರ ಮಾತೃಕೆಗಳಲ್ಲಿನ ಅಭಿವೃದ್ಧಿ ಮಾದರಿಯ ಮೂಲಕ ಆಧುನೀಕರಣಗೊಳ್ಳಲು ಹೊರಟ ಜನಸಮುದಾಯವೊಂದು, ತನ್ನ ಭಾಷೆಯ ಸಾಧ್ಯತೆಗಳ ಬಗೆಗೇ ಅನುಮಾನ ಬೆಳೆಸಿಕೊಂಡು ತನ್ನ ವಿವೇಚನಾಶಕ್ತಿಯ ಆಧಾರಗಳನ್ನೇ ಕಳೆದುಕೊಂಡಿರುವುದು. ಲೌಕಿಕ ಬಂಡವಾಳವನ್ನರಸಿಕೊಂಡು ತನ್ನ ಪ್ರಜ್ಞಾ ಪರಿಧಿಯಾಚೆ ಹೊರಟ ಜನಸಮುದಾಯವೊಂದು ತನ್ನ ಸಾಂಸ್ಕೃತಿಕ ಬಂಡವಾಳದ ವಿಷಯದಲ್ಲಿ ದಿವಾಳಿತನಕ್ಕೆ ಒಳಗಾಗುತ್ತಿರುವ ದುರಂತವಿದು. ಇದು ಈಗಾಗಲೇ ಅಮಾರ್ತ್ಯಸೇನರ ಮಾತಿನ ಮೂಲಕ ಸೂಚಿಸಿದಂತೆ, ಜಾತಿಕೆಟ್ಟರೂ, ಸುಖ ಪಡಲಾಗದ ಸಂದಿಗ್ಧ. ಇಂತಹ ಸಂದಿಗ್ಧಗಳಲ್ಲೇ, ಕೆಲವು ಜನವರ್ಗಗಳಲ್ಲಿ ಹಿಂದುಳಿದಿರುವಿಕೆ ಎಂಬುದು ಒಂದು ವ್ಯಸನವಾಗಿ;ಅದಕ್ಕೆ ಕಾರಣಗಳಿಗೆ ಬದಲಾಗಿ,ನೆಪಗಳನ್ನು ಹುಡುಕಿಕೊಳ್ಳುವ ಹತಾಶೆ ಬೆಳೆಯುವುದು.

ಹಾಗಾದರೆ ಈ ಸಮಸ್ಯೆಗೆ ಪರಿಹಾರವೇ ಇಲ್ಲವೇ ? ಜಗತ್ತು ಬದಲಾಗುತ್ತಿರುವುದನ್ನು ಗಮನಿಸದೆಯೆ ನಮ್ಮ ಹಳೆಯ ಪರಿಕಲ್ಪನೆಗಳಿಗೇ ಜೋತು ಬಿದ್ದು, ಹೊಸ ವಿಚಾರ ಪ್ರಯೋಗಗಳಿಗೆ ತೆರೆದುಕೊಳ್ಳದೆ ಬದುಕನ್ನು ಸ್ಥಗಿತ ಗೊಳಿಸಿಕೊಳ್ಳಬೇಕೆ ? ಈ ಪ್ರಶ್ನೆಯೇ ಅಸಂಬದ್ಧ . ಏಕೆಂದರೆ, ನೀವು ನಿಂತಲ್ಲೇ ನಿಂತರೂ, ಬದಲಾವಣೆ ನಿಮ್ಮನ್ನು ಕೊಚ್ಚಿಕೊಂಡು ಹೋಗುತ್ತದೆ. ಈಗ ಆಗುತ್ತಿರುವುದೂ ಹಾಗೆಯೇ. ಬದಲಾಗಿ ನಮ್ಮ ನೆಲದ ಮೇಲೆ ನಾವು ಭದ್ರವಾಗಿ ನಿಲ್ಲುವ ವ್ಯವಸ್ಥೆ ಮಾಡಿಕೊಂಡು, ಬದಲಾವಣೆ ಪ್ರಕ್ರಿಯೆಯಲ್ಲಿ ನಾವೂ ಪಾಲ್ಗೊಂಡು ಅದನ್ನು ನಮ್ಮ ಸುಖ ಸಂತೋಷಗಳಿಗೆ ಅನುವಾಗುವಂತೆ ವಿನ್ಯಾಸಗೊಳಿಸಿಕೊಳ್ಳುವುದು ವಿವೇಕದ, ನಿಜವಾದ ಸಾಹಸ- ಸೃಜನಶೀಲತೆ ಎನ್ನಿಸಿಕೊಳ್ಳುತ್ತದೆ; ಅದು ಆಧುನೀಕರಣ ಎನ್ನಿಸಿಕೊಳ್ಳುತ್ತದೆ. ಇತರರ ವಿಚಾರ ಪ್ರಯೋಗಗಳನ್ನು ಅನುಕರಿಸುವುದಲ್ಲ. ಇದಕ್ಕೆ ಮೊದಲಾಗಿ ನಾವು ನಮ್ಮ ಮೂಲಸತ್ವವನ್ನು(Genius)ಗುರುತಿಸಿಕೊಂಡು, ಸಂಘಟಿಸಿಕೊಳ್ಳಬೇಕಾಗಿದೆ. ಈ ನಮ್ಮ ಮೂಲ ಸತ್ವದ ಮಾತೃಕೆಗಳು ಇರುವುದು ನಮ್ಮ-ಮಾತೃ- ಭಾಷೆಯಲ್ಲಿ- ಮೊದಲ ಭಾಷೆಯಲ್ಲಿ. ಹಾಗಾಗಿಯೇ ಸಮಕಾಲಿನ ಜಗತ್ತಿನ ಶ್ರೇಷ್ಠ ಭಾಷಾ ತಜ್ಞ ನೋಮ್ ಚಾಮ್‌ಸ್ಕಿ, ಮಗುವಿಗೆ ಅದರ ಬೆಳವಣಿಗೆಯ ಆರಂಭಿಕ

ವರ್ಷಗಳಲ್ಲಿ- ಏಳನೇ ವಯಸ್ಸಿನವರೆಗೆ- ಮಾತೃಭಾಷೆಯ ಹೊರತಾಗಿ ಇನ್ನೊಂದು (ಎರಡನೆಯ) ಭಾಷೆಯನ್ನು ಕಲಿಸುವುದು ಅದರ ಗ್ರಹಿಕೆಯ ಮೂಲನೆಲೆಗಳನ್ನೆ ಅಸ್ತವ್ಯಸ್ತಗೊಳಿಸಿ, ಅದರ ಸೃಜನಶಕ್ತಿಯನ್ನೇ ಭಂಗಗೊಳಿಸಿಸಬಲ್ಲದು ಎಂದು ಹೇಳಿರುವುದು.

ಇದಕ್ಕೆ ಆತ ಕೊಡುವ ಕಾರಣ, ಮನುಷ್ಯ ಸಂಸ್ಕೃತಿಯ ಸ್ಮೃತಿಕೋಶದಲ್ಲೇ ಜಾಗತಿಕ ಭಾಷಾ ವ್ಯಾಕರಣವೊಂದು(Universal grammer) ಅಂತರ್ಗತವಾಗಿದ್ದು, ಹುಟ್ಟುವ ಪ್ರತಿಯೊಂದು ಮಗುವೂ ಅದನ್ನ ಹೊತ್ತುಕೊಂಡೇ ಬರುತ್ತದೆ ಮತ್ತು ಆ ವ್ಯಾಕರಣ ಅದರ ಮಾತೃ ಮತ್ತು ಪರಿಸರ ಭಾಷೆಯಲ್ಲೇ ಅಭಿವ್ಯಕ್ತವಾಗಿ, ಆ ಮಗುವಿನ ಸೃಜನಶೀಲತೆಯನ್ನು ರೂಪಿಸುತ್ತದೆ. ವಾಸ್ತವವಾಗಿ ಮಗು ಶಾಲೆಗೆ ಹೋಗುವ ಮುನ್ನವೇ, ನಮ್ಮ ಭಾಷೆಯನ್ನು ಸಾಧಿಸಿಕೊಂಡಿರುತ್ತದೆ. ಬಹುಭಾಷಾ ಸಂದರ್ಭದಲ್ಲಿ ಮಗುವಿನ ಕಿವಿಗೆ ಹಲವು ಭಾಷೆಗಳು ಬೀಳುತ್ತಿರುವಂತಹ ಆವರಣದಲ್ಲಿ, ಮಗು ತನ್ನ ಶಕ್ತ್ಯಾನುಸಾರ ಹಲವು ಭಾಷೆಗಳನ್ನು ಸಾಧಿಸಿಕೊಳ್ಳಬಲ್ಲದು. ಇದನ್ನೇ ಕೆಲವು ಸ್ವಯಂ ಘೋಷಿತ ಭಾಷಾ ಹಾಗೂ ಶಿಕ್ಷಣ ತಜ್ಞರು, ಮಗು ಒಮ್ಮೆಗೇ ಹಲವು ಭಾಷೆಗಳನ್ನ ಕಲಿಯಬಲ್ಲದೆಂದು ಚೋಮ್‌ಸ್ಕಿ ಹೇಳಿದ್ದಾನೆ ಎಂದು ಈ ವಿಚಾರ ಗೊತ್ತಿಲ್ಲದವರ ಹಾದಿ ತಪ್ಪಿಸಿದ್ದೂ ಉಂಟು. ಹಾಗಾಗಿಯೇ ನಮ್ಮ ಮಧ್ಯದ ಶ್ರೇಷ್ಠ ಭಾಷಾ ತಜ್ಞ ಕೆ. ವಿ. ತಿರುಮಲೇಶರು ಈ ಚರ್ಚೆಯಲ್ಲಿ ಮಧ್ಯೆ ಪ್ರವೇಶಿಸಿ, ಇದನ್ನು ಪ್ರಶ್ನಿಸಿ, ಸ್ಪಷ್ಟೀಕರಿಸಿದ್ದು. (*'ಪ್ರಜಾವಾಣಿ ' ಸಾಪ್ತಾಹಿಕ ಪುರವಣಿ : ೨೨.೧೦.೦೬*) ಮಗು ಒಂದು ಭಾಷೆಯನ್ನು ತನ್ನಲ್ಲಿನ ಜಾಗತಿಕ ವ್ಯಾಕರಣದಿಂದ ಸಾಧಿಸಿಕೊಳ್ಳುವುದೇ ಬೇರೆ, ಮನುಷ್ಯ ನಿರ್ಮಿತ ವ್ಯಾಕರಣದಿಂದ ಕಲಿಯುವುದೇ ಬೇರೆ. ಉದಾಹರಣೆಗೆ, ಕನ್ನಡ ಮಾತೃಭಾಷೆಯ ಮಗು ಶಾಲೆಯಲ್ಲಿ ಕಲಿಯುವುದು ಕನ್ನಡ ಭಾಷೆಯನ್ನಲ್ಲ. ಬದಲಿಗೆ, ಆಗಲೇ ಸಾಧಿಸಿಕೊಂಡಿರುವ ಆ ಭಾಷೆಯ ಮುಖಾಂತರ ಆಧುನಿಕ ಶಿಕ್ಷಣಕ್ಕೆ ಅಗತ್ಯವಾದ ಅದರ ಅಕ್ಷರ ರೂಪದ ಭಾಷಾ ಶಿಸ್ತುಗಳನ್ನು; ಮತ್ತು ಆ ಮೂಲಕ ಜಗತ್ತನ್ನು ತನ್ನ ಅಗತ್ಯಗಳಿಗೆ ತಕ್ಕಂತೆ ನಿರೂಪಿಸಿಕೊಳ್ಳುವ ಉಪಾಯಗಳನ್ನು.

ಹಾಗಾಗಿಯೇ, ಮಾತೃ ಅಥವಾ ಪರಿಸರ ಭಾಷೆಯಾಗಿರದ ಇಂಗ್ಲಿಷನ್ನು ನಮ್ಮ ಮಕ್ಕಳು ಬಾಲ್ಯದಲ್ಲಿ ಸಾಧಿಸಿಕೊಳ್ಳಲಾರವು, ಕಲಿಯಬಲ್ಲವು ಮಾತ್ರ. ಹಾಗೆ ಕಲಿಯಲು ಅವಕ್ಕೆ ಸಾಧಿಸಿಕೊಂಡ ಭಾಷೆಯೊಂದರ ಶಿಸ್ತುಗಳ ಅಸ್ತಿವಾರಗಳಿರಬೇಕು. ಕನ್ನಡದ ಮಕ್ಕಳಿಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಗೆ ನಿಜವಾದ ವಿರೋಧವಿರುವುದು ಈ ನೆಲೆಯಿಂದ; ಕನ್ನಡಾಭಿಮಾನದಿಂದ ಅಲ್ಲ- ಬದಲಿಗೆ, ಇಂಗ್ಲಿಷ್ ಅಭಿಮಾನದಿಂದ! ನಮ್ಮ ಮಕ್ಕಳು ಇಂಗ್ಲಿಷ್ ಕಲಿಯುವುದಾದರೆ, ಚೆನ್ನಾಗಿ ಕಲಿಯಲೆಂದು- ಗಿಳಿಪಾಠವಾಗಿ ಅಲ್ಲ, ಜ್ಞಾನವನ್ನು ಹೀರಿಕೊಳ್ಳುವ ಮಾತೃಕೆಗಳ ರೂಪದಲ್ಲಿ. ಇದು ಸಾಧ್ಯವಾಗುವುದು

ಕನಿಷ್ಠ ಐದು ವರ್ಷಗಳ ಶಿಸ್ತುಬದ್ಧ ಕಲಿಕೆಯಿಂದ. ಅಂದರೆ transformation, expansion ಮತ್ತು substitution ಎಂದು ಭಾಷಾ ಹಾಗೂ ಶಿಕ್ಷಣ ತಜ್ಞರು ಕರೆಯುವ ಕಲಿಕಾ ತಂತ್ರಗಳು ಮಕ್ಕಳಿಗೆ ಅಂತರ್ಗತವಾಗಬೇಕು. ಹಾಗಾಗಿ ಏಳನೆಯ ತರಗತಿಯವರೆಗಿನ ಶಾಲಾ ಶಿಕ್ಷಣ ಮಾಧ್ಯಮ ಕರ್ನಾಟಕದಲ್ಲಿ, ಭಾಷಾ ಅಲ್ಪಸಂಖ್ಯಾತರ ಶಾಲೆಗಳ ಹೊರತಾಗಿ, ಕನ್ನಡದಲ್ಲಿರಲಿ. ಮೌಖಿಕ ಇಂಗ್ಲಿಷ್ ಕಲಿಕೆ ಮೂರನೆಯ ತರಗತಿಯಿಂದ ಆರಂಭವಾಗಿ, ನಾಲ್ಕನೇ ತರಗತಿಯಲ್ಲಿ ಅಕ್ಷರಾಭ್ಯಾಸ, ಐದನೇ ತರಗತಿಗೆ ಪಠ್ಯಾಧಾರಿತ ಇಂಗ್ಲಿಷ್ ಶಿಕ್ಷಣ ಶುರುವಾಗಲಿ. ಪರಿಸರದಲ್ಲಿರದ ಒಂದು ಭಾಷೆಯ ಕಲಿಕೆ ಆರಂಭವಾಗಬೇಕಾಗಿರುವುದೇ ಹೀಗೆ: Pattern drill ಅಂದರೆ ಭಾಷಾ ರಚನೆಯ ಸ್ವರೂಪವನ್ನು ಪರಿಚಯಮಾಡಿಕೊಡುವ ಸರಳವಾಕ್ಯ ಅಥವಾ ಸಾಲುಗಳ ಮೌಖಿಕ ಅಭ್ಯಾಸ; ನಂತರ reinforcement ಅಂದರೆ ಪದೇ ಪದೇ ಇಂಗ್ಲಿಷ್ ಶಬ್ದ,ವಾಕ್ಯಗಳು ಕಿವಿಗೆ ಬೀಳುವಂತಹ ತರಗತಿ ವಾತಾವರಣ ನಿರ್ಮಾಣ.

ಈ ಮಾದರಿಯ ಇಂಗ್ಲೀಷ್ ಕಲಿಕೆ ಮಾತ್ರ ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಸಜ್ಜುಗೊಳಿಸಬಲ್ಲವು. ಈ ಶಿಕ್ಷಣವೂ ವ್ಯಾವಹಾರಿಕ ಇಂಗ್ಲಿಷ್ ಕಡೆಗೇ ಹೆಚ್ಚು ಒತ್ತು ಕೊಡುವಂತಿರಬೇಕೇ ಹೊರತು, ಈಗಿರುವಂತೆ ಸಾಹಿತ್ಯಕ ಇಂಗ್ಲಿಷ್ ಕಡೆಗಲ್ಲ. ಇದು ಭಾಷಾ ಮತ್ತು ಶಿಕ್ಷಣ ಶಾಸ್ತ್ರಗಳ ಮೂಲತತ್ವಗಳನ್ನಾಧರಿಸಿದ ಹಾಗೂ ಬದಲಾಗುತ್ತಿರುವ ಜಗತ್ತಿನಲ್ಲಿ ಇಂಗ್ಲಿಷ್ ಭಾಷೆಯ ಪಾತ್ರವನ್ನು ಗಮನಿಸಿ ರೂಪಿಸಬಹುದಾದ ಪ್ರಾಥಮಿಕ ಶಿಕ್ಷಣದ ಸ್ಥೂಲರೂಪ. ಇದರ ವಿವರಗಳನ್ನು ಪರಿಣತ ಭಾಷಾತಜ್ಞರು, ಶಿಕ್ಷಣತಜ್ಞರು, ಸಾಮಾಜಿಕ ಕಾರ್ಯಕರ್ತರು, ವಿಜ್ಞಾನಿಗಳು, ಉದ್ಯಮತಂತ್ರಜ್ಞರು ಹಾಗೂ ಸಂಸ್ಕೃತಿ ಚಿಂತಕರಿಂದ ಕೂಡಿದ ಆಯೋಗವೋ, ಸಮಿತಿಯೋ ಸಿದ್ಧಪಡಿಸಬಹುದಾಗಿದೆ.

ಈ ವ್ಯವಸ್ಥೆ, ಅನೇಕ ಸಮಸ್ಯೆಗಳನ್ನು ತಂತಾನೇ ಪರಿಹರಿಸುತ್ತದೆ ಹಾಗೂ ಭಾಷೆ ಮತ್ತು ಶಿಕ್ಷಣ ಕುರಿತಂತೆ ಆಧುನೀಕರಣದ ಆಮಿಷಗಳು ಉಂಟುಮಾಡಿರುವ ಉಡಾಫೆಯ ಹಾಗೂ ವ್ಯಾವಹಾರಿಕತೆಯ ಹೆಸರಿನ ನಿಲುವುಗಳನ್ನು ಸರಿಪಡಿಸುತ್ತದೆ. ಮಾತೃಭಾಷಾ ಶಾಲಾಶಿಕ್ಷಣವು ಏಕರೂಪದ ಶಿಕ್ಷಣದ ಮೊದಲ ಹೆಜ್ಜೆಯಾಗಿ, ಅನೇಕ ರೀತಿಯ ಸಾಮಾಜಿಕ ಬಿಗುವುಗಳನ್ನು ಕಡಿಮೆ ಮಾಡುತ್ತದೆ. ಇದರಿಂದಾಗಿ ಇಂಗ್ಲಿಷ್ ಶಾಲೆಗಳಿಗೆ ವಲಸೆ ಹೋಗಿದ್ದ ಜನವರ್ಗಗಳಲ್ಲಿ ಒಂದಷ್ಟು ಪಾಲಾದರೂ ಸರ್ಕಾರಿ ಶಾಲೆಗಳಿಗೆ ವಾಪಸಾಗುವುದರಿಂದ, ಆ ಶಾಲೆಗಳ ಗುಣಮಟ್ಟದ ಸುಧಾರಣೆಗೆ ಒತ್ತಡಗಳು ಹೆಚ್ಚುತ್ತವೆ. ಜ್ಞಾನ, ಸಾಧಿಸಿಕೊಂಡ ಭಾಷಾ ಮಾತೃಕೆಗಳಲ್ಲಿ ಮಾತ್ರ ಸ್ಪಷ್ಟವಾಗಿ ಮತ್ತು ಸುಸ್ಥಿರವಾಗಿ ನೆಲೆಗೊಳ್ಳುವುದಾದ್ದರಿಂದ, ಕನ್ನಡ ಶಾಲಾ ಶಿಕ್ಷಣವು ಮಗುವಿನ ಪಾಲಿಗೆ ನಿಜವಾಗಿ ಜ್ಞಾನಾರ್ಜನೆಯ ಮಾಧ್ಯಮವಾಗಿ, ಅದು ಜಗತ್ತನ್ನು ಗ್ರಹಿಸುವ ತನ್ನದೇ ಅರಿವಿನ ದ್ವಾರಗಳನ್ನು ಗುರುತಿಸಿಕೊಳ್ಳುತ್ತದೆ. ತದನಂತರ, ಮೌಖಿಕ ಅಭ್ಯಾಸಗಳ ಅಸ್ತಿವಾರದ

ಮೇಲೆ ಕನ್ನಡ ಭಾಷಾ ಶಿಸ್ತಿನಿಂದ ಕಟ್ಟಲ್ಪಟ್ಟ ಇಂಗ್ಲಿಷ್ ಬಳಕೆಗೆ ಬರುವುದರಿಂದ, ಹೆಚ್ಚಿ ಜ್ಞಾನವನ್ನು ಇಂಗ್ಲಿಷ್ ಮೂಲಕ ಪಡೆದುಕೊಳ್ಳಲು, ಕನ್ನಡದಲ್ಲಿ ಅರಳಿಕೊಂಡಿರು ಜ್ಞಾನದ ಮೂಲಮಾತೃಕೆಗಳ ನೆರವಿನಿಂದಾಗಿ ಅಷ್ಟೇನೂ ಕಷ್ಟವಾಗುವುದಿಲ್ಲ.

ಒಟ್ಟಾರೆಯಾಗಿ ಇದು ಸದ್ಯದ ಸಂದರ್ಭದಲ್ಲಿ ನಮ್ಮ ಮಕ್ಕಳ ಹಾಗೂ ಮೂಲಕ ನಮ್ಮ ರಾಷ್ಟ್ರದ ಕಾರ್ಯದಕ್ಷತೆಯನ್ನು ಹೇಗೆ ಗರಿಷ್ಟ ಹಾಗೂ ಸಮಗ್ ಗೊಳಿಸಬಹುದು ಎಂಬುದನ್ನು ನಿರ್ಧರಿಸುವ ಪ್ರಶ್ನೆ. ಈ ಹಿನ್ನೆಲೆಯಲ್ಲೇ ಸಮಾಜವಾ ಚಿಂತಕ ಡಾ||ರಾಮಮನೋಹರ ಲೋಹಿಯಾ, ಎಲ್ಲಿಯವರೆಗೆ ನಮ್ಮ ಶಿಕ್ಷಣ ನಮ್ಮದೆ ಭಾಷೆಯಲ್ಲಿ ಜಾರಿಯಾಗದೋ, ಅಲ್ಲಿಯವರಿಗೆ ನಮ್ಮಲ್ಲಿ ಮೂಲಭೂತ ಸಂಶೋಧ ಸಾಧ್ಯವಾಗದು ಎಂದಿದ್ದುದು. ಅದೇನೇ ಇರಲಿ, ಎಲ್ಲಕ್ಕಿಂತ ಮುಖ್ಯವಾಗಿ, ಒಂದನೆ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೆಂಬ ನಿರ್ಧಾರದಿಂದ, ಕನ್ನಡಭಾಷೆಯಿಂದ ಅ ಹುಟ್ಟುವುದಿಲ್ಲ - ಅದನ್ನು ನಂಬಿಕೊಂಡರೆ ಅಭಿವೃದ್ಧಿ ಸಾಧ್ಯವಿಲ್ಲ ಎಂಬ ಸಂದೇಶ ಸಮ ಮುಂದಿನ ತಲೆಮಾರಿಗೆ ರವಾನೆಯಾಗಿ, ಅದು ತನ್ನ ಭಾಷೆ ಸಂಸ್ಕೃತಿಗಳ ಬಗೆಗೇ ಸುಪ್ತವಾ ಕೀಳರಿಮೆ ಬೆಳೆಸಿಕೊಳ್ಳುವ ಮತ್ತು ಆ ಮೂಲಕ ಈವರೆಗೆ ಒಂದು ದೊಡ್ ಸಮುದಾಯವನ್ನು ಎರಡು ಸಾವಿರ ವರ್ಷಗಳ ಕಾಲ ಎಲ್ಲ ರೀತಿಯ ಸವಾಲುಗಳನ ಎದುರಿಸಿ, ಕಾಪಾಡಿ, ಪ್ರಬುದ್ಧತೆಯೆಡೆಗೆ ನಡೆಸಿರುವ ಒಂದು ಭಾಷೆಯನ್ನು ಅವಮಾನಿಸು ಅವಿವೇಕ ತಪ್ಪುತ್ತದೆ.

ಇದಕ್ಕಾಗಿ, ಇಂತಹ ವಿಷಯಗಳಲ್ಲಿ, ಇಂದಿನ ಮುಕ್ತ ಮಾರುಕಟ್ಟೆ ಆರ್ಥಿಕತೆಯ ದಲ್ಲಾಳಿಗಳಂತಿರುವ ರಾಜಕೀಯ ಪುಢಾರಿಗಳು, ಉದ್ಯಮಿಗಳು, ಸ್ವಯಂ ಘೋಷಿ ಸಮುದಾಯ ನಾಯಕರ ಮಾತುಗಳಿಗೆ ಕಿವಿಗೊಡುವುದನ್ನು ಬಿಟ್ಟು, ವಿಷಯ ತಜ್ಞರ ಕ್ಷೇತ್ರ ಪಂಡಿತರ ಮಾತುಗಳನ್ನು ಕೇಳುವುದನ್ನು ಕಲಿಯಬೇಕು. ಮಾರುಕಟ್ಟೆಯ ಸದ್ಯ ಗೌಜು ಗದ್ದಲದಲ್ಲಿ ತಾನೊಂದು ದೇಶ, ಒಂದು ಜನಪದ, ಒಂದು ಸಂಸ್ಕೃತಿ; ಇವುಗ ಆಧಾರಗಳು ಉಳಿದು ಬೆಳೆದರೆ ಮಾತ್ರ ಮಾರುಕಟ್ಟೆಯ ಸಂತೋಷಗಳನ್ನು ಅನುಭವಿಸಲ ಸಾಧ್ಯ ಎಂಬ ಸತ್ಯವನ್ನು ಮನಗಾಣಬಹುದು. ○

(ಭಾಷಾ ಕಲಿಕೆಗೆ ಸಂಬಂಧಿಸಿದಂತೆ ಇಲ್ಲಿ ನಿರೂಪಿಸಲಾಗಿರುವ ಭಾಷಾವಿಜ್ಞಾನದ ಪರಿಕಲ್ಪನೆಗಳನ ನನಗೆ ಪರಿಚಯಿಸಿದವರು,ಭಾಷಾ ತಜ್ಞ- ಗೆಳೆಯ ಲಿಂಗದೇವರು ಹಳೆಮನೆಯವರು)

(ಮೂಡುಬಿದರೆಯಲ್ಲಿ ನವೆಂಬರ್ ೨೪,೨೫, ಹಾಗೂ ೨೬ ರಂದು 'ಕನ್ನಡದ ಮನಸ್ಸು: ಪ್ರಚಲಿತ ಪ್ರಶ್ನೆಗಳ ವಿಷಯ ಕುರಿತು ನಡೆದ 'ಆಳ್ವಾಸ್ ನುಡಿಸಿರಿ ೨೦೦೬' ರ 'ಆಧುನಿಕ ವಿದ್ಯಮಾನಗಳ ನಡುವೆ ಶಿಕ್ಷಣ ಸವಾಲುಗಳು' ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ)

vi. ಇಂಗ್ಲಿಷ್ ಮರುಳಿನಲ್ಲಿ ಕನ್ನಡದ ಸುವರ್ಣೋತ್ಸವ

ಕನ್ನಡವೇ ಸತ್ಯ
ಕನ್ನಡವೇ ನಿತ್ಯ
ಅನ್ಯವೆಸಲದೆ ಮಿಥ್ಯ

-ಕುವೆಂಪು

ಕಾವೇರಿಯಿಂದ ಗೋದಾವರಿವರೆಗೆ ಹರಡಿ ಕನ್ನಡದೊಳ್ ಭಾವಿಸಿದ್ದ ಜನಪದವೀಗ, ಕನ್ನಡದಲ್ಲಿ ಭಾವಿಸಿದರೆ ಅನ್ನ ಹುಟ್ಟುವುದಿಲ್ಲ ಎಂದು ತೀರ್ಮಾನಿಸಿದಂತಿದೆ! ಅದನ್ನು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯನ್ನು ಕಡ್ಡಾಯ ಮಾಡಿರುವ ಆಜ್ಞೆಯ ಮೂಲಕ ಖಚಿತಪಡಿಸಿರುವ ಕರ್ನಾಟಕ ಸರ್ಕಾರವು, ಕನ್ನಡ ರಾಜ್ಯೋದಯದ ಚಿನ್ನದ ಹಬ್ಬವನ್ನು ಮಾತ್ರ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಿರುವುದು ದೊಡ್ಡ ವಿಪರ್ಯಾಸವೇ ಆಗಿದೆ. ಈ ರಾಜ್ಯೋದಯಕ್ಕಾಗಿ ಹೋರಾಡಿದ ಹಲವರು, ಕೆಲವಿಬ್ಬರನ್ನು ಬಿಟ್ಟರೆ, ಯಾವ ಘನೋದ್ದೇಶಕ್ಕಾಗಿ ಇವರೆಲ್ಲ ಹೋರಾಟ ಮಾಡಿದರೋ- ಒಂದು ಭಾಷಾ ಸಮುದಾಯದ ಜನ ಒಟ್ಟಿಗೆ ತಮ್ಮ ಭಾಷೆ ಮತ್ತು ಸಂಸ್ಕೃತಿಗಳ ವಿವಿಧ ಸಾಧ್ಯತೆ ಹಾಗೂ ಸಂಪನ್ನತೆಗಳ ಮೂಲಕ ತನ್ನದೆನ್ನುವ ಚಂದದ ಬದುಕನ್ನು ಕಟ್ಟಿಕೊಳ್ಳುವ ರಾಜಕೀಯ ಇಚ್ಛಾಶಕ್ತಿಯ ಸಂಘಟನೆ- ಆ ಉದ್ದೇಶವನ್ನೇ ಅಪ್ರಸ್ತುತಗೊಳಿಸುವ ಸದರಿ ಸರ್ಕಾರಿ ಆಜ್ಞೆಯ ವಿರುದ್ಧ ಒಂದು ಸಣ್ಣ ಪ್ರತಿಭಟನೆಯ ಸೊಲ್ಲೂ ಇಲ್ಲದೆ, ರಾಜ್ಯ ಸರ್ಕಾರ ಕೊಡಮಾಡುತ್ತಿರುವ ಪ್ರಶಸ್ತಿಗಳನ್ನು ಸ್ವೀಕರಿಸಲು ಸಿದ್ಧವಾಗಿ ನಿಂತಿರುವುದನ್ನು ನೋಡಿದರೆ , ಇಂಗ್ಲಿಷ್ ಮರುಳು ಉಂಟು ಮಾಡಿರುವ 'ವಿಸ್ಮೃತಿ' ಎಷ್ಟು ವಿನಾಶಕಾರಿ ಆಯಾಮಗಳುಳ್ಳದ್ದು ಎಂಬುದು ಅರಿವಿಗೆ ಬಂದು ಆತಂಕವುಂಟಾಗುತ್ತದೆ. ಅದಕ್ಕಿಂತ ಹೆಚ್ಚಾಗಿ, ನಮ್ಮ ಮಾಧ್ಯಮಗಳು- ಅದೂ ಕನ್ನಡದ ಕೆಲವು ಪತ್ರಿಕೆಗಳು-ತಮ್ಮ ಉದ್ಯಮದ ಎಲ್ಲಾ ನೀತಿ ಮರ್ಯಾದೆಗಳನ್ನು ಗಾಳಿಗೆ ತೂರಿ, ಭಿನ್ನಾಭಿಪ್ರಾಯಗಳಿಗೆ ಅವಕಾಶವನ್ನೇ ನಿರಾಕರಿಸಿ , ಸರ್ಕಾರಿ ಆಜ್ಞೆ ಪರ ವಾತಾವರಣ ನಿರ್ಮಾಣ ಮಾಡ ಹೊರಟಿರುವುದು ಈ ಸುವರ್ಣ ಕರ್ನಾಟಕಾಚರಣೆಯ ರುಚಿಯನ್ನೇ ಕೆಡಿಸಿದೆ. ಇವರೆಲ್ಲರೂ, ಕಳೆದ ಕೆಲವು ವರ್ಷಗಳಿಂದ ದೇಶಾದ್ಯಂತ ನಡೆಯುತ್ತಿರುವ ವಿಶ್ವ ಬ್ಯಾಂಕ್ ಆಯೋಜಿತ 'ಕಣ್ಣು ಕೋರೈಸುವಂತಹ ಬೃಹತ್ ಅಭಿವೃದ್ಧಿ'ಯ ರಾಜಕಾರಣದ ಬಲೆಗೆ ಬಿದ್ದಿರುವ ರೀತಿ-ನೀತಿಗಳನ್ನು ನೋಡಿದರೆ, 'ಈಸ್ಟ್ ಇಂಡಿಯಾ ಕಂಪನಿ' ರಾಜಕಾರಣದ ಹೊಸ ಆವೃತ್ತಿಗೆ ದೇಶ ಸಿದ್ಧವಾಗುತ್ತಿರುವಂತೆ ತೋರುತ್ತದೆ.

ವಸಾಹತುಶಾಹಿ ಮನಸ್ಸು ಮಾಡುವ ಮೊದಲ ಕೆಲಸವೆಂದರೆ, ದೇಶೀ ಜನರಲ್ಲಿ ದೇಶೀಯ ಪರಿಕರಗಳ ಶಕ್ತಿ-ಸಾಮರ್ಥ್ಯಗಳ ಬಗ್ಗೆ ಅನುಮಾನ ಮತ್ತು ಅವರ ಜೀವನ ಮಟ್ಟವನ್ನು ಕುರಿತು ಅವಮಾನವನ್ನು ಸೃಷ್ಟಿಸುವುದು. ಈ ಹಿನ್ನಲೆಯಲ್ಲಿ ಇಂದು ಕರ್ನಾಟಕದಲ್ಲಿ ಕನ್ನಡ ಭಾಷೆಯ ಶಕ್ತಿ-ಸಾಮರ್ಥ್ಯಗಳನ್ನು ಕುರಿತು ಕನ್ನಡಿಗರಲ್ಲೇ ಮೂಡಿಸಲಾಗುತ್ತಿರುವ ಅನುಮಾನ ಹಾಗೂ ಭಾಷೆ ಮತ್ತು ಜಾತಿ ನಡುವೆ ತಳುಕು ಹಾಕಿ ವಿವಿಧ ಸಾಮಾಜಿಕ ವರ್ಗಗಳಲ್ಲಿ ಅಭಿವೃದ್ಧಿ ಪರಿಕಲ್ಪನೆ ಕುರಿತಂತೆ ಉಂಟು ಮಾಡಿರುವ ಗೊಂದಲ, ಅನೇಕ ನೆಲೆಗಳಲ್ಲಿ ಪ್ರತಿಧ್ವನಿಗಳನ್ನು ಹೊರಡಿಸುವಂತಾಗಿವೆ: ಕಣ್ಣು ಕೋರೈಸುವ ಈ ಅಭಿವೃದ್ಧಿಯು, ಆ ಅಭಿವೃದ್ಧಿಯ ತಾಣಗಳಲ್ಲಿ ಉಂಟುಮಾಡಿರುವ ನೆಮ್ಮದಿ ಭಂಗವನ್ನೂ, ಸಾಮಾಜಿಕ ಅಶಾಂತಿಯನ್ನೂ ಅರ್ಥಮಾಡಿಕೊಳ್ಳಲಾಗದಷ್ಟು ನಮ್ಮನ್ನು ಅಸೂಕ್ಷ್ಮಗೊಳಿಸಿ,ಒಂದನೇ ತರಗತಿಯ ಇಂಗ್ಲಿಷ್ ಪ್ರಣೀತ ಅಭಿವೃದ್ಧಿ ಮತ್ತು ಸಾಮಾಜಿಕ ಸಮಾನತೆ ಎಂಬ ಮರೀಚಿಕೆಯ ಬೆನ್ನ ಹಿಂದೆ ಬೀಳುವಂತೆ ಮಾಡಿದೆ. ಹೀಗಾಗಿ, ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳ ನಂತರ ಅನೇಕ ಅಡೆತಡೆಗಳನ್ನು ನಿವಾರಿಸಿಕೊಂಡು, ಸತತ ಕಾನೂನು ಹೋರಾಟದ ಮೂಲಕ ಭಾರತೀಯ ಶಾಲೆಗಳಲ್ಲಿ ಮಾತೃಭಾಷಾ ಶಿಕ್ಷಣವನ್ನು ಕಡ್ಡಾಯ ಮಾಡಬಹುದೆಂದು ಸರ್ವೋನ್ನತ ನ್ಯಾಯಾಲಯದಿಂದ ತೀರ್ಪು ಪಡೆದ ಭಾರತೀಯ ಭಾಷಾ ಆಂದೋಲನಕಾರರಿಗೆ ಇಂದು ಎದುರಾಗಿರುವವರು, ನಾವೇ-ನಮ್ಮ ಒಂದು ಭಾಗವೇ ಎಂಬುದು, ವಿಚಿತ್ರವಾದರೂ ಸತ್ಯವಾಗಿದೆ!

ಈ ವಿಚಿತ್ರ ಸತ್ಯದ ಒಂದು ಭಾಗವಾಗಿ, ರಾಜಕೀಯ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯ ಸರ್ಕಾರವು ಅದರಿಂದ ಪಾರಾಗಲು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯೆಂಬ ಆಮಿಷದ ಮೂಲಕ ಈ ಜನಭಾಗದ ಮನಸ್ಸನ್ನು ಗೆಲ್ಲುವ ತಾತ್ವಿಕ ಮುಖವಾಡದ, ಆದರೆ ವಾಸ್ತವದಲ್ಲಿ ಅಗ್ಗದ ಜನಪ್ರಿಯತೆಯ ಪ್ರಯತ್ನವಾಗಿರುವಂತಹ ಕ್ರಮಕ್ಕೆ ಕೈ ಹಾಕಿದೆ. ಅಲ್ಲದೆ, ಅದನ್ನು ಶಿಕ್ಷಣದ ವಿಷಯದಲ್ಲಿ ಬಡ ಮತ್ತು ಗ್ರಾಮಾಂತರ ಮಕ್ಕಳಿಗೆ ಆಗುತ್ತಿರುವ ವಂಚನೆಯನ್ನು ತಪ್ಪಿಸುವ ಉದ್ದೇಶವುಳ್ಳ 'ವ್ಯಾವಹಾರಿಕ ನೀತಿ ಮಾತ್ರ' ಎಂದು ವರ್ಣಿಸುವ ಮೂಲಕ ಜನರನ್ನು ಒಡೆದು, ಯಾಮಾರಿಸಲು ಹೊರಟಿದೆ. ಆದರೆ ಮೂರು ಶತಮಾನಗಳ ಹಿಂದೆ ನಾವು ಹೀಗೇ, ಇಂತಹ ರಾಜಕೀಯದಿಂದಲೇ ಕಿತ್ತಾಡಿಕೊಂಡು ಒಡೆದು ಹೋಗಿ, ಈಸ್ಟ್ ಇಂಡಿಯಾ ಕಂಪನಿಯನ್ನೂ 'ವ್ಯವಹಾರಕ್ಕೆ ಮಾತ್ರವಲ್ಲವೇ?' ಎಂದು ಸ್ವಾಗತಿಸಿದ್ದೆವು ಎಂಬುದನ್ನು ಮರೆತು, ಸರ್ಕಾರದ ಈ 'ವ್ಯಾವಹಾರಿಕ ಆಮಿಷ'ಕ್ಕೆ ಒಂದು ಜನಭಾಗ ಮರುಳಾಗಿದೆ. ಈ ಮರುಳಿನಲ್ಲಿ ಈ ಜನಭಾಗವು, ಕನ್ನಡ ಶಾಲೆಗಳಲ್ಲಿ ಕಲಿತ ಬಡ ಹಾಗೂ ಗ್ರಾಮಾಂತರ ಮಕ್ಕಳು ಈಗ ಜೀವನದಲ್ಲಿ ಯಶಸ್ವಿಯೇ ಆಗಿಲ್ಲವೇನೋ ಮತ್ತು ಯಶಸ್ವಿಯಾಗಿರದವರೆಲ್ಲರಿಗೂ, ಅವರು ಐದನೇ ತರಗತಿಯಿಂದ ಮಾತ್ರ ಇಂಗ್ಲಿಷ್ ಕಲಿಯುವಂತಾದುದೇ ಕಾರಣವೇನೋ

ಎಂದೂ ಭಾವಿಸಿದಂತಿದೆ. ರಾಜ್ಯಾದ್ಯಂತ ಇರುವ ಬಹುತೇಕ ಕೈಗಾರಿಕೋದ್ಯಮಗಳು ಹಾಗೂ ಇತರೆ ಉದ್ಯೋಗ ಸಂಸ್ಥೆಗಳ ಒಳ ಹೊಕ್ಕು ನೋಡಿದರೆ, ಇದಕ್ಕಿಂತ ಹಾಸ್ಯಾಸ್ಪದ ಸಂಗತಿ ಇನ್ನೊಂದಿಲ್ಲ ಎಂಬುದು ಗೊತ್ತಾಗುತ್ತದೆ. ಅಲ್ಲದೆ, ಈಗ ಎಲ್ಲರನ್ನೂ ಯಾಮಾರಿಸುತ್ತಿರುವ ಜಾಗತೀಕರಣದ ಅತ್ಯದ್ಭುತ ಸಾಧನೆಗಳ ಪ್ರತ್ಯಕ್ಷ ಮೂರ್ತಿಯಾಗಿ ಕಾಣುತ್ತಿರುವ ಇನ್ಫೋಸಿಸ್‌ನ ನಾರಾಯಣ ಮೂರ್ತಿಯವರೂ ಸೇರಿದಂತೆ, ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಕೆಲವರ ಪಾಲಿಗಷ್ಟೇ ದಿಢೀರ್ ಶ್ರೀಮಂತಿಕೆ ತಂದು ಕೊಟ್ಟಿರುವ ತಾಂತ್ರಿಕ ಉದ್ಯಮಗಳನ್ನು ಸ್ಥಾಪಿಸಿರುವವರು ಬಹುತೇಕ, ಈವರೆಗೆ ಚಾಲ್ತಿಯಲ್ಲಿರುವ ಶಿಕ್ಷಣ ಕ್ರಮದ ಶಿಶುಗಳೇ ಆಗಿದ್ದಾರೆ ಎಂಬುದು ಇವರ ಅರಿವಿಗೇ ಬಾರದಿರುವುದು ಈ ಮರುಳನ್ನು ಖಚಿತಪಡಿಸುತ್ತದೆ. ಇನ್ನು ಜಾಗತೀಕರಣವೆಂದರೆ, ಎಲ್ಲರಿಗೂ ಕಾರು-ಕಂಪ್ಯೂಟರ್ ಇತ್ಯಾದಿ ಅತ್ಯಾಧುನಿಕ ಸೌಲಭ್ಯಗಳ ಲಭ್ಯತೆಯೆಂದೂ, ಇನ್ನು ಮುಂದೆ ಐದನೇ ತರಗತಿಗೆ ಬದಲಾಗಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿತವರಿಗೆ ಮಾತ್ರ ಇದರ ಲಭ್ಯತೆ ಸಾಧ್ಯವೆಂದು ಇವರು ನಂಬಿದಂತಿದೆ! ಆದರೆ ಇಂಗ್ಲಿಷ್ ಇರಲಿ, ಕನ್ನಡವನ್ನೂ ಸರಿಯಾಗಿ ಕಲಿಯದ ಬೆಂಗಳೂರಿನ ಬಹುತೇಕ ರೌಡಿಗಳು, ರಿಯಲ್ ಎಸ್ಟೇಟ್ ಏಜೆಂಟರುಗಳು ಹಾಗೂ ಈಗ ಚಾಲ್ತಿಗೆ ಬಂದಿರುವ ಹೊಸ ಹೊಸ ವ್ಯಾಪಾರ ಪದ್ಧತಿಗಳ ದಲ್ಲಾಳಿಗಳೂ, ವೈವಿಧ್ಯಮಯ ಕಾರುಗಳನ್ನು ಓಡಿಸುತ್ತಾ ತಮ್ಮ ಬೃಹತ್ ಬಂಗಲೆಗಳಲ್ಲಿ ಕಂಪ್ಯೂಟರ್ ಇತ್ಯಾದಿ ಅತ್ಯಾಧುನಿಕ ಸಾಧನ ಸಲಕರಣೆಗಳನ್ನು ಅಳವಡಿಸಿಕೊಂಡಿದ್ದಾರೆ ಎಂಬುದನ್ನು ಇಂತಹವರ ಗಮನಕ್ಕೆ ತರಬೇಕಿದೆ.

ಮಾತೃಭಾಷಾ ಶಾಲಾ ಶಿಕ್ಷಣ ಮಾಧ್ಯಮವನ್ನು ಎತ್ತಿ ಹಿಡಿದಿರುವ ಸರ್ವೋನ್ನತ ನ್ಯಾಯಾಲಯದ ತೀರ್ಪಿಗೆ ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದ ನಮ್ಮ ಶಿಕ್ಷಣೋದ್ಯಮಿಗಳ ಜೊತೆಗೆ ಕಳೆದ ೧೩ ವರ್ಷಗಳಿಂದಲೂ ಮೌನವಾಗಿ ಶಾಮೀಲಾಗಿದ್ದುಕೊಂಡು, ಈಗ ಇಂಗ್ಲಿಷ್ ಕಲಿಕೆ ಆಜ್ಞೆಗೆ ಅನುವು ಮಾಡಿಕೊಳ್ಳಲಷ್ಟೇ ಆ ತಡೆಯಾಜ್ಞೆ ಕುರಿತಂತೆ ಎಚ್ಚೆತ್ತಿರುವ ರಾಜ್ಯ ಸರ್ಕಾರ (ಇದರಲ್ಲಿ ಎಲ್ಲ ಪಕ್ಷಗಳ ಪಾಲೂ ಇದೆ)ಕನ್ನಡದ ಪ್ರಶ್ನೆಯನ್ನು ಅದರೆಲ್ಲ ಆಯಾಮಗಳೊಂದಿಗೆ ಅರ್ಥ ಮಾಡಿಕೊಳ್ಳುವ ಇಚ್ಛಾ ಶಕ್ತಿಯನ್ನಾಗಲೀ, ಪ್ರತಿಭೆಯನ್ನಾಗಲೀ ಹೊಂದಿದೆ ಎಂದು ನಂಬುವುದು ಕಷ್ಟ. ಕಟ್ಟು ಬಿಚ್ಚಿದ ಕುದುರೆಯಂತೆ ಈಗ ಅಡ್ಡಾದಿಡ್ಡಿ ನೆಗೆಯುತ್ತಾ, ಕೆನೆಯುತ್ತಾ ಓಡುತ್ತಿರುವ ಹೊಸ ಆರ್ಥಿಕತೆಯ ಸವಾರಿಗೆ ತಮ್ಮ ಮಕ್ಕಳನ್ನು ಹುರಿದುಂಬಿಸುತ್ತಿರುವ ನಮ್ಮ ಪಾಲಕರ ಹಪಾಹಪಿಯನ್ನೇ ಬಂಡವಾಳ ಮಾಡಿಕೊಂಡು ಕನ್ನಡದ ಬುಡಕ್ಕೇ ಕೊಡಲಿ ಹಾಕಲು ಹೊರಟಿರುವ ಈ ರಾಜಕಾರಣಿಗಳ ಹುನ್ನಾರಕ್ಕೆ ಜಾತಿ-ವರ್ಗಗಳ ಹೆಸರಲ್ಲಿ ನಮ್ಮ ಬುದ್ಧಿಜೀವಿಗಳೆನಿಸಿಕೊಂಡ ಅನೇಕರು ಬೆಂಬಲ ವ್ಯಕ್ತಪಡಿಸಿರುವುದರ ಹಿಂದಿನ ರಾಜಕಾರಣವು, ರಾಜಕಾರಣಿಗಳ ರಾಜಕಾರಣವನ್ನೂ

ಮೀರಿಸುವಷ್ಟು ವೃತ್ತಿಪರವಾಗಿದೆ: ಇವರೆಲ್ಲ ಈ ಮೊದಲು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿದವರಾಗಿದ್ದು, ಈ ವಿವಾದಕ್ಕೆ ಜಾತಿ ಸ್ಪರ್ಶ ನೀಡಿದೊಡನೆ ಪಕ್ಷಾಂತರ ಮಾಡಿ, ನಮ್ಮ ಸಮಾಜದಲ್ಲಿ ದಲಿತ-ಹಿಂದುಳಿದ ಜಾತಿಗಳ ಮಕ್ಕಳು ಹಿಂದುಳಿದಿರುವುದೇ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಯದಂತೆ ಮಾಡಿರುವ ಮೇಲ್ಜಾತಿ ಮನಸ್ಸುಗಳ ಹುನ್ನಾರದಿಂದ ಎಂಬ ಹೊಸ ಸತ್ಯವನ್ನು ಆವಿಷ್ಕರಿಸಿ ಕೊಡುವ ಮೂಲಕ, ಆವರೆಗೆ ತಾವು ಇಂಗ್ಲಿಷ್ ಕಲಿಕೆ ಬಗ್ಗೆ ತಳೆದಿದ್ದ ನಿಲುವನ್ನು ಕ್ಷಣಾರ್ಧದಲ್ಲಿ ಬದಲಾಯಿಸಿಕೊಂಡು ತಮ್ಮ ಬೌದ್ಧಿಕ ದಿವಾಳಿತನವನ್ನು ಮೆರೆದಿದ್ದಾರೆ. ಹಾಗೇ ಕನ್ನಡದ ಸೇನಾನಿ ಪಾಟೀಲ ಪುಟ್ಟಪ್ಪನವರು ಕೂಡಾ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯು ಕನ್ನಡಕ್ಕೆ ಧಕ್ಕೆ ತರುವಂತಹುದಲ್ಲ ಎಂದು ಈ ಹಿಂದಿನ ಮತ್ತು ಪ್ರಸ್ತುತ ಸರ್ಕಾರ ಬಾರಿ ಬಾರಿ ಹೇಳಿದ್ದರೂ ನಂಬದಿದ್ದ ಅವರೀಗ, ಈಚೆಗೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ತಮ್ಮ ಸಮ್ಮುಖದಲ್ಲಿ ಪ್ರಾಥಮಿಕ ಶಿಕ್ಷಣ ಮಂತ್ರಿ ಬಸವರಾಜ ಹೊರಟ್ಟಿಯವರು ಅದನ್ನೇ ಪುನರುಚ್ಚರಿಸಿದೊಡನೆ ಸಂಪ್ರೀತರಾಗಿ, ಹಾಗಿದ್ದಲ್ಲಿ ತಮ್ಮ ಅಭ್ಯಂತರವೇನೂ ಇಲ್ಲವೆಂದು ಅನುಮತಿ ಪತ್ರ ನೀಡಿದ್ದಾರೆ! ಇನ್ನು ಕನ್ನಡದ 'ಹುಟ್ಟು ಹೋರಾಟಗಾರ' ವಾಟಾಳ್ ನಾಗರಾಜ್ ತಮ್ಮ ಜನಪ್ರಿಯತೆಯ ಲೆಕ್ಕಾಚಾರದಲ್ಲಿ ಹಾಗೂ ಇತ್ತೀಚಿನವರೆಗೆ ಕನ್ನಡ ಮಾಧ್ಯಮವಾಗಿ ಜಾರಿಯಾಗದೆ ಇಂಗ್ಲಿಷ್ ಕಲಿಕೆ ಅಪಾಯಕಾರಿ ಎಂದು ಸಾರಿ ಸಾರಿ ಹೇಳುತ್ತಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿದ್ಧಲಿಂಗಯ್ಯನವರು, ಈಗ ಈ ವಿಷಯದಲ್ಲಿ ಒಂದು ಮಾತನ್ನೂ ಆಡಲಾಗದ ಅಧಿಕಾರ ರಾಜಕಾರಣದ ಇಕ್ಕಟ್ಟಿಗೆ ಸಿಲುಕಿದ್ದಾರೆ. ಇನ್ನು 'ಮೋರೆಗೆ ಮಸಿ' ಕುಖ್ಯಾತಿಯ ಕನ್ನಡ ರಕ್ಷಣಾ ವೇದಿಕೆ, ಈ ವಿಷಯದಲ್ಲಿ ಮೌನವಾಗಿರುವ ಮೂಲಕ ತನ್ನ ಮೋರೆಗೇ ಮಸಿ ಬಳಿದುಕೊಂಡಿದೆ.

ಇಂತಹ ಬೌದ್ಧಿಕ ದಿವಾಳಿತನದ ದಟ್ಟ ವಾತಾವರಣದಲ್ಲಿ ಯುನೆಸ್ಕೋ ಮತ್ತು ನಮ್ಮದೇ ಶಿಕ್ಷಣ ಸಂಶೋಧನಾ ಸಂಸ್ಥೆ NCERTಯ ಸಮೀಕ್ಷೆ-ಶಿಫಾರ್ಸುಗಳ ಕಡೆ ನಮ್ಮ ಗಮನ ಹರಿಯದೇ ಇರುವುದು ಸಹಜವಾಗಿಯೇ ಇದೆ: ವಿಶ್ವ ಸಂಸ್ಥೆಯ ಅಂಗ ಸಂಸ್ಥೆಯಾದ ಯುನೆಸ್ಕೋ ಈಗ 'ಮಾತೃಭಾಷಾ ಶಿಕ್ಷಣ ಕಾರ್ಯಕ್ರಮ'ವನ್ನು ತನ್ನ ಒಂದು ತುರ್ತು ಕಾರ್ಯಕ್ರಮವನ್ನಾಗಿ ಹಮ್ಮಿಕೊಂಡಿದ್ದು, ಈ ಸಂಬಂಧದ ತನ್ನ ಸಂಶೋಧನೆಗಳನ್ನೂ, ಅದರ ಆಧಾರದ ವರದಿಗಳನ್ನೂ ಅಂತರ್ಜಾಲ ಸೇರಿದಂತೆ ವಿವಿಧ ಮಾಧ್ಯಮಗಳ ಮೂಲಕ ಬಿತ್ತರಿಸುತ್ತಿದೆ. ಮೂಲಭೂತ ಶಿಕ್ಷಣವನ್ನು ಮಾತೃ ಅಥವಾ ಪರಿಸರದ ಭಾಷೆಯಲ್ಲಿ ಪಡೆದ ಮಕ್ಕಳು ಮುಂದಿನ ಹಂತಗಳಲ್ಲಿ ಇಂಗ್ಲಿಷ್‌ನಂತಹ ಅನ್ಯ ಭಾಷೆಗಳನ್ನೂ, ಇತರ ವಿಷಯಗಳನ್ನೂ ಹೆಚ್ಚು ಶೀಘ್ರವಾಗಿ ಹಾಗೂ ಆಳವಾಗಿ ಕಲಿಯಬಲ್ಲವು ಎಂದು ಮಾಜಿ ವಸಾಹತುಗಳನ್ನೊಳಗೊಂಡ ಆಫ್ರಿಕಾದ ಕೆಲವು

ದೇಶಗಳಲ್ಲಿ ನಡೆಸಿದ ಸಂಶೋಧನೆ-ಸಮೀಕ್ಷೆಗಳಿಂದ ತಿಳಿದು ಬರುತ್ತದೆಂದು ಅದು ಹೇಳುತ್ತಿವೆ. ನಮ್ಮದೇ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಸಂಸ್ಥೆ (NCERT),ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟೊಂದನ್ನು ರೂಪಿಸಲು ರಚಿಸಿದ್ದ ಕಾರ್ಯಪಡೆಯ ಇತ್ತೀಚಿನ ವರದಿ(೨೦೦೬) ಕೂಡಾ ಉತ್ತಮ ಗುಣ ಮಟ್ಟದ ಕಲಿಕೆಯನ್ನು ಸಾಧ್ಯ ಮಾಡುವ, ತರಗತಿಯೊಳಗಿನ ಸಂವಾದ ರೂಪಿ ಶಿಕ್ಷಣ ಕ್ರಮಕ್ಕಾಗಿ ಮಾತೃಭಾಷಾ ಶಾಲಾ ಶಿಕ್ಷಣನ್ನೇ ಶಿಫಾರ್ಸು ಮಾಡಿದೆ. ಇದಕ್ಕೆ ಸೂಕ್ತವಾಗಿ ಹೊಂದಿಕೊಂಡಂತೆ ಬೇಕಾದರೆ, ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಬಹುದೆಂದು ಸೂಚಿಸಿದೆ. ಏಕೆಂದರೆ ಇಂಗ್ಲಿಷ್ ಕಲಿಕೆಗೆ ಪೂರ್ವಭಾವಿಯಾಗಿ ಮಾತೃಭಾಷಾ ಶಾಲಾ ಶಿಕ್ಷಣ ಈ ಐದು ರಾಷ್ಟ್ರೀಯ ಉದ್ದೇಶಗಳನ್ನು ಈಡೇರಿಸುತ್ತದೆ:

೧. ಜನರನ್ನು ರಾಷ್ಟ್ರ ಪುನರ್‌ನಿರ್ಮಾಣದಲ್ಲಿ ತೊಡಗುವಂತೆ ಮಾಡುತ್ತದೆ.

೨. ಜ್ಞಾನವನ್ನು ಅಲ್ಪಸಂಖ್ಯಾತ ಪ್ರತಿಷ್ಠಿತ ವರ್ಗದ ಒತ್ತಡಗಳಿಂದ ಬಿಡುಗಡೆಗೊಳಿಸುತ್ತದೆ.

೩. ಅಂತರ್‌ಸಂಬಂಧಿ ಹಾಗೂ ಪರಸ್ಪರಾವಲಂಬಿ ಸಮಾಜವನ್ನು ನಿರ್ಮಾಣ ಮಾಡುತ್ತದೆ.

೪. ಹೆಚ್ಚಿನ ಸಂಖ್ಯೆಯ ಸಮುದಾಯಗಳು ತಮ್ಮ ಸಲಹೆ-ಸಮ್ಮತಿ ಸೂಚಿಸಲು ಹೆಚ್ಚಿನ ಅವಕಾಶ ಕಲ್ಪಿಸುವ ಮೂಲಕ ಪ್ರಜಾತಂತ್ರದ ರಕ್ಷಣೆ ಮಾಡುತ್ತದೆ.

೫. ಮಾಹಿತಿಯ ವಿಕೇಂದ್ರೀಕರಣಕ್ಕೆ ದಾರಿ ಮಾಡಿಕೊಡುತ್ತದೆ ಹಾಗೂ ಮಾಧ್ಯಮಗಳನ್ನು ನಿಯಂತ್ರಣದಿಂದ ಮುಕ್ತಗೊಳಿಸುತ್ತದೆ; ಹೆಚ್ಚು ಜನರಿಗೆ ಶಿಕ್ಷಣ ಮತ್ತು ವ್ಯಕ್ತಿತ್ವ ಬೆಳವಣಿಗೆಯ ಹೆಚ್ಚೆಚ್ಚು ಅವಕಾಶಗಳನ್ನು ಒದಗಿಸುತ್ತದೆ.

ಈಗ ಕಾಣುತ್ತಿರುವ ವಿಕ್ಷಿಪ್ತ ಅಭಿವೃದ್ಧಿಯ ಹಪಾಹಪಿಯಲ್ಲಿ, ಪರಿಣತ ವಲಯದ ಈ ಶಿಫಾರ್ಸುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಸ್ವಯಂ ಘೋಷಿತ ಸಾಮಾಜಿಕ ನ್ಯಾಯವಾದಿಗಳ ಹಾಗೂ ರಾಜಕೀಯ ಪುಢಾರಿಗಳ ಪ್ರಚಾರವನ್ನೇ ನಂಬಿ ಹೊರಟರೆ, ಮೊನ್ನೆ ಇನ್ಫೋಸಿಸ್‌ನ ನಾರಾಯಣ ಮೂರ್ತಿಯವರು ನೀಡಿದ 'ಇಂಗ್ಲಿಷ್ ಮಾಧ್ಯಮ ಕಡ್ಡಾಯವಾಗಲಿ' ಎಂಬ ಹೇಳಿಕೆಯು, ಒಂದು ಭಾಷೆಯಾಗಿ ಮಾತ್ರ ಇಂಗ್ಲಿಷ್ ಎಂಬ ಸರ್ಕಾರದ ಹಾಗೂ ಅವರ ಬೆಂಬಲಿಗರ ಘೋಷಣೆಯನ್ನೂ ಮೀರಿ ಹಲವು ಕಡೆಯಿಂದ ಚಲಾವಣೆಗೆ ಬರತೊಡಗಿ, ಕ್ರಮೇಣ 'ಸಾಮಾಜಿಕ ನ್ಯಾಯ'ದ ಪರಿವೇಷ ತೊಟ್ಟು, ಅಧಿಕೃತ ಮಾನ್ಯತೆ ಪಡೆಯುವಂತಾಗುತ್ತದೆ. ಏಕೆಂದರೆ, ಈಗಾಗಲೇ ತಮ್ಮ ಹೇಳಿಕೆಯಲ್ಲಿ ನಾರಾಯಣ ಮೂರ್ತಿಯವರು ಕನ್ನಡ ಮಾಧ್ಯಮದ ಮೂಲಕ ದಲಿತರಿಗೆ ಹಾಗೂ ಹಿಂದುಳಿದವರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಇಂಗ್ಲಿಷ್ ಮಾಧ್ಯಮದಲ್ಲೇ ಓದಿದ ಎಷ್ಟು ಜನ ದಲಿತರಿಗೆ ಹಾಗೂ ಹಿಂದುಳಿದವರಿಗೆ

ಮತ್ತು ಕನ್ನಡ ಮಾಧ್ಯಮದಲ್ಲಿ ಓದಿದ ಎಷ್ಟು ಜನ ಇತರರಿಗೆ ತಮ್ಮ ಸಂಸ್ಥೆಯಲ್ಲಿ ಕೆಲಸ ದೊರಕಿದೆ ಎಂಬುದನ್ನು ಮಾತ್ರ ಅವರು ಹೇಳಿಲ್ಲ! ಹೇಳಿದ್ದರೆ ಚೆನ್ನಿತ್ತು. ಇಡೀ ಜಗತ್ತೇ ಜಾಗತಿಕ ಮಾರುಕಟ್ಟೆಯಾಗಿ ಪರಿವರ್ತಿತವಾಗುತ್ತಿರುವುದೆಂದು (?) ಹೇಳಲಾಗುತ್ತಿರುವ ಇಂದಿನ ಸಂಭರ್ಭದಲ್ಲಿ ಇಂಗ್ಲಿಷ್ ಮಾಧ್ಯಮದ ಅನಿವಾರ್ಯತೆಯನ್ನು ಎತ್ತಿ ಹೇಳಿರುವ ಅವರು, ಸ್ವತಃ ತಾವೇ ಕನ್ನಡ ಶಾಲೆಯಲ್ಲಿ ಓದಿ ಈ ಜಾಗತಿಕ ಮಾರುಕಟ್ಟೆಗೆ ಸೆಡ್ಡು ಹೊಡೆದು ನಿಲ್ಲಲು ಸಾಧ್ಯವಾಗಿರುವ ಸತ್ಯವನ್ನು ಮರೆಯುವಂತಾಗಿರುವುದು, ನವ ವಸಾಹತುಶಾಹಿ ಸೃಷ್ಟಿಸಿರುವ 'ವಿಸ್ಮೃತಿ'ಯ ಪರಿಣಾಮವೇ ಆಗಿರಬಹುದು. ಹಾಗಾಗಿಯೇ, ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿ, ಕನ್ನಡ ಕಲಿತು ಬೆಳೆದ ನಾರಾಯಣ ಮೂರ್ತಿಯವರು 'ಕನ್ನಡದಲ್ಲಿ ಸಂದರ್ಶನ ನೀಡಿದರು'ಎಂದು 'ಪ್ರಜಾವಾಣಿ'ಯಂತಹ ಪತ್ರಿಕೆ ಸಂಭ್ರಮದಿಂದ ಹೇಳಿಕೊಳ್ಳುವಂತಹ ದುಃಸ್ಥಿತಿಗೆ ಕನ್ನಡ ಈಡಾಗಿರುವುದು!

ಪಾಸ್‌ಪೋರ್ಟ್ ಹಾಗೂ ವೀಸಾಗಳ ನಿಯಮಾವಳಿ ದಿನೇ ದಿನೇ ಹೆಚ್ಚೆಚ್ಚು ಕಟ್ಟುನಿಟ್ಟಾಗುತ್ತಿದ್ದರೂ, ಜಡೀ ಜಗತ್ತೇ ಒಂದು ಹಳ್ಳಿಯಂತಾಗುತ್ತಿದೆ ಎಂದು *ಇಂಟರ್‌ನೆಟ್ಟಿಗ*ರು ಹರಡುತ್ತಿರುವ ಹುಂಬ ನಂಬಿಕೆಗೆ ಮರುಳಾಗಿರುವ ನಾವು ನಮ್ಮ ಮಕ್ಕಳನ್ನು ನೆಲದಿಂದ ಕಿತ್ತು ಆಕಾಶಕ್ಕೆ ಎಸೆದು ಅದೃಷ್ಟ ಪರೀಕ್ಷೆ ಮಾಡಿಕೊಳ್ಳಲು ಹೊರಟಿದ್ದೇವೆ. ಆಧುನಿಕ ಮಾಧ್ಯಮ ಮಾಯಾಜಾಲವು ಸೃಷ್ಟಿಸಿಬಿಟ್ಟಿರುವ ಇಂತಹ ವಿಕ್ಷಿಪ್ತ ಜೀವನ ದೃಷ್ಟಿಯಿಂದಾಗಿಯೇ, ಆಧುನೀಕರಣದ ಆರಂಭದ ದಿನಗಳಲ್ಲಿ ಜ್ಞಾನದ ಕಿಟಕಿಯಾಗಿ ಕಂಡ ಇಂಗ್ಲಿಷ್,ಈಗ ಅದರ ಜಾಗತೀಕರಣ ಹಂತದಲ್ಲಿ ಶುದ್ಧ ವ್ಯಾಪಾರದ ಕಿಟಕಿಯಾಗಿ ಮಾರ್ಪಾಡಾಗಿರುವ ವಾಸ್ತವಕ್ಕೆ ನಾವು ಅಷ್ಟೇನೂ ಎಚ್ಚರಾದಂತೆ ತೋರುವುದಿಲ್ಲ. ಹಾಗೇ, ಅದು ಜಗತ್ತಿನ 'ಬೌದ್ಧಿಕ ಆಸ್ತಿ' ಎಂಬುದನ್ನು ನಿರ್ವಚಿಸಿ, ಅದನ್ನು ಹರಾಜಿಗಿಡುವ ಮೂಲಕ ಮಾನವ ಸಂಪನ್ಮೂಲದ ಪರಿಕಲ್ಪನೆಯನ್ನೇ ವಿಕ್ಷಿಪ್ತಗೊಳಿಸಿ, ಮಾನವ ಸತ್ವದ ಪಾವಿತ್ರ್ಯ ಹಾಗೂ ಅವಿಭಾಜ್ಯತೆಗೆ ಭಂಗ ತಂದಿರುವುದರ ಬಗ್ಗೆಯೂ ನಮ್ಮಲ್ಲಿ ಅಂತಹ ವ್ಯಸ್ತತೆಯೇನೂ ಉಂಟಾಗಿಲ್ಲ. ಹೀಗಾಗಿ ಪರಿಣಾಮದ ದೃಷ್ಟಿಯಿಂದ, ಜಾಗತೀಕರಣವೆಂದರೆ ಸಾಮ್ರಾಜ್ಯಶಾಹಿಯ ಸ್ವಯಂ ಅಥವಾ ದೇಶೀ ಪುನರುತ್ಪಾದನೆಯೇ ಆಗಿದೆ. ಅಲ್ಲದೇ ಅದು, ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳಿಗಷ್ಟೇ ಅನ್ವಯವಾಗದೆ, ನಮ್ಮ ಕಲೆ-ಮಾನವಿಕ ಕ್ಷೇತ್ರಗಳಿಗೂ ಅನ್ವಯವಾಗುವಂತಾಗಿರುವುದರ ಕಾರಣಗಳನ್ನು, ಆಧುನೀಕರಣ ನಿಜವಾಗಿ ಭಾರತಕ್ಕೆ, ಅದರ ಆತ್ಮಕ್ಕೆ ಏನು ಮಾಡಿದೆ ಎಂಬುದರ ಅನ್ವೇಷಣೆಯ ಹಾದಿಯಲ್ಲಿ ಕಂಡುಕೊಳ್ಳಬಹುದಾಗಿದೆ:

ನಿಲ್ಲದ ರೈತರ ಆತ್ಮಹತ್ಯೆ ಸರಣಿ, ಬೃಹತ್ ಯೋಜನೆಗಳಿಗಾಗಿ ಈಗಲೂ ಮುಂದುವರಿಯುತ್ತಿರುವ ಬಡ ಹಾಗೂ ಅಸಹಾಯಕ ಜನರ ನಿರ್ವಸತೀಕರಣ; ತಾರಕಕ್ಕೇರಿರುವ ವಿಶಿಷ್ಟ ಕಸುಬುಗಳ, ಜನ ವರ್ಗಗಳ ಆದಾಯಗಳಲ್ಲಿನ ಅಂತರದಿಂದಾಗಿ

ಉಂಟಾಗುತ್ತಿರುವ ಆತಂಕ-ಅಶಾಂತಿಗಳ ವಿವಿಧ ರೂಪದ ಸ್ಫೋಟಗಳು; ಮೂಲಭೂತ ಬದಲಾವಣೆಗೆ ಒಳಗಾಗುತ್ತಿರುವ ದುಡಿಮೆಯ ಅರ್ಥ;ಇವುಗಳ ಮಧ್ಯೆಯೇ ನಗರಗಳಲ್ಲಿನ ಉದ್ಯಮ ಹಾಗೂ ಉದ್ಯಮಿಗಳಿಗಾಗಿ 'ಮೂಲಭೂತ ಸೌಕರ್ಯ'ಗಳ ನಿರ್ಮಾಣದ ಹೆಸರಿನಲ್ಲಿ ನಾಡಿನಾದ್ಯಂತ ಕಡಿದು ಬೀಳುತ್ತಿರುವ ಲಕ್ಷಾಂತರ ಮರಗಳು, ಅದರಿಂದ ಉಂಟಾಗುತ್ತಿರುವ ಜೀವ ಪರಿಸರ ಸಮಸ್ಯೆಗಳು-ಇವುಗಳಿಂದಾಗಿ ಸೃಷ್ಟಿಯಾಗುತ್ತಿರುವ ಮಾರುಕಟ್ಟೆಯ ಮಾಯಾಜಾಲ(ಈಗ ಸಣ್ಣ ಊರುಗಳಲ್ಲೂ ಹವಾ ನಿಯಂತ್ರಣ ಯಂತ್ರಗಳು ಗೃಹೋಪಯೋಗಿ ವಸ್ತುಗಳಾಗಿ ಮಾರುಕಟ್ಟೆಗೆ ಬಂದಿವೆ!); ನದಿಗಳ ತುಂಡು ಮಾರಾಟ; ಆಧುನಿಕ ವಿದ್ಯೆ ಕಲಿತ ವೃತ್ತಿಪರರ ನೇತೃತ್ವದಲ್ಲಿಯೇ ನಡೆಯುತ್ತಿರುವ ಆತ್ಮಾಹುತಿಗಳ ಮೂಲಕ ವ್ಯಕ್ತವಾಗುತ್ತಿರುವ ಕೋಮುವಾದಿ ಉಗ್ರವಾದದ ಬರ್ಬರತೆ-ಇತ್ಯಾದಿಗಳಾವುದರಿಂದಲೂ ವಿಚಲಿತರಾಗದಂತೆ, ಜನ ಜಾಗತೀಕರಣದ ಫಲಗಳನ್ನುಣ್ಣಲು ಮುಗಿ ಬೀಳುತ್ತಿದ್ದಾರೆ. ಹೀಗೆ ಮುಗಿಬೀಳುವುದಕ್ಕೆ ಎಲ್ಲರಿಗೂ ಸಮಾನ ಅವಕಾಶ ಮಾಡಿಕೊಡಲು ಸಮಾನ ಇಂಗ್ಲಿಷ್ ಕಲಿಕೆ ಅಗತ್ಯವಾಗಿದೆ ಎಂಬುದೇ ಕರ್ನಾಟಕ ಸರ್ಕಾರದ ಆಜ್ಞೆಯ ಹಾಗೂ ಅದರ ಉದ್ದೀಪಕರ ಮತ್ತು ಬೆಂಬಲಿಗರ ವಾದದ ತಾತ್ಪರ್ಯವಾಗಿದ್ದಂತೆ ತೋರಿತ್ತದೆ!

ಈ ಜಾಗತೀಕರಣವು ನಮ್ಮ ಜನಸಂಖ್ಯೆಯ ಎಷ್ಟು ಪಾಲಿನ ಜನರ ಹಸಿವನ್ನು ನೀಗಿಸಬಹುದು, ಯಾವ ಯಾವ ಜನ ವರ್ಗಗಳಲ್ಲಿ ಎಂತಂತಹ ದಾಹಗಳನ್ನು ಸೃಷ್ಟಿಸಿ-ಅವನ್ನು ಎಷ್ಟರ ಮಟ್ಟಿಗೆ ಹಿಂಗಿಸಬಲ್ಲುದು ಹಾಗೂ ಇನ್ನೆಷ್ಟು ಪಾಲಿನ ಜನರನ್ನು ತನ್ನ ಅಭಿವೃದ್ಧಿಯ ವ್ಯಾಪ್ತಿಯ ಹೊರಗಿಟ್ಟು ಇನ್ನೂ ಎಂತಂತಹ ಸಾಮಾಜಿಕ ಅಶಾಂತಿ ಹಾಗೂ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಸೃಷ್ಟಿಸಬಹುದು ಎಂಬುದರ ಒಂದು ಅಂದಾಜನ್ನಾದರೂ, ಈವರೆಗಿನ ಅನುಭವಗಳ ಆಧಾರದ ಮೇಲೆ ಇವರಿಗೆ ಮಾಡಲಿಕ್ಕಾಗಲಿಲ್ಲ. ಬದಲಿಗೆ ಇವರಿಗೆ ಎದ್ದು ಕಾಣುತ್ತಿರುವುದು, ಈಗ ಬೆಂಗಳೂರಿನಲ್ಲಿ ಒಂದು Watch man ಕೆಲಸಕ್ಕೂ ಇಂಗ್ಲಿಷ್ ಜ್ಞಾನ ಅಗತ್ಯವಾಗಿದೆ ಎಂಬ ಮೇಲ್ಮೈ ಸತ್ಯ ಮಾತ್ರ. ಆದರೆ ಇದು ಏನನ್ನು ಸೂಚಿಸುತ್ತದೆ, ಇಂತಹ ಬೆಂಗಳೂರಿನ ಸೃಷ್ಟಿ ಹೇಗಾಯಿತು, ಇದು ರೂಪಿಸುತ್ತಿರುವ ಬದುಕಿನ ಸ್ವರೂಪ ಹಾಗೂ ಗುಣ ಮಟ್ಟವಾದರೂ ಎಂತಹದು, ಇದು ಹೀಗೇ ಬೆಳೆಯಬೇಕೇ-ಬೇರೆ ಪರ್ಯಾಯಗಳಿಲ್ಲವೇ ಎಂಬ ಪ್ರಶ್ನೆಗಳಿಗೆ ಕಿವುಡಾಗಿರುವ ಸತ್ಯವಿದು. ಇಂದು ಬೆಂಗಳೂರು, ಜನತೆ ಆಯ್ಕೆ ಮಾಡುವ ಸರ್ಕಾರಗಳನ್ನೇ (ಗ್ರಾಮ ಪಂಚಾಯ್ತಿಗಳಿಂದ ಹಿಡಿದು ರಾಜ್ಯ-ಕೇಂದ್ರ ಸರ್ಕಾರಗಳವರೆಗೆ) ಅಪ್ರಸ್ತುತಗೊಳಿಸುವಂತಹ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಆಡೊಂಬಲವಾಗಿ ಬೆಳೆಯುತ್ತಿದೆ;ಖಾಸಗಿ ಕಂಪನಿಗಳು-ನಿಗಮಗಳು ತಮ್ಮ ಬೃಹತ್ ಲಾಭಾಂಶಗಳ ಬೊಜ್ಜನ್ನು ಪ್ರದರ್ಶಿಸುತ್ತಾ, ಬಳಸಿಕೊಳ್ಳುತ್ತಾ -ಈ ಸರ್ಕಾರಗಳ ಅಧಿಕೃತತೆ, ಅಧಿಕಾರ ವಿಶ್ವಾಸಾರ್ಹತೆಗಳನ್ನೇ ಸಾರ್ವಜನಿಕವಾಗಿ

ಪ್ರಶ್ನಿಸುತ್ತಾ -ಸಮಾನಾಂತರ ಸರ್ಕಾರಗಳಂತೆ ಕೆಲಸ ಮಾಡತೊಡಗಿವೆ. ಇವು ಸೃಷ್ಟಿಸುತ್ತಿರುವ ಅಮೂರ್ತ ಹಾಗೂ ಮೂರ್ತ ಹಿಂಸೆಗಳು (ವಾಚ್‌ಮನ್ ಕೆಲಸಕ್ಕೂ ಇಂಗ್ಲಿಷ್ ಅಗತ್ಯ ಎಂಬುದೂ ಸ್ಥಳೀಯತೆಯ-ಇದೊಂದು ಮೌಲ್ಯವೂ, ಪರಿಮಳವೂ ಆಗಿದೆ-ಮೇಲೆ ಎಸಗುವ ಅತ್ಯಾಚಾರವೇ ಆಗಿದೆ) ಸಾಮಾನ್ಯ ಜನ ತಮ್ಮ 'ಸ್ಮೃತಿ'ಯನ್ನೇ ಕಳೆದುಕೊಳ್ಳುವಂತೆ ಮಾಡುತ್ತಿವೆ: ಪ್ರಜಾಪ್ರಭುತ್ವ, ಸಮಾನತೆ ಹಾಗೂ ಜಾತ್ಯಾತೀತೆಯ ಆಶಯ-ಆದರ್ಶಗಳು ಜನಮಾನಸದಲ್ಲಿ ಹಿನ್ನಲೆಗೆ ಸರಿಯುತ್ತಿವೆ.

ಇದರಿಂದ ಉಂಟಾಗುತ್ತಿರುವ ಕ್ಷೋಭೆಯನ್ನು ತಡೆಯಲು ಇಂದು ಕನ್ನಡವನ್ನು ತುರ್ತು ಅಗತ್ಯವೆಂಬಂತೆ-ಈಗ ಅದರ ಅಳಿದುಳಿರುವ ಸಾರ್ವಜನಿಕ ಸ್ಥಾನಮಾನಕ್ಕೆ ಕಿಂಚಿತ್ತೂ ಭಂಗಬಾರದಂತೆ-ಉಳಿಸಿಕೊಳ್ಳಬೇಕಾಗಿದೆ: ಜಾಗತೀಕರಣದ ದುಷ್ಪರಿಣಾಮಗಳು ವ್ಯಾಪಕವಾಗಿ ಹಬ್ಬದಂತೆ ಪ್ರತಿರೋಧ ಶಕ್ತಿಯಾಗಿ ಕನ್ನಡ ಶಿಕ್ಷಣದ ಪ್ರಾಥಮಿಕತೆಯನ್ನು ಉಳಿಸಿ ಬೆಳಸಬೇಕಾಗಿದೆ. ಶಾಲಾ ಶಿಕ್ಷಣದಲ್ಲಿ ಕನ್ನಡಿಗರಿಗಾದರೂ ಕನ್ನಡ ಮಾಧ್ಯಮ ಕಡ್ಡಾಯವಾಗಿ ಜಾರಿಯಾಗದೆ ಇಂಗ್ಲಿಷ್ ಕಲಿಕೆ ಪ್ರಸ್ತಾವನೆಯನ್ನು ಮಂಡಿಸುವುದು ಮತ್ತು ಅದನ್ನು ಬೆಂಬಲಿಸುವುದು, ಬೆಂಗಳೂರಿನ ರೋಗವನ್ನು ವಾಸಿ ಮಾಡಲು ಹೋಗಿ ಅಂತಹ ರೋಗದ ವಿರುದ್ಧ ರಾಜ್ಯದ ಉಳಿದೆಡೆ ಉಳಿದುಕೊಂಡಿರುವ ಅಷ್ಟಿಷ್ಟಾದರೂ ಪ್ರತಿರೋಧ ಶಕ್ತಿಯನ್ನು ನಾಶ ಮಾಡುವಂತಹ ಆತ್ಮಘಾತುಕ ಕೆಲಸವಾಗುತ್ತದೆ.

ಇನ್ನು ಕಾಂಗ್ರೆಸ್ ಪಕ್ಷದ ಕೆಲವು ಶಾಸಕರು ಹಾಗೂ ಮುಖಂಡರು ಸರ್ಕಾರದ ಆಜ್ಞೆ ಪರವಾಗಿ ನೀಡಿರುವ ಒಂದು ಸುದೀರ್ಘ ಹೇಳಿಕೆಯಲ್ಲಿ, ಭಾರತದ ಇತರ ರಾಜ್ಯಗಳು ತಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇಂಗ್ಲಿಷ್‌ಗೆ ಪ್ರಾಥಮಿಕತೆ ನೀಡಲಾರಂಭಿಸಿರುವುದನ್ನು ಪ್ರಸ್ತಾಪ ಮಾಡಿದ್ದಾರೆ.ಆದರೆ ಆ ರಾಜ್ಯಗಳಲ್ಲಿ ಆಯಾ ರಾಜ್ಯ ಭಾಷೆಗಳ 'ಅಭಿವೃದ್ಧಿ ಪ್ರಾಧಿಕಾರ', 'ಪುಸ್ತಕ ಪ್ರಾಧಿಕಾರ 'ದಂತಹ ಸಂಸ್ಥೆಗಳನ್ನು ರಚಿಸುವಂತಹ ದುಃಸ್ಥಿತಿಯಲ್ಲಿ ಅಲ್ಲಿನ ಭಾಷೆಗಳಿಲ್ಲ. ಅಲ್ಲಿನ ಸರ್ಕಾರಗಳು ಸಮರ್ಥ ಭಾಷಾ ಹಾಗೂ ಶಿಕ್ಷಣ ನೀತಿಗಳ ಮೂಲಕ ಅಲ್ಲಿನ ರಾಜ್ಯ ಭಾಷೆಗಳನ್ನು ಪೋಷಿಸಿದ ನಂತರವಷ್ಟೇ, ಇಂಗ್ಲಿಷ್ ಕಲಿಕೆ ಕಡೆ ಗಮನ ಹರಿಸಿವೆ. ಹಾಗೇ ಈ ವಿಷಯಕ್ಕೆ ಸಂಬಂಧಿಸಿದಂತೆ ಪದೇ ಪದೇ ಉಲ್ಲೇಖಗೊಳ್ಳುವ ಚೀನಾ ಮತ್ತು ಜಪಾನ್ ದೇಶಗಳಲ್ಲಿ ಕೂಡಾ ನಮ್ಮ ಕರ್ನಾಟಕದಲ್ಲಿರುವಂತೆ ಗಲ್ಲಿಗೊಂದು ಗಟಾರಕ್ಕೊಂದರಂತೆ ಇಂಗ್ಲಿಷ್ ಮಾಧ್ಯಮ ಶಾಲೆಗಳಿಲ್ಲ. ನಾವು ಸುಮಾರು ನೂರು ವರ್ಷಗಳ ಹಿಂದೆ ಆರಂಭಿಸಿದ ಇಂಗ್ಲಿಷ್ ಕಲಿಕೆಯನ್ನು ಅಲ್ಲೀಗ ಅವರು ಆರಂಭಿಸಿದ್ದಾರಷ್ಟೆ. ಹಾಗಾಗಿ ನಾವು ಅವರಿಗೆ ಉದಾಹರಣೆಯೇ ಹೊರತು, ಅವರು ನಮಗೆ ಉದಾಹರಣೆಯಾಗಲಾರರು.

ಹಾಗೇ, ಮುಖ್ಯಮಂತ್ರಿ ಕುಮಾರಸ್ವಾಮಿಯವರು, ತಮಗೆ ಸಾರ್ವಜನಿಕವಾಗಿ

ಇಂಗ್ಲಿಷ್ ಮಾತನಾಡಲು ಆಗುತ್ತಿರುವ ಹಿಂಜರಿಕೆಯ ಬಗ್ಗೆ ಅಲವತ್ತುಕೊಳ್ಳುತ್ತಾ, 'ತಮ್ಮ ಸ್ಥಿತಿಯೇ ಹೀಗಿರುವಾಗ ಮಿಕ್ಕ ಗ್ರಾಮಾಂತರ ಮಕ್ಕಳ ಗತಿಯೇನು? ಇಂಗ್ಲಿಷ್ ಮೂಲಕ ಪಟ್ಟಣದ ಮಕ್ಕಳು ಸಿರಿವಂತರಾಗುತ್ತಿದ್ದರೆ, ಹಳ್ಳಿ ಮಕ್ಕಳು ಕನ್ನಡ ಕಲಿತು ಬಡತನದಲ್ಲೇ ಉಳಿದುಬಿಡಬೇಕೇ?' ಎಂಬ ಭಾವಾವೇಶದ ಪ್ರಶ್ನೆಗಳನ್ನು ಕೇಳಿದ್ದಾರೆ. ಹಳ್ಳಿಗಳ ಮಕ್ಕಳಿಗೆ ಇಂಗ್ಲಿಷ್ ಕಲಿಯುವ ಸೌಲಭ್ಯವಿಲ್ಲವೆನ್ನುವುದು ಅಥವಾ ಹಳ್ಳಿಗಳ ಮಕ್ಕಳು ಈವರೆಗೆ ಇಂಗ್ಲಿಷ್ ಕಲಿಯಲಾಗಿಲ್ಲವೆನ್ನುವುದು, ವಾಸ್ತವಕ್ಕೆ ದೂರವಾದ ಸಂಗತಿಯಾಗಿದೆ. ತಮ್ಮ ಸಹಪಾಠಿಗಳಲ್ಲಿ ಅನೇಕರು ಕೀಳರಿಮೆಯಿಲ್ಲದೆ ಮಾತಾಡಬಲ್ಲಷ್ಟು ಇಂಗ್ಲಿಷ್ ಕಲಿತಿರುವುದನ್ನು ಅವರು ಗಮನಿಸಿದಂತಿಲ್ಲ. ಏಕೆಂದರೆ,ಅವರ ಗಮನವೆಲ್ಲ ಬೆಂಗಳೂರಿನ ಕಾನ್ವೆಂಟಿಗರ ಇಂಗ್ಲಿಷ್ ಕಡೆಗಿದೆ! ಅಂದರೆ,ಅವರ ಅಂತಿಮ ಉದ್ದೇಶವೇನಿದ್ದರೂ, ಇಂಗ್ಲಿಷ್ ಮಾಧ್ಯಮ ಜಾರಿಯೇ ಆಗಿದೆ. ಇದನ್ನು ಪ್ರಾಮಾಣಿಕವಾಗಿ ಹೇಳುವ ಧೈರ್ಯವೂ ಇಲ್ಲದೆ,ಭಾಷೆಯ ವಿಷಯದಲ್ಲಿ ಅವರು ಸದ್ಯಕ್ಕಷ್ಟೇ 'ವ್ಯಾವಹಾರಿಕ ನೀತಿ 'ಯ ಮಾತಾಡುತ್ತಿದ್ದಾರೆ.

ಇನ್ನು, ಕನ್ನಡ ಕಲಿತು ಸಿರಿವಂತರಾಗಲು ಸಾಧ್ಯವಿಲ್ಲವೇ? ಹಾಗಾದರೆ,ಮುಖ್ಯಮಂತ್ರಿಯವರ ಸದ್ಯದ ಶ್ರೀಮಂತಿಕೆಯನ್ನು ಹೇಗೆ ವಿವರಿಸಬೇಕೋ ತಿಳಿಯದಾಗಿದೆ! ಅಂದ ಹಾಗೆ ತಮ್ಮ ಇಂಗ್ಲಿಷ್ ಜ್ಞಾನದ ಬಗ್ಗೆ ಅವರಿಗೇಕೆ ಕೀಳರಿಮೆ ಇರಬೇಕು? ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ, ಜಗತ್ತಿನಲ್ಲಿ ಫ್ರಾನ್ಸ್ ಅಥವಾ ಜರ್ಮನಿಗಳ ಅಧ್ಯಕ್ಷರುಗಳು ಅಥವಾ ಚೀನಾ ಅಥವಾ ಜಪಾನ್‌ಗಳ ಪ್ರಧಾನ ಮಂತ್ರಿಗಳಿಗಿಂತ ಹೆಚ್ಚಿನ ಮಹತ್ವದ ಅಥವಾ ಜವಾಬ್ದಾರಿಯ ಸ್ಥಾನಮಾನವನ್ನೇನೂ ಹೊಂದಿಲ್ಲ.ಆದರೆ, ಅವರೆಲ್ಲ ನಮ್ಮ ಮುಖ್ಯಮಂತ್ರಿಗಳಂತೆ ಇಂಗ್ಲಿಷ್ ಬಗ್ಗೆ ಕೀಳರಿಮೆಯಿಂದ ನರಳದೆ, ವಿಶ್ವವೇದಿಕೆಗಳಲ್ಲೂ ಹೆಮ್ಮೆಯಿಂದ ತಂತಮ್ಮ ದೇಶ ಭಾಷೆಗಳಲ್ಲಿ ಮಾತನಾಡುತ್ತಾರೆ. ನಮ್ಮ ರಾಜಕಾರಣಿಗಳಂತೆ ಬೌದ್ಧಿಕ ದಾರಿದ್ರ್ಯದಿಂದ ನರಳದ ಅವರು,ಜಾಗತಿಕ ಮಟ್ಟದ ಎಲ್ಲ ಜ್ಞಾನವನ್ನು ತಂತಮ್ಮ ದೇಶ ಭಾಷೆಗಳಿಗೆ ತಂದುಕೊಳ್ಳುವ ವ್ಯವಸ್ಥೆ ಮಾಡುವ ಬದ್ಧತೆ ಹಾಗೂ ದಿಗಂತ ದೃಷ್ಟಿ ಹೊಂದಿದವರಾಗಿದ್ದಾರೆ. ಆದರೆ ರಾಜಕೀಯ ಪಟ್ಟುಗಳನ್ನು ಹಾಕುತ್ತಾ, ದುಡ್ಡು ಮಾಡುವ ದಂಧೆಯನ್ನೇ ಮೂಲ ಕಸುಬು ಮಾಡಿಕೊಂಡಿರುವ ನಮ್ಮ ನಾಯಕರು, ಇದರ ಭಾಗವಾಗಿಯೇ ಒತ್ತಡಕ್ಕೆ ಸಿಕ್ಕಾಗ,ತಮ್ಮ ಭಾಷೆಯೇ ಜಾಗತಿಕವಾಗಿ ಅಪ್ರಸ್ತುತವಾಗುತ್ತಿದೆ ಎಂದು ಪರೋಕ್ಷವಾಗಿ ಸೂಚಿಸಲು ಹೇಸದವರಾಗುತ್ತಾರೆ.

ಗ್ರಾಮಾಂತರ ಮತ್ತು ದಲಿತ ಹಾಗೂ ಹಿಂದುಳಿದ ಜಾತಿ-ವರ್ಗಗಳ ಮಕ್ಕಳು ಸಮಕಾಲೀನ ಜೀವನದಲ್ಲಿ ಯಶಸ್ವಿಯಾಗುತ್ತಿಲ್ಲ ಎಂಬುದೇ ದೊಡ್ಡ ಸುಳ್ಳಾಗಿದೆ ಮತ್ತು ಇವರೆಲ್ಲರಿಗೂ ಐದನೆಯ ತರಗತಿಗೆ ಬದಲಾಗಿ, ಒಂದನೇ ತರಗತಿಯಿಂದಲೇ ಇಂಗ್ಲಿಷ್

ಕಲಿಸಲಾರಂಭಿಸಿದರೆ, ಅವರು ಯಶಸ್ವಿಯಾಗುತ್ತಾರೆ ಎಂಬುದು ಅದಕ್ಕಿಂತ ದೊಡ್ಡ ಸುಳ್ಳಾಗಿದೆ. ಬೃಹತ್ ವಾಣಿಜ್ಯ ಲಾಬಿಗಳ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವದಿಂದ ಹುಟ್ಟಿರುವಂತೆ ತೋರುವ ಈ ತರಹದ ಸುಳ್ಳು ಸುಳ್ಳಾದ ಚಿಂತನಾ ಲಹರಿಯು, ಈ ಸಮುದಾಯಗಳ ಆತ್ಮವಿಶ್ವಾಸವನ್ನೇ ಭಂಗಗೊಳಿಸಿ, ಅವರನ್ನು ದಾರಿ ತಪ್ಪಿಸುವ ಹುನ್ನಾರವೂ ಆಗಿದ್ದರೆ ಆಶ್ಚರ್ಯವಿಲ್ಲ. ನಮ್ಮ ದಲಿತ ಹಾಗೂ ಹಿಂದುಳಿದ ವರ್ಗಗಳ ನಾಯಕತ್ವದ ಒಂದು ಭಾಗವು ತಮ್ಮ ಸಮುದಾಯಗಳ ಸಮಸ್ಯೆಗಳ ತಳ ಶೋಧನೆಗೆ ಕೈ ಹಾಕುವ ಕಷ್ಟ ತೆಗೆದುಕೊಳ್ಳದೆ, ತಮ್ಮ ಕೀಳರಿಮೆಗೆಲ್ಲಾ ಒಂದೊಂದು ಕಾಲದಲ್ಲಿ ಒಂದೊಂದು ಕಾರಣ ಹುಡುಕಿಕೊಳ್ಳುವ ಸಮೀಪ ದೃಷ್ಟಿದೋಷದಿಂದ ನರಳುತ್ತಿರುವಂತೆ ತೋರುತ್ತಿದೆ. ಈ ನಾಯಕತ್ವವು ತಮ್ಮನ್ನು ನಂಬಿರುವ ಮುಗ್ಧ ಜನಸ್ತೋಮವನ್ನು ಜಾತಿ ವರ್ಗಗಳ ಹೆಸರಿನಲ್ಲಿ ಕೆರಳಿಸುತ್ತಾ, ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದರಲ್ಲೇ ನಿರತವಾಗುತ್ತಿರುವದು ಈ ಸಂದರ್ಭದಲ್ಲೂ ಎದ್ದು ಕಾಣುವಂತಿದೆ.

ಇಂತಹವರ ಬೇಡಿಕೆಯನ್ನು ದಲಿತರ-ಹಿಂದುಳಿದವರ ಬೇಡಿಕೆಯೆಂದು ಸಾರಾಸಗಟಾಗಿ ನಂಬಿ, ಗ್ರಾಮಾಂತರ ಮಕ್ಕಳಿಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಬಗೆಗಳ ಬಗ್ಗೆ ಕೆಲವರು ಸಲಹೆ-ಸೂಚನೆಗಳನ್ನು ಕೊಡುತ್ತಿರುವುದನ್ನು ಮತ್ತು ನಮ್ಮ ಶಾಲೆಗಳ ಶಿಕ್ಷಕರು ತಾವು ಇಂಗ್ಲಿಷ್ ಕಲಿಸಲು ಸಿದ್ಧವೆಂದು ಕೊಡುತ್ತಿರುವ ಹೇಳಿಕೆಗಳನ್ನು ಕಂಡು ನಗಬೇಕೋ ಅಳಬೇಕೋ ತಿಳಿಯದಾಗಿದೆ: ಇತ್ತೀಚೆಗೆ ತಾನೇ ನಮ್ಮ ಶಾಲೆಗಳಲ್ಲಿನ ಕಲಿಕೆ ಗುಣಮಟ್ಟದ ಬಗ್ಗೆ ಸಿದ್ಧಪಡಿಸಿರುವ ಅಧಿಕೃತ ವಾರ್ಷಿಕ ಶಿಕ್ಷಣ ವರದಿಯ ಫಲಿತಾಂಶಗಳು ಕನ್ನಡದ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದರ ಪ್ರಕಾರ ಕರ್ನಾಟಕದ ಗ್ರಾಮಾಂತರ ಶಾಲೆಗಳಲ್ಲಿನ ಏಳರಿಂದ ಹತ್ತು ವರ್ಷಗಳ ವಯೋಮಾನದ ಮಕ್ಕಳಲ್ಲಿ ಶೇ.೫೭ರಷ್ಟು ಮಕ್ಕಳಿಗೆ ಒಂದು ಸಣ್ಣ ಮತ್ತು ಸರಳ ಗದ್ಯಭಾಗವನ್ನು ಸರಿಯಾಗಿ ಓದಲು ಬರುವುದಿಲ್ಲ ಹಾಗೂ ಶೇ. ೬೦ರಷ್ಟು ಮಕ್ಕಳಿಗೆ ಸರಳ ಕೂಡುವ ಮತ್ತು ಕಳೆಯುವ ಲೆಕ್ಕ ಬರುವುದಿಲ್ಲ. ಇನ್ನು ಶೇ. ೯೦ ಭಾಗ ಮಕ್ಕಳಿಗೆ ಸರಳ ಭಾಗಾಕಾರ ಮಾಡಲಾಗುವುದಿಲ್ಲ. ಇಂತಹ ದುಃಸ್ಥಿತಿಯಲ್ಲಿರುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಸಲಾಗುವ ಇಂಗ್ಲಿಷ್ ಮೂಲಕ ನಮ್ಮ ಮಕ್ಕಳನ್ನು ಜಾಗತಿಕ ಉದ್ಯೋಗ ಮಾರುಕಟ್ಟೆಗೆ ತಯಾರು ಮಾಡಹೊರಟ್ಟಿದ್ದೇವೆ!

ಕನ್ನಡದ ಮಕ್ಕಳಿಗೆ ಸುವರ್ಣ ಕರ್ನಾಟಕಾಚರಣೆಯ ಸಂದರ್ಭದಲ್ಲಿ ಮಾಡಬಹುದಾದ, ಇದಕ್ಕಿಂತ ದೊಡ್ಡ ಮೋಸ ಇನ್ನೊಂದಿದೆಯೇನು? ಕನ್ನಡದ ಜನ ವ್ಯವಧಾನದಲ್ಲಿ ಯೋಚಿಸಬೇಕಾದ ವಿಚಾರವಿದು. ಸರ್ಕಾರದ ಆಜ್ಞೆಯ ವಿರುದ್ಧವಿರುವವರು , ಇದರ ಬೆಂಬಲಿಗರು ಬಿಂಬಿಸುತ್ತಿರುವ ಹಾಗೆ, ಖಂಡಿತಾ ಇಂಗ್ಲಿಷ್

ವಿರೋಧಿಗಳಲ್ಲ. ಬದಲಿಗೆ, ಮೂರನೇ ತತರಗತಿಯಿಂದ ಅನೌಪಚಾರಿಕವಾದ ಇಂಗ್ಲಿಷ್ ಕಲಿಕೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಎಂಬುದೇ ಇಂತಹವರ ನಿಲುವಾಗಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಈಗ ತುರ್ತು ಅಗತ್ಯವಾಗಿರುವುದು ಇಂಗ್ಲಿಷ್ ಕಲಿಕೆಯ ಹೊಸ ಪ್ರಸ್ತಾವನೆಯಲ್ಲ; ಬದಲಿಗೆ ಪ್ರಜಾಪ್ರಭುತ್ವ ಸಮಾನತೆ ಹಾಗೂ ಜಾತ್ಯಾತೀತತೆಯ ಆಶಯಗಳನ್ನು ಸಂರಕ್ಷಿಸಬಲ್ಲ ಆಧುನೀಕರಣದ ಪುನರ್ನಿರೂಪಣೆಯನ್ನಾಧರಿಸಿದ ಹೊಸ ಅಭಿವೃದ್ಧಿ ಮಾದರಿಯಡಿ ಏಕರೂಪದ ಶಿಕ್ಷಣ ವ್ಯವಸ್ಥೆಯ ಜಾರಿಗಾಗಿ ಒತ್ತಾಯ. ಇದರ ಹೊರತು ಮಿಕ್ಕೆಲ್ಲ ದಾರಿಗಳು ಸುಲಭದ ಹಾಗೂ ಅಪಾಯದ ದಾರಿಗಳೇ ಆಗಿವೆ. ಹೀಗಾಗಿ ಪ್ರಾಥಮಿಕ ಶಿಕ್ಷಣ ಮಾಧ್ಯಮ ಕುರಿತ ಸರ್ವೋನ್ನತ ನ್ಯಾಯಾಲಯದ ಐತಿಹಾಸಿಕ ತೀರ್ಪನ್ನು ಜಾರಿಗೊಳಿಸಲು ಸಾಧ್ಯವಾಗುವವರೆಗಾದರೂ, ಎಲ್ಲ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಕೆಯನ್ನು ಕಡ್ಡಾಯ ಮಾಡುವ ಕರ್ನಾಟಕ ಸರ್ಕಾರದ ಇತ್ತೀಚಿನ ನಿರ್ಧಾರವನ್ನು ವಿವೇಚನಾಶೀಲರೆಲ್ಲರೂ,ಕರ್ನಾಟಕದ ಸರ್ವಜನರ ಲೌಕಿಕಾಭ್ಯುದಯದ ದೃಷ್ಟಿಯಿಂದಲೂ ಮತ್ತು ಕನ್ನಡ ಮನಸ್ಸಿನ ಸೃಜನ ಶಕ್ತಿಯ ದೃಷ್ಟಿಯಿಂದಲೂ ಖಂಡಿಸಿ ವಿರೋಧಿಸಬೇಕಾಗಿದೆ.

ಹೀಗಾಗಿ ಇದು ಕನ್ನಡದ ನಿರ್ಣಾಯಕ ಹೋರಾಟವೇ ಆಗಿದೆ.

○

('ಸಂವಾದ', ಡಿಸೆಂಬರ್-೨೦೦೬)

vii. ಎರಡು ಪತ್ರಗಳು

(ಈ ಎರಡೂ ಪತ್ರಗಳು 'ಅಗ್ನಿ' ವಾರಪತ್ರಿಕೆಯು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ
ಸರ್ಕಾರದ ಆಜ್ಞೆಯನ್ನು ಬೆಂಬಲಿಸಿ ಮತ್ತು ಅದರ ವಿರೋಧಿಗಳನ್ನು ಖಂಡಿಸಿ ಬರೆದ ಸಂಪಾದಕೀಯಗಳಿಗೆ
ಪ್ರತಿಕ್ರಿಯೆಗಳಾಗಿ ಬರೆದ ಪತ್ರಗಳು. ಈ ಪತ್ರಗಳಲ್ಲೇ ಆ ಸಂಪಾದಕೀಯಗಳ ತಿರುಳು ಮತ್ತು ಶೈಲಿಗಳನ್ನು
ಅರಿಯಬಹುದಾಗಿದೆ)

ಪತ್ರ: ಒಂದು

ಪ್ರಿಯ ಶ್ರೀಧರ್,

'ಕನ್ನಡಿಗರಿಗೆ ಇಂಗ್ಲಿಷ್ ಬೇಕು' ಎಂಬ ತಮ್ಮ ಸಂಪಾದಕೀಯ ಓದಿ ನಗಬೇಕೊ, ಅಳಬೇಕೊ ತಿಳಿಯದಾಗಿದೆ. ಪ್ರತಿಯೊಂದಕ್ಕೂ ಬೇಕು ಮತ್ತು ಬೇಡಗಳೆಂಬ ಎರಡೇ ಪ್ರತಿಕ್ರಿಯೆಗಳು ಸಾಧ್ಯವೆಂದು ನೀವು ನಂಬಿದಂತಿದೆ. ಏಕೆಂದರೆ, ಜಾಗತೀಕರಣದ ನಿಮ್ಮ ಅರ್ಥೈಸುವಿಕೆ ಇಂಥಾ ನಂಬಿಕೆಯನ್ನೇ ಆಧರಿಸಿರುವಂತೆ ತೋರುತ್ತದೆ. ಹಾಗಾಗಿಯೇ ಜಾಗತೀಕರಣವನ್ನು ವಿರೋಧಿಸುವವರು ಕಾರು, ಮೊಬೈಲ್, ಕಂಪ್ಯೂಟರ್‌ಗಳನ್ನು ಬಳಸುವುದಿಲ್ಲವೆ ಎಂದು ಕೇಳಿದ್ದೀರಿ. ಇವೆಲ್ಲವೂ ಜಾಗತೀಕರಣದ ಫಲಗಳೇ ಎಂದು ನೀವು ತಿಳಿದಿದ್ದರೆ, ಜಾಗತೀಕರಣ ಕುರಿತ ನಿಮ್ಮ ತಿಳುವಳಿಕೆ ತಲೆಕೆಳಗಾದದ್ದಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ.

ಇಂದು ಜಾಗತೀಕರಣದ (ವಿ)ರೂಪ ತಾಳಿರುವ ಆಧುನಿಕ ನಾಗರೀಕತೆಯ ಸೃಜನಶೀಲ ವಿಮರ್ಶಕರಾಗಿದ್ದ ಗಾಂಧೀಜಿಯೂ ಅಗತ್ಯಬಿದ್ದಾಗ ಕಾರು ಬಳಸುತಿದ್ದರು ಎಂಬುದು ನಿಮಗೂ ಗೊತ್ತಿರಬೇಕು. ಇಂದು ಅವರಿದ್ದಿದ್ದಲ್ಲಿ, ಮೊಬೈಲ್ ಹಾಗೂ ಕಂಪ್ಯೂಟರ್ ಅನ್ನು ಬಳಸುತ್ತಿದ್ದಲ್ಲಿ ಆಶ್ಚರ್ಯಪಡಬೇಕಿಲ್ಲ. ಮನುಷ್ಯನ ಕ್ರಿಯಾಶೀಲತೆಯನ್ನು ದಕ್ಷಗೊಳಿಸುವ ಸಾಧನಗಳನ್ನು ನಿರಾಕರಿಸುವ ಮನುಷ್ಯ ಮೂರ್ಖನೇ ಸರಿ. ಜಾಗತೀಕರಣದ ವಿರೋಧಿಗಳು ಮನುಷ್ಯ ನಾಗರೀಕತೆಯ ಸಾಹಸ, ಅನ್ವೇಷಣೆ ಹಾಗೂ ಸಂಶೋಧನೆಗಳ ವಿರೋಧಿಗಳು ಎಂದು ನೀವು ಭಾವಿಸಿದಂತಿದೆ.

ಜಾಗತೀಕರಣದ ನಿಜವಾದ ಅಪಾಯ ಇರುವುದು ಈ ಸಾಧನ ಸಂಶೋಧನೆಗಳನ್ನು ಜಾಗತಿಕ ಹಕ್ಕುದಾರಿಕೆಯ ರೂಪದಲ್ಲಿ ವ್ಯಾಪಾರೀಕರಿಸಿ ಒಂದು ಸಮಾಜದಲ್ಲಿನ ಉತ್ಪಾದನೆ ಹಾಗೂ ಬಳಕೆದಾರಿಕೆಯ ಔಚಿತ್ಯ ಪ್ರಜ್ಞೆಯನ್ನೇ ನಾಶ ಮಾಡುವ ಮೂಲಕ ಜನರಲ್ಲಿ ತಣಿಯದ ಹಪಾಹಪಿಯನ್ನು ಸೃಷ್ಟಿಸುವ ಅದರ ರೂಕ್ಷ ರಾಜಕಾರಣದಲ್ಲಿ; ಜನತೆಗಾಗಿ ಇರುವ ಅರ್ಥಶಾಸ್ತ್ರವನ್ನು ಸರಕಿನ ಅರ್ಥಶಾಸ್ತ್ರವನ್ನಾಗಿ ಪರಿವರ್ತಿಸಿ ಮನುಷ್ಯನನ್ನು ಅವನ ಕೇಂದ್ರದಿಂದಲೆ ಹೊರತಳ್ಳುವ ಮೂಲಕ

ಸಂಘರ್ಷಮಯವಾದ ಹಿಂಸಾತ್ಮಕ ಜಗತ್ತನ್ನು ಕಟ್ಟಿಕೊಡುತ್ತಿರುವ, ಅದರ ಅವಿವೇಕಿ ತರ್ಕದಲ್ಲಿ.

ಇಂಗ್ಲಿಷ್ ಕಲಿಕೆ ಕುರಿತ ಸರ್ಕಾರದ ಇತ್ತೀಚಿನ ಆಜ್ಞೆಯು ಇಂಥ ರೂಕ್ಷ, ಅಮಾನವೀಯ ಹಾಗೂ ಅವಿವೇಕಿ ರಾಜಕಾರಣಕ್ಕೆ ಬಲಿಬಿದ್ದುದರ ದ್ಯೋತಕವೇ ಆಗಿರುವುದರಿಂದ ಅದನ್ನು ಸಹಜವಾಗಿಯೇ; ತೀವ್ರವಾಗಿ ವಿರೋಧಿಸಬೇಕಿದೆ. ಆದರೆ, ನಿಮ್ಮ ಪ್ರಕಾರ ನೆರೆಹೊರೆಯ ಭಾರತೀಯ ಭಾಷೆಗಳಿಗೆ ಹೋಲಿಸಿದರೆ ಇಂಗ್ಲಿಷ್ ನ್ಯೂಟ್ರಲ್ ಭಾಷೆಯಾಗಿದೆ! ಹೌದೆ?

ಹೌದಾದರೆ, ನಿಮ್ಮೊಂದಿಗೆ ಈ ವಿಷಯದಲ್ಲಿ ಮತ್ತೇನು ಚರ್ಚೆ ಸಾಧ್ಯ?

-ಡಿ.ಎಸ್.ನಾಗಭೂಷಣ

('ಅಗ್ನಿ' ೧೯, ಅಕ್ಟೋಬರ್, ೨೦೦೬)

(ಸಂಪಾದಕರು ನನ್ನ ಈ ಪತ್ರಕ್ಕೆ ಪ್ರತಿಕ್ರಿಯೆಯಾಗಿ ಮತ್ತೊಂದು ಸಂಪಾದಕೀಯ ಬರೆದು ತಮ್ಮ ನಿಲುವನ್ನು ಸಮರ್ಥಿಸಿಕೊಂಡರು. ಈ ಸಂಪಾದಕೀಯವು ನನ್ನ ಬಗ್ಗೆ ಕೆಲವು ವೈಯುಕ್ತಿಕ ಟೀಕೆಗಳನ್ನೂ, ಅಸತ್ಯಗಳನ್ನೂ ಒಳಗೊಂಡಿದ್ದುದರಿಂದ ನಾನು ಮತ್ತೆ ಪ್ರತಿಕ್ರಿಯಸಲೇ ಬೇಕಾಯಿತು. ಆದರೆ ಅದನ್ನು ಸಂಪಾದಕರು ಪ್ರಕಟಿಸಲಿಲ್ಲ. ಏಕೆಂದು, ಈ ಪ್ರತಿಕ್ರಿಯೆ ಓದಿದರೆ ಗೊತ್ತಾಗುತ್ತದೆ.)

ಪತ್ರ:ಎರಡು

ಪ್ರಿಯ ಶ್ರೀಧರ್,

ಇಂಗ್ಲಿಷ್ ನ್ಯೂಟ್ರಲ್ ಭಾಷೆ ಎಂಬುದೇ ನಿಮ್ಮ ನಿಲುವಾದರೆ, ನಿಮ್ಮೊಂದಿಗೆ ಈ ವಿಷಯವಾಗಿ ನನ್ನಂಥವರ ಚರ್ಚೆ ಸಾಧ್ಯವಿಲ್ಲವೆಂದು ನಾನು ಒಪ್ಪಿಕೊಂಡಿದ್ದರೂ (ಅಗ್ನಿ:೧೯-೧೦-೦೬)ನೀವು ಚರ್ಚೆ ಬೆಳೆಸಿದ್ದೀರಿ (ಅಗ್ನಿ:೨೬-೧೦-೦೬), ಸಂತೋಷ: ನನ್ನ ಚೋಟುದ್ದದ ಪ್ರತಿಕ್ರಿಯೆ ನಿಮ್ಮನ್ನು ಪುಟದಷ್ಟು ಪ್ರತಿಕ್ರಿಯಿಸಲು ಪ್ರೇರೇಪಿಸಿದೆ ಎಂಬುದೇ ನನ್ನ ಕೆಲವು ಮಾತುಗಳಾದರೂ ನಿಮ್ಮನ್ನು ತಾಕಿದೆ ಎಂಬುದನ್ನು ಖಚಿತ ಪಡಿಸಿದೆ. ನನ್ನ ಪತ್ರ ನೋಡಿ ನಿಮಗೆ ಅಳು ಅಥವಾ ನಗು ಬರದೆ, ದುಗುಡ ಉಂಟಾಗಿದೆ ಎಂದಿದ್ದೀರಿ. ಆದರೆ, ನಿಮ್ಮ ಪ್ರತಿಕ್ರಿಯೆಯ ತುಂಬಾ ಎದ್ದು ಕಾಣುವುದು ದುಗುಡವಲ್ಲ; ವ್ಯಂಗ್ಯ-ಕಟಕಿಗಳಿಂದ ಕೂಡಿದ ರೋಷಾವೇಶ. ನಿಮ್ಮ ಸಂಪಾದಕೀಯ ಟಿಪ್ಪಣಿಗಳು ಕೆಲವು ತಪ್ಪು ತಿಳುವಳಿಕೆಗಳಿಂದ ಕೂಡಿವೆಯೆಂದು ಬರೆದ ನನ್ನ ಅಭಿಪ್ರಾಯಗಳನ್ನು ನೀವು ವೈಯುಕ್ತಿಕ ದಾಳಿಯಂತೆ ತೆಗೆದುಕೊಂಡು, ನನ್ನ ಮೇಲೇ ವೈಯುಕ್ತಿಕ ಟಿಪ್ಪಣಿಗಳನ್ನು ಬರೆದಿದ್ದೀರಿ !

ನಿಮ್ಮನ್ನು ಈ ರೋಷಾವೇಶದ ಶೈಲಿಗೆ ಪ್ರಚೋದನೆಗೊಳಿಸಿರುವುದೇ ನನ್ನ ನಿಲುವಿನ ಮತ್ತಷ್ಟು ಸಮರ್ಥನೆ ಆಗಿದೆಯೆಂದು ನಾನು ತಿಳಿದಿದ್ದೇನೆ. ನನ್ನಂತೆ, ಯಾರನ್ನೂ ತಲೆ ಮೇಲೆ ಹೊತ್ತುಕೊಂಡಿಲ್ಲವೆಂದು ಹೇಳಿಕೊಂಡಿರುವ ನೀವು, ಸದ್ಯಕ್ಕೆ ನಿಮ್ಮನ್ನು ನೀವೇ ಹೊತ್ತುಕೊಂಡು ಬಳಲುತ್ತಿರುವಂತೆ ಕಾಣುತ್ತದೆ. ಜೊತೆಗೀಗ ನನ್ನನ್ನೂ ಹೊತ್ತುಕೊಂಡು ಕಿರುಚಾಡತೊಡಗಿದ್ದೀರಿ. ಇದನ್ನು ನೋಡಲಾಗದೆ, ಈ ಸುದೀರ್ಘ ಪತ್ರ ಬರೆಯಬೇಕಾಗಿದೆ-ಹೋದ ವಾರದ ನಿಮ್ಮ ಟಿಪ್ಪಣಿಗಳನ್ನು ಓದಿ, ನಮ್ಮಿಬ್ಬರ ಆರೋಗ್ಯದ ಬಗ್ಗೆ ಆತಂಕಗೊಂಡಿರಬಹುದಾದ ಎಲ್ಲರ ಗಮನಕ್ಕಾಗಿ. ಇದಕ್ಕೆ ನಿಮ್ಮ ಪತ್ರಿಕೆಯಲ್ಲಿ ಸ್ಥಳಾವಕಾಶ ಕಲ್ಪಿಸುತ್ತೀರಿ ಎಂದು ಭಾವಿಸುತ್ತೇನೆ.

ನನ್ನ ಮಾತುಗಳನ್ನು 'ಒಣ ಪಾಂಡಿತ್ಯ'ಎಂದಿದ್ದೀರಿ. ನಿಮ್ಮ ಮಾತುಗಳನ್ನು ನಾನು 'ಅಗ್ಗದ ಜನಪ್ರಿಯತೆ' ಎಂದು ಕರೆದರೆ? ಇಂಥಹ ತಗಡು ವಾದಗಳಿಂದ ಯಾರಿಗೂ ಪ್ರಯೋಜನವಿಲ್ಲ, ಅಲ್ಲವೇ? ಆದರೆ ನಿಮಗೆ ಪ್ರಯೋಜನವಿದ್ದಂತಿದೆ. ಹಾಗಾಗಿಯೇ ಮೂವತ್ತು ವರ್ಷಗಳ ಹಿಂದೆ ದೆಹಲಿಯಲ್ಲಿ ನಿಮ್ಮೊಂದಿಗೆ ಸಾರ್ತ್ರನನ್ನು ಖಂಡಿಸಲು ನಾನು ಗಾಂಧಿ-ಲೋಹಿಯಾರನ್ನು ಬಳಸಿದೆ ಎಂಬ ನಿಜವಲ್ಲದ ಸಂಗತಿಯನ್ನು ನಿರೂಪಿಸಿದ್ದೀರಿ. ಆ ಮೂಲಕ ನಾನು ಗಾಂಧಿ-ಲೋಹಿಯಾರನ್ನು ತಲೆ ಮೇಲೆ ಹೊತ್ತು ಕುಣಿಯುವ ವ್ಯಕ್ತಿಯೆಂದು ಸೂಚಿಸುತ್ತಾ, ನನ್ನ ಅಭಿಪ್ರಾಯದ ವಿಶ್ವಾಸಾರ್ಹತೆಯನ್ನೇ ಭಂಗಗೊಳಿಸಲು ಯತ್ನಿಸಿದ್ದೀರಿ. ಆದರೆ, ಲೋಹಿಯಾ ಕೂಡ ಅಸ್ತಿತ್ವವಾದಿ ಎಂದೇ ನಾನು ಮೊದಲಿನಿಂದಲೂ ನಂಬಿದವನು ಮತ್ತು ಆ ಬಗ್ಗೆ ಬರೆದವನು ಕೂಡ ಎಂಬುದು ನಿಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಅಷ್ಟೇ ಅಲ್ಲ, ನಿಮ್ಮೊಂದಿಗೆ, ಅದೂ ಮೂವತ್ತು ವರ್ಷಗಳ ಹಿಂದೆ ಸಾರ್ತ್ರೆ, ಲೋಹಿಯಾ ಅಥವಾ ಗಾಂಧಿ ಕುರಿತು ಚರ್ಚಿಸುವ ದುಸ್ಸಾಹಸಕ್ಕೆ ಕೈ ಹಾಕಿದ್ದೆ ಎಂದು ಊಹಿಸುವುದೂ ನನಗೆ ಕಷ್ಟವಾಗಿದೆ. ದಯವಿಟ್ಟು ಯಾವಾಗ, ಎಲ್ಲಿ ಯಾರೊಂದಿಗೆ ಈ ಬಗ್ಗೆ ಚರ್ಚೆ ಮಾಡಿದ್ದಿರಿ ಎಂಬುದನ್ನು ಪುನಃ ನೆನಪಿಸಿಕೊಳ್ಳಿ. ಅಲ್ಲದೆ, ಇದೆಲ್ಲಾ ಈ ಚರ್ಚೆಗೆ ನಿಜವಾಗಿ ಅವಶ್ಯ ಎಂದು ನಿಮಗೆ ಅನಿಸುತ್ತದೆಯೇ, ಯೋಚಿಸಿ.

ಇನ್ನು ಗಾಂಧಿ-ಲೋಹಿಯಾ ಪುರಾಣ ಎಂಬೆಲ್ಲಾ ನಿಮ್ಮ ಹೀಯಾಳಿಕೆಯ ಮಾತುಗಳಿಗೆ ನನ್ನ ಪ್ರತಿಕ್ರಿಯೆ ಇಷ್ಟೆ: ತಮ್ಮದೇ ಪುರಾಣ ಸೃಷ್ಟಿಸಿಕೊಳ್ಳುವ ಕಾಯಕದಲ್ಲಿರುವವರಿಗೆ ಇತರರೆಲ್ಲಾ ವಿಚಾರಗಳೂ ಪುರಾಣಗಳಾಗಿ ಕಾಣತೊಡಗುವುದು ಸಹಜವೇ ಆಗಿದೆ. ಹಾಗಾಗಿಯೇ ನಮ್ಮೆಲ್ಲರ ಪತ್ರಿಕೆಯಾಗಿದ್ದ 'ಅಗ್ನಿ'ಈಗ ನಿಮ್ಮ ಪತ್ರಿಕೆ ಮಾತ್ರವಾಗಿದೆ: ಇಲ್ಲಿ ಈಗ ಸಂಪಾದಕೀಯ ನೀತಿಗೆ ಭಿನ್ನವಾದ ಅಭಿಪ್ರಾಯಗಳಿಗೆ ಜಾಗವೇ ಇಲ್ಲ ; ಇದ್ದರೂ ಅದು ಸ್ವಸಮರ್ಥನೆಗೆ ಬಳಸಿಕೊಳ್ಳಬಹುದಾದ ಒಂದು ಸಾಧನವಾಗಿ ಮಾತ್ರ. ಲಂಕೇಶ್ ಕೂಡ ತಮ್ಮ ಕೊನೆಯ ದಿನಗಳಲ್ಲಿ ಇದೇ ಹಾದಿ ಹಿಡಿದಿದ್ದರು. ಇದು ಪತ್ರಿಕೋದ್ಯಮದ ಪಾತಾಳ ಲೋಕ. ಇಂಗ್ಲಿಷ್ ಕಲಿಕೆ ಕುರಿತ ಸರ್ಕಾರಿ ಆಜ್ಞೆಯ

ಬಗ್ಗೆ ಭಿನ್ನಾಭಿಪ್ರಾಯ ಹೊಂದಿರುವ ಯಾವುದೇ ಸುದ್ದಿಯನ್ನಾಗಲಿ, ಅಭಿಪ್ರಾಯವನ್ನಾಗಲಿ ಪ್ರಕಟಿಸದಿರಲು ಮತ್ತು ಸರ್ಕಾರಿ ಆಜ್ಞೆಯ ಪರವಾಗಿ ಅಭಿಪ್ರಾಯ ಸಂಘಟಿಸಲು ತೀರ್ಮಾನಿಸಿರುವಂತೆ ತೋರುವ 'ಪ್ರಜಾವಾಣಿ'ಯ ಲೋಕವೂ ಸದ್ಯಕ್ಕೆ ಇದೇ ಆಗಿದೆ. (ಅದರ ಸಂಪಾದಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಪುರಸ್ಕರಿಸಲು ರಾಜ್ಯ ಸರ್ಕಾರ ಮುಂದಾಗಿದೆ!) ಇದು ಇಂಗ್ಲಿಷ್ ಪ್ರತಿನಿಧಿಸುವ ಆಳುವ ಸಂಸ್ಕೃತಿಯ-self righteous ಮನಃಸ್ಥಿತಿಯ-ಅವಿಭಾಜ್ಯ ಅಂಗವೇ ಆಗಿದೆ. ಹೀಗಾಗಿ, ಇಂಗ್ಲಿಷ್ ನೀವು ಹೇಳುವಂತೆ ತಂತಾನೇ ನ್ಯೂಟ್ರಲ್ ಭಾಷೆ ಖಂಡಿತಾ ಅಲ್ಲ. ಅದಕ್ಕೆ ಮೂಗುದಾರ ಹಾಕಿಯೇ ಇಟ್ಟುಕೊಳ್ಳಬೇಕು. ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಆಜ್ಞೆಯ ವಿರುದ್ಧ ನಮ್ಮಂಥ'ಹವರ ಅಸಮಧಾನವೂ ಇಂಥ' ನಿಲುವಿನಿಂದ ಹೊರಹೊಮ್ಮಿದುದಾಗಿದೆಯೇ ಹೊರತು, ಇಂಗ್ಲಿಷ್ ಭಾಷೆಯ ಸಾರಾ ಸಗಟು ವಿರೋಧದ ನೆಲೆಯಿಂದಲ್ಲ . ಬದಲಿಗೆ, ಭಾಷಾ ಅಲ್ಪಸಂಖ್ಯಾತರ ಶಾಲೆಗಳ ಹೊರತಾಗಿ ಕರ್ನಾಟಕದ ಎಲ್ಲ ಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸಿ, ಮೂರನೇ ತರಗತಿಯಿಂದ ಅನೌಪಚಾರಿಕವಾದ ಇಂಗ್ಲಿಷ್ ಕಲಿಕೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಎಂಬುದೇ ನಮ್ಮಂತಹವರ ನಿಲುವಾಗಿದೆ. ಐದನೇ ತರಗತಿಯಿಂದ ಪಠ್ಯಾಧಾರಿತವಾದ ಇಂಗ್ಲಿಷ್ ಕಲಿಕೆ ಆರಂಭಿಸಬಹುದಾಗಿದೆ. ಇಲ್ಲೂ ಕೂಡಾ ಗಮನ, ವ್ಯಾವಹಾರಿಕ ಇಂಗ್ಲಿಷ್ ಕಡೆಗಿರಬೇಕೇ ಹೊರತು, ಈಗಿರುವಂತೆ ಸಾಹಿತ್ಯಕ ಇಂಗ್ಲಿಷ್ ಕಡೆಗಲ್ಲ.

ಇಂದು ಕರ್ನಾಟಕದಲ್ಲಿ ಮಕ್ಕಳು ಖಾಸಗಿ ಇಂಗ್ಲಿಷ್ ಶಾಲೆಗಳಲ್ಲಿ ಕನ್ನಡ ಮಾತನಾಡುವುದು ದಂಡಾರ್ಹ ಅಪರಾಧವಾಗಿದೆ; ಕೇಂದ್ರೀಯ ವಿದ್ಯಾ ಶಾಲೆಗಳಲ್ಲಿ ಕನ್ನಡದಲ್ಲಿ ಮಾತನಾಡಿದರೆ ಶಾಲೆಯಿಂದ ಹೊರಹಾಕುವ ಬೆದರಿಕೆ ಹಾಕಲಾಗುತ್ತಿದೆ. ನಾನು ಬಂದಿರುವ ಹಿಂದುಳಿದ ಸಾಮಾಜಿಕ ಹಿನ್ನೆಲೆಗೆ ಸೇರಿದ ಪ್ರೈಮರಿ ಶಾಲಾ ಮಾಸ್ತರರ, ಪೋಲಿಸ್ ಕಾನ್‌ಸ್ಟೇಬಲ್‌ಗಳ ಮಕ್ಕಳೇ ಕನ್ನಡ ಮಾಧ್ಯಮ ಎಂದರೆ 'ಥೂ'ಎಂದು (ಇದನ್ನು ನಾನು ಕಿವಿಯಾರೆ ಕೇಳಿದ್ದು) ಅಸಹ್ಯ ಪಟ್ಟುಕೊಂಡು, ತಮ್ಮ ಮಕ್ಕಳನ್ನು ಇಂಗ್ಲಿಷ್ ಕಾನ್ವೆಂಟ್‌ಗಳಿಗೆ ಕಳುಹಿಸಿ, ಅದೇ ಭವ್ಯ ಭವಿಷ್ಯದ ಕೀಲಿ ಕೈ ಎಂಬಂತೆ ಹೆಮ್ಮೆಯಿಂದ ಬೀಗುತ್ತಿರುವ ಸಾಂಸ್ಕೃತಿಕ ವಿಪಂಚನೆಗೆ ಒಳಗಾಗಿದ್ದಾರೆ. ಇಂಥಹ ವಿಷಮ ಸ್ಥಿತಿಯಲ್ಲಿ, ಕನ್ನಡ ಮಾಧ್ಯಮ ಜಾರಿ ಬಗ್ಗೆ ಒಂದು ಮಾತೂ ಆಡದೆ, ಜಾಗತೀಕರಣದ ಪರಿಣಾಮಗಳ ಹೆಸರಲ್ಲಿ ಇನ್ನು ಮುಂದೆ ಕನ್ನಡದಿಂದ ಬದುಕು ನಡೆಯುವುದಿಲ್ಲ ಎಂದು ಹೇಳತೊಡಗಿರುವವರು, ಇಂಥ ವಿಪಂಚನೆಯ ಪೋಷಕರೇ ಆಗಿದ್ದಾರೆ ಎನ್ನದೆ ಇನ್ನೇನನ್ನಬೇಕು? ಇಂತಹವರಲ್ಲಿ ಎಷ್ಟು ಜನರು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದ ಶಾಲೆಗಳಿಗೆ ಕಳಿಸಿ, ಕನ್ನಡ ಶಾಲೆಗಳ ಮಕ್ಕಳ 'ದುಃಸ್ಥಿತಿ'ಯ ಬಗ್ಗೆ ಈ ಮಾತುಗಳನ್ನು ಆಡುವ ನೈತಿಕ ಹಕ್ಕನ್ನು ಪಡೆದಿದ್ದಾರೆ ಎಂಬುದೂ

ಪರಿಶೀಲನಾರ್ಹವಾಗಿದೆ.

ಅಲ್ಲದೆ, ಇಂತಹವರು ಇಂಗ್ಲಿಷ್‌ನಿಂದಲೇ ತಮ್ಮ ನಿಜವಾದ ಮುಕ್ತಿ ಎಂದು ಭಾವಿಸಿದ್ದರೆ, ಹಳ್ಳಿ, ಜಾತಿ, ಕನ್ನಡ ಸಾಹಿತಿ ಮತ್ತು ಬುದ್ಧಿಜೀವಿಗಳ 'ಅಪ್ರಾಮಾಣಿಕತೆ' ಇತ್ಯಾದಿಗಳ ಮರೆಯಲ್ಲಿ ನಿಂತು ಕನ್ನಡದ ಕಡೆ ಕಲ್ಲೆಸೆಯುವುದನ್ನು ನಿಲ್ಲಿಸಿ, ಇನ್‌ಫೋಸಿಸ್‌ನ ನಾರಾಯಣ ಮೂರ್ತಿಗಳಂತೆ ನೇರವಾಗಿ ಮತ್ತು ಪ್ರಾಮಾಣಿಕವಾಗಿ ಕರ್ನಾಟಕದ ಬಡ ಜನರ ಮುಕ್ತಿಗಾಗಿ ಇಂಗ್ಲಿಷನ್ನು ಒಂದನೇ ತರಗತಿಯಿಂದ ಒಂದು ಭಾಷೆಯಾಗಿ ಮಾತ್ರವಲ್ಲ, ಕಡ್ಡಾಯ ಶಿಕ್ಷಣ ಮಾಧ್ಯಮವನ್ನಾಗಿ ಘೋಷಿಸಲು ಸರ್ಕಾರವನ್ನು ಒತ್ತಾಯಿಸುವುದರ ಮೂಲಕ ತಮ್ಮ ಪ್ರಾಮಾಣಿಕತೆಯನ್ನು ಮೆರೆಯುವುದೊಳಿತು. ಆಗ ಮಾತ್ರ ಇಂತಹವರ ಮಕ್ಕಳೂ, ಈಗಾಗಲೇ ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಿಗೆ ಕಳುಹಿಸಿ ಜಾಗತೀಕರಣದ ಫಲಗಳನ್ನೆಲ್ಲಾ ತಾವೇ ಹೊಟ್ಟೆ ತುಂಬಾ ಕೂತುಣ್ಣುತ್ತಾ, ಇತರರೆಲ್ಲಿ ತಮ್ಮ ಈ ಪಾಲನ್ನು ಕಬಳಿಸಲು ಬರುವರೋ ಎಂಬ ಆತಂಕದಿಂದ ಸರ್ಕಾರದ ಸದರಿ ಕ್ರಮವನ್ನು ವಿರೋಧಿಸುತ್ತಿರುವವರೆಂದು ಹೇಳಲಾದ, 'ಬಡವರ ಮತ್ತು ಹಿಂದುಳಿದವರ ವಿರೋಧಿಗಳ' ಮಕ್ಕಳ ಸರಿಸಮಕ್ಕೆ ಬಂದಾರು. ಇಂತಹ ಸ್ವಯಂಘೋಷಿತ ಸಾಮಾಜಿಕ ನಾಯಕರಿಗೆ, ಈ ರಾಷ್ಟ್ರದ ಅತ್ಯುತ್ತಮ ವಿಜ್ಞಾನಿ ಹಾಗೂ ಶಿಕ್ಷಕ ಪ್ರೊ:ಸಿ. ಎನ್. ಆರ್. ರಾವ್ ಅವರ 'ಮೊದಲು ಕನ್ನಡ ಚೆನ್ನಾಗಿ ಕಲಿಸಿ, ನಂತರ ಇಂಗ್ಲಿಷ್ ಕಲಿಸೋಣ'ಎಂಬ ಮಾತುಗಳು ಸಹಜವಾಗಿಯೇ, ಶಿಕ್ಷಣ ಪಂಡಿತರ ತಿರಸ್ಕಾರಾರ್ಹ ಮಾತುಗಳಾಗಿ ಕೇಳಿಸುತ್ತವೆ. ಆದರೆ ತಮ್ಮ ಪವಾಡ ಸದೃಶ ಪ್ರಯತ್ನ ಹಾಗೂ ಗಾಳಿ ಬೀಸುವ ದಿಕ್ಕನ್ನು ಕಂಡುಕೊಳ್ಳುವ ಜಾಣ್ಮೆಯಿಂದಾಗಿ ಆಯ್ದ ಹಲವರ ಪಾಲಿಗೆ ಮಾತ್ರ ದಕ್ಕಬಲ್ಲ ಅಪಾರ ಸಂಪತ್ತಿನ ಗುಡ್ಡೆಗಳಿಂದ ಜನರನ್ನು ಬೆರಗುಗೊಳಿಸಿರುವ ಮಾಹಿತಿ ತಂತ್ರಜ್ಞಾನದ ಬಹು ಯಶಸ್ವಿ ಜಾಗತಿಕ ಕಂಟ್ರಾಕ್ಟರ್ ಆಗಿರುವ ನಾರಾಯಣ ಮೂರ್ತಿಯವರೇ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿತವರಲ್ಲ ಎಂಬ ಸತ್ಯ ಮಾತ್ರ ಯಾರಿಗೂ ಬೇಕಾಗಿಲ್ಲ !

ಯೋಚಿಸಿ ಚಲನ ವಲನಗಳನ್ನು ಆಯೋಜಿಸಿಕೊಳ್ಳುವ ಮತ್ತು ಅಂಥಹ ಚಲನ ವಲನಗಳಲ್ಲಿ ಅಂಗರಕ್ಷಕರೊಂದಿಗೇ ಶಸ್ತ್ರಸಜ್ಜಿತವಾಗಿ ಇರಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿರುವ ನೀವು, ಸಮಾಜದೊಂದಿಗೆ ಸ್ವಚ್ಛಂದವಾಗಿ ಬೆರೆಯುವ ಭಾಗ್ಯ ಪಡೆದಿರುವ ನನಗೆ ಮುಕ್ತಕತೆಯ, ಈ ಕ್ಷಣದ ಗಾಳಿಯ ಪರಿಮಳದ ಬಗ್ಗೆ ಉಪದೇಶ ಮಾಡುವುದು ಉಚಿತವೆನಿಸುವುದಿಲ್ಲ. ಅಲ್ಲದೆ ನನಗೆ ಜನಪರ, ಜೀವಪರ, ಪ್ರಗತಿಪರ ಎನ್ನುವ ಶಬ್ದಗಳ ಬಗೆಗೇ ಉತ್ಸಾಹವಿಲ್ಲದಾಗಿದೆ, ಈ ಶಬ್ದಗಳನ್ನು ಲೀಲಾಜಾಲವಾಗಿ ಬಳಸುವ ಜನರ ಜಿಗುಪ್ಸೆಕರ ಪುಢಾರಿಗಿರಿಯನ್ನು ಕಂಡು. ಆದುದರಿಂದ ನೀವು ಪ್ರಸ್ತಾಪಿಸುವ ಜನಪರತೆಯ ದ್ವಂದ್ವ ಹಾಗೂ ಬುದ್ಧಿಜೀವಿಗಳ ಮೂಲಭೂತವಾ

ಮುಂತಾದುವು ನನ್ನ ಮಟ್ಟಿಗೆ ಅಪ್ರಸ್ತುತವೇ ಆಗಿದೆ. ಬಹಳ ಜನ ಹೇಳುವುದೇ ಸತ್ಯ ಎಂದು ನಂಬುವುದು ಅವಿವೇಕದ ಪರಮಾವಧಿಯೆಂದೇ ನಾನು ತಿಳಿದವನು. ಅಂಥಹ ನಂಬಿಕೆ ಪ್ರಜಾಪ್ರಭುತ್ವದ ಮೌಲ್ಯವನ್ನು ತಲೆ ಎಣಿಕೆಯ ಮಟ್ಟಕ್ಕೆ ಇಳಿಸುವಂತಹದು. ಅಲ್ಲದೆ, ಈಗ ಮಾಧ್ಯಮಗಳು ಮುಟ್ಟಿರುವ ಮಟ್ಟ ಯಾವುದಕ್ಕೆ ಬೇಕಾದರೂ ಬಹುಮತವನ್ನು 'ಸೃಷ್ಟಿ'ಸಬಲ್ಲಷ್ಟು ರಾಜಕೀಯಗೊಂಡಿವೆ. ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಕ್ರಮವನ್ನು ವಿರೋಧಿಸುತ್ತಿರುವವರನ್ನು ಇಂಗ್ಲಿಷ್ ಕಲಿಕೆಯನ್ನೇ ವಿರೋಧಿಸುತ್ತಿರುವವರನ್ನು ಎಂದು ಬಿಂಬಿಸುತ್ತಿರುವುದು ಈ ರಾಜಕಾರಣದ ಒಂದು ಭಾಗವೇ ಆಗಿದೆ.

ಆದುದರಿಂದ ನನ್ನ ಸುತ್ತಲಿನ ಜನಗಳೊಂದಿಗೆ ಬಾಳಿದ ಅನುಭವ ಕಲಿಸಿದ ಪಾಠಗಳಷ್ಟೇ ನನಗೆ ಸತ್ಯ. ನನ್ನ ಸುತ್ತಮುತ್ತಲಿನ ಆಪ್ತವಲಯದಲ್ಲಿ ಕನ್ನಡ ಮಾಧ್ಯಮದಲ್ಲೇ ಓದಿ ಉನ್ನತ ಶಿಕ್ಷಣದಲ್ಲಿರುವ ಮತ್ತು ಉನ್ನತ ಸ್ಥಾನ ಗಳಿಸಿರುವ ಉತ್ಸಾಹೀ ಮಕ್ಕಳ ದೊಡ್ಡ ದಂಡೇ ನನ್ನ ಕಣ್ಮುಂದೆ ಇರುವಾಗ, ನಿಮ್ಮ 'ಜಾಗತೀಕರಣವನ್ನು ಪಳಗಿಸುವ' ಸ್ವಘೋಷಿತ ಸಾಮರ್ಥ್ಯವನ್ನು ನಂಬಿಕೊಂಡು ಏಕೆ ಕೂಡಲಿ? ಒಂದೇ ಮನೆಯಲ್ಲಿರುವ ಇಬ್ಬರು ಇಂಜಿನಿಯರ್ ಮಕ್ಕಳ ಪೈಕಿ ತಿಂಗಳಿಗೆ ಒಂದು ಲಕ್ಷ ರೂಪಾಯಿಗಳನ್ನು ಸಂಬಳವಾಗಿ ತರುವ ಸಾಫ್ಟ್‌ವೇರ್ ಇಂಜಿನಿಯರ್ ಮಗನನ್ನು ಹೆಚ್ಚು ಪ್ರೀತಿಸುವಂತೆ, ಉಪಚರಿಸುವಂತೆ, ಗೌರವಿಸುವಂತೆ ಮಾಡುವ ವಿಕ್ಷಿಪ್ತ ತಾಯಂದಿರನ್ನು ಸೃಷ್ಟಿಸುವ ಮತ್ತು ಒಳ್ಳೆಯ 'ಮ್ಯಾನೇಜ್‌ಮೆಂಟ್' (ಇದಕ್ಕೆ ಕನ್ನಡದಲ್ಲಿ ಸೂಕ್ತ ಪದ 'ಪುಢಾರಿಗಿರಿ') ಮೂಲಕ ಒಂದೆರಡು ತಿಂಗಳುಗಳಲ್ಲೇ ಕೋಟಿ ರೂಪಾಯಿ ಸಂಪಾದನೆ ಮಾಡಬಲ್ಲ ರೀತಿಯಲ್ಲಿ ದುಡಿಮೆಯ ವಿನ್ಯಾಸವನ್ನೇ ಬದಲಿಸಿರುವ ಜಾಗತೀಕರಣವನ್ನು, ಕೊಂಬು ಹಿಡಿಯದೆ ಬಾಲ ತಿರುಚಿ ತಹಬಂದಿಗೆ ತರುತ್ತೇನೆನ್ನುವ ನಿಮ್ಮ ವಾದ ನನಗೆ ಹಾಸ್ಯಾಸ್ಪದವಾಗಿ ಕಂಡಿದೆ. ಎಷ್ಟು ಹಾಸ್ಯಾಸ್ಪದ ಎಂದರೆ, ಮೊನ್ನೆ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಯೊಬ್ಬರು ಶಿವಮೊಗ್ಗದಲ್ಲಿ, ಇಂಗ್ಲಿಷ್ ಕಲಿಕೆ ಕುರಿತ ಸರ್ಕಾರದ ಆಜ್ಞೆಯನ್ನು ವಿರೋಧಿಸುತ್ತಿರುವವರ ಮೇಲೆ ನಿಮ್ಮಷ್ಟೇ ಆವೇಶದಿಂದ ಹರಿಹಾಯುತ್ತಾ, ಅಂಬೇಡ್ಕರ್ ಇಂಗ್ಲಿಷ್ ಕಲಿಯದಿದ್ದರೆ ಸಂವಿಧಾನ ರಚಿಸಲು ಸಾಧ್ಯವಾಗುತ್ತಿತ್ತೇ ಎಂದು ಕೇಳಿದಷ್ಟು; ಅಂಬೇಡ್ಕರ್ ಮೊದಲನೇ ತರಗತಿಯಿಂದಲೇ ಇಂಗ್ಲಿಷ್ ಕಲಿತಿದ್ದ ಹಾಗೆ! ಹಾಗೆ ನೋಡಿದರೆ, ಒಂದನೇ ತರಗತಿಯಿಂದಲೇ ಅಂಬೇಡ್ಕರ್ ಇಂಗ್ಲಿಷ್ ಕಲಿಯುವ ಪರಿಸ್ಥಿತಿ ಇದ್ದಲ್ಲಿ, ಅವರು ಇಷ್ಟೊಂದು ವ್ಯಾಪಕಾರ್ಥದ ಸಮಾನತೆಯ ತತ್ವವನ್ನು ಆಧರಿಸಿದ ಸಂವಿಧಾನವನ್ನು ರಚಿಸುತ್ತಿದ್ದರೆಂಬ ಬಗ್ಗೆ ನನಗೆ ಗಂಭೀರವಾದ ಅನುಮಾನಗಳಿವೆ.

ಕೊನೆಯದಾಗಿ: ನೀವು ನನ್ನ ಓದಿಗಾಗಿ ಹಲವು ಅರ್ಥಶಾಸ್ತ್ರಜ್ಞರ ಹೆಸರುಗಳನ್ನು

ಶಿಫಾರ್ಸು ಮಾಡಿದ್ದೀರಿ. ಹಾಗೇ, ನಾನೂ ನನ್ನ ವಾದಕ್ಕೆ ಪೂರಕವಾಗಿ, ನಿಮಗೆ ನ
ಒಂದು ಪಟ್ಟಿಯನ್ನು ಕೊಡಬಲ್ಲೆ. ಆದರೆ ಸದ್ಯಕ್ಕೆ ನೀವೇ ನನಗೆ ಶಿಫಾರ್ಸು ಮಾಡಿರು
ಅಮಾರ್ತ್ಯಸೇನರು ಇಂದಿನ ಭಾರತದ ಬಗ್ಗೆ ಆಡಿರುವ ಒಂದು ಮಾತನ್ನಷ್ಟೇ ನಿಮ
ಗಮನಕ್ಕೆ ತರುತ್ತಿದ್ದೇನೆ: "ಇಂದು ಅರ್ಧ ಭಾರತ ಕ್ಯಾಲಿಫೋರ್ನಿಯಾ ಆಗು
ಆತುರದಲ್ಲಿದ್ದರೆ, ಇನ್ನರ್ಧ ಇಥಿಯೋಪಿಯಾ ಆಗುವ ದುರಂತವನ್ನೆದುರಿಸುತ್ತಿದೆ"

-ಡಿ.ಎಸ್.ನಾಗಭೂಷಣ

ಆಧುನಿಕ ಕನ್ನಡ ಸಾಹಿತ್ಯದ ತಾತ್ವಿಕ ಸಂವಾದಗಳು

ಕಳೆದ ಐವತ್ತು ವರ್ಷಗಳಲ್ಲಿ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ, ನವ್ಯೋತ್ತರ ಮುಂತಾದ ಅವಸ್ಥಾಂತರಗಳನ್ನು ಕಂಡಿರುವ ಕನ್ನಡ ಸಾಹಿತ್ಯ, ಈ ಅವಸ್ಥಾಂತರಗಳನ್ನು ಕಂಡಿರುವುದೇ ಅನೇಕ ತಾತ್ವಿಕ ಸಂವಾದಗಳನ್ನು ಹಾದು ಹೋಗುವ ಮೂಲಕ. ಈ ಸಂವಾದಗಳು ಕೆಲವೊಮ್ಮೆ, ನಾನು ಅವಸ್ಥೆಗಳು ಎಂದು ಕರೆದಿರುವ ನಿರ್ದಿಷ್ಟ ಸಾಹಿತ್ಯ ಪಂಥಗಳೊಳಗೇ ನಡೆದಿದ್ದರೆ, ಇನ್ನು ಕೆಲವು ಸಾಹಿತ್ಯ ಪಂಥಗಳ ನಡುವೆ ನಡೆದಿವೆ. ಕೆಲವು, ಗಂಭೀರ ಪಂಡಿತ ವಾಗ್ವಾದಗಳಾಗಿ ಸಾಹಿತ್ಯದೊಳಗಿನವರಿಗೇ ಸೀಮಿತವಾಗಿ, ಸಾಹಿತ್ಯ ಸ್ವರೂಪದಲ್ಲಿನ ಆಂತರಿಕ ಬದಲಾವಣೆಗಳಿಗೆ ಕಾರಣವಾಗಿದ್ದರೆ; ಇನ್ನು ಕೆಲವು, ಸಾಹಿತ್ಯದ ಒಡಲಾದ ಸಮಾಜವು ಸಾಹಿತ್ಯಕ್ಕೆ ಪ್ರತಿಕ್ರಿಯಿಸುವ ರೀತಿ ನೀತಿಗಳಿಂದಾಗಿ, ಸಾರ್ವತ್ರಿಕವೆನ್ನಬಹುದಾದ ಸಂವಾದಗಳಾಗಿ ಒಡಮೂಡಿವೆ. ಇಂಥ ಸಂವಾದಗಳು ಕೂಡಾ ಹಲವು ಬಾರಿ ಸಾಹಿತ್ಯದ ದಿಕ್ಕು ದೆಸೆಗಳನ್ನು ಪಲ್ಲಟಗೊಳಿಸಿದ ಉದಾಹರಣೆಗಳೂ ನಮ್ಮಲ್ಲಿವೆ. ಹೀಗೆ ಸಾಹಿತ್ಯ ಚಳುವಳಿಯೊಳಗೆ, ಚಳುವಳಿಗಳ ನಡುವೆ ಹಾಗೂ ಸಾಹಿತ್ಯ ಮತ್ತು ಸಮಾಜಗಳ ನಡುವೆ ನಡೆದ ಅನೇಕ ನೆಲೆಗಳ ವಾಗ್ವಾದ-ಸಂವಾದಗಳೇ ಕನ್ನಡ ಸಾಹಿತ್ಯವನ್ನು ಮುನ್ನಡೆಸಿದ ಚೈತನ್ಯಶಕ್ತಿಗಳಾಗಿವೆ. ಇವು, ಸೃಜನವಾವುದು, ಸೃಜನೇತರವಾವುದು ಎಂದು ಬೇರ್ಪಡಿಸಲಾಗದಷ್ಟು ಅಖಂಡವಾಗಿ ಪರಸ್ಪರ ಬೆರೆತು, ಕನ್ನಡ ಸಾಹಿತ್ಯ ಸಂಕಥನವನ್ನು ಕಟ್ಟಿವೆ.

ಸಾಹಿತ್ಯದ ಶಾಸ್ತ್ರೀಯ ವಿದ್ಯಾರ್ಥಿಯಲ್ಲದ ಹಾಗೂ ಸಾಹಿತ್ಯ ಚಟುವಟಿಕೆಯನ್ನು ಒಂದು ಹವ್ಯಾಸವನ್ನಾಗಿ ಮಾತ್ರ ಮಾಡಿಕೊಂಡ ನಾನು ಬಹುಪಾಲು ಈ ಸಂಕಥನದ ಕಟ್ಟೋಣವನ್ನು ಹೊರಗಿನಿಂದ ನೋಡಿದ್ದೇ ಹೆಚ್ಚು. ಹಾಗಾಗಿ ನನ್ನ ಗಮನ, ಆಸಕ್ತಿ ಏನಿದ್ದರೂ ಸಾಹಿತ್ಯ ಪಂಥಗಳೊಳಗೇ ಸಾಹಿತ್ಯ ವಿಶಿಷ್ಟವಾದ ಪಾರಿಭಾಷಿಕತೆಯೊಂದಿಗೆ ನಡೆದ ಪಂಡಿತ ವಾಗ್ವಾದಗಳಿಗಿಂತ ಹೆಚ್ಚಾಗಿ, ವಿವಿಧ ಸಾಹಿತ್ಯಪಂಥಗಳ ನಡುವೆ ಮತ್ತು ಸಾಹಿತ್ಯ ಮತ್ತು ಸಮಾಜದ ನಡುವೆ ನಡೆದ ಸಂವಾದಗಳ ಕಡೆಗೇ ಇರುವುದೂ ಸಹಜವಾಗಿದೆ. ಹಾಗೆ ನೋಡಿದರೆ ಈ ಒಳ-ಹೊರಗು ಎಂಬ ಕಲ್ಪನೆಗಳನ್ನೇ, ವಸ್ತು-ರೂಪಗಳ ಸಮನ್ವಯದಲ್ಲಿ ಸಾಹಿತ್ಯ ಏಕೀಕರಿಸುತ್ತದೆ. ಹಾಗಾಗಿ ಇಂತಹ ಚರ್ಚೆಯಲ್ಲಿ ಹೊರಗಿನಿಂದ ನೋಡಿದ್ದು ಮತ್ತು ಒಳಗಿನಿಂದ ನೋಡಿದ್ದು ಎಂಬುದೆಲ್ಲ ಒಂದೇ ನೋಟದ ಸಾಪೇಕ್ಷ ನೆಲೆಗಳು ಮಾತ್ರ ಎಂಬ ಅರಿವಿನೊಂದಿಗೆ ಮುಂದಿನ ಮಾತುಗಳನ್ನು ಆಡುತ್ತೇನೆ. ಜೊತೆಗೆ ಈ ವಿಷಯವು ಹತ್ತು ಪಿಎಚ್‌ಡಿ-ಸಂಶೋಧನ ಪ್ರಬಂಧಗಳಿಗೆ

ಸಾಕಾಗುವಷ್ಟು ಆಳ-ಅಗಲಗಳನ್ನು ಹೊಂದಿರುವುದರಿಂದ, ಇಂತಹ ಗೋಷ್ಠಿಯ ಒಂದು ಭಾಷಣದಲ್ಲಿ ಅದರ ಸ್ಥೂಲರೂಪವನ್ನಷ್ಟೇ ಪರಿಚಯ ಮಾಡಿಕೊಡಲು ಸಾಧ್ಯ ಎಂಬ ಮಾತನ್ನು ಇಲ್ಲಿ ಸೇರಿಸಬಯಸುವೆ.

ನನ್ನ ಈ ಪ್ರಾಸ್ತಾವಿಕ ಮಾತುಗಳ ವಿಷದೀಕರಣದಂತೆಯೇ ಇದೆ, ಆಧುನಿಕ ಕನ್ನಡದ ಮೊದಲ ತಾತ್ವಿಕ ಸಂವಾದ ಎಂದು ಗುರುತಿಸಬಹುದಾದ, 'ಶೂದ್ರತಪಸ್ವಿ' ನಾಟಕ ರಚನೆ ಕುರಿತಾದ ಮಾಸ್ತಿ-ಕುವೆಂಪು ಸಂವಾದ. ಮತೀಯ ವಾಗ್ವಾದವಾಗಿ ಕೆರಳಬಹುದಾಗಿದ್ದ ಈ ಸಂವಾದವನ್ನು ಮಾಸ್ತಿ, 'ಕಾಲಧರ್ಮವನ್ನು ಹೇಳುವುದಕ್ಕೆ ಹೊಸ ಕಥೆಯನ್ನು ಹೇಳುವುದು ಕ್ಷೇಮ' ಎಂಬ ಕ್ಷೇಮವಾದಿ ಚಿಂತನೆಯ ಮೂಲಕ 'ಹಳೆಯದನ್ನು ಅದು ಎಷ್ಟೇ ವಕ್ರದೃಷ್ಟಿಯಿಂದ ಕೂಡಿದ್ದರೂ ತಿದ್ದಲು ಹೋಗಬಾರದು' ಎಂದು ತಾತ್ವೀಕರಿಸಲು ಪ್ರಯತ್ನಿಸಿದರು. ಆದರೆ ಈ ಸಂವಾದದಲ್ಲಿ ಅಂತರ್ಗತವಾಗಿದ್ದ ಲೇಖಕರ ಕ್ಷೇಮ ಸಮಾಚಾರದ ಧ್ವನಿಯಿಂದ ಕ್ರುದ್ಧರಾದಂತೆ ತೋರಿದ ಕುವೆಂಪು, ತಾವು ಹೇಳುತ್ತಿರುವುದು ಮುಚ್ಚಿಹಾಕಲ್ಪಟ್ಟಿದ್ದ ನಿತ್ಯಸತ್ಯವನ್ನೇ ಹೊರತು, ಹೊಸ ಕಾಲ ಧರ್ಮವನ್ನಲ್ಲ ಎಂದು ಉತ್ತರಿಸುವ ಮೂಲಕ, ನಾವು ನಮ್ಮ ಸಂಸ್ಕೃತಿ ಕುರಿತು ತಳೆಯಬೇಕಾದ ಹೊಸ ಎಚ್ಚರದ ನೋಟದ ಕಡೆ ಎಲ್ಲರ ಗಮನ ಸೆಳೆದರು. ಇದಕ್ಕಾಗಿ ಅವರು ಪ್ರತಿಕೃತಿ ದೃಷ್ಟಿಯ ಬದಲಾಗಿ ಪ್ರತಿಮಾ ದೃಷ್ಟಿಯ ಪ್ರತಿಪಾದನೆ ಮಾಡಿದರು. ಈ ದೃಷ್ಟಿ ಪ್ರದಾನದಿಂದಾಗಿಯೇ, ಆಧುನಿಕ ಕನ್ನಡದ ಎರಡು ಹೊಸ ಎತ್ತರಗಳೆನಿಸಿರುವ 'ಮಲೆಗಳಲ್ಲಿ ಮದುಮಗಳು 'ಹಾಗೂ 'ಸ್ಮಶಾನ ಕುರುಕ್ಷೇತ್ರಂ' ಕನ್ನಡದ ಮನಸ್ಸಿಗೆ ದಕ್ಕಲು ಸಾಧ್ಯವಾದದ್ದು ಕೂಡಾ.

೧೯೪೪ರಲ್ಲಿ ಆರಂಭವಾಗಿ ಸಾಹಿತ್ಯ ಪರಿಧಿಯೊಳಗೆ ಕ್ರಿಯಾಶೀಲವಾಗಿದ್ದ ಈ ಸಂವಾದ, ಸಾಹಿತ್ಯದ ಹೊರಗೆ ಸ್ಫೋಟಗೊಂಡಿದ್ದು ೧೯೭೦ರ ಬಸವಲಿಂಗಪ್ಪನವರ ಬೂಸಾ ಪ್ರಕರಣದಲ್ಲಿ. ಈ ಪ್ರಕರಣದ ಅನೇಕ ಪರಿಣಾಮಗಳ ಪೈಕಿ ಒಂದಾದ, ಕರ್ನಾಟಕ ಲೇಖಕರ ಹಾಗೂ ಕಲಾವಿದರ ಒಕ್ಕೂಟದ ಉದ್ಘಾಟನಾ ಭಾಷಣದಲ್ಲಿ(೧೯೭೪)ಕುವೆಂಪು ತಮ್ಮವಾದವನ್ನು ಸಾಮಾನ್ಯರ ಪರಿಭಾಷೆಯಲ್ಲಿ ಮಂಡಿಸಿದ್ದು ಹೀಗೆ: ' ನಿಮ್ಮ ಬಳಿಯಿರುವ ಚಿನ್ನದ ಆಭರಣಗಳನ್ನು ಹಳೆಯ ಕಾಲದವೆಂದು ಬಿಸಾಡಿ ಬಿಡುವಿರಾ? ಅವನ್ನು ಕರಗಿಸಿ ಹೊಸ ಕಾಲಕ್ಕೆ ತಕ್ಕಂತೆ ಅವುಗಳನ್ನು ವಿನ್ಯಾಸ ಮಾಡಿಸಿಕೊಳ್ಳುವಂತೆ, ನಮ್ಮ ಪ್ರಾಚೀನ ಕೃತಿಗಳಲ್ಲಡಗಿರುವ ನಿತ್ಯಸತ್ಯಗಳನ್ನು ಹೊಸ ಕಾಲದ ಅವಶ್ಯಕತೆಗಳಿಗೆ ತಕ್ಕಂತೆ ಪುನರ್ನಿರೂಪಿಸಿಕೊಳ್ಳುವುದು ವಿವೇಕವೆನ್ನಿಸಿಕೊಳ್ಳುತ್ತದೆ'.ಇದೇ ಸಂದರ್ಭದಲ್ಲಿ ಕುವೆಂಪು, ತಮ್ಮ ಸಾಹಿತ್ಯದಲ್ಲಿಯೂ ಸಾಕಷ್ಟು ಬೂಸಾ ಇದೆ ಎಂದು ಒಪ್ಪಿಕೊಂಡದ್ದೂ ಇಲ್ಲಿ ದಾಖಲಾರ್ಹವಾಗಿದೆ!

ಸಂಸ್ಕೃತಿಯನ್ನು ಆಧುನೀಕರಿಸುವ ಮೂಲಕ, ಪರಂಪರೆಯೊಂದಿಗೆ

ನಿರಂತರತೆಯನ್ನು ಕಾಪಾಡಿಕೊಳ್ಳುವ ಈ ಕುವೆಂಪು ದರ್ಶನ, ಮಾಸ್ತಿ ಮತ್ತು ಅವರ ಸಹಚರರ ಮೇಲೆ ಏನು ಪರಿಣಾಮ ಬೀರಿತೋ ತಿಳಿಯದು. ಏಕೆಂದರೆ ಅವರು, ಈ ವಾದವನ್ನು ಮುಂದುವರಿಸಲಿಲ್ಲ. ಆದರೆ ತಾವು ಒಡ್ಡಿಕೊಂಡ-ಮುಖ್ಯವಾಗಿ ಅಸ್ತಿತ್ವವಾದ, ನಶ್ವರವಾದ, ರಚನಾವಾದ ಮುಂತಾದ- ಹೊಸ ವೈಚಾರಿಕ ದರ್ಶನಗಳ ಉತ್ಸಾಹದಲ್ಲಿ, ಪ್ರಾಚೀನ ಕೃತಿಗಳ ಬಗ್ಗೆ ತಿರಸ್ಕಾರವಿಲ್ಲದಿದ್ದರೂ ಅಸಡ್ಡೆಯನ್ನು ಬೆಳೆಸಿಕೊಂಡು, ಪರಂಪರೆಯೊಂದಿಗೆ ಉದ್ದೇಶಪೂರ್ವಕವಾಗಿಯೋ ಎಂಬಂತೆ ಒಂದು disconnect ಸ್ಥಾಪಿಸಿಕೊಂಡಿದ್ದ ಅನೇಕ ನವ್ಯರು (ಇವರ ನಾಯಕತ್ವ ವಹಿಸಿದ್ದವರು ಹೆಚ್ಚಾಗಿ ಇಂಗ್ಲಿಷ್ ಅಧ್ಯಾಪಕರೇ ಎಂಬುದು ಇದಕ್ಕೆ ಕಾರಣವಿರಬಹುದು) ಒಕ್ಕೂಟದ ಅಡಿಯಲ್ಲಿ ಕುವೆಂಪು ಅವರ 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ'ಎಂಬ ಈ ಭಾಷಣವನ್ನು ತುಂಬು ಅಭಿಮಾನದಿಂದ ಕೂತು ಕೇಳಿ ಅನುಮೋದಿಸಿದ್ದು ಆಧುನಿಕ ಕನ್ನಡ ಸಾಹಿತ್ಯ ಲೋಕದ ತಾತ್ವಿಕ ಸಂವಾದಗಳ ಚರಿತ್ರೆಯಲ್ಲಿ ಒಂದು ಸೋಜಿಗದ ಕ್ಷಣವೇ ಹೌದು!

ಸೋಜಿಗವೇಕೆಂದರೆ, ನವ್ಯ ಸಾಹಿತ್ಯವು ನವೋದಯ ಸಾಹಿತ್ಯದೊಂದಿಗೆ ನಡೆಸಿದ ಸಂವಾದದಲ್ಲಿ, ಇವರಲ್ಲನೇಕರು ಕುವೆಂಪು ಪ್ರತಿನಿಧಿಸುತ್ತಿದ್ದ ನವೋದಯ ಪಂಥದ ಬಗ್ಗೆ ಅನೇಕ ರೀತಿಯ ಕುರುಡುಗಳನ್ನು ಪ್ರದರ್ಶಿಸಿದ್ದರು. ಹಾಗೇ, ಬದುಕು ಮತ್ತು ಸಾಹಿತ್ಯ ಕುರಿತ ಆಧುನಿಕ ನೋಟಗಳೊಂದಿಗೆ ಕನ್ನಡ ಸಾಹಿತ್ಯವನ್ನು ಸಂಪನ್ನಗೊಳಿಸುವ ಪ್ರಯತ್ನದಲ್ಲಿದ್ದರು. ಪ್ರತಿಕ್ರಿಯಾತ್ಮಕ ರೂಪದ ಈ ಸಂವಾದದ ಮೂರು ನೋಟಗಳನ್ನು ಇಲ್ಲಿ ಪ್ರಸ್ತಾಪಿಸ ಬಯಸುತ್ತೇವೆ. ಒಂದು, ನವ್ಯಪಂಥದ ಗುರು ಅಡಿಗರು,'ಗೋಕಾಕರು ಕವಿಯಾದರೆ ನಾನು ಕವಿಯೇ ಅಲ್ಲ' ಎಂದು ಘೋಷಿಸಿದ್ದು.ತತ್ವದಲ್ಲಿ ನವೋದಯವೇ ಆಗಿದ್ದು ರೂಪದಲ್ಲಿ ಮಾತ್ರ ನವ್ಯವಾಗತೊಡಗಿ, ನವ್ಯಪಂಥವನ್ನು hijack ಮಾಡುವವರಾಗಿ ಕಂಡ ಗೋಕಾಕರ ಕಾವ್ಯದ ಮೇಲೆ ಹೀಗೆ ದಾಳಿ ಮಾಡುವ ಮೂಲಕ ಅಡಿಗರು ನವೋದಯ ಸಾಹಿತ್ಯ ಮೀಮಾಂಸೆಗೆ ಸೆಡ್ಡು ಒಡೆದು ನಿಂತರು. ಸ್ವತಃ ಸತ್ವಶಾಲಿ ಕವಿಯಾಗಿದ್ದ ಅಡಿಗರು ಕುವೆಂಪು ಅವರ ಸಾಹಿತ್ಯ ವ್ಯಕ್ತಿತ್ವದಲ್ಲಿ ಸತ್ವ ಕಾಣಬಲ್ಲವರಾಗಿದ್ದರಿಂದಲೇ, ಕುವೆಂಪು ಬಿಟ್ಟು ಗೋಕಾಕರನ್ನು ತಮ್ಮ ಗುರಿಯಾಗಿಟ್ಟುಕೊಳ್ಳುವ ಜಾಣ್ಮೆ ತೋರಿದರು. ಆದರೆ ಕೆಲವು ಕುವೆಂಪು ಅಭಿಮಾನಿಗಳು ಕುಂಬಳಕಾಯಿ ಕಳ್ಳ ಎಂದೊಡನೆ ಹೆಗಲು ಮುಟ್ಟಿ ನೋಡಿಕೊಂಡಂತೆ, ಅಡಿಗರು ಈ ಮಾತನ್ನು ಕುವೆಂಪು ಕುರಿತೇ ಆಡಿದ್ದು ಎಂದು ಪ್ರಚಾರ ಮಾಡಿ ವಾತಾವರಣವನ್ನು ಬಿಗುಗೊಳಿಸಿದರು. (ವಾಸ್ತವವಾಗಿ ಅಡಿಗರು, ಕುವೆಂಪು ಅವರ 'ರಾಮಾಯಣ ದರ್ಶನಂ' ಕೃತಿಯನ್ನು ಕಾವ್ಯವಲ್ಲ ಎಂದದ್ದುಂಟು). ಇದರಿಂದ ಪ್ರಭಾವಿತರಾದರೆಂಬಂತೆ, ಕುವೆಂಪು ಕೂಡಾ ನವ್ಯ ಕುರಿತಂತೆ ಸಂಯಮ ಕಳೆದುಕೊಂಡು ಟೀಕೆ ಮಾಡತೊಡಗಿದರು. ಇದರ ಒಂದು sample: ಸಿಪಿಕೆಯವರೊಂದಿಗೆ ಮಾತಾಡುತ್ತಾ 'ನವ್ಯದವರಿಗೆ ಮಣ್ಣಿನ ವಾಸನೆ

ಏನು ಗೊತ್ತು? ಕಕ್ಕಸ್ಸಿನ ವಾಸನೆ ಮಾತ್ರ ಗೊತ್ತಿದೆ' ಎಂದದ್ದು.

ನವೋದಯ ಮತ್ತು ನವ್ಯದ ನಡುವಣ ಸಂವಾದ ಕೆಲಕಾಲ ಇಂತಹ ದುರ್ವಾಸನೆಯ ವಾತಾವರಣದಲ್ಲಿ ನಡೆದಿದ್ದರಿಂದಲೇ, ಸರಿ ಸುಮಾರು ಒಂದೇ ಅವಧಿಯಲ್ಲಿ-೧೯೬೫ರಲ್ಲಿ 'ಸಂಸ್ಕಾರ' ಮತ್ತು ೧೯೬೭ರಲ್ಲಿ 'ಮಲೆಗಳಲ್ಲಿ ಮದುಮಗಳು'- ಕನ್ನಡದ ಎರಡು ಮಹತ್ವದ ಕಾದಂಬರಿಗಳು ಪ್ರಕಟವಾದಾಗ ಚರ್ಚೆ ಕೇಂದ್ರೀಕೃತವಾದದ್ದು, 'ಸಂಸ್ಕಾರ'ದ ಮೇಲೆ ಮಾತ್ರ. ನವ್ಯದ ಪ್ರಾಚಾರ್ಯ ಅಡಿಗರು, 'ಮಲೆಗಳಲ್ಲಿ ಮದುಮಗಳು' ಬಗ್ಗೆ ಒಂದು ಮಾತನ್ನು ಆಡಲಾಗದಷ್ಟು ಸ್ವಉದ್ಯಮದಲ್ಲಿ ತಲ್ಲೀನರಾಗಿದ್ದರೆ, ಅವರ ಇಬ್ಬರು ಪ್ರಮುಖ ಶಿಷ್ಯರಾಗಿದ್ದ ಅನಂತಮೂರ್ತಿ ಮತ್ತು ಲಂಕೇಶ್ ಈ ಕೃತಿಯ ಬಗ್ಗೆ ಮಾಡಿದ್ದು passing remarks ಮಾತ್ರ. ಕನ್ನಡ ಶ್ರೇಷ್ಠ ಪ್ರತಿಭೆಗಳಲ್ಲೊಂದು ಎಂದು ಸರ್ವಮಾನ್ಯರಾಗಿರುವ ಅನಂತಮೂರ್ತಿಯವರಿಗೆ ಆಗ 'ಮಲೆಗಳಲ್ಲಿ ಮದುಮಗಳು' ಒಂದು ಕೇಂದ್ರವಿಲ್ಲದೆ ಸೊರಗಿ, ವಿವರಗಳಲ್ಲಿ ಸೊಕ್ಕಿರುವ ಕೃತಿಯಾಗಿ ಕಂಡಿತು. ಇದು ನವೋದಯ-ನವ್ಯ ಸಂವಾದದ ಎರಡನೇ ನೋಟ. ಇನ್ನು ಲಂಕೇಶ್ ನವೋದಯಕ್ಕೆ ಮೀಮಾಂಸೆಯ ನೆಲೆಯಲ್ಲಿ ಪ್ರತಿಕ್ರಿಯಿಸಿದ್ದು, ಮಾಸ್ತಿಯವರ ಕತೆಗಳ ಬಗ್ಗೆ 'ಅವು ಯಾವುದೇ ಬುಟ್ಟಿಯಲ್ಲಿ ಹಾಕಿಕೊಂಡು ಹೋಗಬಹುದಾದ ಸೌತೆಕಾಯಿಗಳ ತರಹ 'ಎಂಬ ವಿಮರ್ಶೆಯ ಮೂಲಕ. ಇದು ಈ ಸಂವಾದದ ಮೂರನೇ ನೋಟ.

ಈ ಮೂರೂ ನೋಟಗಳು ಎತ್ತಿ ಹಿಡಿಯುವುದು ನವ್ಯ ಮೀಮಾಂಸೆಯ ರೂಪನಿಷ್ಠೆಯನ್ನು. ಅನುಭವದ ಸಂಕೀರ್ಣತೆ , ರಚನೆಯ ಸಾವಯವ ಸಮಗ್ರೀಕರಣ ಎಂದೆಲ್ಲ ಮಾತಾಡುತ್ತಿದ್ದ ಇವರು, ಇವೆಲ್ಲ ಆತ್ಯಂತಿಕವಾಗಿ ಏತಕ್ಕೆ ಎಂಬುದನ್ನೇ ಮರೆತಿದ್ದರು ಎಂದು ತೋರುತ್ತದೆ. ಹಾಗಾಗಿಯೆ ಇಂದು ಈ ಸಂವಾದದ ಇಷ್ಟು ವರ್ಷಗಳ ನಂತರ ಕನ್ನಡದ ಶ್ರೇಷ್ಠ ಕಾದಂಬರಿ ಯಾವುದು ಎಂದರೆ 'ಮಲೆಗಳಲ್ಲಿ ಮದು ಮಗಳು',ಕನ್ನಡದ ಶ್ರೇಷ್ಠ ಕತೆಗಾರ ಯಾರು ಎಂದರೆ ಮಾಸ್ತಿ ಎಂದು ಕನ್ನಡದ ಸಾಮಾನ್ಯ ಜನರಲ್ಲ; ಸ್ವತಃ ಅನಂತಮೂರ್ತಿ, ಲಂಕೇಶರೇ ಹೇಳುವಷ್ಟು ಈ ಸಂವಾದದಲ್ಲಿ ತಾರುಣ್ಯ ಸಹಜವಾದ ಆಕ್ರಮಣಶೀಲತೆಯ ಶಕ್ತಿ ಇತ್ತೇ ಹೊರತು, ಅನುಭವ ಕಲಿಸುವ ವಿವೇಚನಾ ವ್ಯವಧಾನ ಇರಲಿಲ್ಲ ಎಂಬುದು ಗೊತ್ತಾಗುತ್ತದೆ.ಇನ್ನು ಈ ಸಂವಾದ ಎತ್ತಿ ಹಿಡಿದ ಅಡಿಗರ ಕಾವ್ಯದ ಬಗೆಗೆ, ಅಡಿಗರ ಮರಣಾನಂತರದ ಎರಡು ಮೂರು-ವರ್ಷಗಳಲ್ಲಿ (ಬಹುಶಃ ಬೆಂಗಳೂರಿನ ಎಂ.ಇ.ಎಸ್. ಕಾಲೇಜಿನಲ್ಲಿ) ನಡೆದ ವಿಚಾರಸಂಕಿರಣವೊಂದರಲ್ಲಿ ಪು.ತಿ.ನ. ಹೇಳಿದ ಮಾತನ್ನು ಇಲ್ಲಿ ಪ್ರಸ್ತಾಪಿಸಲೇಬೇಕು: "Where is Adiga today? His poetry was full of passion; but no com-passion". ಇದು ಅಡಿಗರ ಕಾವ್ಯದ ಶ್ರೇಷ್ಠತೆಯನ್ನು ಅಲ್ಲಗಳೆಯುವ ಮಾತಲ್ಲ; ಬದಲಿಗೆ

ನವ್ಯ ಕಾವ್ಯಮೀಮಾಂಸೆಯು, ಆಗ ಚಾಲ್ತಿಯಲ್ಲಿದ್ದ ಇತರ ಕಾವ್ಯ ಸಂಪ್ರದಾಯಗಳ ಮಧ್ಯೆ ಅಡಿಗರಿಗೆ ಪ್ರದಾನ ಮಾಡಿದ ಸರ್ವಶ್ರೇಷ್ಠತೆಯ ಸ್ಥಾನವನ್ನು ಪ್ರಶ್ನಿಸುವ ಗೈರತ್ತಿನ ಮಾತು. ಪು.ತಿ.ನ.ರಂತಹ ಕನ್ನಡ ಕುಟುಂಬದ ಯಜಮಾನರೊಬ್ಬರು ಮಾತ್ರ ಆಡಬಹುದಾದಂತಹ authentic ಆದ ಮಾತು.

ಪು.ತಿ.ನ. ಅವರು ಈ ಗೈರತ್ತಿನ ಮಾತು ಆಡುವ ಬಹು ಮುನ್ನವೇ ನವ್ಯ ಕಾವ್ಯ ಮೀಮಾಂಸೆಯ ಅಸ್ತಿವಾರವನ್ನೇ ಪ್ರಶ್ನಿಸಿದ್ದ ಹೊಸ ತಾತ್ವಿಕ ಸಂವಾದವೊಂದು, ಈ ಮುನ್ನ ಪ್ರಸ್ತಾಪಿಸಿದ ಒಕ್ಕೂಟದ ರೂಪದಲ್ಲಿ ಆರಂಭವಾಗಿತ್ತು. ಒಂದು ಜನಾಂಗದ ಕಣ್ಣು ತೆರೆಸಿದ ಕವಿಯೆಂದು ಲಂಕೇಶರಿಂದಲೇ ವರ್ಣಿಸಲ್ಪಟ್ಟಿದ್ದ ಅಡಿಗರು, ಸ್ವಜಾತಿ ಗುಂಪುಗಾರಿಕೆಯಲ್ಲಿ ತೊಡಗಿದ್ದಾರೆಂಬ ಅನುಮಾನ ವ್ಯಕ್ತಪಡಿಸಿ ಲಂಕೇಶರು ಬರೆದ ಪತ್ರ-ಲೇಖನವೊಂದನ್ನು, ತಮ್ಮ ಸಂಪಾದಕತ್ವದ ಮತ್ತು ನವ್ಯದ ಮುಖವಾಣಿಯಾಗಿದ್ದ 'ಸಾಕ್ಷಿ' ಪತ್ರಿಕೆಯಲ್ಲಿ ಪ್ರಕಟಿಸದಿರುವ ಮೂಲಕ ನವ್ಯ ಎತ್ತಿ ಹಿಡಿದಿದ್ದ ಮುಕ್ತ ಚರ್ಚೆಯ ತತ್ವವನ್ನೇ ಉಲ್ಲಂಘಿಸಲಾಗಿದೆ ಎಂಬ ಅಸಮಾಧಾನದ ರೂಪದಲ್ಲಿ ಈ ಸಂವಾದ ಆರಂಭವಾಯಿತು. ಅದು ಮುಂದೆ, ಬೂಸಾ ಪ್ರಕರಣದ ಹಿನ್ನಲೆಯಲ್ಲಿ Literary politics ಎನ್ನಬಹುದಾದ ವ್ಯಾಪಕ ಸಾಮಾಜಿಕ ಸ್ವರೂಪ ಪಡೆದು, ಒಕ್ಕೂಟ ಸ್ಥಾಪನೆಯ ಮೂಲಕ ಸ್ಫೋಟಿಸಿತು. ಇಲ್ಲಿ Literary politics ಎನ್ನುವುದನ್ನು, politics ಎಂಬ ಶಬ್ದಕ್ಕೆ ಈಗ ಚಾಲ್ತಿಯಲ್ಲಿರುವ ಲಘು ಅರ್ಥದಲ್ಲಿ ಬಳಸುತ್ತಿಲ್ಲ. ಇದು Politics of Literature. ಅಂದರೆ ಒಂದು ಸಾಹಿತ್ಯ ಮೀಮಾಂಸೆಯ ಹಿಂದೆ ಕೆಲಸ ಮಾಡುವ ಹಿತಾಸಕ್ತಿಗಳ ಮತ್ತು ಅಧಿಕಾರ ಕೇಂದ್ರಗಳ ಪರಿಗಣನೆ ಎಂಬ ಗಂಭೀರ ಅರ್ಥದಲ್ಲಿ ಬಳಸುತ್ತಿದ್ದೇನೆ.

ಒಕ್ಕೂಟದ ಉದ್ಘಾಟನಾ ಸಮಾವೇಶದಲ್ಲಿ ಕುವೆಂಪು ಅವರ ಜೊತೆ ಭಾಷಣ ಮಾಡಿದ ಜಿ.ಎಸ್. ಶಿವರುದ್ರಪ್ಪ, ಲಂಕೇಶ್, ಕೆ.ಎಂ. ಶಂಕರಪ್ಪ, ಪ್ರೊ||ಎಂ.ಡಿ. ನಂಜುಂಡಸ್ವಾಮಿ ಮುಂತಾದವರ ಭಾಷಣಗಳು, ಆಧುನಿಕ ಕನ್ನಡ ಸಾಹಿತ್ಯ ಮೊದಲ ಬಾರಿಗೆ ತೆರಕೊಂಡ Politics of Literature ಸ್ವರೂಪದ ಸಂವಾದದ ಪ್ರಸ್ತಾವನೆಗಳಂತಿದ್ದರೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಎಂಬ ಭಾಷಣ, ಈ ಸಂವಾದದ ತಾತ್ವಿಕತೆಯನ್ನು ವಿಷದಪಡಿಸುತ್ತದೆ: "ಕನ್ನಡ ಸಾಹಿತ್ಯ ಚರಿತ್ರೆ ಎಂದರೆ, ಸಂಸ್ಕೃತಿ ಚರಿತ್ರೆ ಎಂದರೆ ಇನ್ನೇನೂ ಆಗಿರದೆ, ಇಡೀ ಶೂದ್ರ ಸಮುದಾಯದ ಮೂಕ ಅನುಭವಗಳು ನಿಧಾನವಾಗಿ ಪ್ರಜ್ಞಾಗಮ್ಯವಾಗುತ್ತಾ ಅಭಿವ್ಯಕ್ತಿಯನ್ನು ಸಾಧಿಸಿಕೊಳ್ಳುತ್ತ ಬಂದುದರ ಚರಿತ್ರೆ ಎಂಬುದು"ಎಂದು ನಿರ್ವಚಿಸುತ್ತಾ, ಅದನ್ನು ತದನಂತರದಲ್ಲೇ ಪ್ರಕಟವಾದ ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನಕ್ಕೆ ಬರೆದ 'ಹೊಸ ದಿಗಂತದ ಕಡೆಗೆ' ಎಂಬ ತಮ್ಮದೇ ಮುನ್ನುಡಿಯ

ಮಾತುಗಳಲ್ಲಿ ಮುಂದುವರಿಸಿದರು. ಅದರಲ್ಲಿ ಅವರು 'ನವ್ಯಸಾಹಿತ್ಯದ ಸಂಪೂರ್ಣ ನಿಸ್ತೇಜಗೊಂಡಿದೆ' ಎಂದು ಹೇಳುತ್ತಾ, ಅದಕ್ಕೆ ಕಾರಣಗಳನ್ನು 'ಸ್ವಕೇಂದ್ರೀತ ಅನುಭವ ನಿಷ್ಠೆ, ಅದರ ಸಾಂಕೇತಿಕ ಶೈಲಿತಂತ್ರಗಳು, ಕೇವಲ ಉಪಾಧ್ಯಾಯರೇ ಹೆಚ್ಚಾಗಿರುವ ಅದರ ಸಾಹಿತಿ ವರ್ಗ ಮತ್ತು ಕೇವಲ ಸಾಹಿತ್ಯದ ಮಟ್ಟಿಗೇ ಸೀಮಿತಗೊಂಡ ಅದರ ಕ್ರಾಂತಿಕಾರತನ' ಎಂದು ಗುರುತಿಸುತ್ತಾ; "ಈ ಕಾರಣಗಳಿಂದಾಗಿ ಈ ಸಾಹಿತ್ಯ ಸಂಪ್ರದಾಯ ಅವನತಿ ಹೊಂದಿದೆ. ಆದ್ದರಿಂದಲೇ ಈ ಮಾರ್ಗವನ್ನು ತ್ಯಜಿಸುವುದಷ್ಟೇ ಅಲ್ಲದೆ, ಇದರ ಸ್ಫೂರ್ತಿ ಮೂಲಗಳು, ಇದರ ಅಭಿವ್ಯಕ್ತಿ ಪರಿಕರಗಳು, ಇದರ ಮೌಲ್ಯಗಳು-ಎಲ್ಲವನ್ನೂ ತ್ಯಜಿಸಬೇಕಾಗಿದೆ.ಎಂದರೆ ರಾಜಕೀಯವಾಗಿ, ಸಾಮಾಜಿಕವಾಗಿ, ತಾತ್ವಿಕವಾಗಿ ಬದಲಾವಣೆಯಾಗುವುದರಿಂದ ಮಾತ್ರವೇ ನಿಜವಾದ ಹೊಸ ಸಾಹಿತ್ಯ ಬರುತ್ತದೆ" ಎಂಬ ಒಂದು ಸಮಗ್ರವೆನ್ನಬಹುದಾದ ಮೀಮಾಂಸೆಯನ್ನು ಮಂಡಿಸಿದರು.

ಈ ಮೀಮಾಂಸೆ ತನ್ನ ಹುಟ್ಟಿನಲ್ಲೇ ಸಮಕಾಲೀನ ಎಲ್ಲ ಬ್ರಾಹ್ಮಣ ಲೇಖಕರನ್ನೂ ಈ ಚರ್ಚೆಯ ಪರಿಧಿಯ ಹೊರಗೇ ಇಟ್ಟು ಮೂಡಿದ್ದಾದರಿಂದ, ಅದು ಎಷ್ಟೇ ಕ್ರಾಂತಿಕಾರಕವೂ ಸಮಗ್ರವೂ ಆಗಿದ್ದರೂ , ಸಾಹಿತ್ಯದ ಚಲನಶೀಲತೆಯ- dynamics-ಬಗ್ಗೆ ಪೂರ್ಣಸತ್ಯ ಹೇಳಬಲ್ಲದಾಗಿರಲಿಲ್ಲ. ನಿಜ, ಇದು ಸಾಹಿತ್ಯವನ್ನು ನೋಡುವ ರೀತಿ ನೀತಿಗಳನ್ನೇ, ನವ್ಯಕ್ಕೆ ಹೋಲಿಸಿದಂತೆ ಆಮೂಲಾಗ್ರವಾಗಿ ಬದಲಾಯಿಸಿತು. ಆದರೆ ಈ ನೋಟ ಸ್ವಲ್ಪ ಮಾಲುಗಣ್ಣಿನ ನೋಟವೇ ಆಗಿತ್ತು ಎಂಬುದೂ ನಿಜ. ಹೀಗಾಗಿಯೇ ಒಕ್ಕೂಟದ ಉದ್ಘಾಟನಾ ಸಮಾವೇಶವೇ ಅದರ ಸಮಾರೋಪ ಸಮಾವೇಶವೂ ಆಯಿತು. ಶೂದ್ರರ ಹೆಗ್ಗುರುತಾದ ಒಳಜಗಳಗಳಿಂದಲೂ ಮತ್ತು ಒಕ್ಕೂಟದ ತಾತ್ವಿಕತೆಗೆ ಪ್ರೇರಣೆ ಒದಗಿಸಿದ್ದ ಲೋಹಿಯಾ ಸಮಾಜವಾದದಿಂದಲೇ ಪ್ರೇರಿತರಾಗಿದ್ದ ಅನಂತಮೂರ್ತಿಯವರಂತಹ ಲೇಖಕರು ಒಕ್ಕೂಟದ ಹೊರಗೆ ನಿಂತೇ; ತಮ್ಮ ಹಳೆಯ 'ಇಂಗ್ಲಿಷ್ ಬ್ರಾಹ್ಮಣ ಮತ್ತು ಕನ್ನಡ ಶೂದ್ರ' ಚರ್ಚೆಯನ್ನು ಸೃಜನಶೀಲವಾಗಿ, ಒಕ್ಕೂಟದ ತಾತ್ವಿಕತೆಗೆ ಸಮಾನಾಂತರವಾಗಿ, "ಸಂಸ್ಕೃತೀಕರಣದ ಬಗ್ಗೆ ಅನುಮಾನ, ಪಾಶ್ಚಾತ್ಯೀಕರಣದ ಬಗ್ಗೆ ಅವಮಾನ, ಆದರೆ ಜಾತಿ ಪದ್ಧತಿಯನ್ನು ಮೀರಬೇಕೆನ್ನುವ ಆಸೆ. ಜೊತೆಗೇ ಶೂದ್ರತ್ವದ ಜೀವನ ಸಂತೋಷವು ಎಷ್ಟೋ ಮೌಲ್ಯಗಳನ್ನು ಕಾದಿರಿಸಿಕೊಂಡಿದೆ ಎಂಬ ಭಾವನೆ-ಇವೆಲ್ಲವೂ ಲೇಖಕನ ಪ್ರಜ್ಞೆಯಲ್ಲಿ ಮಿಳಿತವಾದಾಗ ಅದು ಸೃಜನಶೀಲತೆಯಲ್ಲಿ, ಜೀವನದ ಹೊಸ ಸಾಧ್ಯತೆಗಳನ್ನು ಹುಡುಕಲು ತೊಡಗುತ್ತದೆ. ಒಕ್ಕೂಟದಿಂದ ಪ್ರಾರಂಭವಾದ ಚಳುವಳಿ, ಚಿಲ್ಲರೆ ಪ್ರಶ್ನೆಗಳಲ್ಲಿ ತನ್ನ ಶಕ್ತಿಯನ್ನು ವ್ಯಯ ಮಾಡಿಕೊಳ್ಳದಿದ್ದಲ್ಲಿ ಅದು ಇಂಥ ಗಂಭೀರ ಪ್ರಶ್ನೆಯನ್ನು ಎದುರಿಸಬಹುದಿತ್ತು. ಸಂಸ್ಕೃತೀಕರಣ, ಪಾಶ್ಚಾತ್ಯೀಕರಣ ಇವೆರಡನ್ನೂ ಒಪ್ಪಿಕೊಳ್ಳದೇ, ಇರುವ ಸ್ಥಿತಿಯಲ್ಲೇ ನಾವು ಜೀವನವನ್ನು ಒಪ್ಪಿಕೊಳ್ಳುವ ಕ್ರಮಗಳು ಇವೆಯೇ? ಇಂಥ

ಪ್ರಶ್ನೆಗೆ ಉತ್ತರ ಹುಡುಕುವ ತಾಳ್ಮೆಯಿದ್ದಲ್ಲಿ ಮಾತ್ರ, ಜಾತಿಯ ಬಗ್ಗೆ ನಡೆದ ಚಳುವಳಿ ಸಾಹಿತ್ಯದ ದೃಷ್ಟಿಯಿಂದ ಸಾರ್ಥಕವಾಗಬಹುದು. ಅದಲ್ಲದೇ ನೀವು ಅನಂತಮೂರ್ತಿ ಬ್ರಾಹ್ಮಣ ಎಂದು ನನ್ನನ್ನು ಬಯ್ಯೋದು, ಹಾಸ್ಯ ಮಾಡೋದು. ಅಡಿಗ ಬ್ರಾಹ್ಮಣ ಅಂತ ಅವರನ್ನು ಬಯ್ಯೋದು, ಹಾಸ್ಯ ಮಾಡೋದು-ಇವುಗಳಲ್ಲೇ ತೃಪ್ತರಾದರೆ ನೀವು ಜುಜುಬಿಯಾಗಿ ಬಿಡುತ್ತೀರಿ ಅಷ್ಟೆ"(ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ೧೯೮೧ರಲ್ಲಿ ಏರ್ಪಡಿಸಿದ್ದ "ದಶವಾರ್ಷಿಕ ಸಾಹಿತ್ಯ ಸಮೀಕ್ಷೆ"ವಿಚಾರ ಸಂಕಿರಣದಲ್ಲಿ 'ಸಾಹಿತ್ಯ ಮತ್ತು ರಾಜಕೀಯ' ಎಂಬ ಗೋಷ್ಠಿ)* ಎಂದು ಮುಂದುವರಿಸಿದ್ದರಿಂದಲೂ, (ಅವರು ಈ ಮುಂದುವರಿಕೆಯ ಯಶಸ್ವಿನ ಮತ್ತಿನಲ್ಲೆಂಬಂತೆ, 'ಜಾತಿ ಸೃಜನಶೀಲವಾದುದು' ಎಂಬೊಂದು ವಾದ ಮಂಡಿಸಿ ಒಂದು ದೊಡ್ಡ ರಂಪವನ್ನೇ ಸೃಷ್ಟಿಸಿದ್ದರು!) ಒಕ್ಕೂಟ ಒಂದು ಚಳುವಳಿಯಾಗಿ ವಿಶ್ವಾಸಾರ್ಹತೆ ಕಳೆದುಕೊಂಡು ಹಿನ್ನೆಲೆಗೆ ಸರಿದು ಹೋಯಿತು.

ಆದರೆ ಆ ಹೊತ್ತಿಗೆ ಅದರ ಸಾಹಿತ್ಯ ಮೀಮಾಂಸೆ, ಆಧುನಿಕ ಕನ್ನಡ ಸಾಹಿತ್ಯದ ಖದರನ್ನೇ ಇಡಿಯಾಗಿ ಬದಲಾಯಿಸಿತ್ತು ಮತ್ತು ಇಂದಿನ ಕನ್ನಡ ಸಾಹಿತ್ಯದ ಮೂಲಮಾನಗಳಲ್ಲೂ ಆ ಮೀಮಾಂಸೆಯ ಸತ್ವವೇ ಇರುವುದನ್ನು ಗಮನಿಸಬಹುದು. ನವೋದಯದ ದೇಶೀಯತೆಯೊಂದಿಗೆ ನವ್ಯದ ಆಧುನಿಕ ನೋಟ ಹಾಗೂ ಕಟ್ಟುವ ಹೊಸ ದಕ್ಷತೆಗಳು ಮೇಳವಿಸಿ, ಸಾಹಿತ್ಯದ ಒಂದು ಹೊಸ ಹದ ಸೃಷ್ಟಿಯಾಯಿತು. ಒಕ್ಕೂಟದಲ್ಲಿದ್ದ ತೇಜಸ್ವಿ, ಲಂಕೇಶ್, ಕೃಷ್ಣ ಆಲನಹಳ್ಳಿ, ದೇವನೂರ ಮಹಾದೇವ, ಚಂಪಾ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗಾವರ ಮುಂತಾದವರಲ್ಲದೆ, ಅದರ ಹೊರಗಿದ್ದ ಅನಂತಮೂರ್ತಿ, ಯಶವಂತ ಚಿತ್ತಾಲ ಮುಂತಾದವರು ತಮ್ಮ ಬರವಣಿಗೆಯ ಹೊಸ ದಿಗಂತಗಳನ್ನು ಕಂಡುಕೊಂಡರು. ತೇಜಸ್ವಿಯವರ 'ಕರ್ವಾಲೋ', ಲಂಕೇಶರ 'ಉಮಾಪತಿಯ ಸ್ಕಾಲರ್‌ಷಿಪ್‌ಯಾತ್ರೆ', ಮಹಾದೇವರ 'ದ್ಯಾವನೂರು'-'ಒಡಲಾಳ', ಕೃಷ್ಣ ಆಲನಹಳ್ಳಿಯ 'ಪರಸಂಗದ ಗೆಂಡೆತಿಮ್ಮ' ಹಾಗೂ 'ಭುಜಂಗಯ್ಯನ ದಶಾವತಾರಗಳು', ಅನಂತಮೂರ್ತಿಯವರ 'ನವಿಲುಗಳು'-'ಸೂರ್ಯನ ಕುದುರೆ'-'ಅವಸ್ಥೆ',ಚಿತ್ತಾಲರ 'ಕತೆಯಾದಳು ಹುಡುಗಿ' ಹಾಗೂ ನಂತರದ ಕಥೆ-ಕಾದಂಬರಿಗಳು, ವೀಣಾ ಅವರ 'ಸ್ತ್ರೀ ಶೋಷಣೆ, ಬಂಡಾಯ', ಇತ್ಯಾದಿ ಕೃತಿಗಳು ಕನ್ನಡದ ಹೊಸ ಬೆಳಸುಗಳಾಗಿ ಸಾಹಿತ್ಯ ಪಂಥಗಳ ಭೇದ ಭಾವಗಳಿಲ್ಲದೆ ಎಲ್ಲರ ಗಮನ ಸೆಳೆದವು. ಇನ್ನು ಚಂದ್ರಶೇಖರ ಕಂಬಾರ ಮತ್ತು ಎ.ಕೆ.ರಾಮಾನುಜನ್‌ರಂತಹವರು ನವ್ಯದವರೊಡನಿದ್ದೂ,ತಮ್ಮದೇ ವಿಭಿನ್ನ ರೀತಿಯಲ್ಲಿ ಬರೆಯುತ್ತಿದ್ದುದರಿಂದ ಈ ಸಂವಾದಗಳ ಅಡ್ಡ ಪರಿಣಾಮಗಳಿಗೆ ಸಿಕ್ಕಿ

*೧೯೭೦ರ ದಶಕದಲ್ಲಿ ಇಂತಹ ಅನೇಕ ಗೋಷ್ಠಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸಂಘಟಿಸುವ ಮೂಲಕ ಇಂತಹ ಅನೇಕ ತಾತ್ವಿಕ ಸಂವಾದಗಳಿಗೆ ಕಾರಣರಾದವರು ಡಾ ಜಿ.ಎಸ್.ಶಿವರುದ್ರಪ್ಪನವರು.

ಹಾಕಿಕೊಳ್ಳದೆ,ತಮ್ಮ ವಿಶಿಷ್ಟ ಪ್ರತಿಭೆಯನ್ನು ಇನ್ನಷ್ಟು ವಿಸ್ತರಿಸಿಕೊಂಡರು.ಆದರೆ ಈ ಎಲ್ಲ ವಿದ್ಯಮಾನಗಳಿಗೆ ಕ್ರೋಧದಿಂದ ಪ್ರತಿಕ್ರಿಯಿಸುವವರಂತೆ ಕಂಡ ಅಡಿಗರು, 'ನಾನು ಹಿಂದೂ, ನಾನು ಬ್ರಾಹ್ಮಣ' ಎಂಬಂತಹ ಪದ್ಯಗಳನ್ನು ಬರೆಯಲಾರಂಭಿಸಿದ್ದು ಮಾತ್ರ ವಿಚಿತ್ರ!

ಈ ಮಧ್ಯೆ ಹಂಪನಾ, ತಾವು ಆಗ ಅಧ್ಯಕ್ಷರಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ರಾಜಕಾರಣದ ಒತ್ತಡಗಳಿಂದಾಗಿ ಅಡಿಗರನ್ನು ಧರ್ಮಸ್ಥಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಆಯ್ಕೆ ಮಾಡಿದ್ದನ್ನು ಪ್ರತಿಭಟಿಸಲು ಒಗ್ಗಟ್ಟಾದ ಎಡಪಂಥೀಯ ಸಾಹಿತಿಗಳ ಗುಂಪೊಂದು ಹುಟ್ಟುಹಾಕಿದ ಬಂಡಾಯವು, ಒಕ್ಕೂಟದ ಹಠಾತ್ ಸಾವಿನಲ್ಲಿ ಉಂಟಾಗಿದ್ದ social space ಅನ್ನು ತುಂಬಲು ಹೋಗಿ, ಒಕ್ಕೂಟದ politics of literature-literature of politics ಆಗಿ ಮಾಡಿದ್ದು ಆಧುನಿಕ ಕನ್ನಡ ಸಾಹಿತ್ಯದ ಒಂದು ವಿಪರ್ಯಾಸವೇ ಸರಿ. ಸ್ವತಃ ಹಂಪನಾರಂತಹ ಹಂಪನಾರೇ ಸಾಹಿತ್ಯದಲ್ಲಿ ದಲಿತ-ಕಲಿತ-ಬಲಿತ ಎಂಬುದಿಲ್ಲ ಎಂಬ ಸತ್ಯವನ್ನು ಹೇಳಿದರೂ, ನೇರವಾಗಿ ರಾಜಕೀಯ ನಾಯಕರ ಕೃಪಾಶ್ರಯದಲ್ಲೇ (ಸಿಪಿಎಂ ಪಕ್ಷದ ಆಗಿನ ನಾಯಕ ಎಂ.ಕೆ. ಭಟ್‌ರ ಕುಮ್ಮಕ್ಕಿನಲ್ಲಿ) ಆರಂಭವಾದ ಬಂಡಾಯ, ಸಹಜವಾಗಿಯೇ ಸಾಹಿತ್ಯಕ್ಕೆ ನೇರವಾದ ಕೊಡುಗೆ ಕೊಟ್ಟದ್ದು ಕಡಿಮೆ. ಅದು ಹುಟ್ಟುಹಾಕಿದ ತಾತ್ವಿಕ ಸಂವಾದದ ತಳಹದಿಯಾಗಿದ್ದ 'ಖಡ್ಗವಾಗಲಿ ಕಾವ್ಯ, ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ' ಎಂಬ ಘೋಷಣೆ ಸಾಹಿತ್ಯದ ಸಂಚಾರಿ ಭಾವವನ್ನಷ್ಟೇ ನಂಬಿಕೊಂಡಂತಹದ್ದು.ಹಾಗಾಗಿ ಅದು ಹುಟ್ಟು ಹಾಕಿದ ಸಾಹಿತ್ಯ ಸಂಚಾರಿ ಭಾವವನ್ನಷ್ಟೇ ಹುಡುಕುತ್ತಿದ್ದಾಗ, ಅದರ ನಾಯಕರೂ ಸಂಚಾರಿ ಭಾವಕ್ಕೆ ಒಳಗಾಗಿ ಕ್ರಮೇಣ ಎಲ್ಲೆಲ್ಲೋ-ತಾವೇ ಪಾಪದ ಸ್ಥಳಗಳೆಂದು ಘೋಷಿಸಿದ್ದ ಸ್ಥಳಗಳೂ ಸೇರಿದಂತೆ-ವಲಸೆ ಹೋದರು. ಹೀಗೆ ವಲಸೆ ಹೋದವರಲ್ಲಿ ಬಂಡಾಯದ ಹರಿಕಾರರೂ, ಅದಕ್ಕೆ ಖಡ್ಗ ದೀಕ್ಷೆ ಕೊಟ್ಟವರೂ ಆದ ಡಿ.ಆರ್. ನಾಗರಾಜರೇ ಪ್ರಥಮರು. ಅವರು ಬಂಡಾಯದ ಬಾವುಟ ಬಿಟ್ಟು, ಶ್ರೇಷ್ಠ ಸಾಹಿತ್ಯದ ಬಾವುಟ ಹಿಡಕೊಂಡು ಅಮೆರಿಕಾ ಕಡೆ ಹೊರಟರು. ಅಮೆರಿಕಾ ಕಡೆ ಹೋಗಲಾರದವರು, 'ತಮ್ಮ ಜನರ ನೋವಿಗೆ ಮಿಡಿವ ಪ್ರಾಣಮಿತ್ರ'ರಾಗಿ ವಿಧಾನಸೌಧದ ಕಡೆ ಹೊರಟರು. ಉಳಿದವರು ಈಗಲೂ ಇವರ ಪರ ಅಥವಾ ವಿರುದ್ಧವಾಗಿ ಕಾವ್ಯ ಖಡ್ಗವನ್ನು ಝಳಪಿಸುತ್ತಾ, ಕಾಲನೂಕುತ್ತಿದ್ದಾರೆ. ಸದ್ಯಕ್ಕೆ ಈ ಪಂಥದ ಚಳುವಳಿಗಳನ್ನು ಮೀರಿ ಬೆಳೆದಿರುವ ಕನ್ನಡಸಾಹಿತ್ಯ, ಇವರ್‍ಯಾರನ್ನೂ ಗಂಭೀರವಾಗಿ ಪರಿಗಣಿಸುವ ಸ್ಥಿತಿಯಲ್ಲಿಲ್ಲ.

ಅದೇನೇ ಇರಲಿ, ಬಂಡಾಯ ಹುಟ್ಟುಹಾಕಿದ ತಾತ್ವಿಕ ಸಂವಾದ ಯಾವುದೇ ಗಮನಾರ್ಹ ಸೃಜನಶೀಲ ಕೃತಿಗಳಿಗೆ ಕಾರಣವಾಗದಿದ್ದರೂ, ಅದು ಹುಟ್ಟುಹಾಕಿದ ಪ್ರತಿಕ್ರಿಯೆಗಳು ಅನೇಕ ಸಾಹಿತ್ಯ ಸೂಕ್ಷ್ಮಗಳಿಗೆ ನಮ್ಮನ್ನು ಎಚ್ಚರಿಸಿದವು. ಒಂದು,

ಬಂಡಾಯದ ಅಬ್ಬರಕ್ಕೆ ಪ್ರತಿಕ್ರಿಯಿಸುತ್ತಾ ಲಂಕೇಶ್ ಹೇಳಿದ ಮಾತು:"ಕಟಾರನೆ ಕಿರುಚಿದರೆ ಕಾವ್ಯವಾಗುವುದಿಲ್ಲ". ಎರಡನೆಯದು, ಡಿ.ಆರ್. ನಾಗರಾಜರು 'ಬಂಡಾಯ'ದ ಸಿದ್ಧತೆಯಾಗಿ ಚಂಪಾರ 'ಓ ನನ್ನ ದೇಶ ಬಾಂಧವರೇ' ಕವನ ಸಂಕಲನಕ್ಕೆ ಬೆನ್ನುಡಿ ಬರೆಯುತ್ತಾ, 'ದೇಶ ಹೊತ್ತಿ ಉರಿಯುತ್ತಿರುವಾಗ ಗುಲಾಬಿಯ ಅಂದವನ್ನು ಸವಿಯುತ್ತಿರುವವರು' ಎಂದು (ಆಗ ತುರ್ತು ಪರಿಸ್ಥಿತಿ ಜಾರಿಯಲ್ಲಿತ್ತು) ಹಾಗೆ ಸಿದ್ಧಗೊಳ್ಳದವರನ್ನು ಛೇಡಿಸಿದ್ದಕ್ಕೆ ಪ್ರತಿಯಾಗಿ, ಯಶವಂತ ಚಿತ್ತಾಲರು ನೀಡಿದ ಈ ಪ್ರತಿಕ್ರಿಯೆ:'ಗುಲಾಬಿಯ ಅಂದವನ್ನು ಸವಿಯಬಲ್ಲ ಸಂವೇದನೆ ಇಲ್ಲದವ, ದೇಶ ಹೊತ್ತಿ ಉರಿಯುತ್ತಿರುವುದರ ಸಂಕಟವನ್ನೂ ಅರಿಯಲಾರ'.

ಮನುಷ್ಯ ಸಂವೇದನೆ ಕುರಿತಂತೆ ಬಂಡಾಯದ ಇಂತಹ ಅಪೂರ್ಣ ಗ್ರಹಿಕೆಗಳಿಂದಾಗಿಯೇ ನಾನು ಈ ಮೊದಲೇ ಹೇಳಿದಂತೆ, ಅದು ಹುಟ್ಟುಹಾಕಿದ ತಾತ್ವಿಕ ಸಂವಾದ ಸಾಹಿತ್ಯಕ್ಕೆ ನೇರವಾದ ಕೊಡುಗೆ ಕೊಟ್ಟದ್ದು, ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆಯೇ. ಆದರೆ ಸಾಮಾಜಿಕವಾಗಿ ಅದು ಎಲ್ಲ ಜಾತಿವರ್ಗಗಳಲ್ಲಿ ಸಾಹಿತ್ಯ ನಿರ್ಮಾಣ-ಚರ್ಚೆ ಕುರಿತಂತೆ ಉಂಟು ಮಾಡಿದ ಹುರುಪು ಮತ್ತು ಆತ್ಮವಿಶ್ವಾಸ ಪರೋಕ್ಷವಾಗಿ ಅನೇಕ ಕೊಡುಗೆಗಳನ್ನು ನೀಡಿತು- ದಲಿತ ನಾಯಕ ಪ್ರೊ. ಬಿ. ಕೃಷ್ಣಪ್ಪನವರು, ಸಾಹಿತ್ಯಕವಾಗಿ ತಪ್ಪೋ ಸರಿಯೋ, ಕುವೆಂಪು ಅವರ ಕೃತಿಗಳಲ್ಲಿನ ಜಾತಿ ನೀತಿಯನ್ನು ಒರಟೊರಟಾಗಿಯೋ ಪ್ರಶ್ನಿಸುವವರಷ್ಟರ ಮಟ್ಟಿಗೆ. ಇಂತಹ ಇನ್ನಷ್ಟು ಕೊಡುಗೆಗಳಲ್ಲಿ ಮುಖ್ಯವಾದವುಗಳೆಂದರೆ: *ಸ್ತ್ರೀವಾದಿ* ಸಾಹಿತ್ಯವು ಅನೇಕ ನೆಲೆಗಳಿಂದ ಸಂವೇದನೆಗಳನ್ನು ಮೇಳವಿಸಿಕೊಂಡು *ಸ್ತ್ರೀ ಸಂವೇದನೆ* ಯ ಸಾಹಿತ್ಯವಾಗಿ ಮಾರ್ಪಾಡಾಗಿ, ನವ್ಯದ ವೀಣಾ ಯಲಬುರ್ಗಿಯವರ ನಂತರ ಹಲವಾರು ವರ್ಷಗಳ ಕಾಲ ಖಾಲಿ ಇದ್ದ ಜಾಗವನ್ನು ತುಂಬಿ ಅನೇಕ ಕವಯತ್ರಿಯರನ್ನೂ, ಕಥನಕಾರ್ತಿಯರನ್ನು ನೀಡಿ ಕನ್ನಡ ಸಾಹಿತ್ಯ ಸಂವೇದನೆಗೆ ಒಂದು ನೆಲೆಯ ಪೂರ್ಣತೆ ಒದಗಿಸಿದ್ದು. ಇದರಿಂದಾಗಿ ಏಕಮುಖಿಯಾಗಿದ್ದ ಸ್ತ್ರೀವಾದವು ಬಹುಮುಖಿ ಪರಿಕಲ್ಪನೆಯಾಗಿ ಅರಳತೊಡಗಿತು. ಹಾಗೇ ಸಾರಾ ಅಬೂಬಕರ್‌ರಿಂದ ಹಿಡಿದು ಅಬ್ದುಲ್ ರಷೀದ್‌ವರೆಗಿನ ಮುಸ್ಲಿಂ ಸಂವೇದನೆಯ ಲೇಖಕರ ಆಗಮನಕ್ಕೆ ಕಾರಣವಾಗಿದ್ದು.

ಇನ್ನೊಂದು ಬಹುಮುಖ್ಯ ಕೊಡುಗೆ ಎಂದರೆ, ನಮ್ಮ ಜಾನಪದವನ್ನು ಕುರಿತ, ವಿಶೇಷವಾಗಿ ಜನಪದ ಮಹಾಕಾವ್ಯಗಳು ಹಾಗೂ ತತ್ವಪದಗಳನ್ನು ಕುರಿತ ಹೊಸ ಆಸಕ್ತಿ ಮತ್ತು ಬಹುಶಿಸ್ತೀಯ ಅಧ್ಯಯನಗಳಿಗೆ ಅವನ್ನು ಒಡ್ಡುವ ಸೃಜನಶೀಲ ಪ್ರಯತ್ನಗಳು. ಡಿ.ಆರ್. ನಾಗರಾಜ್ ತಮ್ಮ '*ಸಾಹಿತ್ಯ ಕಥನ* 'ಕ್ಕೆ ಬರೆದಿರುವ ಮುನ್ನುಡಿಯಲ್ಲಿ ವ್ಯಕ್ತಪಡಿಸಿರುವ '*ಆದಿ ಪುರಾಣ* 'ದ ಜೊತೆಗೆ '*ಜುಂಜಪ್ಪನ ಕಾವ್ಯ*'ವನ್ನು ಇಟ್ಟು ನೋಡುವ(ಇದು ಸಾಧ್ಯವೇ ಎಂಬುದು ಬೇರೆ ಮಾತು)ಕುತೂಹಲ ಈ ನೆಲೆಯಿಂದಲೇ

ಹುಟ್ಟಿದುದು- ಈಗ ಅದನ್ನು ಆಧುನಿಕೋತ್ತರ ಚಿಂತನೆಯ ಫಲವೆಂದು ಕರೆಯಲಾಗುತ್ತಿದ್ದರೂ! ಹಾಗೇ ಎಚ್.ಎಸ್. ಶಿವಪ್ರಕಾಶರ ಕಾವ್ಯ ಮತ್ತು ನಾಟಕಗಳಿಗೆ ಹೊಸ ಪ್ರಸ್ತುತತೆ ದೊರಕಿದ್ದು ಕೂಡಾ ಈ ಹಿನ್ನೆಲೆಯಲ್ಲೇ. ಈ ಸಂಬಂಧ ಉಲ್ಲೇಖಿಸಬಹುದಾದ ಮತ್ತೊಂದು ಸಂಗತಿ ಎಂದರೆ, ಎಂಭತ್ತರ ದಶಕದಲ್ಲಿ ಕೆಲವು ದಲಿತ-ಬಂಡಾಯಿಗಳು ವಿಚಾರವಾದಿ ನೆಲೆಯಲ್ಲಿ ಕಟುವಾಗಿ ವಿರೋಧಿಸಿದ್ದ 'ಬೆತ್ತಲೆ ಸೇವೆ' ಬಗ್ಗೆ ಕಿ.ರಂ. ನಾಗರಾಜ ಹಾಗೂ ಯು.ಆರ್. ಅನಂತಮೂರ್ತಿಯವರು ಸಾಮಾಜಿಕ- ಸಾಂಸ್ಕೃತಿಕ ನೆಲೆಯಲ್ಲಿ ಆರಂಭಿಸಿದ ಸಂವಾದವು, ನಮ್ಮ ಪಾರಂಪರಿಕ ಸಾಂಸ್ಕೃತಿಕ ಆಚರಣೆಗಳನ್ನು ಆಧುನಿಕತೆಯ ಕುರುಡುಗಣ್ಣುಗಳಿಂದ ನೋಡುವ ಅಪಾಯಗಳನ್ನು ಮನಗಾಣಿಸುವ ಮೂಲಕ ಸಂಸ್ಕೃತಿಯ ಸರಳೀಕರಣ ಸಲ್ಲದು ಎಂಬ ಸಂದೇಶವನ್ನು ಸಂಬಂಧಪಟ್ಟ ಸಾಹಿತಿಗಳಿಗೆ ರವಾನಿಸಿದ್ದು. ಹೀಗೆ ಬಂಡಾಯ, ಮೂಲಕ್ಕಿಂತ ತನ್ನ ವಿಸ್ತರಣೆಯಲ್ಲಿ ಕನ್ನಡ ಸಾಹಿತ್ಯಕ್ಕೆ ಹೆಚ್ಚು ಫಲಪ್ರದ ಎನಿಸಿತು.

ಬಂಡಾಯಕ್ಕೆ ಸಂಬಂಧಪಟ್ಟಂತೆಯೇ ಪ್ರಸ್ತಾಪ ಮಾಡಬಹುದಾದ ಇನ್ನೊಂದು ತಾತ್ವಿಕ ಸಂವಾದವೆಂದರೆ, ಬಂಡಾಯದಿಂದ ಸಿಡಿದುಹೋಗಿ, ತಾನೇ ಕೈಯಾರೆ ಸಿದ್ಧಪಡಿಸಿದ್ದ ಪ್ರಣಾಳಿಕೆಗೆ ಪಶ್ಚಾತಾಪದ ಪ್ರತಿಕ್ರಿಯೆ ಎಂಬಂತೆ ಡಿ.ಆರ್. ನಾಗರಾಜರೇ, ಲಂಕೇಶರ ಪ್ರಾಯೋಜಕತ್ವದಲ್ಲಿ ಸಾಹಿತ್ಯದ ಶ್ರೇಷ್ಠತೆಯನ್ನು ಎತ್ತಿಹಿಡಿಯುವುದಕ್ಕಾಗಿ ಹುಟ್ಟುಹಾಕಿದ- ಬಂಡಾಯಕ್ಕೆ ತದ್ವಿರುದ್ಧವಾದ- 'ಜಾಗೃತ ಸಾಹಿತ್ಯ ಸಮಾವೇಶ'(೧೯೯೦)ದಲ್ಲಿ ಕೆ.ವಿ. ಸುಬ್ಬಣ್ಣನವರು ಮಾಡಿದ 'ಶ್ರೇಷ್ಠತೆಯೆಂಬ ವ್ಯಸನ' ಎಂಬ ಭಾಷಣ. ಈ ಭಾಷಣದಲ್ಲಿ ಅವರು "ಶ್ರೇಷ್ಠತೆ ಎಂಬುದು ಯಾವಾಗಲೂ ಒಂದು ವ್ಯಸನವೇ. ಈ ವ್ಯಸನವು ಪ್ರತ್ಯೇಕತೆ, ಭಿನ್ನತೆ-ಆಯ್ಕೆ-ಸಂಕರಭಯ ಇತ್ಯಾದಿಗಳನ್ನು ಅತಿರೇಕಕ್ಕೊಯ್ಯುವ ಉನ್ಮಾದವಾಗುತ್ತದೆ. ಸಮತ್ವವನ್ನು ತಪ್ಪಿಸಬಿಡುತ್ತದೆ" ಎಂದು ಎಚ್ಚರಿಸುವ ಮೂಲಕ, ನವ್ಯಕ್ಕೆ ಪ್ರತಿಕ್ರಿಯಿಸುವ ಭರದಲ್ಲಿ ಬಂಡಾಯವು ಸಾಹಿತ್ಯವನ್ನು ಒಂದು ಕಡೆಗೆ ಒಯ್ದಂತೆ, ಬಂಡಾಯಕ್ಕೆ ಪ್ರತಿಕ್ರಿಯೆಯೂ ಅದನ್ನು ಇನ್ನೊಂದು ಕಡೆಗೆ ಒಯ್ಯುವ ಪ್ರಯತ್ನಗಳಿಗೆ break ಹಾಕಿದರು.

ಇದೇ ಸಂದರ್ಭದಲ್ಲಿ ಪ್ರಸ್ತಾಪಿಸಬಹುದಾದ ಇನ್ನೊಂದು ತಾತ್ವಿಕ ಸಂವಾದವೆಂದರೆ, ದಲಿತ ಸಾಹಿತ್ಯ ಪ್ರಸ್ಥಾನದ್ದು. ದೇವನೂರ ಮಹಾದೇವರ 'ಖಂಡವಿದೆಕೋ ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ' ಎಂಬ ಒಂದು ತುದಿ; ಸಿದ್ದಲಿಂಗಯ್ಯನವರ 'ಇಕ್ರಲಾ ವದೀರ್ಲಾ, ನನ್ಮಕ್ಕಳ ಚರ್ಮಎಬ್ರಲಾ' ಎಂಬ ಇನ್ನೊಂದು ತುದಿಗಳ ನಡುವೆ ತುಯ್ದಾಡಿದ ದಲಿತ ಸಾಹಿತ್ಯ, ತನ್ನನ್ನು ತಾನೇ ಮಿಕ್ಕಿ ಮೀರಿಕೊಳ್ಳಲು ಮಾಡಿದ ಪ್ರಯತ್ನದಂತೆ ತೋರುವ ದೇವನೂರ ಮಹಾದೇವರ 'ಕುಸುಮ ಬಾಲೆ' ಬಗ್ಗೆ ಜಿ. ರಾಜಶೇಖರ್ ಮಾಡಿದ 'ಅದೊಂದು bad faithನಲ್ಲಿ ಹುಟ್ಟಿದ ಕೃತಿ'(ಅಂದರೆ

ಒಂದು ಕಲ್ಪಿತ ಸ್ವೋಪಜ್ಞ ಓದುಗ ವರ್ಗವನ್ನು ಮೆಚ್ಚಿಸಲಿಕ್ಕೆಂದೇ, ಉದ್ದೇಶಪೂರ್ವಕವಾಗಿ ಬರೆದ ಕೃತಿ) ಎಂಬ ಟೀಕೆಯು, ಆಧುನಿಕ ಕನ್ನಡ ಸಾಹಿತ್ಯ ಸಾಗಿ ಬಂದಿರುವ ದಾರಿಯ ಇತ್ತೀಚಿನ ದಿಕ್ಕಿನ ಬಗ್ಗೆಯೇ ಅನುಮಾನ ವ್ಯಕ್ತಪಡಿಸುವಷ್ಟು ಪ್ರಬಲವಾಗಿದೆ. ಏಕೆಂದರೆ ಮಹಾದೇವ ಆಧುನಿಕ ಕನ್ನಡದ ಮೂಲಪ್ರತಿಭೆಯ ಲೇಖಕರಲ್ಲೊಬ್ಬರು. ಹಾಗೂ ಅವರ ಈ 'ಕುಸುಮ ಬಾಲೆ' ಆಧುನಿಕ ಕನ್ನಡ ಸಾಹಿತ್ಯ ಮುಟ್ಟಬಹುದಾದ ಉತ್ತುಂಗ ಶಿಖರಗಳಲ್ಲೊಂದು ಎಂದು ಗಣ್ಯರಿಂದ ವಿಮರ್ಶಾ ಮಾನ್ಯತೆ ಪಡೆದ ಕೃತಿ ಕೂಡಾ ಆಗಿದೆ. (ಇದರ ಪರಿಣಾಮವಾಗಿ ಭಿನ್ನ ಮಾದರಿಯಲ್ಲಿ ಬರೆಯುತ್ತಿದ್ದ ಇತರ ಕೆಲವು ದಲಿತ ಲೇಖಕರು ಕಳವಳಗೊಂಡಿದ್ದೂ ಉಂಟು!) ಜಿ.ರಾಜಶೇಖರರ ಈ ಒಂದು ಮಾತಿನ ಟೀಕೆಯಲ್ಲಿ ಅಂತರ್ಗತವಾಗಿರುವ ತಾತ್ವಿಕ ಸಂವಾದದ ಸಾಧ್ಯತೆಗಳು, ಇಡೀ ಆಧುನಿಕ ಕನ್ನಡಸಾಹಿತ್ಯ ಸಂಕಥನವನ್ನೇ ಒಮ್ಮೆ ಝಾಢಿಸಿ ನೋಡಬಲ್ಲವಾಗಿವೆ. ಆದರೆ ಇಂತಹ ಮಹತ್ವದ ಸಂವಾದ ಬೆಳೆಯಲಾಗದಂತಹ ಬಿಕ್ಕಟ್ಟು, ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಲೋಕವನ್ನು ಆವರಿಸತೊಡಗಿದೆ. ಅದನ್ನು ಸ್ವಲ್ಪ ಮುಂದೆ ಪ್ರಸ್ತಾಪಿಸುವೆ.

ಅದಕ್ಕೂ ಮುನ್ನ, ಈ ಎಲ್ಲ ಸಂವಾದಗಳ ಹಿನ್ನೆಲೆಯಲ್ಲಿ ನವ್ಯದ ಚಿಂತನಾ ಶಕ್ತಿ ಕೇಂದ್ರಗಳಂತಿದ್ದ ಅಡಿಗರು ಮತ್ತು ಅನಂತಮೂರ್ತಿಯವರು ಬದಲಾದ ಮತ್ತು ಬದಲಾಗಿರುವ ಬಗೆಯನ್ನು ಗಮನಿಸಬೇಕು. ಅಡಿಗರು ಎಲ್ಲ ವೈದಿಕ ಪರಿಭಾಷೆ, ಪರಿಕಲ್ಪನೆಗಳನ್ನೂ, ಕಟಕಿ-ವ್ಯಂಗ್ಯ-ಸಿನಿಕತೆಗಳ ಉಕ್ತಿಭಂಗಿಗಳನ್ನು ಕೈಬಿಟ್ಟು, 'ಚಿಂತಾಮಣಿಯಲ್ಲಿ ಕಂಡ ಮುಖ' ದಂತಹ ಅವರ ಈ ಮೊದಲ 'ಯಾವ ಮೋಹನ ಮುರಲಿ ಕರೆಯಿತೋ....' ಕವನದ ಅನುಭಾವಿಕತೆಯ ಇನ್ನೊಂದು ಸ್ತರವನ್ನು ಮುಟ್ಟಿ, ತಮ್ಮೊಳಗೇ ಆರಂಭಿಸಿಕೊಂಡಿದ್ದ ಒಂದು ತಾತ್ವಿಕ ಸಂವಾದದ ಅಂತಿಮ ನೆಲೆಯನ್ನು ತಲುಪಿದ್ದು. ಹಾಗೂ ಅನಂತಮೂರ್ತಿಯವರು ಇತ್ತೀಚೆಗೆ ಕುವೆಂಪು ಅವರನ್ನು ಅರ್ಥಮಾಡಿಕೊಳ್ಳುವಲ್ಲಿ ತಮಗೆ ಅವರ 'egoistic sublime'-ಅಂದರೆ 'ತನ್ನ ಘನತೆಯಲ್ಲಿನ ನಂಬಿಕೆ' ಬಗ್ಗೆ ನವ್ಯ ಮೂಲವಾದ ತಪ್ಪಾದ ಅನುಮಾನಗಳಿದ್ದುದೇ ಕಾರಣವೆಂದು ಕಂಡುಕೊಂಡು, ಕುವೆಂಪು ಅವರನ್ನು ಹೊಸ ಕಣ್ಣುಗಳಿಂದ ನೋಡಿ ವ್ಯಾಖ್ಯಾನಿಸತೊಡಗಿರುವುದು. ಅನಂತಮೂತಿಯವರ ಈ ಹೊಸ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ 'ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು' ಖ್ಯಾತಿಯ ಎಂ.ಜಿ. ಕೃಷ್ಣಮೂರ್ತಿ ಹಾಗೂ 'ಯುಗಧರ್ಮ ಹಾಗೂ ಸಾಹಿತ್ಯ'ದ ಕೀರ್ತಿನಾಥ ಕುರ್ತಕೋಟಿ ಈ ಹಿಂದೆ ನವೋದಯದ- ನಿರ್ದಿಷ್ಟವಾಗಿ ಕುವೆಂಪು ಆವೃತ್ತಿಯ- ಜೊತೆ ನಡಸಿದ್ದ ಹೆಚ್ಚು ಕಡಿಮೆ 'ವ್ಯಕ್ತಿ ನಿಷ್ಠ' ನೆಲೆಯದ್ದೆಂದೇ ಹೇಳಬಹುದಾದ ಸಂವಾದ, ಈಗ ಅರ್ಧಸತ್ಯಗಳಾಗಿ ಮಾತ್ರ ಕಾಣುವ ಅಪಾಯಕ್ಕೆ ಈಡಾಗಿವೆ. ಅಲ್ಲದೆ ನವೋದಯದ ನಾಲ್ವರು ದಿಗ್ಗಜರಾದ ಕುವೆಂಪು, ಬೇಂದ್ರೆ, ಮಾಸ್ತಿ ಹಾಗೂ ಕಾರಂತರಲ್ಲಿ ನವ್ಯದವರ

ತಕರಾರುಗಳೆಲ್ಲ ಹೆಚ್ಚಾಗಿ ಕುವೆಂಪು ಬಗ್ಗೆಯೇ ಏಕ ಕೇಂದ್ರೀಕೃತವಾಗಿತ್ತು ಎಂಬುದೂ ಆಧುನಿಕ ಕನ್ನಡ ಸಾಹಿತ್ಯದ ಬಹುಮುಖ್ಯ ತಾತ್ವಿಕ ಸಂವಾದವನ್ನು ಹುಟ್ಟಿ ಹಾಕಬಹುದಾಗಿದೆ. ಕೆ.ವಿ. ಸುಬ್ಬಣ್ಣನವರ 'ಕುವೆಂಪುಗೆ ಪುಟ್ಟ ಕನ್ನಡಿ' ಇದಕ್ಕೆ ಪೂರ್ಣವಲ್ಲದಿದ್ದರೂ, ಬಹುಮುಖ್ಯ ತೋರುಗೈ ಆಗಿದೆ.

ಇದೇ ಸಂದರ್ಭದಲ್ಲಿ ಪ್ರಸ್ತಾಪಿಸಬಹುದಾದ, ಬರೀ 'ದೃಷ್ಟಿಯುದ್ಧ' ರೂಪದ ಒಂದು ಸಂವಾದವೆಂದರೆ, ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪನವರ ಕೃತಿಗಳ ಬಗೆಗಿನ ನಮ್ಮ ವಿಮರ್ಶಾ ವಲಯದ 'ಮೌನ'ಸಂವಾದ! ಈ ಮೌನದಿಂದುಂಟಾಗಿರುವ ಬಿಗುವು, ಅವರ ಕಾದಂಬರಿಗಳ ಜನಪ್ರಿಯತೆಯನ್ನು ಹೆಚ್ಚಿಸುತ್ತಾ ಹೋಗಿದ್ದರೆ, ಅವುಗಳ ಸಾಹಿತ್ಯಿಕ ಸತ್ವವನ್ನು ಕುಗ್ಗಿಸುತ್ತಾ ಹೋಗಿರುವುದೊಂದು ವಿಶೇಷ! ಇನ್ನು, ಕೆ.ಜಿ. ನಾಗರಾಜಪ್ಪನವರು ಮಂಡಿಸಿರುವ ಕನ್ನಡ ಸಾಹಿತ್ಯದ *ಶಾಕ್ತ* ಪ್ರಣಾಳಿಕೆಯು, ವಸ್ತು ಮತ್ತು ಶೈಲಿಗಳೆರಡರಲ್ಲಿಯೂ ಕನ್ನಡ ಸಾಹಿತ್ಯ ಪರಂಪರೆಯ ಆವೃತ(inclusive) ಗುಣಕ್ಕೆ ಎದುರು ಬಿದ್ದಂತಿರುವ ಕಾರಣಕ್ಕೋ ಏನೋ, ಯಾವುದೇ ತಾತ್ವಿಕ ಸಂವಾದವನ್ನು ಆಹ್ವಾನಿಸದಾಗಿದೆ.

ಇನ್ನು ಕೊನೆಯದಾಗಿ ನಾನು ಪ್ರಸ್ತಾಪಿಸಬಹುದಾದ ಒಂದು ಬಹುಮುಖ್ಯ ತಾತ್ವಿಕ ಸಂವಾದವೆಂದರೆ, ಡಿ.ಆರ್. ನಾಗರಾಜ್ ಪ್ರಣೀತ ಸಂಸ್ಕೃತಿ ವಿಮರ್ಶೆ. ಇಡೀ ಕನ್ನಡ ಸಾಹಿತ್ಯವನ್ನು ಒಂದು ಅಖಂಡತೆಯ ಚೌಕಟ್ಟಿನಲ್ಲಿಟ್ಟು,ಅದನ್ನು ಭಾರತೀಯ ಮತ್ತು ವಿಶ್ವಸಾಹಿತ್ಯ ಪರಂಪರೆಗಳ ಪರಿಪ್ರೇಕ್ಷ್ಯದಲ್ಲಿ ಪರಿಶೀಲಿಸ ಹೊರಟ ಮಹತ್ವಾಕಾಂಕ್ಷೆಯ ಡಿ.ಆರ್. ಅವರ ಪ್ರತಿಭೆ-ಪರಿಶ್ರಮಗಳ ಬಗ್ಗೆ ಯಾರದ್ದೇ ಪ್ರಶ್ನೆ ಇರಲಾರದಾದರೂ, ಅವರು ಹುಟ್ಟು ಹಾಕಿದ ಸಂವಾದಗಳ ಹಿಂದೆ ಆತ್ಯಂತಿಕವಾಗಿ ಕ್ರಿಯಾಶೀಲವಾಗಿರುತ್ತಿದ್ದ ತತ್ವಗಳು, ಮೂಲತಃ ಆಗ ವಿಕಾಸವಾಗುತ್ತಿದ್ದ ಆಧುನಿಕೋತ್ತರ ಚಿಂತನೆಯ ಫಲಗಳೇ ಆಗಿವೆ ಹಾಗೂ ಈ ಚಿಂತನೆಯ Originaliry ಹಾಗೂ ಉದ್ದೇಶಗಳು ಈಗ ಜಗತ್ತಿನಾದ್ಯಂತ, ರಾಜಕೀಯವೂ ಸೇರಿದಂತೆ ಹಲವಾರು ನೆಲೆಗಳಲ್ಲಿ ಪ್ರಶ್ನಿಸಲ್ಪಡುತ್ತಿದೆ ಎಂಬುದನ್ನು ಗಮನಿಸಬೇಕು. ಆಧುನೀಕರಣದ ತರ್ಕವನ್ನು ಪ್ರಶ್ನಿಸತೊಡಗಿದ ಧ್ವನಿ ದೊಡ್ಡದಾಗುತ್ತಿದ್ದಂತೆ ಆರಂಭವಾದ ಈ ಆಧುನಿಕೋತ್ತರವಾದ, ಆಧುನೀಕರಣದ ವಿಕ್ಷಿಪ್ತತೆಗಳನ್ನು ಪ್ರಶ್ನಿಸುವಂತಹ space ಅನ್ನು ಲಪಟಾಯಿಸುವ ಪಶ್ಚಿಮದ ರಾಜಕೀಯವಾಗಿ- ನವ ವಸಾಹತು ಶಾಹಿಯ ಆಸ್ಥಾನದ ಸು'ಸಂಸ್ಕೃತ' ವಿದೂಷಕನಂತೆ -ಪ್ರಕಟವಾಗತೊಡಗಿರುವುದನ್ನು, ಗಮನಿಸದೇ ಇರಲಾಗದು.

ಬುದ್ಧನ ಮೂಲ ತಿಳುವಳಿಕೆಯಾದ 'ಎಲ್ಲವೂ ಶೂನ್ಯದಲ್ಲಿ ಹುಟ್ಟಿ ಶೂನ್ಯದೊಳಕ್ಕೆ ವಿಸರ್ಜನೆಯಾಗುತ್ತದೆ' ಎಂಬ ಸತ್ಯದ ಹಲವು ಪಾರ್ಶ್ವಗಳ ನೆರಳುಗಳಂತಿರುವ ಆಧುನಿಕೋತ್ತರವಾದದ ರಚನೆ-ನಿರಚನೆಯ ಮೂಲ ತತ್ವಗಳು, ಬುದ್ಧನ 'ಸಂಸಾರ ದುಃಖಮಯ' (ಎಲ್ಲವೂ ಸಾಪೇಕ್ಷ ಸತ್ಯ) ಎಂಬ ಮೊದಲ ಆರ್ಯ

ಸತ್ಯಕ್ಕೆ ನಿಂತು ಬಿಟ್ಟು, ದುಃಖ ನಿವಾರಣೆಗೆ ಮಾರ್ಗವಿದೆ (ಸಮ್ಯಕ್ ಕರ್ಮದ ಮೂಲಕ ಸಾಪೇಕ್ಷತೆಯನ್ನು ನಿವಾರಿಸಿಕೊಳ್ಳಬಹುದು) ಎಂಬ ನಿರ್ಣಾಯಕ ಆರ್ಯ ಸತ್ಯವನ್ನೇ ಹಿನ್ನೆಲೆಗೆ ಸರಿಸಬಲ್ಲ 'ಮಾಯಾ ಪ್ರಪಂಚ'ವೊಂದನ್ನು ಸೃಷ್ಟಿಸಿವೆ; ಹಾಗೂ ಆ ಮೂಲಕ ತನ್ನ ಮಾರುಕಟ್ಟೆ ರಾಜಕಾರಣದ ಅಶ್ಲೀಲತೆಯ ಸಮಸ್ಯೆಗಳಿಗೆ ಆಧ್ಯಾತ್ಮಿಕ ಪರಿವೇಷದ ಪರಿಹಾರ ಕಂಡುಕೊಳ್ಳುವ ಆಧುನಿಕ ನಾಗರೀಕತೆಯ 'ಅತ್ಯಾಧುನಿಕ' ಅಸ್ತ್ರಗಳಂತೆಯೂ ಕಾಣತೊಡಗಿವೆ- ಈ ಆಧುನಿಕೋತ್ತರ ಚಿಂತನೆಯ ಅಧ್ಯಯನ, ಪ್ರಚಾರಗಳಿಗಾಗಿ ವಿವಿಧ ದಿಕ್ಕುಗಳಿಂದ ವಿವಿಧ ಯೋಜನೆಗಳ ರೂಪದಲ್ಲಿ ಹರಿದು ಬರುತ್ತಿರುವ ಹಣದ ಪ್ರವಾಹವನ್ನು ನೋಡಿದರೆ!

ಅದೇನೇ ಇರಲಿ, ಡಿ.ಆರ್. ನಾಗರಾಜ್ ತಮ್ಮ ಅಧ್ಯಯನದ ಮುಖ್ಯ ಅಂಗಗಳಾಗಿ ಪ್ರಸ್ತಾಪಿಸುವ ವಿಸ್ಮೃತಿ ಯು ಬುದ್ಧನ 'ಅವಿದ್ಯೆ' ಪರಿಕಲ್ಪನೆಯ ಆಧುನಿಕ ವಸಾಹತುಶಾಹಿ ಆವೃತ್ತಿಯಂತಿದ್ದರೆ, ಅವರು ತಮ್ಮ ಅಧ್ಯಯನಗಳ ಅಖಂಡತೆ ಸಾಧಿಸಲು ಮುನ್ನೆಲೆಗೆ ತಂದ ನಿರ್ಲಕ್ಷಿತ ಕುಲಗಳ ಅಧ್ಯಯನದ (Subaltern studies)ಪರಿಕಲ್ಪನೆ, ನಾನು ಈ ಹಿಂದೆ ಪ್ರಸ್ತಾಪಿಸಿದ ತೇಜಸ್ವಿಯವರ ಕನ್ನಡ ಸಾಹಿತ್ಯ ಚರಿತ್ರೆಯ ನಿರ್ವಚನದ ವಿಶಿಷ್ಟ ವ್ಯಾಖ್ಯಾನದಂತೆ ಮಾತ್ರ ತೋರುತ್ತದೆ. ಇದಕ್ಕಾಗಿ ಆಧುನಿಕೋತ್ತರ ಚಿಂತನೆಯ ಹಿಂದಿನ ತಾತ್ವಿಕರಾದ ಸೈದ್, ಫ್ಯೂಕೋ, ಡೆರಿಡಾ ಮುಂತಾದವರನ್ನು ಪೌರ್ವಾತ್ಯ-ಬುದ್ಧ ತತ್ವಗಳ recycling ಮಾಡಿದ ಆಪಾದನೆಗೊಳಪಡಿಸುವುದು ಅನುಚಿತ ಪ್ರಯತ್ನವಾದೀತಾದರೂ, ಬೌದ್ಧ ಮೀಮಾಂಸೆಯ ಬಗ್ಗೆ ಆಳವಾದ ಅಧ್ಯಯನ ಮಾಡಿದಂತೆ ಮತ್ತು ಅಪಾರ ಜಾಗತಿಕ ರಾಜಕಾರಣದ ಸೂಕ್ಷ್ಮತೆ ಹೊಂದಿದಂತೆ ತೋರುವ ಡಿ. ಆರ್., ಇದನ್ನು ಗುರುತಿಸಲಾಗದಂತಹ 'ವಿಸ್ಮೃತಿ'ಗೆ ಒಳಗಾದದ್ದು ನಿಜವಾಗಿಯೂ ಸೋಜಿಗದ ಸಂಗತಿಯೇ ಆಗಿದೆ. ಇದನ್ನೆಲ್ಲ ನಾನು ಎಲ್ಲವೂ ಮೊದಲೇ ನಮ್ಮಲ್ಲಿತ್ತು ಎಂಬ ಗತ ವೈಭವದ ಮರುಳು ಮನಸ್ಸಿನಿಂದ ಹೇಳುತ್ತಿಲ್ಲ; ಬದಲಾಗಿ ಇದೆಲ್ಲವನ್ನು ಆಧುನಿಕೋತ್ತರ ಚಿಂತನೆ ಎಂಬ ಹೆಸರಿನಲ್ಲಿ ಹೊಸ packageನೊಂದಿಗೆ ರಫ್ತುಮಾಡಿಕೊಳ್ಳಲಾಗುತ್ತಿರುವುದರ ಹಿಂದಿನ ರಾಜಕಾರಣವೇ, ಇಂದು ಮೂರ್ತರೂಪದಲ್ಲಿ ಜಾಗತೀಕರಣವಾಗಿ ನಮ್ಮೆಲ್ಲರನ್ನೂ ಮರಳು ಮಾಡುತ್ತಿರಬಹುದೇ ಎಂಬ ಆತಂಕ- ಅನುಮಾನಗಳ ಮನಸ್ಸಿನಿಂದ ಮಂಡಿಸುತ್ತಿದ್ದೇನೆ.

ಇತ್ತೀಚೆಗೆ ಜಿ.ಬಿ. ಹರೀಶ ಎಂಬುವವರು 'ಬೆಳಕಿನಾಟ' ಎಂಬ ತಮ್ಮ ಪುಸ್ತಕದಲ್ಲಿನ ಲೇಖನವೊಂದರಲ್ಲಿ, ಡಿ.ಆರ್. ನಾಗರಾಜರ ಈ 'ವಿಸ್ಮೃತಿ'ಯ ರಹಸ್ಯವನ್ನು ಭೇದಿಸಲು ಯತ್ನಿಸಿದ್ದಾರೆ. ಅವರ ಪ್ರಕಾರ, 'ಪಿತ್ರಾರ್ಜಿತ'ವನ್ನು 'ಸ್ವಯಾರ್ಜಿತ'ಮಾಡಿಕೊಳ್ಳುವ ಕಲೆಯನ್ನು ಕರಗತ ಮಾಡಿಕೊಳ್ಳುವ ಅವಸರದಲ್ಲಿ ಉತ್ಪತ್ತಿಯಾಗುವ 'ಅಪಾರ್ಥ ಪ್ರತಿಭೆ'ಗೆ ಪಕ್ಕಾದ ನಾಗರಾಜರು ಪಕ್ಕಾಗಿದ್ದಾರೆ. ಇದರಿಂದಾಗಿ ನಮ್ಮ ಪರಂಪರೆಯಲ್ಲಿ ವೈದಿಕ-ಅವೈದಿಕ ಧಾರೆಗಳ ನಡುವೆ ನಡೆದ

ಸಂವಾದವನ್ನು ಸಮಚಿತ್ತದಿಂದ ಅರ್ಥೈಸಿಕೊಳ್ಳಲು ಸೋತು; ತಮ್ಮ ಅವೈದಿಕ ನಿರೂಪಣೆಗಳಿಗೆಲ್ಲ ಬಹುಪಾಲು ಅವಲಂಬಿಸಿರುವ ನಾಗಾರ್ಜುನನ 'ಮಾಧ್ಯಮಿಕ ದರ್ಶನ'ವು ವೈದಿಕ-ಅವೈದಿಕ ದರ್ಶನಗಳೆರಡನ್ನೂ ಮೀರಿ ನಿಂತ ದರ್ಶನವಾಗಿದೆ ಎಂಬುದನ್ನು ಗುರುತಿಸುವಲ್ಲಿ ವಿಫಲರಾಗಿದ್ದಾರೆ. ಇದು ಅವರ 'ವಿಸ್ಮೃತಿ'ಗೆ ಕಾರಣವಾಗಿದೆ. ನಿಜವಾಗಿಯೂ ಇದು ಆಳವಾದ ಮತ್ತು ಗಂಭೀರವಾದ ಪರಿಶೀಲನೆಯನ್ನು ಬೇಡುವ ಸಂವಾದಕ್ಕೆ ವಸ್ತುವಾಗಿದೆ. ಆದರೆ ಧಾರ್ಮಿಕ ಅಧ್ಯಯನಗಳ ವಲಯ ಮತ್ತು ಸಾಂಸ್ಕೃತಿಕ ಅಧ್ಯಯನಗಳ ವಲಯಗಳ ನಡುವೆ ದೊಡ್ಡ 'ಅರಿವಿನ ಕಂದಕ'ವೇ ಇರುವ ಸದ್ಯದ ಸಂದರ್ಭದಲ್ಲಿ ಈ ಸಂವಾದ, ಜಿ. ರಾಜಶೇಖರರ bad faithನ ಸಂವಾದದಂತೆಯೇ ಸದ್ಯಕ್ಕೆ ಇನ್ನೂ ಅಪೂರ್ಣವಾಗಿರುವುದರಿಂದ, ಇವು ಅಪೂರ್ಣವಾಗಿಯೇ ಉಳಿದುಬಿಡುವಂತಹ ವಾತಾವರಣ ಕನ್ನಡ ಸಂಸ್ಕೃತಿ ಲೋಕದಲ್ಲಿ ಕ್ರಮೇಣ ಹೆಪ್ಪುಗಟ್ಟುತ್ತಿರುವ ಕಡೆ ನಿಮ್ಮ ಗಮನ ಸೆಳೆದು, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಎಲ್ಲ ಸಾಹಿತ್ಯಿಕ ಸಂವಾದಗಳನ್ನೂ ಸಾಹಿತ್ಯಿಕ ನಿಷ್ಠೆಯಿಂದಲೇ, ಸತ್ಯದರ್ಶನಕ್ಕಾಗಿಯೇ ನಡೆಸುತ್ತಿದ್ದ ಕಾಲ ಮುಗಿಯುತ್ತ ಬಂದಿದೆ ಎಂದು ತೋರುತ್ತದೆ. ಇದಕ್ಕೆ ನಾನು ಈ ಮೊದಲು ಪ್ರಸ್ತಾಪಿಸಿದ politics of literature ಮೊದಲು ರೂಕ್ಷವಾಗಿ, ನಂತರ ಸೂಕ್ಷ್ಮವಾಗಿ literature of politics ಆಗಿ ಪರಿವರ್ತಿತವಾಗುತ್ತಿರುವುದೇ ಕಾರಣವಾಗಿದೆ ಎಂದರೆ ತಪ್ಪಾಗಲಾರದು: ಕಳೆದ ೧೫-೨೦ವರ್ಷಗಳಲ್ಲಿ ಸಾಹಿತ್ಯಲೋಕದಲ್ಲಿ ಕಂಡ ಮಾಸ್ತಿಯವರ' ಚೆನ್ನಬಸವನಾಯಕ', ಕಲಬುರ್ಗಿಯವರ 'ಮಾರ್ಗ', ಶಿವಪ್ರಕಾಶರ 'ಮಹಾಚೈತ್ರ' ಹಾಗೂ ಪ.ವಿ. ನಾರಾಯಣರ 'ಧರ್ಮಕಾರಣ'ಗಳ ಬಗೆಗಿನ ವಿವಾದಗಳೆಲ್ಲವೂ ಸಾಹಿತ್ಯಕ ನೆಲೆಗಿಂತ, ರಾಜಕೀಯ ನೆಲೆಗಳಲ್ಲೇ ತೀರ್ಮಾನವಾಗಿವೆ. ಸಾಹಿತ್ಯ-ಸಂಸ್ಕೃತಿಗಳು ನಿಧಾನವಾಗಿ ರಾಜಕೀಯ ಪ್ರಭುತ್ವದ ಹಿಡಿತಕ್ಕೆ ಸಿಗುತ್ತಿವೆ: ವಿಷಯ ಪರಿಣತರ ಬದಲಾಗಿ ಸ್ವಯಂಘೋಷಿತ ಅಭಿಪ್ರಾಯ ಮುಖಂಡರು ಹಾಗೂ ರಾಜಕೀಯ ನಾಯಕರೇ ಸಾಹಿತ್ಯ, ಸಂಸ್ಕೃತಿ, ಶಿಕ್ಷಣ ಕ್ಷೇತ್ರಗಳಿಗೆ ಸಂಬಂಧಪಟ್ಟ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಈ ದುರಂತಕ್ಕಿಂತ ದೊಡ್ಡ ದುರಂತವೆಂದರೆ, ಇದನ್ನು ಸಾಹಿತಿಗಳು, ಚಿಂತಕರು, ಕಲಾವಿದರು, ಕ್ಷೇತ್ರ ಪರಿಣತರು ಕ್ರಮೇಣ ಒಪ್ಪಿಕೊಳ್ಳತೊಡಗಿರುವುದು. ಇದಕ್ಕೆ ಇತ್ತೀಚಿನ ಉದಾಹರಣೆ ಎಂದರೆ, ಒಂದನೇ ತರಗತಿಯಿಂದ ಕಡ್ಡಾಯವಾಗಿ ಇಂಗ್ಲೀಷ್ ಕಲಿಸುವ ಸರ್ಕಾರದ ನೀತಿಗೆ ಇತ್ತೀಚಿನವರೆಗೆ ವಿರೋಧ ವ್ಯಕ್ತಪಡಿಸುತ್ತಿದ್ದ ನಮ್ಮ ಹಿರಿಯ ಸಾಹಿತಿಗಳು, ಕಲಾವಿದರು, ಚಿಂತಕರು ಹಾಗೂ ಹೋರಾಟಗಾರರಲ್ಲಿ ಅನೇಕರು, ಸರ್ಕಾರವು ತಮ್ಮ ಸಂಸ್ಥೆಗಳಿಗೆ ಅನುದಾನವನ್ನೋ, ಸುವರ್ಣ ಕರ್ನಾಟಕದ ವಿವಿಧ ಪ್ರಶಸ್ತಿಗಳನ್ನೋ ಪ್ರಕಟಿಸತೊಡಗಿದಂತೆ, ತಮ್ಮ ಬಾಯಿಗಳನ್ನು ಬಂದ್ ಮಾಡಿಕೊಳ್ಳತೊಡಗಿರುವುದು. ಕನ್ನಡ ಕಟ್ಟಿದ ಇಂತಹ ಹಿರಿಯರೇ ಕನ್ನಡದ ಅಳಿವು-ಉಳಿವಿನ ಈ ನಿರ್ಣಾಯಕ ಕ್ಷಣದಲ್ಲಿ

ಬಾಯಿ ಬಂದ್ ಮಾಡಿಕೊಳ್ಳುವ ಮೂಲಕ ಕನ್ನಡದ ಕಿರಿಯರಿಗೆ ಕಳಿಸುತ್ತಿರುವ ಸಂದೇಶವಾದರೂ ಏನು? ಕನ್ನಡ ಸಂದರ್ಭದ ಎಲ್ಲ ತಾತ್ವಿಕ ಸಂವಾದಗಳ ಬಂದ್‌ನ ಆರಂಭದ ಸೂಚನೆ ಇದು.

ಈಗ ಎಚ್ಚರ ತಪ್ಪದಿರೋಣ.

○

(ಸುವರ್ಣ ಕರ್ನಾಟಕ ಆಚರಣೆಯ ಅಂಗವಾಗಿ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ೨೦೦೬ರ ನವೆಂಬರ್ ೬-೭-೮ರಂದು ಆಯೋಜಿಸಿದ್ದ ಲೇಖಕರ ಸಮಾವೇಶದ 'ಚಿನ್ನದ ಬೆಳಸು' ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧದ ಪರಿಷ್ಕೃತ ರೂಪ)

'ಗತಕಥನ' : ಆಧುನಿಕೋತ್ತರವಾದಿ ಅಧ್ಯಯನದ ಸತ್ಯಗಳು

ಇತಿಹಾಸ ಅಧ್ಯಯನವು ಕಳೆದ ಕೆಲವು ದಶಕಗಳಲ್ಲಿ ಹಲವು ಹೊಸ ನೆಲೆಗಳನ್ನು ಕಂಡುಕೊಂಡು, ಇತಿಹಾಸ ಕುರಿತ ಸಾಂಪ್ರದಾಯಿಕ ತಿಳುವಳಿಕೆ-ಕಲ್ಪನೆಗಳನ್ನು ಬುಡಮೇಲುಗೊಳಿಸಿದೆ. ಇತಿಹಾಸವೆಂಬುದು 'ವಸ್ತುನಿಷ್ಠ'ವಾಗಿರಲು ಸಾಧ್ಯವಿಲ್ಲ; ಯಾರ ಇತಿಹಾಸವನ್ನು ಯಾರು, ಯಾವ ಸಂದರ್ಭದಲ್ಲಿ ನಿರೂಪಿಸುತ್ತಿದ್ದಾರೆ ಎಂಬುದರ ಮೇಲೆ ಆ ಇತಿಹಾಸದ ಸ್ವರೂಪ ನಿರ್ಧರಿತವಾಗುತ್ತದೆ ಎಂಬ- ಇತಿಹಾಸಕ್ಕೆ ಸಂಬಂಧಿಸಿದಂತೆ ಸಾಪೇಕ್ಷ ಸಿದ್ಧಾಂತದ ಅನ್ವಯವು, ಇಂದು ಹೊಸ ಇತಿಹಾಸ ಶಾಸ್ತ್ರವನ್ನು ರೂಪಿಸುತ್ತಿದೆ. ಹೀಗಾಗಿ ಒಂದು ಜನಾಂಗ, ಸಮಾಜ ಅಥವಾ ರಾಷ್ಟ್ರವನ್ನು ಕುರಿತ ಈ ಹಿಂದಿನ ಇತಿಹಾಸ ಅಧ್ಯಯನಗಳ ಮಿತಿಗಳು ಕ್ರಮೇಣ ಗೋಚರವಾಗತೊಡಗಿ, ಆ ಅಧ್ಯಯನಗಳು ಆಯಾ ಕಾಲ-ಸಂದರ್ಭಗಳ ರಾಜಕೀಯ ಹಿತಾಸಕ್ತಿಗಳ ಫಲಗಳೇ ಆಗಿವೆ ಎಂದು ವಾದಿಸುವ ಸಿದ್ಧಾಂತಗಳು ಪ್ರಚಲಿತಕ್ಕೆ ಬರುತ್ತಿವೆ. ವಿಶೇಷವಾಗಿ ಭಾರತದಂತಹ ಮಾಜಿ ವಸಾಹತುಗಳ ಇತಿಹಾಸ ನಿರೂಪಣೆಗಳನ್ನು ಕುರಿತಂತೆ, 'ಆಧುನಿಕೋತ್ತರವಾದ' ಎಂಬ ಹೊಸ ಸಿದ್ಧಾಂತ ಹಲವು ಗಂಭೀರ ಪ್ರಶ್ನೆಗಳನ್ನು ಎತ್ತಿದೆ. 'ನೇಷನ್ ಸ್ಟೇಟ್' ಎಂಬರ್ಥದಲ್ಲಿ 'ರಾಷ್ಟ್ರ'ವೆಂಬುದು ಒಂದು ಆಧುನಿಕ-ಪಶ್ಚಿಮದ-ಕಲ್ಪನೆಯಾಗಿದ್ದು, ಅದು ಭಾರತವು ವಸಾಹತು ಸಂದರ್ಭದಲ್ಲಿ ಒಂದು 'ರಾಷ್ಟ್ರ'ವಾಗಿ-ಅದರ ಪಾರಂಪರಿಕ ಅರ್ಥದಲ್ಲಿ - ಉದಯಿಸುತ್ತಿದ್ದಾಗ ಉಂಟು ಮಾಡಿದ ಒತ್ತಡಗಳು, ಹೇಗೆ ಅದರ ಇತಿಹಾಸ ನಿರೂಪಣೆಯಲ್ಲಿ ಸಂಕಷ್ಟಗಳನ್ನು ತಂದೊಡ್ಡಿ ಇಂದಿನ ಅನೇಕ ಸಮಸ್ಯೆಗಳಿಗೆ ಕಾರಣ ವಾಗಿವೆ ಎಂಬುದು ಇಂದು ವಿಶೇಷ ಅಧ್ಯಯನಗಳಿಗೆ ಕಾರಣವಾಗಿದೆ. ಡಾ||ರಾಜಾರಾಮ ಹೆಗಡೆ ಅವರ 'ಗತಕಥನ' ಇಂತಹ ಒಂದು ಅಧ್ಯಯನ-ಕೃತಿಗಳಲ್ಲೊಂದಾಗಿದೆ.

'ಆಧುನಿಕೋತ್ತರವಾದ'ವನ್ನು ಸ್ಥೂಲವಾಗಿ ವಿವರಿಸುವುದಾದರೆ, ಮುಖ್ಯ ಅಮುಖ್ಯಗಳೆಂಬುದು ಸಂದರ್ಭಸೃಷ್ಟಿ(ಅಥವಾ ಗ್ರಹಿಕೆಯ ಪೂರ್ವಾಗ್ರಹ) ಮಾತ್ರ ವಾಗಿದ್ದು, ಈ ಭೇದಗಳನ್ನಾಧರಿಸಿದ 'ವಸ್ತುನಿಷ್ಠ ಅಧ್ಯಯನ'ಗಳೂ ಸಂದರ್ಭ ಸೃಷ್ಟಿಗಳೇ ಆಗಿರುವುದರಿಂದ ಇವನ್ನು ಅಧ್ಯಯನದ ಹಲವು ಪಠ್ಯಗಳಲ್ಲಿ ಒಂದು ಮಾತ್ರ ಎಂದು ಭಾವಿಸಬೇಕೆಂದು ವಾದಿಸುತ್ತಾ; ಜಗತ್ತಿನ ಎಲ್ಲ ವಿದ್ಯಮಾನಗಳು ಹಲವು ಪಠ್ಯಗಳ ಸಂಯೋಜನೆಯ ಒಂದು ಸಂಕಥನ ಸ್ವರೂಪವುಳ್ಳವು ಎಂದು ಹೇಳುತ್ತದೆ. ಆದರೆ ಇದು ವೈಜ್ಞಾನಿಕ ವಿಧಾನವನ್ನು ಅನುಸರಿಸಿ ಮಾಡಲಾಗುವ ವಸ್ತುನಿಷ್ಠ ನಿರೂಪಣೆಯನ್ನಾಧರಿಸಿದ ಅಧ್ಯಯನಗಳ ಫಲಗಳಿಂದ ವಸಾಹತುಗಳನ್ನು ವಂಚಿಸಲು ಹೊರಟಿರುವ

ವಸಾಹತೋತ್ತರ ಸಂಚು ಎಂದು ಆಧುನಿಕವಾದದ ಪ್ರತಿಪಾದಕರು ಹೇಳುತ್ತಿದ್ದಾರೆ. ರಾಜಾರಾಂ ಹೆಗಡೆಯವರ ಕೃತಿ ಇಂತಹ ಒಂದು ಅಂತರ- ಸೈದ್ಧಾಂತಿಕ ಅಧ್ಯಯನಗಳ ಪರಿಪ್ರೇಕ್ಷ್ಯದಲ್ಲಿ ಭಾರತದ ರಾಷ್ಟ್ರೀಯತೆಯ ಕಲ್ಪನೆಯನ್ನು ಚರ್ಚಿಸುವ ಹಾಗೂ ಆ ಚರ್ಚೆಯ ಆಧಾರದಲ್ಲಿ ಕನ್ನಡದ ನಾಲ್ವರು ಪ್ರಮುಖ ಲೇಖಕರ-ಕುವೆಂಪು, ಕಾರಂತ, ಮಾಸ್ತಿ ಹಾಗೂ ಭೈರಪ್ಪ-ಕೃತಿ ಹಾಗೂ ವಿಚಾರಗಳನ್ನು ಪರಿಶೀಲಿಸುವ ಪ್ರಯತ್ನ ಮಾಡುತ್ತದೆ. ಹೀಗಾಗಿ ಈ ಕೃತಿ 'ರಾಷ್ಟ್ರದ ಇತಿಹಾಸ ಹಾಗೂ ಕನ್ನಡ ಜಗತ್ತು'ಎಂಬ ಉಪಶೀರ್ಷಿಕೆಯನ್ನೂ ಪಡೆದಿದೆ.

ಹೆಗಡೆಯವರು ಈ ಕೃತಿಯಲ್ಲಿಯ ತಮ್ಮ ಹತ್ತು ಲೇಖನಗಳನ್ನು 'ಇತಿಹಾಸದ ಕಥನ' ಹಾಗೂ 'ಕಥನದಲ್ಲಿ ಇತಿಹಾಸ' ಎಂಬ ಎರಡು ವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಮೊದಲ ಭಾಗದ ಆರೂ ಲೇಖನಗಳಲ್ಲಿ ಹೆಗಡೆಯವರು ಪ್ರಾಚೀನ ಭಾರತದ ಕಾವ್ಯ-ಪುರಾಣ ರೂಪದ ಇತಿಹಾಸದ ಕಲ್ಪನೆ ಹಾಗೂ ಪಶ್ಚಿಮದಿಂದ ಪಡೆಯಲಾದ ಸಾಕ್ಷ್ಯಾಧಾರಿತ 'ಹಿಸ್ಟರಿ' ಕಲ್ಪನೆ ಮತ್ತು ವಸಾಹತು ಸಂದರ್ಭದಿಂದಾಗಿ ಈ 'ಹಿಸ್ಟರಿ' ಕಲ್ಪನೆಯೂ ಪಶ್ಚಿಮದ ವಿದ್ವಾಂಸರ 'ಪೌರ್ವಾತ್ಯ ಅಧ್ಯಯನ'ಗಳಿಂದಾಗಿ ಪಡೆದುಕೊಂಡ ವಿವಿಧ ರೂಪಗಳ ಪರಿಚಯ ಮಾಡಿಕೊಡುತ್ತಾರೆ. ಇವುಗಳ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಇತಿಹಾಸವು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಟ್ಟಿಕೊಂಡ ಬಗೆ ಹಾಗೂ ಈ ಬಗೆಯಿಂದಾಗಿ ಭೂತ-ವರ್ತಮಾನಗಳನ್ನು ಅದು ಗ್ರಹಿಸುವುದರಲ್ಲಿನ ಶಕ್ತಿ-ಮಿತಿಗಳನ್ನು ಗುರುತಿಸುತ್ತಾರೆ. ಇದರ ಭಾಗವಾಗಿ ದಲಿತರ ಹಾಗೂ ಹಿಂದುಳಿದವರ, ಮುಸ್ಲಿಂವಾದಿಗಳ, ಹಿಂದೂವಾದಿಗಳ, ಕಾಂಗ್ರೆಸ್ಸಿಗರ ಚಳುವಳಿಗಳ ಕುರಿತು ಹೊಸ ಒಳನೋಟಗಳುಳ್ಳ ವ್ಯಾಖ್ಯಾನಗಳನ್ನು ನೀಡುತ್ತಾ ಇತಿಹಾಸದ ಬಹುರೂಪತೆಯನ್ನು ನಿರೂಪಿಸುತ್ತಾರೆ.

'ಸಾಂಸ್ಕೃತಿಕ ಮುಖಾಮುಖಿ, ವಸಾಹತು ಇತಿಹಾಸ ಮತ್ತುರಾಷ್ಟ್ರೀಯ ರಾಜಕೀಯ' ಎಂಬ ಮೊದಲ ಲೇಖನ ಇಡೀ ಕೃತಿಗೆ ಒಂದು ತಾತ್ವಿಕ ಚೌಕಟ್ಟು ಒದಗಿಸಿಕೊಡುತ್ತದೆ. ಪ್ರತಿಯೊಂದು ಇತಿಹಾಸ ನಿರೂಪಣೆಯೂ ವರ್ತಮಾನದ ಅಗತ್ಯಗಳಿಗನುಗುಣವಾಗಿ ನಿರೂಪಣೆಯಾಗುತ್ತದೆಂದು ವಾದಿಸುವ ಈ ಲೇಖನ, 'ರಾಷ್ಟ್ರೀಯ ಇತಿಹಾಸದ ಹುಡುಕಾಟ' ಎಂಬ ಇನ್ನೊಂದು ಲೇಖನ ಜೊತೆಗೂಡಿ, ಭಾರತದ ಸಾಂಸ್ಕೃತಿಕ ರಾಷ್ಟ್ರೀಯ ಇತಿಹಾಸ ನಿರೂಪಣೆಯಲ್ಲಿ ಸ್ವಾತಂತ್ರ್ಯ ಹೋರಾಟದ ರಾಜಕಾರಣ ಕೆಲಸ ಮಾಡಿ ಹೇಗೆ ಹಿಂದೂ ರಾಷ್ಟ್ರ ಕಲ್ಪನೆ ಹಾಗೂ ಸೆಕ್ಯುಲರ್ ರಾಷ್ಟ್ರ ಕಲ್ಪನೆಗಳೆಂಬ ದ್ವಂದ್ವವನ್ನು ಸೃಷ್ಟಿಸಿದೆ ಎಂಬುದನ್ನು ವಿವರಿಸುತ್ತದೆ. ಈ ನಿರೂಪಣೆಗೆ ಪೂರಕವಾಗಿ 'ರಾಜಾವಳಿ ಕಥೆ: ಮತ ಪ್ರಪಂಚ' ಮತ್ತು 'ವಿಜಯನಗರದ ಪತನದ ಕಥೆಗಳು' ಎಂಬೆರಡು ಲೇಖನಗಳು, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಿರೂಪಿತವಾದ ರಾಷ್ಟ್ರೀಯ ಸಾಂಸ್ಕೃತಿಕ ಇತಿಹಾಸವನ್ನು ಈಗ-ವಸಾಹತೋತ್ತರ ಚಿಂತನೆಗಳ ಪ್ರಭಾವದಿಂದಾಗಿ-

ಗೋಚರವಾಗುತ್ತಿರುವ ಮತ ಕುರಿತ ಆಧುನಿಕ ಆಲೋಚನೆಗಳ ಮಿತಿಗಳ ಹಿನ್ನೆಲೆಯಲ್ಲಿ, ಹೊಸದಾಗಿ ಒಡೆದು ಕಟ್ಟಬೇಕಾದ ಅಗತ್ಯವನ್ನು ಸೂಚಿಸುತ್ತವೆ. ಆದರೆ ಮತ ಮೂಢನೊಬ್ಬನ (ಈ ವರ್ಣನೆಯೇ ಆಧುನಿಕವಾದದ ಪರಿಣಾಮವೆಂದು ಹೆಗಡೆಯವರು ವಾದಿಸಲೂಬಹುದು!) ಅರ್ಧಸತ್ಯಗಳ ಅನಾಹುತಕಾರಿ ಕಥನದಂತೆ ತೋರುವ 'ರಾಜಾವಳಿ ಕಥೆ'ಯನ್ನು ಒಂದು ಸ್ವತಂತ್ರ ಹಾಗೂ ಗಂಭೀರ ಆಕರ ಪಠ್ಯವಾಗಿ ಸ್ವೀಕರಿಸಿ ತಾತ್ವಿಕ ನಿರ್ಣಯಗಳಿಗೆ ಬರುವುದು ಆಧುನಿಕೋತ್ತರ /ವಸಾಹತೋತ್ತರವಾದದ ಅತಿಯಲ್ಲವೇ ಎಂಬ ಪ್ರಶ್ನೆ ಸಾಮಾನ್ಯ ಓದುಗರನ್ನು ಕಾಡದಿರದು.

ಈ ಪ್ರಶ್ನೆ ಇನ್ನಷ್ಟು ಗಂಭೀರ ರೀತಿಯಲ್ಲಿ ಹಾಗೂ ಮಹತ್ವದ್ದಾಗಿ ಬೇರೆ ಬೇರೆ ಅರ್ಥಗಳಲ್ಲಿ ಪ್ರತಿಧ್ವನಿಸತೊಡಗುವುದು, ಹೆಗಡೆಯವರು ಕನ್ನಡದ ಸಾಮಾನ್ಯ ಓದುಗರಿಗೆ ಪರಿಚಿತವಾದ ಕುವೆಂಪು, ಕಾರಂತ, ಮಾಸ್ತಿ ಹಾಗೂ ಭೈರಪ್ಪನವರ ಕೃತಿಗಳನ್ನು ಪರಿಶೀಲಿಸಿ ತಲುಪುವ ತೀರ್ಮಾನಗಳನ್ನು ಗಮನಿಸಿದಾಗ. ಅಮೂರ್ತವಾಗಿರುವವರೆಗೆ ಕಾಲದೂರದ ಆವರಣಗಳಲ್ಲಿ ಸೃಜನಶೀಲವಾಗಿ ಕಾಣುವ ಚಿಂತನಗಳು, ವರ್ತಮಾನದ ಆವರಣದಲ್ಲಿ ಮೂರ್ತಗೊಂಡಾಗ ಪಡೆಯುವ ರೂಪಗಳು ಪ್ರಶ್ನಾರ್ಹಗೊಳ್ಳುವ ಪರಿಗೆ ಇಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ. ಉದಾಹರಣೆಗೆ, ಕಲೆ ಕುರಿತ ಶಿವರಾಮ ಕಾರಂತರ ವಿಚಾರಗಳನ್ನು ವಿಶ್ಲೇಷಿಸುತ್ತಾ, ಇವು ಏಕರೂಪಿ ವಿಶ್ವ ಹಾಗೂ ರಾಷ್ಟ್ರಗಳ (ಆಧುನಿಕವಾದಿ) ಕಲ್ಪನೆಗಳನ್ನಾಧರಿಸಿದ ಕಲಾ ಇತಿಹಾಸವನ್ನು ನಂಬಿ ಹೊರಹೊಮ್ಮಿದಂತಹವು ಎಂದು ಅವುಗಳ ಮಿತಿಗಳನ್ನು ಗುರುತಿಸುವ ಹೆಗಡೆಯವರು;ಭೈರಪ್ಪನವರ 'ಸಾರ್ಥ'ದಲ್ಲಿ ಕಟ್ಟಿಕೊಡಲ್ಪಟ್ಟಿರುವ ಇತಿಹಾಸವು ನಿರಾಧಾರವಾದುದೆಂದು ಸವಿವರವಾಗಿ ವಿಷದೀಕರಿಸುತ್ತಾ ಹೋಗಿ, 'ಭೈರಪ್ಪನವರ 'ಸಾರ್ಥ'ವು ಈ ರೀತಿಯಲ್ಲಿ ಕನ್ನಡದಲ್ಲಿ ರಾಷ್ಟ್ರೀಯತೆಯ ಕುರಿತು ಒಂದು ಕಥನವನ್ನು ನೀಡುತ್ತದೆ ಹಾಗೂ... ಹಿಸ್ಟರಿ ಸಂಪ್ರದಾಯವು ಹೀಗೆ ತನ್ನ ಒಂದು ರೂಪವನ್ನು 'ಸಾರ್ಥ' ಕಾದಂಬರಿಯಲ್ಲಿ ಪ್ರಕಟ ಪಡಿಸಿಕೊಂಡು ಕನ್ನಡ ಜಗತ್ತಿನೊಳಗೆ ಮರು ಸೃಷ್ಟಿಗೊಳ್ಳುವುದನ್ನು ನಾವು ಕಾಣುತ್ತೇವೆ' ಎಂಬ ಧೀರ ಗಂಭೀರ ಶಾಸ್ತ್ರೀಯ ಹೇಳಿಕೆಯೊಂದಿಗೆ 'ಸಾರ್ಥ' ಕುರಿತ ತಮ್ಮ ಲೇಖನವನ್ನು ಮುಗಿಸುತ್ತಾ ಅಚ್ಚರಿ ಹುಟ್ಟಿಸುತ್ತಾರೆ.

ಈ ಅಚ್ಚರಿಗೆ ಕಾರಣ: ಹುಸಿಯನ್ನು ಒಂದು ಪಠ್ಯವನ್ನಾಗಿ ನಿರ್ಲಿಪ್ತವಾಗಿ ಒಪ್ಪಿ ಕೊಳ್ಳುವ ಉದ್ದೇಶಗಳಾದರೂ ಏನು? ಈ ಪ್ರಶ್ನೆಯನ್ನು ಏಕೆ ಕೇಳಲಾಗುತ್ತಿದೆಯೆಂದರೆ, ಕಾರಂತರ ಅಭಿಪ್ರಾಯಗಳನ್ನು ಆಧುನಿಕೋತ್ತರ ಚಿಂತನೆಗಳ ಹಿನ್ನೆಲೆಯಲ್ಲಿ ಮೌಲ್ಯೀಕರಣಕ್ಕೊಳಪಡಿಸುವ ಹೆಗಡೆಯವರು, ಭೈರಪ್ಪನವರ ಪಠ್ಯವನ್ನು ಆಧುನಿಕವಾದದ ಹಿನ್ನೆಲೆಯಲ್ಲಿ ಮೌಲ್ಯೀಕರಣಕ್ಕೇಕೆ ಒಳಪಡಿಸುವುದಿಲ್ಲ- ಆಧುನಿಕೋತ್ತರವಾದವೆಂದರೆ ಆಧುನಿಕತಾವಾದಕ್ಕೆ ವಿದಾಯವೆಂದೇ? ಎಂಬ ಪ್ರಶ್ನೆ

ಹೇಳುವುದರಿಂದ. ಆಧುನಿಕವಾದದ ಮಿತಿಗಳನ್ನು ಗುರುತಿಸುವ ಬೌದ್ಧಿಕ ಉತ್ಸಾಹದಲ್ಲಿ, ಆಧುನಿಕೋತ್ತರವಾದದಲ್ಲಿ ಅಂತರ್ಗತವಾಗಿರುವ, ನಿರಾಧಾರವಾದುದನ್ನು ಹುಸಿಯೆಂದು ಕರೆಯಲಾಗದ ಹಾಗೂ ಆ ಹುಸಿತನದ ಉದ್ದೇಶಗಳ ಬಗ್ಗೆ ತಲೆ ಕೆಡಿಸಿಕೊಳ್ಳದ ಜಡ ನಿರ್ಲಿಪ್ತತೆ ಅಪಾಯಕಾರಿಯಾದದ್ದು ಎಂಬ ಸಾಮಾಜಿಕ ಎಚ್ಚರ ಇಲ್ಲಿ ಕಾಣೆಯಾಗಿದೆ. ಹೀಗಾಗಿಯೇ, ಆಧುನಿಕೋತ್ತರವಾದ ಎಂದರೆ ಬಹುತ್ವದ ವೇಷ ತೊಟ್ಟ ಅರಾಜಕತಾವಾದ ಎಂಬ ಅಭಿಪ್ರಾಯ ಪ್ರಚಲಿತದಲ್ಲಿದೆ. ರಾಜರಾಂ ಹೆಗಡೆಯವರಂತಹ ಮೂಲತಃ ಮಾರ್ಕ್ಸ್‌ವಾದಿ ಎನಿಸಿಕೊಂಡ ವಿದ್ವಾಂಸರೂ ಈ ಬಗ್ಗೆ ಎಚ್ಚರ ತಪ್ಪುವಂತಾದರೆ?

ಇದೇ ರೀತಿಯ ಎಚ್ಚರ ತಪ್ಪುವಿಕೆ ಕುವೆಂಪು ಕಾದಂಬರಿಗಳನ್ನು ಕುರಿತು ಮಾಡುವ ವಿಶ್ಲೇಷಣೆಗಳಲ್ಲೂ ಕಂಡುಬರುತ್ತದೆ. '.....ಕುವೆಂಪು ಅವರಂಥ ಪ್ರತಿಭಾವಂತರು ಹಾಗೂ ಆಧ್ಯಾತ್ಮಿಕ ಒಲವುಳ್ಳವರು, ಕವಿಗಳು, ಜೊತೆಗೆ, ಬ್ರಾಹ್ಮಣ ಜಾತಿಯ ಚೌಕಟ್ಟಿನಿಂದ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಕಳಚಿ ನಿಲ್ಲಿಸಬಲ್ಲ ಧೀಮಂತಿಕೆಯುಳ್ಳವರೂ ಆ ಸನ್ನಿವೇಶಕ್ಕೆ ಅಷ್ಟು ಯಥೋಚಿತವಾಗಿ ಅಥವಾ ಹೇಳಿ ಮಾಡಿಸಿದ ಹಾಗೆ ಕಾಣಿಸಿಕೊಂಡಿದ್ದು ಕನ್ನಡ ಸಂಸ್ಕೃತಿಯ ಇತಿಹಾಸದಲ್ಲಿಯೇ ಒಂದು ಅನುಪಮವಾದ ಚಾರಿತ್ರಿಕ ಕ್ಷಣವಾಗಿದೆ' ಎಂದು ಎಲ್ಲಸೂಕ್ತ ಹಿನ್ನೆಲೆಗಳೊಂದಿಗೆ ನಮ್ಮಕಾಲದ ಸಾಮಾಜಿಕ ಚರಿತ್ರೆಯಲ್ಲಿಕುವೆಂಪು ಅವರ ಸ್ಥಾನ ನಿರ್ದೇಶನವನ್ನು ಸಮರ್ಪಕವಾಗಿಯೇ ಮಾಡುವ ಹೆಗಡೆಯವರು, ಕುವೆಂಪು ಅವರ ಸಾರವೆಲ್ಲ ಇರುವ ಅವರ ಎರಡು ಕಾದಂಬರಿಗಳನ್ನು ವಿಶ್ಲೇಷಣೆ ಮಾಡುವಾಗ ವಸಾಹತುಶಾಹಿ ಅನುಭವ, ರಾಷ್ಟ್ರದ ನಿರ್ವಚನ ಮುಂತಾದ ಆಧುನಿಕೋತ್ತರವಾದಿ 'ಸತ್ಯ ಸಂಕೀರ್ಣ'ಗಳ ಅನ್ವೇಷಣೆಯ ಹುದಲಲ್ಲಿ ಹಾದಿ ತಪ್ಪುತ್ತಾರೆನ್ನಿಸುತ್ತದೆ. ವಿವೇಕಾನಂದರು ಹಾಕಿದರೆಂದು ಹೇಳಲಾದ ಹಿಂದೂ ಧರ್ಮದ ಪುನರುತ್ಥಾನದ ಬುನಾದಿಯನ್ನೇ ಕುವೆಂಪು ತಮ್ಮ ಕೃತಿಗಳಲ್ಲಿ ತಮ್ಮ ನಿಲುವಾಗಿ ಸ್ವೀಕರಿಸಿದರು ಎಂಬ ಹೆಗಡೆಯವರ ಸಾರಾಸಗಟು ನಂಬಿಕೆಯೇ ಇದಕ್ಕೆ ಕಾರಣವಾಗಿದ್ದಂತೆ ತೋರುತ್ತದೆ.

ಎರಡೂ ಕಾದಂಬರಿಗಳಲ್ಲಿ ಪ್ರಸ್ತಾಪಕ್ಕೆ ಬರುವ ಭಗವದ್ಗೀತೆ, ಆರ್ಯಧರ್ಮ, ಶುದ್ಧ ವೇದಾಂತ ದರ್ಶನಗಳು ಕಾದಂಬರಿಗಳ ಮೂಲಕ ಕುವೆಂಪು ಅವರೇ ಪ್ರತಿಪಾದಿಸುವ ತತ್ವ-ಪರಿಕಲ್ಪನೆಗಳೆಂಬಂತೆ ಈ ವಿಶ್ಲೇಷಣೆಗಳಲ್ಲಿ ನಿರೂಪಿಸಲಾಗಿದೆ. ಆದರೆ ಈ ಎಲ್ಲ ಪ್ರಸ್ತಾಪಗಳಾಚೆಯೂ 'ಕಾನೂರು ಹೆಗ್ಗಡತಿ' ಯಲ್ಲಿ ಅಂತಿಮವಾಗಿ ಬುದ್ಧನ ಪ್ರವೇಶವಾಗುವುದರ ಹಿಂದೆ ಕಟ್ಟಿಕೊಡಲಾಗಿರುವ ತಾತ್ವಿಕತೆ (ಇದನ್ನು ನಾನು ನನ್ನ 'ಅನೇಕ' ಕೃತಿಯ 'ಕುವೆಂಪು ಕಥನ ಪ್ರತಿಭೆಯ ದಾರ್ಶನಿಕ ನೆಲೆಗಳು' ಎಂಬ ಲೇಖನದಲ್ಲಿ ಸವಿವರವಾಗಿ ನಿರೂಪಿಸಲು ಯತ್ನಿಸಿರುವೆ) ಹಾಗೂ 'ಮಲೆಗಳಲ್ಲಿ ಮದುಮಗಳು'

ಕಾದಂಬರಿಯ ಒಟ್ಟಾರೆ ಆಶಯ, ವಿನ್ಯಾಸ ಮತ್ತು ಬೃಹತ್ ಭಿತ್ತಿಗಳ ಹಿನ್ನೆಲೆಯಲ್ಲಿ ಇಂತಹ ನಿರೂಪಣೆ, ಕಾದಂಬರಿಗಳ ಸರಳೀಕೃತ ಮೌಲ್ಯೀಕರಣವೆನಿಸುತ್ತದೆ. ಹೆಗಡೆಯವರಂತಹ ಸೂಕ್ಷ್ಮಮತಿಗಳಿಗೂ ಇದು ಅರ್ಥವಾಗದೇ ಹೋಗಿರುವುದಕ್ಕೆ ಆಧುನಿಕೋತ್ತರತೆಯ ವಯ್ಯಾರದ ಕಣ್ಣು ಮಿಟುಕೇ ಕಾರಣವಾಗಿದೆ ಎಂದು ಕಾಣುತ್ತದೆ. ಇಲ್ಲದೇ ಹೋದರೆ, ಅವರು ಈ ಎರಡೂ ಕಾದಂಬರಿಗಳು ರಮ್ಯವಾದಿ ಪೌರ್ವಾತ್ಯ ಅಧ್ಯಯನ ವಿಧಾನ ಕಟ್ಟಿಕೊಟ್ಟ 'ಆಧ್ಯಾತ್ಮಿಕ ಭಾರತ'ದ ಕಲ್ಪನೆಯನ್ನು ಆಧರಿಸಿವೆ ಎಂಬ ಗ್ರಹೀತದೊಂದಿಗೆ ತಮ್ಮ ನಿರೂಪಣೆಗಳನ್ನು ಮಂಡಿಸಲು ಹೋಗುತ್ತಿರಲಿಲ್ಲ.(ಆದರೆ ವಿಚಿತ್ರವೆಂದರೆ, ಮಾಸ್ತಿಯವರ 'ಚಿಕ್ಕವೀರ ರಾಜೇಂದ್ರ'ದಲ್ಲಿ 'ದೈವಸಂಕಲ್ಪ'ದ ಕಲ್ಪನೆ ಪದೇ ಪದೇ ಪ್ರಸ್ತಾಪಕ್ಕೆ ಬಂದರೂ ಅದು ಈ ರೀತಿಯ ನಿರೂಪಣೆಗೆ ಸಿಗದೆ, ಕಾದಂಬರಿಯ ಮೌಲ್ಯೀಕರಣ ಬೇರೆಯದೇ ಹಾದಿ ಹಿಡಿಯುತ್ತದೆ!) ಇದರಿಂದಾಗಿ ಈ ಎರಡೂ ಕಾದಂಬರಿಗಳು 'ಆಧ್ಯಾತ್ಮಿಕ ಭಾರತ'ದ್ದೆಂದು ಹೇಳಲಾದ, ಮೇಲೆ ಪ್ರಸ್ತಾಪಿಸಲ್ಪಟ್ಟ ಎಲ್ಲ ಗುರುತುಗಳನ್ನು ದಾಟಿಕೊಂಡು ಅತ್ಯಂತಿಕವಾಗಿ ಸಾಧಿಸಿರುವುದು, ಲೌಕಿಕ ದಿಗ್ವಿಜಯವನ್ನೇ ಹೊರತು-ಹೆಗಡೆಯವರು ಹೇಳುವಂತೆ-ಧಾರ್ಮಿಕ ದಿಗ್ವಿಜಯವನ್ನಲ್ಲ ಎಂಬ ಸತ್ಯ ಕಾಣದೇ ಹೋಗಿದೆ.ಇವರಿಗೆ 'ಕಾನೂರು ಹೆಗ್ಗಡತಿ'ಯಲ್ಲಿ 'ಗಾಂಧಿ ರಾಜಕಾರಣದ ಮಹತ್ವದ ಪಾತ್ರ ಕಾಣದೇ ಹೋಗಿರುವುದ'ಕ್ಕೂ ಹಾಗೂ 'ಮಲೆಗಳಲ್ಲಿ ಮದುಮಗಳು'ವಿನಲ್ಲಿ 'ವಿವೇಕಾನಂದರೇ ಹಿಂದೂ ರಾಷ್ಟ್ರ ಜಾಗೃತಿಯ ಶಕ್ತಿಯಾಗಿ ಕಾಣಿಸಿಕೊಂಡಿರುವುದ'ಕ್ಕೂ ಇದೇ ಕಾರಣವಾಗಿದೆ.

ಆಶ್ಚರ್ಯವೆಂದರೆ ಆಧುನಿಕವಾದವನ್ನು ಆಧುನಿಕೋತ್ತರವಾದಿಗಳಿಗಿಂತ ಬಹುಮುಂಚೆ ಮುಖಾಮುಖಿಯಾಗಿಸಿಕೊಂಡವರು ಗಾಂಧಿಯವರು, ತಮ್ಮ 'ಹಿಂದ್ ಸ್ವರಾಜ್'ಮೂಲಕ. ಆದರೆ ಗಾಂಧೀಜಿ ಆ ಕೃತಿಯಲ್ಲಿ ಅದನ್ನು ಅಮೂರ್ತ ನೆಲೆಯಲ್ಲಿ ಎದುರಿಸದೆ,ಕಾರ್ಯಕ್ರಮಗಳ ನೆಲೆಯಲ್ಲಿ ವಿಷದೀಕರಿಸುತ್ತ ಅದರ ಅಪಾಯ ಹಾಗೂ ಮಿತಿಗಳ ಬಗ್ಗೆ ಎಚ್ಚರಿಸಿದರು. ಅಲ್ಲದೆ ಆಧುನಿಕತೆ ಎಂಬ ಶಬ್ದಕ್ಕೆ ಪಶ್ಚಿಮದ ಪುನರುಜ್ಜೀವನ ಯುಗದಿಂದ ದತ್ತವಾದ ಅರ್ಥಕ್ಕೆ ವಿರುದ್ಧವಾಗಿ, ಮಧ್ಯಯುಗದ ಹಿಂಸೆಯಿಂದ ಬಿಡುಗಡೆ ಎಂಬ ಹೊಸ ಅರ್ಥ ನೀಡಿ, ಅದರ ಅನುಷ್ಠಾನಕ್ಕಾಗಿ 'ಅಹಿಂಸೆಯು'ಯ ಪರಿಕಲ್ಪನೆ ಆಧಾರದ ಮೇಲೆ ಪರ್ಯಾಯ ರಾಜಕೀಯ ಕಾರ್ಯಕ್ರಮಗಳನ್ನು ನಿರೂಪಿಸಿದರು. ಆದರೆ ಆಧುನಿಕೋತ್ತರವಾದ, ಗಾಂಧಿ ಚಿಂತನೆಯನ್ನಾಗಲೀ, ಪ್ರಯೋಗಗಳನ್ನಾಗಲೀ ಗಣನೆಗೆ ತೆಗೆದುಕೊಂಡಂತೆ ಕಾಣುವುದಿಲ್ಲ. ಇದೇ ಆಧುನಿಕೋತ್ತರವಾದದ- ಕನಿಷ್ಠ ಅದರ ಭಾರತೀಯ ಆವೃತ್ತಿಯ- ಮೂಲ ಸಮಸ್ಯೆ ಎನಿಸುತ್ತದೆ. ಆಧುನೀಕರಣವಾದದ ರಾಜಕೀಯ ಕಾರ್ಯಕ್ರಮಗಳ ಅನಾಹುತಗಳನ್ನು ಎತ್ತಿ ತೋರಿಸುವ ಈ ಆಧುನಿಕೋತ್ತರವಾದಕ್ಕೆ, ಯಾವುದೇ ಪರ್ಯಾಯ ರಾಜಕೀಯ

ಕಾರ್ಯಕ್ರಮವಿಲ್ಲ. ಬದಲಾಗಿ ರಾಜಕೀಯ ಕಾರ್ಯಕ್ರಮವನ್ನೇ ಅದು ಸಂದೇಹದಿಂದ ನೋಡುತ್ತದೆ. ಹಾಗಾಗಿಯೇ ಅದು ಗಾಂಧೀಜಿಯನ್ನು- ಹೆಗಡೆಯವರು 'ಕಾನೂರು ಹೆಗ್ಗಡತಿ'ಗೆ ಸಂಬಂಧಿಸಿದಂತೆ ಮಾಡಿರುವ ಹಾಗೆ- ಯಾವುದೇ ರೂಪದಲ್ಲಿ ಗುರುತಿಸಲು ನಿರಾಕರಿಸುತ್ತದೆ. ಇದರರ್ಥ?

ಆಧುನಿಕೋತ್ತರವಾದಕ್ಕೆ ಮೂಲಸ್ಫೂರ್ತಿ ಎನಿಸಿರುವ ನಿರಚನಾವಾದವು ಬೌದ್ಧ ಮಹಾಯಾನದಿಂದ ಬಹಳಷ್ಟನ್ನು ಪಡೆದುಕೊಂಡಿದೆ ಎಂದು ಹೇಳಲಾಗುತ್ತದೆ. ಅದು ಪ್ರತಿಪಾದಿಸುವ ಬಹುತ್ವ ಅಥವಾ ಸಂಯುಕ್ತ ತತ್ವ, ಮುಖ್ಯ-ಅಮುಖ್ಯಗಳ ಭೇದ ನಿವಾರಣೆ, ಸಾಪೇಕ್ಷ ದೃಷ್ಟಿಕೋನಗಳೆಲ್ಲವನ್ನು ಇದು ಪಡೆದುಕೊಂಡಿದೆ-ಇವೆಲ್ಲವುಗಳನ್ನು ಕ್ರಿಯಾಶೀಲಗೊಳಿಸುವ 'ಯುಕ್ತಿ' ತತ್ವವೊಂದನ್ನು ಬಿಟ್ಟು.....ಬೌದ್ಧ ಧರ್ಮದಲ್ಲಿ 'ಯುಕ್ತಿ'ಯು ಸಿದ್ಧಾಂತದ ಅವಿಭಾಜ್ಯ ಅಂಗ. 'ಸಂಸಾರ ದುಃಖಮಯ'-ಇದು ಸಿದ್ಧಾಂತದ ಒಂದು ಭಾಗ ಮಾತ್ರ. ಈ ದುಃಖವನ್ನು ನಿವಾರಿಸಲಿರುವ ಮಾಧ್ಯಮ ಅಥವಾ ಯುಕ್ತಿ- 'ಮಿತ್ತಾ' ಅಂದರೆ ಮೈತ್ರಿಯು, ಸಿದ್ಧಾಂತದ ಇನ್ನೊಂದು ಭಾಗ. ಇವೆರಡೂ ಸೇರಿದರೆ, 'ಕ್ರಿಯೆ'ಯಾಗುವ ತತ್ವ. ಹೀಗಿಲ್ಲದೇ ಹೋದರೆ ಎಲ್ಲ ತತ್ವ-ಸಿದ್ಧಾಂತಗಳೂ ಬರಿ ಬಣಗೆನಿಸಿಕೊಂಡು ಸಿನಿಕತೆಗೆ ದಾರಿಮಾಡಿಕೊಡುತ್ತದೆ. ಆಧುನಿಕೋತ್ತರವಾದ ಇಂದು ಈ ಅಪಾಯವನ್ನು- ಅಧ್ಯಯನಗಳ ನಿಷ್ಕ್ರಿಯೀಕರಣವನ್ನು- ಎದುರಿಸುತ್ತಿದೆ.

ವಿವಿಧತೆಯನ್ನು ಗುರುತಿಸುವುದು ದೊಡ್ಡ ವಿಷಯವಲ್ಲ. ಏಕೆಂದರೆ ವಿವಿಧತೆ ಪ್ರಕೃತಿಯ ಧರ್ಮ. ಅದರಲ್ಲಿ ಏಕತೆಯನ್ನು ಕಾಣಬಯಸುವುದು ಮನುಷ್ಯ ಧರ್ಮ. ತತ್ವ-ಯುಕ್ತಿಗಳ ಈ ಸಂಯೋಜನೆಯನ್ನು ಆಧುನಿಕೋತ್ತರವಾದ ಸಂದೇಹದಿಂದ ನೋಡುವ ಮೂಲಕ ಸೃಷ್ಟಿಯ ಏಕತೆಯ ಕಾಣ್ಕೆಯನ್ನು ಪ್ರಶ್ನಿಸುತ್ತದೆ! ಹೀಗಾಗಿ ಈ ಕೃತಿಯಲ್ಲಿ ರಾಜಾರಾಂ ಹೆಗಡೆಯವರ ಅಧ್ಯಯನ ಪೂರ್ಣಲೇಖನಗಳು ತಮ್ಮ ವೈಶಿಷ್ಟ್ಯಪೂರ್ಣ ಒಳನೋಟಗಳ ಮೂಲಕ ಸಾಕಷ್ಟು ಕುತೂಹಲ ಹುಟ್ಟಿಸುತ್ತವಾದರೂ, ಈ ಸಮಸ್ಯೆಯನ್ನು-ಅಪಾಯವನ್ನು-ಎದುರು ಹಾಕಿಕೊಂಡಿದೆ. ಹಾಗೆ ನೋಡಿದರೆ ಇತಿಹಾಸದ ಬಹುರೂಪತ್ವವನ್ನು ನಿರೂಪಿಸಲು ಆಧುನಿಕೋತ್ತರವಾದವೇ ಬರಬೇಕೆಂದಿರಲಿಲ್ಲ. ಆಧುನಿಕವಾದದ ಪ್ರಶ್ನಾಪ್ರವೃತ್ತಿಯೇ ಅದನ್ನು ಒಂದು ನೆಲೆಯಲ್ಲಿ ಸಾಧ್ಯ ಮಾಡುತ್ತಿತ್ತು. ಆದರೆ ಆಧುನಿಕೋತ್ತರವಾದದ ವ್ಯಾಪ್ತಿ, ಗುರಿ ಹಾಗೂ ಉದ್ದೇಶಗಳು ಇದಕ್ಕಿಂತ ಹೆಚ್ಚು ಮೌಲಿಕವಾಗಿರುವುದರಿಂದ, ಅದರ ಕ್ರಿಯಾಶೀಲ ರೂಪಕ್ಕಾಗಿ ನಾವು ಕುತೂಹಲದಿಂದ ಎದುರು ನೋಡಬಹುದಾಗಿದೆ. ಹಾಗೆಯೇ ರಾಜಾರಾಂ ಹೆಗಡೆಯವರ ಮುಂದಿನ ಬರಹಗಳನ್ನು ಕೂಡಾ.

○

('ನಮ್ಮ ನಾಡು', ೧೫ ಜುಲೈ ೨೦೦೬)

'ಬಹಿಷ್ಕೃತ' : ಹೋರಾಟದ ಮಾರ್ದವ ಕಥನ

ದಲಿತ ಮಧ್ಯಮ ವರ್ಗದಲ್ಲಿ ಈಚೀನ ದಿನಗಳಲ್ಲಿ ಸಂಚಲನ ಉಂಟು ಮಾಡಿರುವ ಒಂದು ಸಂಗತಿಯೆಂದರೆ 'ದಲಿತ ಬಂಡವಾಳ'ದ ಕಲ್ಪನೆ. ಕೆ. ಪಿ. ಸಿಂಗ್, ದೇವೇಶ್ ಕಪೂರ್, ರಾಮಕೃಷ್ಣ ಭೂಪತಿ ಮುಂತಾದ ಅನಿವಾಸಿ ಭಾರತೀಯರಿಂದ ಒಂದು ಚಳುವಳಿಯಾಗಿ ಬೆಳೆಯುವ ತವಕದಲ್ಲಿರುವ ಈ ಕಲ್ಪನೆಗೆ ಭಾರತದಲ್ಲಿ ಈಗ ಬೆಂಬಲವಾಗಿ ನಿಂತು ಅದರ ತಾತ್ವಿಕತೆಯನ್ನು ವಿವರಿಸುತ್ತಿರುವವರು, ಜಗತ್ತಿನ ಬಹುಶಃ ಏಕೈಕ ದಲಿತ ಅಂಕಣಕಾರರಾದ ಚಂದ್ರಭಾನ್ ಪ್ರಸಾದ್ ಅವರು. ಅವರ ಪ್ರಕಾರ ದಲಿತ ಬಂಡವಾಳವು ಒಂದು ವಿಶಾಲವಾದ ದಲಿತ ಮಧ್ಯಮ ವರ್ಗವನ್ನು ಸೃಷ್ಟಿಮಾಡಿ ಬೆಳೆಯುವ ಮೂಲಕ ಮೇಲ್ಜಾತಿ ಬಂಡವಾಳದ ಎಲ್ಲ ದೌರ್ಬಲ್ಯಗಳನ್ನು ಮೀರಿ, ಕನಿಷ್ಟ ದಲಿತ ಸಮುದಾಯಕ್ಕೆ ಈಗಿನ ಸಂಕಷ್ಟಗಳಿಂದ ಮುಕ್ತಿ ದೊರಕಿಸಿಕೊಡಬಲ್ಲದು ಹಾಗೂ ಇಂದಿನ ಪರಿಸ್ಥಿತಿಯಲ್ಲಿ ಇದು ಅಂಬೇಡ್ಕರ್‌ರ ಅರ್ಥಶಾಸ್ತ್ರದ ಕಲ್ಪನೆಗಳಿಗೆ ವಿರುದ್ಧವೇನೂ ಅನಿಸುವುದಿಲ್ಲ. ಈ ನಂಬಿಕೆಗೆ ಪುಷ್ಠಿ ಕೊಡುವಂತೆ ಈಗ ದಲಿತ ಮಧ್ಯಮ ವರ್ಗದ ಪ್ರತಿನಿಧಿಯಾಗಿ ಖಾಸಗಿ ಬಂಡವಾಳ, ಮುಕ್ತ ಮಾರುಕಟ್ಟೆ ಹಾಗೂ ಸ್ಪರ್ಧೆಗಳನ್ನು ಪ್ರತಿಪಾದಿಸುತ್ತಿರುವವರಲ್ಲಿ ಪ್ರಮುಖರೆಂದು ಹೆಸರಾದವರು ಡಾ||ನರೇಂದ್ರ ಜಾಧವ್. ಭಾರತದ ರಿಸರ್ವ್ ಬ್ಯಾಂಕ್‌ನ ಆರ್ಥಿಕ ಸಲಹಾಕಾರರಲ್ಲೊಬ್ಬರಾದ ಡಾ||ಜಾಧವ್ ಈ ಹಿಂದೆ, ಭಾರತದಲ್ಲಿನ ಆರ್ಥಿಕ 'ಸುಧಾರಣೆ'ಗಳಿಗೆ ಬೆಂಬಲವಾಗಿ ನಿಂತಿರುವ 'ಅಂತರರಾಷ್ಟ್ರೀಯ ಹಣಕಾಸು ನಿಧಿ' (ಐ. ಎಂ. ಎಫ್) ಯಲ್ಲಿ ಅಧಿಕಾರಿಯಾಗಿದ್ದವರು. ಇವರನ್ನೀಗ 'ಉದಾರವಾದಿ ನವಭಾರತ'ದ ವಿಮೋಚಿತ ದಲಿತ ಮಾದರಿಯನ್ನಾಗಿಯೂ ಪ್ರಸ್ತುತ ಪಡಿಸಲಾಗುತ್ತಿದೆ. ಅವರೀಗ ತಮ್ಮ ತಂದೆ ತಾಯಿಗಳ ಮತ್ತು ತಮ್ಮ ನೆನಪುಗಳನ್ನು ತಮ್ಮ ಮಗಳ ಹಿನ್ನುಡಿಯೊಂದಿಗೆ ಸಂಕಲಿಸಿ, 'ಬಹಿಷ್ಕೃತ ' ಎಂಬ ನೆನಪುಗಳ ಸಂಗ್ರಹವೊಂದನ್ನು ಪ್ರಕಟಿಸಿದ್ದಾರೆ. ಇದು ಮೊದಲು ಮರಾಠಿಯಲ್ಲಿ ಪ್ರಕಟಗೊಂಡು ನಂತರ ಇಂಗ್ಲಿಷ್‌ನಲ್ಲಿ, ತದನಂತರ ಫ್ರೆಂಚ್ ಭಾಷೆಯಲ್ಲಿ ಅನುವಾದಗೊಂಡು ಪ್ರಕಾಶಿತವಾಗಿದೆ. ಈಗ ಕನ್ನಡ ಮತ್ತು ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡು 'ಹೊಸ ದಲಿತ ಘನತೆ'ಯ ಪಠ್ಯವೆಂಬಂತೆ ಪ್ರಸ್ತುತಗೊಳ್ಳುತ್ತಿದೆ.

ಈಗ ಬಹು ಜನಪ್ರಿಯವಾಗಿರುವ ಮತ್ತು ಮೌಲಿಕವೂ ಎಂದು ಪರಿಗಣಿಸಲ್ಪಟ್ಟಿರುವ ಅನೇಕ ಮರಾಠಿ ದಲಿತ ಆತ್ಮ ಚರಿತ್ರೆಗಳಿಗಿಂತ ಈ ಕೃತಿ ಭಿನ್ನವಾಗಿ ನಿಲ್ಲುವುದು, ಇದು ಆತ್ಮಚರಿತ್ರೆಯಾಗಿರದೆ, ಒಂದು ಕುಟುಂಬದ ಮೂರು ತಲೆಮಾರುಗಳ

ನೆನಪುಗಳ ಸಂಗ್ರಹವೆಂಬ ಕಾರಣಕ್ಕೆ ಮಾತ್ರವಲ್ಲ; ಈ ನೆನಪುಗಳ- ವಿಶೇಷವಾಗಿ ಮೊದಲ ತಲೆಮಾರಿನ ದಾಮು ಮತ್ತು ಸೋನಾ (ನರೇಂದ್ರ ಜಾದವರ ತಂದೆ ತಾಯಿ)ರ ನಿವೇದನೆಗಳು- ನಿರೂಪಣೆಗಳಲ್ಲಿನ ಅತ್ಯುತ್ತಮ ಕಥನ ಗುಣದಿಂದ ಕೂಡಾ. ಮೂಲತಃ ಅನಕ್ಷರಸ್ಥರಾದ- ನಂತರ ಅನೌಪಚಾರಿಕವಾಗಿ ಅಕ್ಷರಸ್ಥರಾದರೂ- ಈ ದಂಪತಿಗಳು ತಮ್ಮ ಅನುಭವಗಳನ್ನು ಆಯ್ದು ವಿನ್ಯಾಸಗೊಳಿಸಿ ಮಂಡಿಸಿರುವ ರೀತಿ (ಇದರಲ್ಲಿ ಅವರ ವಿದ್ಯಾವಂತ ಮಕ್ಕಳ ಸಾಕಷ್ಟು ಕೈವಾಡವಿದೆಯಾದರೂ) ಒಂದು ಸೃಜನಶೀಲ ಸಾಹಿತ್ಯ ಕೃತಿಯ ಎಲ್ಲ ಮಾರ್ದವತೆಯನ್ನು ಪ್ರಕಟಪಡಿಸುತ್ತದೆ. ಇದು ಸಾಧ್ಯವಾಗಿರುವುದು, ಕೃತಿ ದಲಿತ ಲೋಕವನ್ನು ಒಳಗೊಂಡಿದ್ದರೂ (ಈಗ ಇಂತಹ ಕೃತಿಗಳ ಬಂಡವಾಳವಾಗಿ, ಕ್ಲೀಷೆಯಾಗಿ ಹೋಗಿ ಬಿಟ್ಟಿರುವ) ಶೋಷಣೆ-ಬಂಡಾಯಗಳ ಬಗ್ಗೆ ಅನಗತ್ಯವಾಗಿ ಆರ್ಭಟಿಸದೆ, ಸ್ವಪ್ರಜ್ಞೆಯ ಮೂಲಕ ಎಲ್ಲ ಅಡೆತಡೆಗಳನ್ನು ದಾಟಿ ಗುರಿ ಮುಟ್ಟಬಲ್ಲ ಮನುಷ್ಯ ಛಲದ ಸಾಧ್ಯತೆಯನ್ನು ಸಾರ್ವತ್ರಿಕವಾಗಿ ಅನಾವರಣಗೊಳಿಸುವ ತನ್ನ ಉದ್ದೇಶದೆಡೆಗೆ, ಏಕಾಗ್ರತೆಯಿಂದ ಸಾಗುವುದರಿಂದ .

ಬಾಬಾ ಸಾಹೇಬ ಅಂಬೇಡ್ಕರ್‌ರ ಇಡೀ ಹೋರಾಟವನ್ನು, ಹುಟ್ಟಿನಿಂದ ಕುಲವನ್ನು ವಿಂಗಡಣೆ ಮಾಡುವ ಜಾತಿ ಎಂಬುದು ಎಷ್ಟು ದೊಡ್ಡ ಸುಳ್ಳು ಎಂಬುದನ್ನು ಸಾಬೀತುಪಡಿಸಿ, ಆ ಸುಳ್ಳಿನಿಂದಾದ ಅನ್ಯಾಯಗಳ ಚರಿತ್ರೆಯನ್ನು ಪುನರ್ರೂಪಿಸುವುದೇ ಆಗಿದೆ ಎಂದು ಬಣ್ಣಿಸಬಹುದಾದರೆ; ಈ ಪುಸ್ತಕವೂ ತನ್ನದೇ ಮಿತಿಯಲ್ಲಿ ಅದನ್ನೇ ಮಾಡುತ್ತದೆ. ಅಂಬೇಡ್ಕರ್‌ರಂತೆಯೇ ಅಸ್ಪೃಶ್ಯ ಮಹರ್ ಕುಲಕ್ಕೆ ಸೇರಿದ ಈ ಕೃತಿಯ ವಾರಸುದಾರ- ನಾಯಕನಲ್ಲ;ನಾಯಕನೇನಿದ್ದರೂ ನರೇಂದ್ರ ಜಾಧವ್‌ರೇ- ಕೂಲಿಕಾರ ದಾಮು, ಅಂಬೇಡ್ಕರ್ ಚಳುವಳಿಯ ಪ್ರಭಾವಕ್ಕೆ ಸಿಕ್ಕಿ ತನ್ನ ಕುಟುಂಬವನ್ನು ಜಾತಿ-ಅಸ್ಪೃಶ್ಯತೆಗಳೆಂಬ ಶಾಪಗಳಿಂದ ಪಾರಾಗಿಸಿಕೊಂಡು, ಕುಲೀನ ಮನೆತನದ ಬ್ರಾಹ್ಮಣ ಕನ್ಯೆಯೊಬ್ಬಳನ್ನು ಸಹಜವೆಂಬಂತೆ ತನ್ನ ಮನೆಯ ಸೊಸೆಯಾಗಿಸಿಕೊಳ್ಳಬಲ್ಲ ರೀತಿಯಲ್ಲಿ ಕಟ್ಟಿ ನಿಲ್ಲಿಸಿದ ಕೌಶಲ್ಯ, ಇಲ್ಲಿ Best of Ambedkar ಎನ್ನುವಂತೆ ಚಿತ್ರಿತವಾಗಿದೆ. ಜಾತಿ ಮೀರುವುದೆಂದರೆ- ಅದರ ಎಲ್ಲ ನೆಲೆಗಳಲ್ಲಿ- ಹೀಗೆ; ಚರಿತ್ರೆಯನ್ನು ಮುರಿದು ಕಟ್ಟುವುದು ಎಂದರೆ ಹೀಗೆ, ಎಂಬಷ್ಟರ ಮಟ್ಟಿಗೆ ಈ ಕಥನ authentic ಆದ ವಿವರಗಳೊಂದಿಗೆ ಗಮನ ಸೆಳೆಯುತ್ತದೆ.

ಈ ದೇಶದಲ್ಲಿ ಪ್ರತಿಯೊಂದು ಜಾತಿಗೂ ಅದರ ಚರಿತ್ರೆ ಇದ್ದಂತಿದೆ- ಅದರದೇ ಆದ ಕಾವ್ಯ, ಪುರಾಣ, ನಂಬಿಕೆ, ಮೌಲ್ಯಗಳೊಂದಿಗೆ. ಅಸ್ಪೃಶ್ಯ ಜಾತಿಗಳೂ ಇದಕ್ಕೆ ಹೊರತಲ್ಲ. ಹಾಗಾಗಿಯೇ ಜಾತಿ ಮೀರುವುದೆಂದರೆ ಈ ಚರಿತ್ರೆಯನ್ನು ಮೀರುವುದು, ಅದನ್ನು ಮುರಿದು ಕಟ್ಟುವುದು. ಆಧುನಿಕ ವಿದ್ಯೆಯಿಂದ ಪ್ರಚೋದಿತವಾಗಿ ಪ್ರಜ್ಞಾಪೂರ್ವಕವಾಗಿ ಇದನ್ನು ಮಾಡ ಹೊರಡುವುದು ಸಾಹಸದ ಕೆಲಸವೇ ಸರಿ. ದಾಮು

ತನ್ನ ಮಹರ್ ಜಾತಿಯ 'ಎಸ್ಕಾರ್ ಡ್ಯೂಟಿ' (ಹಳ್ಳಿಗೆ ಸಂಬಂಧಿಸಿದ ಜಾತಿ ಕರ್ತವ್ಯ-ಜವಾಬ್ದಾರಿಗಳು)ಯಿಂದ ಅವಮಾನಿತವಾಗಿ ಮಾಡ ಹೊರಡುವುದೂ ಇದನ್ನೇ. ಇದಕ್ಕೆ ಪುಷ್ಟಾಪೂರ್ವಕತೆಯನ್ನು ಒದಗಿಸುವುದು ಅಂಬೇಡ್ಕರ್‌ರ ಚಳುವಳಿ. 'ಮಹರ್ ಧರ್ಮ'ದ ಹೆಸರಲ್ಲಿ, ಜಾತಿ ಚರಿತ್ರೆಯ ಭಾಗವಾಗಿಯೇ ಉಳಿಯುವುದೇ ಕ್ಷೇಮಕರವೆಂಬ ತನ್ನ ತಾಯಿ, ಹೆಂಡತಿ, ನೆಂಟರು ಎಲ್ಲರ ಒತ್ತಡದ ಮಧ್ಯೆಯೂ; ಯಾವುದೋ ದೂರದ ನಕ್ಷತ್ರದ ಗುರುತ್ವಾಕರ್ಷಣೆಗೆ ಸಿಕ್ಕ ಗ್ರಹದಂತೆ ತನ್ನ ಕಕ್ಷೆ ಬಿಟ್ಟು ಹಾರುವ ದಾಮು, ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ತನ್ನ ಗುರಿ ಕಳೆದುಕೊಳ್ಳದಂತಹ ವಿವೇಕ ಪ್ರದರ್ಶಿಸುವ ಪರಿಯೇ ಈ ಕೃತಿಯ 'ಶೀಲ'ವನ್ನೂ ನಿರೂಪಿಸುತ್ತದೆ. ಇದೇ ಈ ಪುಸ್ತಕದ ಹೆಗ್ಗಳಿಕೆ ಕೂಡ. ದಾಮು ಪ್ರಾಮಾಣಿಕನಷ್ಟೇ ಅಲ್ಲ, ಜಾಣನಾದ ದುಡಿಮೆಗಾರ: ಭೂಮಿ ಅಗೆಯುವ, ಗೋಡೆ ಒಡೆಯುವಂತಹ ಅಥವಾ ರೈಲ್ವೆ ಕೂಲಿಕಾರನ ಕೆಲಸದಲ್ಲೂ ತನ್ನದೇ ಕೌಶಲ ಪ್ರದರ್ಶಿಸಬಲ್ಲ ಪ್ರತಿಭಾವಂತ;ಪ್ರತಿಫಲ ಕೊಡುವಲ್ಲಿ ಮೋಸ ಮಾಡುವೆಡೆಯಿಂದ ಕೂಡಲೆ ಕೆಲಸ ತ್ಯಾಗ ಮಾಡುವ ಸ್ವಾಭಿಮಾನಿ; ಹೆಂಡತಿಗೆ ಒಮ್ಮೆ ಮನೆಯ ಹಿಂದಿನ ಕಡಿದಾದ ಕಪ್ಪು ಬೆಟ್ಟದಂತೆ, ಮಗದೊಮ್ಮೆ ದೂರದ ಗೋಪುರದಂತೆ ಕಾಣುವ ಪ್ರೀತಿಯ ಗಂಡ; ಜಾತಿ ಚರಿತ್ರೆಗೆ ಅರ್ಪಿಸಿಕೊಂಡ ತಾಯಿಯನ್ನು ಪ್ರೀತಿ-ಸಿಟ್ಟುಗಳ ಮೂಲಕ ಚರಿತ್ರೆಯ ಎಲ್ಲೆಗಳನ್ನು ದಾಟಿಸಬಲ್ಲ ಪ್ರೀತಿಯ ಮಗ; ಮಕ್ಕಳಿಗೆ ಸುಳ್ಳು-ಕಪಟಗಳ ಬಗ್ಗೆ ಸದಾ ಎಚ್ಚರಿಕೆ ನೀಡುವುದರ ಜೊತೆಗೆ ಬೂಟು ಮತ್ತು 'ಬೆಣ್ಣೆ ಬಿಸ್ಕತ್' ತಂದುಕೊಡುವ caring ಅಪ್ಪ. ಇದೆಲ್ಲದರ ಹಿಂದೆ, ತಾವೂ ಮಾಸ್ತರ್ ಹಾಗೂ ಉಪಶಮುನ್ ಗುರೂಜಿ ಮಾರ್ಗದರ್ಶನದಲ್ಲಿ ಪಡೆದ ಅಂಬೇಡ್ಕರ್ ಶಿಷ್ಯತ್ವ- 'ಶಿಕ್ಷಣ, ಸಂಘರ್ಷ, ಐಕ್ಯತೆ'ಗಳ ಮೂಲಕ ಮಕ್ಕಳನ್ನು ತನ್ನ ಸ್ಥಿತಿಗಿಂತ ಮೇಲಕ್ಕೆ ಒಯ್ಯಲಾರದ ತಂದೆ ಮನುಷ್ಯನೇ ಅಲ್ಲ ಎಂಬ, ಕಿವಿಯಲ್ಲಿ ಸದಾ ಮೊರೆಯುವ ಸಂದೇಶ.

ಹಾಗೆಂದ ಮಾತ್ರಕ್ಕೆ ಇದೊಂದು ಆದರ್ಶ ಹೋರಾಟಗಾರನೊಬ್ಬನ ಜೀವನ ಪಥದ ಧೀರಗಂಭೀರ ಚಿತ್ರಣವಾಗಿ ಮಾತ್ರ ಉಳಿದಿಲ್ಲ. ದಲಿತ ಕುಟುಂಬವೊಂದರ ಸಾಂಸ್ಕೃತಿಕ ಚಿತ್ರಣವೂ ಇಲ್ಲಿ ಅದರೆಲ್ಲ ಬಣ್ಣ ಬೆಡಗುಗಳೊಂದಿಗೆ ಸಜೀವವಾಗಿ ಮೂಡಿಬಂದಿದೆ. ದಾಮು ಮತ್ತು ಸೋನು ಪರಸ್ಪರ ಪ್ರೀತಿಸುವ ಗಂಡ ಹೆಂಡತಿಯರಾಗಿ 'ಎಸ್ಕಾರ್ ಡ್ಯೂಟಿ'ಯ ಕ್ರೌರ್ಯವನ್ನು ಪ್ರತಿಭಟಿಸಿ ಹಳ್ಳಿ ಬಿಟ್ಟು ಹೊಸ ಸ್ವಾತಂತ್ರ್ಯ ಅರಸಿಕೊಂಡು ಮುಂಬೈ ಕಡೆಗೆ 'ಹೆಗಲಿಗೆ ಹೆಗಲು ಕೊಟ್ಟು' ನಡೆಸುವ ಪಯಣದ ಜೊತೆಯಲ್ಲೇ ಆರಂಭವಾಗುವ ಈ ಸಾಂಸ್ಕೃತಿಕ ಕಥನವು, ಇಬ್ಬರ ಬಾಲ್ಯದ ಸಿಹಿ-ಕಹಿ ನೆನಪುಗಳ ಉಲ್ಲಾಸ-ವಿಷಾದಗಳು; ವಿವಾಹದ ರೀತಿ ರಿವಾಜುಗಳ ಸಂಭ್ರಮ; ಮೊದಲ ಸಮಾಗಮದ ಆತಂಕ, ಮುಂಬೈ ನಗರ ಬದುಕಿನ ರೇಜಿಗೆಗಳು; ಕುಲದೇವರ ಜಾತ್ರೆಯ ಆಚರಣೆಗಳಲ್ಲಿನ ಶ್ರದ್ಧಾ-ಭಕ್ತಿಗಳು; ಬಹುಕಾಲ ಮಕ್ಕಳಾಗದುದರ ದುಃಖ

ದುಮ್ಮಾನಗಳು; ಗಂಡನ ಬಾಲ್ಯದ 'ಬಿಳಿ ಗೆಳತಿ'ಯ ಪ್ರಸ್ತಾಪ ಹೆಂಡತಿಯಲ್ಲಿ ಉಂಟುಮಾಡುವ ತಲ್ಲಣಗಳು; ಸತಿ ಧರ್ಮದ ವಿವರಗಳು ('...ಅದಕ್ಕೋಸ್ಕರವೇ ನಮಗೆ ಉದ್ದವಾದ ಸೆರಗು ಕೊಟ್ಟಿರೋದು. ಗಂಡಸರ ತಪ್ಪನ್ನೆಲ್ಲಾ ಒಳಗಾಕ್ಕೊಂಡು, ಅವರನ್ನು ಅರ್ಥ ಮಾಡಿಕೊಳ್ಳೋಕೆ') ಮೊದಲ ಹೋಟೆಲ್ ಭೇಟಿ-ಸಮೋಸದ ರುಚಿ ಕಂಡು ಬೆರಗಾದ ಬಗೆ; ಗಂಡ ಹೆಂಡತಿ ಮೊದಲ ಬಾರಿಗೆ ಹೊರ ಹೋಗಿ ಎಳನೀರು ಕುಡಿದು ಜಿಲೇಬಿ ತಿಂದುದರ ರೋಮಾಂಚನದ ಕ್ಷಣಗಳು; ಹೆಂಡತಿ ಗರ್ಭಿಣಿಯಾದುದನ್ನು ಸೂಚ್ಯವಾಗಿ ತಿಳಿಯಲಾರದ ಗಂಡನ ಪೆದ್ದುತನ ಇತ್ಯಾದಿ ವಿವರಗಳೊಂದಿಗೆ ಮೈದುಂಬಿ ಸ್ಫೋಟಕ ಹಂತ ತಲುಪುವುದು, ಕುಟುಂಬವು ಅಂಬೇಡ್ಕರ್‌ರೊಂದಿಗೆ ಬೌದ್ಧ ಮತಕ್ಕೆ ಮತಾಂತರಕ್ಕೆ ಸಿದ್ಧವಾಗಬೇಕಾದಾಗ. ಲೌಕಿಕ ವಿಷಯಗಳಲ್ಲಿ ಗಂಡನೊಡನೆ ಅಂಬೇಡ್ಕರ್ ವಿಚಾರಗಳೊಂದಿಗೆ ಸಹಮತ ತೋರುವ, ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಸೋನು, ತನ್ನ ದೇವರುಗಳ ವಿಷಯಕ್ಕೆ ಬಂದಾಗ ಅವನೇ ಕಲಿಸಿಕೊಟ್ಟ ವಿಚಾರ ಸ್ವಾತಂತ್ರ್ಯವನ್ನು ಬಳಸಿಕೊಂಡು ಸಿಡಿದು ನಿಲ್ಲುತ್ತಾಳೆ. ಜೀವನದಲ್ಲಿ ಮೊದಲ ಬಾರಿಗೆ ಗಂಡನಿಗೆ ಎದುರು ನಿಲ್ಲುತ್ತಾಳೆ.

ಅವಳಿಗೆ ತನ್ನ ಪೂರ್ವಜರ ಧರ್ಮ-ದೇವರುಗಳನ್ನು ಬಿಡುವುದು ಅಷ್ಟು ಸುಲಭದ ಕೆಲಸವಾಗಿ ಕಾಣುವುದಿಲ್ಲ. ತನ್ನನ್ನು ತನ್ನ ಕುಟುಂಬದವರೊಂದಿಗೆ ಪೊರೆದಿರುವರೆಂದು ನಂಬಿರುವ ತನ್ನ ದೇವರುಗಳನ್ನು-ಅವುಗಳ ಮೂರ್ತಿಗಳನ್ನು-ಹೊರಗೆಸೆಯಲು ಅವಳಿಗೆ ಸಾಧ್ಯವಾಗುವುದಿಲ್ಲ: "ಹೌದು, ಬಾಬಾ ಸಾಹೇಬರು ಹೇಳಿದಂತೆ ನಾವು ನಮ್ಮ ಹಕ್ಕಿಗಾಗಿ, ಗೌರವಕ್ಕಾಗಿ ಹೋರಾಡಬೇಕು. ಆದರೆ ದೇವರು ಧರ್ಮದ ಗೋಜಿಗೆ ಹೋಗುವುದೇ? ಇದು ತೀರಾ ಅತಿಯಾಯಿತು ನಾನು ಈ ಧರ್ಮ ದ್ರೋಹ ಮಾಡಲು ಬಿಡುವುದಿಲ್ಲ. ನಾನೇನು ಮಾಡಬಹುದು?" ವಿಪರ್ಯಾಸವೆಂದರೆ ಅವಳು ತನ್ನ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದೂ ತನ್ನ ಆ ಪೂರ್ವಜರ ಧರ್ಮದೊಳಗಿನಿಂದಲೇ: "ನನ್ನೊಳಗೇ ಹೆದರಿದೆ. ಎಂದಿನಂತೆ ನನ್ನ ಗಂಡನನ್ನು ಅನುಸರಿಸೋದು ಬಿಟ್ಟು ನನಗೆ ಆಯ್ಕೆಯಿರಲಿಲ್ಲ. ನಾನು ಮೌನವಾಗೇ ಮಾರಿ ಆಯಿಗೆ ಪ್ರಾರ್ಥಿಸಿದೆ. ನನಗೆ ಸರಿಯಾದ ಹಾದಿಯಲ್ಲಿ ನಡೆಯುವ ಶಕ್ತಿ ಕೊಡು ಎಂದು. ನನ್ನವನು ನನ್ನನ್ನು ಮುಂಬೈಗೆ ಕರೆದುಕೊಂಡು ಹೋಗಲು ಬಂದಾಗ, ನಮ್ಮ ಆಯಿ ಹೇಳಿದ್ದ ಮಾತುಗಳನ್ನು ನೆನಪಿಸಿಕೊಂಡೆ- 'ಸೋನೆ, ನಿನ್ನ ಗಂಡನೇ ನಿನ್ನ ದೇವರು . ನಿರ್ವಿವಾದವಾಗಿ ಅವನಿಗೆ ವಿಧೇಯಳಾಗಿರು. ಅವನೇನೆ ಮಾಡಲಿ, ಅವನನ್ನು ಪೂರ್ತಿಯಾಗಿ ಸ್ವೀಕರಿಸು. ನಿನಗೆ ಅವನೇ ಸರ್ವಸ್ವ. ನಿನ್ನ ಸಾವಿನೊಂದಿಗ ಅವನ ಬಿಡುಗಡೆ'. ಈಗ ನಾನೇನು ಮಾಡುವುದು?" ಒಲ್ಲದ ಮನಸ್ಸಿನಿಂದಲೇ ಅವಳು ಗಂಡನೊಂದಿಗೆ ನಾಗಪುರಕ್ಕೆ ಹೋಗಿ ಬೌದ್ಧ ಮತದ ದೀಕ್ಷೆ ಪಡೆಯುತ್ತಾಳೆ. ಆ ಜನಸಾಗರದ ಸಂಭ್ರಮದ ಆಚರಣೆಗಳ

ಮಧ್ಯೆ ತನ್ನ ಆತಂಕಗಳನ್ನು ಕಳೆದುಕೊಳ್ಳುತ್ತಾಳೆ.

ಇದಾದ ಅನತಿ ಕಾಲದಲ್ಲೇ ಅಂಬೇಡ್ಕರ್ ಕೊನೆಯುಸಿರೆಳೆಯುತ್ತಾರೆ. ಇದರೊಂದಿಗೆ ಪುಸ್ತಕ ೧೯೫೬ ರಿಂದ ೧೯೯೭ ಕ್ಕೆ ಜಿಗಿಯುತ್ತದೆ. ಅಲ್ಲಿಂದ ದಾಮುವಿನ ಮಗನ (ನರೇಂದ್ರ ಜಾಧವ್)ನೆನಪುಗಳು ಆರಂಭವಾಗುತ್ತವೆ: ಘೋಷಣೆಗಳ ಕೋಲಾಹಲದ ಮಧ್ಯೆ ಗಾಬರಿಗೊಂಡ ಮಕ್ಕಳ ಕೈ ಹಿಡಿದು ಸಭೆಯೊಂದರಲ್ಲಿ ಭಾಗವಹಿಸಿದ್ದ ದಾಮುಗೆ ಒಂದರೆಕ್ಷಣ ಎದುರಾದ ಅಂಬೇಡ್ಕರ್ ಹೇಳುವುದು- 'ದಾಮು, ಮಕ್ಕಳನ್ನು ಚೆನ್ನಾಗಿ ಓದಿಸು'. ದಾಮು ಅದನ್ನು ಆಶೀರ್ವಾದವೆಂಬಂತೆ ಸ್ವೀಕರಿಸಿ ಮಕ್ಕಳನ್ನು ಓದಿಸುತ್ತಾನೆ. ಅಭಿಮಾನದಿಂದ ಅವರಿಗೆ ಅಂಬೇಡ್ಕರ್ ಓದಿದ ಶಾಲಾ-ಕಾಲೇಜುಗಳನ್ನೇ ಆಯ್ಕೆ ಮಾಡುತ್ತಾನೆ. ತಾನು ವಾಸಿಸುತ್ತಿದ್ದ ಪ್ರದೇಶದಲ್ಲಿ ಹೇರಳವಾಗಿ ಬೆಳೆಯುತ್ತಿದ್ದ ರೌಡಿಗಳ ಮಧ್ಯೆ ಮಕ್ಕಳು ಹಾಳಾಗದಂತೆ ಸಕಲ ನೈತಿಕ ಎಚ್ಚರದಿಂದ ಅವರನ್ನು ಬೆಳೆಸುತ್ತಾನೆ. ಅವರಿಗೆ ಭಾಷೆಯಾಗಿ ಸಂಸ್ಕೃತ ಕೊಡಿಸುತ್ತಾನೆ. ಮಗ ಸಂಸ್ಕೃತದಲ್ಲಿ ಅತಿ ಹೆಚ್ಚು ಅಂಕ ಪಡೆದಾಗ, ಬ್ರಾಹ್ಮಣರ ಗರ್ವ ಮುರಿದಂತೆ ಬೀಗುತ್ತಾನೆ. ಹಾಗೇ ಮಕ್ಕಳು ಪಡೆದ ಪದವಿಗಳ ಸಾರ್ಥಕತೆಯನ್ನು ಅನುಮಾನದಿಂದ ನೋಡುತ್ತಾನೆ: 'ನೀನು ಓದಿದ್ದೆಲ್ಲವೂ ಬೀದಿಯಲ್ಲಿರೋ ಮನುಷ್ಯನ ಉದ್ಧಾರಕ್ಕಲ್ಲದಿದ್ದರೆ ಅದು ನಿಷ್ಪ್ರಯೋಜಕ' ಎಂದು ಅವರನ್ನು ಛೇಡಿಸುತ್ತಾನೆ. ಒಬ್ಬ ಮಗ ಐ. ಎ. ಎಸ್. ಮಾಡಿ ಜಿಲ್ಲಾ ಕಲೆಕ್ಟರಾದರೆ, ಇನ್ನೊಬ್ಬ ಮಗ ಅಂತರರಾಷ್ಟ್ರೀಯ ಮನ್ನಣೆ ಪಡೆದ ಅರ್ಥಶಾಸ್ತ್ರಜ್ಞನಾಗುತ್ತಾನೆ. ಆದರೆ ಅಪ್ಪನಿಗೆ ಅವರು ಪ್ರೀತಿಯ 'First Class scoundrel'ಗಳೇ! (ಅದು ಅವನು ಬಾಲ್ಯದಲ್ಲಿ ಬಿಳಿ ಅಧಿಕಾರಿಯೊಬ್ಬನ ಬಳಿ ಕೆಲಸ ಮಾಡುತ್ತಿದ್ದಾಗ ಕಿವಿ ಮೇಲೆ ಪದೇ ಪದೇ ಬಿದ್ದು ಪರಿಚಿತವಾದ ಪ್ರಿಯ ಬೈಗುಳ!) ಏಕೆಂದರೆ ಸ್ಥಳೀಯ ಶಿವಾಜಿ ಬೀಡಿ ಸೇದಿ ಗಂಟಲು ಕೆಡಿಸಿಕೊಂಡ ಈ ಅಪ್ಪನಿಗೆಂದು 'ವಿಕ್ಟೋರಿಯಾ ರಾಣಿಗಾಗಿಯೇ ವಿಶೇಷವಾಗಿ ತಯಾರಿಸಿದ' 555 ಸಿಗರೇಟನ್ನು ಪ್ರೀತಿಯಿಂದ ತಂದು ಕೊಡುವ ಆ ಮಕ್ಕಳಿಗೆ, ವಿಕ್ಟೋರಿಯಾ ರಾಣಿ ಶಿವಾಜಿ ಬೀಡಿಯ ರುಚಿ ನೋಡಿಲ್ಲವೆಂಬುದೇ ಗೊತ್ತಿಲ್ಲ! ಹಾಗೇ, ನರೇಂದ್ರ ಜಾಧವ್ ತನ್ನ ಅಪ್ಪನ ವ್ಯಕ್ತಿತ್ವವನ್ನು ನಿರೂಪಿಸುವ ಈ ಸ್ವಾರಸ್ಯಕರ ಪ್ರಸಂಗ:

> ದಾದಾ ಒಂದು ದಿನ ನನ್ನನ್ನು ಕರೆದು 'ನಿನ್ನ ನಡವಳಿಕೆ ಸರಿಯಿಲ್ಲ'ವೆಂದು ಹೇಳಿದರು. 'ಬಾಬಾ ಸಾಹೇಬರು ವಿದೇಶಿ ಡಿಗ್ರಿಯನ್ನು ಹಿಡಿದು ಭಾರತಕ್ಕೆ ಬಂದಾಗ ಅವರಿಗೆ ಬೇಕಾದ ಯಾವುದಾದರೂ ಸರಕಾರಿ ನೌಕರಿ ಹಿಡಿಯಬಹುದಿತ್ತು. ಅವರು ನಮ್ಮ ಮಂದಿಯನ್ನು ಒಗ್ಗೂಡಿಸಲು ಸಾಮಾಜಿಕ ಕ್ರಾಂತಿಯನ್ನು ಆಯ್ಕೆ ಮಾಡಿದರು. ನಿನ್ನ ಹತ್ತಿರ ಅಮೆರಿಕನ್ ಡಿಗ್ರಿಯಿದೆ. ನೀನ್ಯಾಕೆ ರಿಸರ್ವ್ ಬ್ಯಾಂಕಿನಲ್ಲಿ ಕೆಲಸ ಮಾಡಬೇಕು?'

'ಬಾಬಾ ಸಾಹೇಬರ ಮಾತು ಬೇರೆ. ನಾನು ಒಬ್ಬ ಸಾಮಾನ್ಯ ಮನುಷ್ಯ'

'ನಾನು ಒಪ್ಪುವುದಿಲ್ಲ . ನಿನ್ನಂಥ ವಿದ್ಯಾವಂತ ಯುವಕರು ರಾಜಕೀಯಕ್ಕೆ ಹೋಗಿ ಜನಗಳ ಸೇವೆ ಮಾಡಬೇಕು'

ಕೊನೆಗೆ ನಾನೇ ಮಾತು ಮುಗಿಸುವ ಸಲುವಾಗಿ ಹೇಳಿದೆ, 'ಈಚಿನ ದಿನಗಳಲ್ಲಿ ಯಾರೂ ಜನರ ಸೇವೆಗಾಗಿ ರಾಜಕೀಯದಲ್ಲಿ ಉಳಿದಿಲ್ಲ . ಆ ದಿನಗಳು ಹೋಯಿತು. ಈಗಿನ ರಾಜಕಾರಣದಲ್ಲಿ ಬರಿ ಮೋಸಗಾರರು, ಗೂಂಡಾಗಳೇ ಇರುವುದು.'

ದಾದಾ ಎಂದಿಗೂ ಬಿಟ್ಟು ಕೊಡುತ್ತಿರಲಿಲ್ಲ- 'ಆದ್ರೇನು, ನೀನೂ ಫಸ್ಟ್ ಕ್ಲಾಸ್ ಸ್ಕೌಂಡ್ರಲ್ ತಾನೇ!'. ನನಗೆ ಮಾತೇ ಹೊರಡಲಿಲ್ಲ.

ಇಂತಹ ವರ್ಗ ವಿಶಿಷ್ಟವಾದ ಹಾಸ್ಯಪ್ರಜ್ಞೆಯಿಂದಾಗಿಯೇ, ತನ್ನ ಮಕ್ಕಳ ಅಭ್ಯುದಯದಿಂದ ದೊರೆತ ಸುಖ-ಸೌಲಭ್ಯಗಳಿಂದ ಎಂದೂ ತಲೆ ತಿರುಗಿ (ಒಮ್ಮೊಮ್ಮೆ ಸ್ವಭಾವ ದೋಷದಿಂದಾಗಿ, ಕಲೆಕ್ಟರನೆಂಬ ಅಧಿಕಾರದಿಂದ ತನ್ನನ್ನು ದಬಾಯಿಸ ಬಂದ ಅಧಿಕಾರಿಗೆ , ತಾನು ಕಲೆಕ್ಟರನ ತಂದೆ ಎಂದು ಪ್ರತಿ ದಬಾಯಿಸುವುದೂ ಉಂಟು!)ದಾಮು ತನ್ನ ಬೇರುಗಳನ್ನು ಮುರಿದುಕೊಳ್ಳುವುದಿಲ್ಲ. ಹಾಗಾಗಿಯೇ, ಮಗನನ್ನು ಕಲೆಕ್ಟರನನ್ನಾಗಿ ಮಾಡಿದ ಸಾಧನೆಯ ಗೌರವಾರ್ಥ ತಾನು ಕೆಲಸ ಮಾಡುತ್ತಿದ್ದ ಬಂದರು ಪ್ರಾಧಿಕಾರದ ಮೇಲಧಿಕಾರಿ ತನಗೆ ಸೇವಾ ವಿಸ್ತರಣೆ ಕೊಡಲು ಮುಂದಾದಾಗ , ಆತ ಹೀಗೆ ಹೇಳಲು ಸಾಧ್ಯವಾಗುವುದು-'ಸಾಹೇಬ್, ನೀವು ಬೇರೆ ಇನ್ಯಾರಿಗಾದರೂ ಒಂದು ವರ್ಷದ ವಿಸ್ತರಣೆ ಕೊಡಲು ಸಾಧ್ಯವೇ ನೋಡಿ... ಯಾರ ಮಕ್ಕಳು ಇನ್ನೂ ಓದುತ್ತಿದ್ದಾರೋ-ಯಾರ ಶಿಕ್ಷಣ ಅವರ ತಂದೆಯ ನಿವೃತ್ತಿಯಿಂದ ನಿಂತು ಹೋಗುವಂತಾಗುತ್ತದೋ, ಅಂತಹವರ ಅವಶ್ಯಕತೆ ನೋಡಿ ಕೊಡಿ...'. ದಾಮುವಿನ ತಲೆಮಾರಿನವರು 'ಜೈ ಭೀಮ್' ಘೋಷಣೆಗಳ ಮೂಲಕ ಕಂಡುಕೊಂಡ ವಿವೇಕ ಇಂತಹದು. ಇಂತಹ ವಿವೇಕಕ್ಕೆ ಮತ್ತೊಂದು ಉದಾಹರಣೆ, ಪೂನಾ ಒಪ್ಪಂದದ ಸಂದರ್ಭದಲ್ಲಿ ಗಾಂಧಿ-ಅಂಬೇಡ್ಕರ್ ಮುಖಾಮುಖಿ ಕುರಿತು ದಾಮು ಸೇರಿದಂತೆ ಅಂಬೇಡ್ಕರ್ ಅನುಯಾಯಿಗಳ ನಡುವೆ ನಡೆಯುವ ಚರ್ಚೆ. ಈ ಮುಖಾಮುಮುಖಿ ದೇಶಾದ್ಯಂತ ಹುಟ್ಟು ಹಾಕಿದ್ದ ಕಹಿಯಿಂದ ಕಂಗೆಟ್ಟಿದ್ದ ದಾಮುವಿನ 'ಈ ಇಬ್ಬರು ಮಹಾನ್ ನಾಯಕರು ತಮ್ಮ ಭಿನ್ನಾಭಿಪ್ರಾಯಗಳನ್ನು ಖಾಸಗಿಯಾಗಿ ಕೂತು ಏಕೆ ಪರಿಹರಿಸಿಕೊಳ್ಳಬಾರದು?' ಎಂಬ ಪ್ರಶ್ನೆಯೊಂದಿಗೆ ಆರಂಭವಾಗುವ ಚರ್ಚೆ ಮುಗಿಯುವುದು, 'ಇವೆಲ್ಲ ಕುಶಲತೆಯ-ಸೂಕ್ಷ್ಮವಾಗಿ ನಿರ್ವಹಿಸಬೇಕಾದ-ವಿಷಯಗಳು. ಅದನ್ನು ನಾವು ನಮ್ಮ ನಾಯಕರಿಗೆ ಬಿಡೋಣ' ಎಂಬ ಕೊನೆಯ ಮಾತುಗಳೊಂದಿಗೆ. ಗಾಂಧಿ-ಅಂಬೇಡ್ಕರ್ ಮುಖಾಮುಖಿಯ ವಿಷಯವಾಗಿ ಇಂದೂ ಮುಂದುವರೆದಿರುವ ಚರ್ಚೆ ಹುಟ್ಟುಹಾಕುತ್ತಿರುವ ಕಹಿಯ ಹಿನ್ನೆಲೆಯಲ್ಲಿ, ಈ ಮಾತುಗಳನ್ನು ತೂಗಿ ನೋಡಬೇಕಾಗಿದೆ.

ಇಂತಹ ವಿಶಿಷ್ಟ ವಿವೇಕ ಪ್ರಕಟವಾಗುವುದು ಜಾಗೃತಿಯ ದಾಂಧಲೆ ನಡುವೆ ಮುಗ್ಧತೆಯನ್ನು ಕಳೆದುಕೊಳ್ಳದಿದ್ದಾಗ ಮಾತ್ರ ಎಂದು ಕಾಣುತ್ತದೆ. ನರೇಂದ್ರ ಜಾಧವ್ ಅವರು ಆ ಮುಗ್ಧತೆಯ ಹಸಿ ಸೌಂದರ್ಯವನ್ನು ಉಲ್ಲಾಸಮಯವಾಗಿ ಪ್ರಕಟಿಸುವ ತಮ್ಮ ತಂದೆ ತಾಯಿಗಳ ನೆನಪುಗಳನ್ನು ಎಷ್ಟು ಆತ್ಮೀಯವಾಗಿ ಕಟ್ಟಿಕೊಡುತ್ತಾರೆಂದರೆ, ಆ ತಂದೆ ತಾಯಿಗಳ ಭಾವಚಿತ್ರಗಳಿಲ್ಲದಿರುವುದು ಈ ಪುಸ್ತಕದ ದೊಡ್ಡ ಕೊರತೆಯೆನ್ನಿಸಿಬಿಡುತ್ತದೆ. ಏಕೆಂದರೆ ಆ ನೆನಪುಗಳಲ್ಲಿ ಮೂಡಿಬರುವ ತಂದೆ ತಾಯಿಗಳು ಜಾಧವರ ತಂದೆ ತಾಯಿ ಮಾತ್ರವಲ್ಲ, ಭಾರತದ ನವೋದಯದ ಆ ಕಾಲದಲ್ಲಿ 'ಜಾಗೃತ'ಗೊಂಡು ತನ್ನ ಮಕ್ಕಳನ್ನು 'ಬೆಳಕಿಗೆ' ತಂದ ಎಲ್ಲಾ ತಂದೆ ತಾಯಿಗಳು ಆಗಿದ್ದಾರೆ. ಹಾಗಾಗಿಯೇ ನವೋದಿತ ಭಾರತದಲ್ಲಿ ಅತಿಗಣ್ಯ ವ್ಯಕ್ತಿಯಾಗಿ ಫಂಡರಪುರ ವಿಠಲ ಮಂದಿರಕ್ಕೆ ಬಂದು, ಮಂದಿರದ ಪುರೋಹಿತರು ಹಾಗೂ ಅಧಿಕಾರಿಗಳಿಂದ ವಿಶೇಷ ಮರ್ಯಾದೆಗೆ ಬಾಧ್ಯರಾಗುವ ನರೇಂದ್ರ ಜಾಧವ್,ಈ ಹಿಂದೆ ಭಕ್ತಿ ತುಂಬಿ ಹಾಡುತ್ತಾ ಕುಣಿಯುತ್ತಾ ಬರುತ್ತಿದ್ದ ತನ್ನ ಜನರ ಮಂದಿರ ಪ್ರವೇಶ (ನಿಷೇಧ)ಕ್ಕೆ ಗಡಿಕಲ್ಲಿನಂತಿದ್ದ ಕಪ್ಪು ಬಂಡೆಯ ಬಳಿಗೆ ಓಡಿ ಭಾರವಾದ ನೆನಪುಗಳಲ್ಲಿ ಒದ್ದೆಯಾಗಿ ನಿಲ್ಲುವ ಪ್ರಸಂಗ ನಮ್ಮೆಲ್ಲರನ್ನೂ ಆರ್ದ್ರಗೊಳಿಸಬಲ್ಲುದಾಗಿದೆ. ಆದರೆ ಎಲ್ಲಾ ನೆನಪುಗಳೂ ಹಾಗಲ್ಲ... ಮನೆಯಲ್ಲಿ ಧ್ರುವನೆಂದು ಕರೆಯಲ್ಪಡುತ್ತಿದ್ದ ನರೇಂದ್ರ ಜಾಧವ್ ತಾನು ಓದುತ್ತಾ, ಆಡುತ್ತಾ, ಬೆಳೆದಿದ್ದ ಮುಂಬೈನ-ದೌಲತ್ ಉಸ್ತಾದ್‌ರಂತಹ ಗೂಂಡಾಗಳನ್ನು ಸಲುಹಿದ್ದ - ಆ ಹಳೆಯ ಜಾಗೆಗಳಿಗೆ ಈಗ ತನ್ನ ಮಗನೊಂದಿಗೆ ನೆನಪುಗಳನ್ನು ಹಂಚಿಕೊಳ್ಳಲು ಹೋದಾಗ ಕಂಡದ್ದು: "ಹೊಲಸು ಮತ್ತು ಗುಂಪು ನಮ್ಮನ್ನು ಮುತ್ತಿದ್ದವು. ತೂರಾಡುತ್ತಿದ್ದ ಆತ್ಮಗಳು ಕೆಂಪಾದ ಕಣ್ಣುಗಳಿಂದ ತಮ್ಮಷ್ಟಕ್ಕೆ ತಾವು ತೊದಲುತ್ತಿದ್ದವು. ಅವರಲ್ಲೂ ದೌಲತ್ ಉಸ್ತಾದ್‌ಗಳು ತುಂಬಾ ಇರಬಹುದು. ಆದರೆ ಆ ಸಣ್ಣ ಮಕ್ಕಳಲ್ಲಿ ಧ್ರುವನಂಹವರನ್ನು ನಾನು ಹುಡುಕುತ್ತಿದ್ದೆ..."

ಆದರೆ ನಿಜವಾದ ಹುಡುಕಾಟ ಧ್ರುವನ ಅಮ್ಮನದು-ಸೋನುಳದು. ಈ ಪುಸ್ತಕದ ನಿಜವಾದ -ಅತ್ಯಂತಿಕವಾದ- ತಾತ್ವಿಕ ಬಿಕ್ಕಟ್ಟು ಅರ್ಥಪೂರ್ಣವಾಗಿ ಬಿಚ್ಚಿಕೊಳ್ಳುವುದು, "ನೀನೇನು ಮಾಡಿದರೂ ಅದರ ಎತ್ತರಕ್ಕೇರು. ನೀನು ಕಳ್ಳನಾಗಬೇಕೇನು? ತೊಂದರೆ ಇಲ್ಲ, ಅದರಲ್ಲಿ ಪರಿಣಿತಿ ಪಡೆ; ಪ್ರಪಂಚವೇ ನಿನಗೆ ಸಲಾಂ ಮಾಡುತ್ತದೆ. ಪ್ರಪಂಚವೇ ನಿನ್ನ ಕಡೆ ನೋಡಿ 'ಓ ಎಂಥ ಕಳ್ಳ! ಎಂಥ ಕೈ ಚಳಕ' ಎನ್ನಬೇಕು... ಯಾವತ್ತೂ ಕಡಿಮೆಯಿಂದ ತೃಪ್ತನಾಗಬೇಡ" ಎಂಬ ಆದೇಶದ ಮೇರೆಗೆ ಅಪ್ಪನ ಮಗನಾಗಿ, ನರೇಂದ್ರ ಜಾಧವ್ ಅರ್ಥಶಾಸ್ತ್ರ ಆಡಳಿತಗಾರನಾಗಿ ಮೆಟ್ಟಿಲು ಮೆಟ್ಟಿಲು ಏರುತ್ತಾ ,೧೯೯೭ ರಲ್ಲಿ 'ಅಂತರಾಷ್ಟ್ರೀಯ ಹಣಕಾಸು ನಿಧಿ'ಸೇರಲು ಅಮೆರಿಕಾಕ್ಕೆ ಪ್ರಯಾಣಕ್ಕಾಗಿ ಹೊರಟ ಮುಂಬೈ ವಿಮಾನ ನಿಲ್ದಾಣದಲ್ಲಿ ಜನ ಜಂಗುಳಿಯ ನಡುವೆ

ತನ್ನನ್ನು ಹುಡುಕುತ್ತಾ ಬಂದ ತನ್ನ ಅಮ್ಮನ ಮಗನಾಗಿ, ಅವಳ ರೋದನವನ್ನು ಎದುರಿಸಬೇಕಾಗಿ ಬಂದಾಗ-

'ನಂಗೆ ಹೋಗೋಕೆ ಬಿಡಿ... ಧೃವನನ್ನು ಕರೀರಿ... ಅಯ್ರೇ, ನನ್ನ ಮಗನ ಜೊತೆ ಸ್ವಲ್ಪ ಹೊತ್ತಾದ್ರೂ ಇರಕ್ಕೆ ಬಿಡಿ... ಅವನು ಏಳು ಸಮುದ್ರ ದಾಟಿ ಹೋಗ್ಬಿದಾನೆ... ನಾನು ಸಾಯೋ ಮುದುಕಿ...'

'ಬಾಯಿ...' ನಾನು ಕರೆದೆ. ನನ್ನ ಅಮ್ಮನ ಹತ್ರ ಹೋಗಿ ಕಾಲು ಮುಟ್ಟಿ ನಮಸ್ಕಾರ ಮಾಡಿ ಆಶೀರ್ವಾದ ಪಡೆಯಲು ಹೋದೆ. ಅದಲ್ಲ ಅವಳಿಗೆ ಬೇಡವಾದದ್ರಿಂದ ಅವಳು ಜೋರಾಗಿ ಕಿರುಚಿದಳು. 'ನೀನಿಲ್ಲಿ ಕಷ್ಟಪಟ್ಟು ದುಡಿದಿದ್ದು ಯಾಕೆ? ಊರು ಬಿಟ್ಟು ಹೋಗಾಕಾ? ನಂಗಂತೂ ಅರ್ಥವೇ ಆಗೊಲ್ಲ. ಈಗ ನೀನೇನು ಹುಡುಕ್ತಾ ಇದ್ದಿ...? ಇಲ್ಲಿ ಸಿಕ್ಕದ್ದು ಏಳು ಸಮುದ್ರದಾಚೆ ಸಿಗುತ್ತಾ?ನಿನ್ನ ಹೊಟ್ಟೆಗೆ ಎರಡು ಹೊತ್ತು ಊಟಕ್ಕಿಂತ ಎಷ್ಟು ಹೆಚ್ಚು ಬೇಕು? ನಿನಗೆ ಇನ್ನೂ ಹೆಚ್ಚು ಬೇಕು... ನಿನಗಿನ್ನೆಷ್ಟು ಬೇಕು? ಅವಳು ಬಡಬಡಿಸುತ್ತಲೇ ಇದ್ದಳು.

'ನೀನು ಸಣ್ಣೋನಿದ್ದಾಗಿಂದ ಹೀಗೇ... ಯಾವಾಗ್ಲೂ ಹುಡುಕೋದು' ಅವಳು ಹೇಳಿದಳು, 'ಇದ್ದದ್ದರಲ್ಲಿ ನಿನಗೆಂದೂ ಸಂತೋಷವಿಲ್ಲ . ನನ್ನ ನೋಡು, ನಾನು ಯಾವಾಗ್ಲೂ ಇರ್‍ತೀನಿ ಅಂದ್ಕೋಬೇಡ... ನಾಳೆ ನಿನ್ನ ಕಣ್ಣೀರೇನು ಪ್ರಯೋಜನ?... ನನ್ನ ಹೆಣದ ಮೇಲೆ ಕಣ್ಣೀರು ಸುರಿಸೋಕೂ ನೀನಿರೋಲ್ಲ'. ಈಗ ಕಿರುಚೋಕೆ ಶುರು ಮಾಡಿದ್ಲು, 'ನಿನ್ನ ಮುದುಕ ಸತ್ತು ಬಿಟ್ಟ... ಈಗ ನೀನು ನನ್ನ ಬಿಟ್ಟು ಹೋಗ್ತಿದ್ದೀಯಾ! ದ್ರುವಾ, ಯಾಕೆ ಹೀಗೆ ಮಾಡ್ತೀದೀಯಾ...?'

ನಾನು ಅವಳಿಗೆ ಹೇಗೆ ವಿವರಿಸಲಿ? ನಾನು ಶಬ್ದಗಳಿಗೆ ತಡಕಾಡುತ್ತಿರುವಾಗ, ನಾನೂ ಯಾಕೆ ನಮ್ಮೋರನ್ನೆಲ್ಲಾ ಬಿಟ್ಟು ಹೊರಟಿದ್ದೇನೆ ಎಂದು ಆಶ್ಚರ್ಯವಾಯಿತು. ನನ್ನವರ ರಕ್ತ ಮಾಂಸ ಹಂಚಿಕೊಂಡು ಹುಟ್ಟಿದ ನಾಡನ್ನು ಬಿಟ್ಟು, ನನ್ನ ವೃತ್ತಿಗೆ ಭರವಸೆ ನೀಡಿದ ದೇಶಕ್ಕೆ ಹೋಗಲು ನನ್ನ ವ್ಯರ್ಥ ಪ್ರಯತ್ನ ಯಾಕೆ? ನಾನು ಅಮ್ಮನಿಗೆ ತಿಳಿಸಲು ಶಬ್ದಗಳನ್ನು ಹುಡುಕುತ್ತಿರುವಾಗಲೇ, ನನಗೆ ಏನೂ ಸಿಕ್ಕಲಿಲ್ಲ... ನನ್ನ ಮನಸ್ಸಿನಲ್ಲಿ ಬಂದ ಶಬ್ದಗಳಲ್ಲಿ ಆಳವೇ ಇಲ್ಲದಿರುವುದನ್ನು ಕಂಡೆ.

ಇದು ಇಂದಿನ ಜಾಗತಿಕ ಅರ್ಥ ರಾಜಕಾರಣದ ಸಂದರ್ಭದಲ್ಲಿ ಒಬ್ಬ ತಾಯಿ-ಮಗನ ನಡುವಣ ಮುಖಾಮುಖಿ ಎನ್ನಿಸದೆ, 'ಉದಾರವಾದಿ ನವ ಭಾರತ'ವು ಇಂದು ಎದುರಿಸುತ್ತಿರುವ ನಿರ್ಣಾಯಕ ತಾತ್ವಿಕ ದ್ವಂದ್ವದ ಹಿನ್ನಲೆಯಲ್ಲಿ ಆಳವಾದ ರೂಪಕಾರ್ಥವನ್ನು ಪಡೆಯುತ್ತದೆ. ಆದರೆ 'ಶಬ್ದ'ಗಳ ಆಳಕ್ಕಿಂತ ಹೆಚ್ಚಾಗಿ 'ಅರ್ಥ'ದ ಎತ್ತರಗಳ ಹುಡುಕಾಟದಲ್ಲಿರುವಂತೆ ತೋರುವ ನರೇಂದ್ರ ಜಾಧವ್, ಹೆಂಡತಿ

ಮಕ್ಕಳೊಂದಿಗೆ ಅಮೇರಿಕ್ಕಾಕ್ಕೆ ಹೋಗುತ್ತಾರೆ. ಅಲ್ಲಿ ಶಾಲೆಗೆ ಸೇರುವ ಮಗಳು ಅಪೂರ್ವ, ಭಾರತದಲ್ಲಿ ಕೇಳಲ್ಪಡುತ್ತಿದ್ದ 'ನೀನು ದಲಿತ ವಿದ್ವಾಂಸ ಡಾ|| ನರೇಂದ್ರ ಜಾಧವರ ಮಗಳೇ? ಎಂಬ ಪ್ರಶ್ನೆಯಿಂದ ವಿಮೋಚಿತಳಾಗಿ, ಈ ಇಡೀ ಕೃತಿಗೆ ತನ್ನ ಹಿನ್ನುಡಿಯಲ್ಲಿ ಹೀಗೆ ಭಾಷ್ಯ ಬರೆಯುತ್ತಾಳೆ-

> '.... ಈಗ ನಾನು ಯಾರು ಎಂದು ಮನಗಂಡಿದ್ದೇನೆಂದು ನನಗನ್ನಿಸುತ್ತದೆ. ನಾನೀಗ ಕೇವಲ ಅಪೂರ್ವ, ಅಷ್ಟೆ. ನನಗೆ ಯಾವ ಕುಲ, ಮತ ಧರ್ಮ ಅಥವಾ ಜಾತಿಯ ಬಂಧನಗಳೂ ಇಲ್ಲ. ನನ್ನ ಹಿರಿಯರು ತಾವು ದಲಿತರೆಂಬ ಹೊರೆ ಹೊತ್ತು, ಭಾರತ ಸ್ವತಂತ್ರವಾದ ನಂತರವೂ ಅತ್ಯಂತ ಹೀನಾಯದ ಕೆಲಸ ಕಾರ್ಯಗಳನ್ನು ತಲೆಬಾಗಿ ನಡೆಸಿಕೊಂಡು ಬಂದಿದ್ದಾರೆ. ಆದರೆ ನನ್ನ ಯಾವ ಶಕ್ತಿಯೂ ತಡೆ ಹಿಡಿಯಲಾಗದು.'.

ನನ್ನ ವಿಷಯ ಬೇರೆ?! ಇದೇ, ಈ ಪುಸ್ತಕ ಕುರಿತು, ಅದರೊಳಗಿನಿಂದಲೇ ಒಡಮೂಡಿ ಬರುವ ವ್ಯಾಖ್ಯಾನ ಕೂಡ. ಅಂಬೇಡ್ಕರ್‌ವಾದವು ಗಾಂಧಿವಾದದಂತೆಯೇ, ಅದರ ಇವೊತ್ತಿನ ಅನುಯಾಯಿಗಳ ಮೂಲಕ ಅನೇಕ ದೌರ್ಬಲ್ಯಗಳಿಂದ ನರಳಿದಂತೆ ಕಾಣುತ್ತಿರಬಹುದು. ಆದರೆ ಅದು ಗಾಂಧಿವಾದದಂತೆಯೇ ತನ್ನ ಉದಯದ ಕಾಲದಲ್ಲಿ ಅಂದಿನ ಅನುಯಾಯಿಗಳ ಬಾಳಿನಲ್ಲಿ ಉಂಟು ಮಾಡಿದ ಮಹಾ ಪರಿವರ್ತನೆಯ ದೃಷ್ಟಿಯಿಂದ ಎಷ್ಟು ನಿಜವೂ, ಋಜುವೂ ಮತ್ತು ಪರಿಣಾಮಕಾರಿಯೂ ಆಗಿತ್ತು ಎಂಬುದನ್ನು ಇಂತಹ ಕೃತಿಗಳು ನಮಗೆ ಮನಗಾಣಿಸುತ್ತವೆ. ಹಾಗೆ ನೋಡಿದರೆ, ಭಾರತದ ಆಧುನಿಕ ಸಾಮಾಜಿಕ ಚರಿತ್ರೆಗೆ ಅಂಬೇಡ್ಕರರ ಕೊಡುಗೆಯನ್ನು ಇಂದಿನ ಪರಿಪ್ರೇಕ್ಷ್ಯದಲ್ಲಿ ಸರಿಯಾಗಿ ಹಾಗೂ ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು ಅವರನ್ನು ಕುರಿತ ಜೀವನ ಚರಿತ್ರೆಯ ಅಥವಾ ತಾತ್ವಿಕ ಪುಸ್ತಕಗಳಿಗಿಂತ ಇಂತಹ ವೈಯುಕ್ತಿಕ ನಿರೂಪಣೆಯ ಪುಸ್ತಕಗಳೇ ಹೆಚ್ಚು ಉಪಯುಕ್ತವೆಂದು ತೋರುತ್ತದೆ.

ಸುಮಾ ದ್ವಾರಕಾನಾಥ್ ಅವರ ಅನುವಾದ ನಿಷ್ಕಾರಣವಾಗಿ ಒಮ್ಮೆ ಉತ್ತರ ಕರ್ನಾಟಕದ ಆಡುಭಾಷೆಗೂ, ಮತ್ತೊಮ್ಮೆ ಹಳೆ ಮೈಸೂರಿನ ಹಳ್ಳಿಗಾಡಿನ ಭಾಷೆಗೂ ಹೊರಳುತ್ತಾ, ಕೆಲವೆಡೆ ಕನ್ನಡದ ಜಾಯಮಾನಕ್ಕೊಗ್ಗದ ವಾಕ್ಯ ರಚನೆ ಹಾಗೂ ಪದಗುಚ್ಛಗಳ ಮೂಲಕ ಗೊಂದಲ ಹುಟ್ಟಿಸುತ್ತದಾದರೂ, ಒಟ್ಟಾರೆಯಾಗಿ ಅಭಿನಂದನೀಯವಾಗಿಯೇ ಇದೆ .

('ಸಂವಾದ', ಅಕ್ಟೋಬರ್ ೨೦೦೬)

ಗೊರೂರರ ಲಲಿತ ವಿನೋದ ಪ್ರತಿಭೆ

ಮಾಸಪತ್ರಿಕೆಯೊಂದರರಲ್ಲಿ ಪುಸ್ತಕ ಪರಿಚಯ ಮಾಡುತ್ತಿರುವ ಕನ್ನಡದ ಪ್ರಸಿದ್ಧ ವಿಮರ್ಶಕರೊಬ್ಬರು ಇತ್ತೀಚೆಗೆ ಪು. ತಿ ನ. ಅವರ ಪುಸ್ತಕವನ್ನು ಪರಿಚಯಿಸುತ್ತಾ ಪು.ತಿ.ನ., ಗೊರೂರರ ಹಾಗೆ ವಿನೋದಕ್ಕಾಗಿಯೇ ವಿನೋದ ಸೃಷ್ಟಿಸುವವರಲ್ಲ ಎಂಬರ್ಥದ ಸಾರಾಸಗಟು ಹೇಳಿಕೆಯೊಂದನ್ನು ದಾಖಲಿಸಿದ್ದನ್ನು ನೋಡಿ ನನಗೆ ಆಶ್ಚರ್ಯವೂ ಗಾಬರಿಯೂ ಆಯಿತು. ಗೊರೂರರರು ತಮ್ಮ (ವಿನೋದ) ಸಾಹಿತ್ಯ ಕೃಷಿಯನ್ನು ಆರಂಭಿಸುದುದೇ ಗಾಂಧೀಜಿಯವರ ಆಶೀರ್ವಾದ ಹಾಗೂ ಹಾರೈಕೆಯೊಂದಿಗೆ: "I wish your venture sucess. Take care that you do not leave what you have begun" (*ಲೇಖನ ಆರಿಕೆ: 'ಕಥೆಗಳು ಮತ್ತು ವಿನೋದ ಚಿತ್ರಗಳು' ; ಜನಮಿತ್ರ ಪ್ರಕಾಶನ, ಹಾಸನ, ೧೯೭೨*). ಆರಂಭದ ಅಭ್ಯಾಸದ ಕೆಲವು ಬರಹಗಳು ಮತ್ತು ಕೊನೆಯ ದಿನಗಳಲ್ಲಿ ನಿಯತಕಾಲಿಕೆಗಳಿಗಾಗಿ ಹಾಗೂ ವಿಶೇಷಾಂಕಗಳಿಗಾಗಿ ಸಂಪಾದಕರುಗಳ ಒತ್ತಾಯಕ್ಕಾಗಿ ಬರೆದ ಕೆಲವು ಲೇಖನಗಳ ಹೊರತಾಗಿ ಹರಟೆ, ವಿನೋದ ಚಿತ್ರ, ಲಲಿತ ಪ್ರಬಂಧ, ಸಣ್ಣಕಥೆ ಹಾಗೂ ಕಾದಂಬರಿಗಳನ್ನೊಳಗೊಂಡ ಗೊರೂರರ ಬಹುಪಾಲು ಸಾಹಿತ್ಯದಲ್ಲಿ ಗಾಂಧಿವಾದದ ಮೌಲ್ಯಗಳ ಪ್ರತಿಪಾದನೆ, ನಮ್ಮ ಜಾನಪದ-ಸಾಂಸ್ಕೃತಿಕ ಪರಂಪರೆಯ ಸೂಕ್ಷ್ಮ ಪರಿಚಯ ಹಾಗೂ ಆಧುನಿಕತೆಗೆ ತೆರೆದುಕೊಳ್ಳುತ್ತಿರುವ ಬದುಕಿನಲ್ಲಿ ಮನುಷ್ಯ ಉದಾರವಾಗದಿದ್ದರೆ ಪಡಬೇಕಾದ ಪಡಿಪಾಟಲುಗಳ ವಿನೋದಮಯ ವರ್ಣನೆ ಅಂತರ್ಗಂಗೆಯಂತೆ ಹರಿದಿರುವುದನ್ನು ಯಾರಾದರೂ ಗಮನಿಸಬಹುದು. ಗಾಂಧಿ ಯುಗದ ಲೇಖಕರಾದ ಗೊರೂರರು ಆ ಕಾಲದ ಬಹುಪಾಲು ಲೇಖಕರಂತೆ ತಮ್ಮ ಕಣ್ಮುಂದೆ ಕೆಲವು ಆದರ್ಶಗಳನ್ನಿಟ್ಟುಕೊಂಡೇ ಬರೆದವರು.

ಸ್ವಾತಂತ್ರ್ಯ'ಹೋರಾಟ'ದಲ್ಲಿ ಭಾಗವಹಿಸಿದ್ದರೂ, ಗೊರೂರರು ಹೆಚ್ಚಾಗಿ ಒಲಿದಿದ್ದುದು ಗಾಂಧೀಜಿಯವರ 'ರಚನಾತ್ಮಕ ಕೆಲಸ' (constructive)ದ ಪರಿಕಲ್ಪನೆ ಕಡೆಗೇ: ಗ್ರಾಮ ಜೀವನದ ಪುನಾರಚನೆ, ಜಾತಿಪದ್ಧತಿ ಹಾಗೂ ಅದರ ಭಾಗವಾದ ಅಸ್ಪೃಶ್ಯತಾ ಆಚರಣೆ ಮತ್ತು ಇತರೆ ಪಾರಂಪರಿಕ ಮೂಢನಂಬಿಕೆಗಳ ನಿವಾರಣೆ, ಖಾದಿ ಹಾಗೂ ಗ್ರಾಮೋದ್ಯೋಗ ಪ್ರಚಾರ ಇತ್ಯಾದಿ. ಹೀಗಾಗಿಯೇ ಅವರ ಸಾಹಿತ್ಯದ ತುಂಬಾ ಗ್ರಾಮ ಜೀವನದ ಸೊಗಡೇ ತುಂಬಿದೆ - ವಿಶೇಷವಾಗಿ ತಮ್ಮ ಹುಟ್ಟೂರಾದ ಹಾಸನ ಜಿಲ್ಲೆಯ (ಅರೆ)ಮಲೆನಾಡು ಗ್ರಾಮ(ವಾಗಿದ್ದ) ಗೊರೂರು ಹಾಗೂ ಸುತ್ತಮುತ್ತಲಿನ ಬೆಟ್ಟ, ಕಾಡು, ಹೊಳೆಗಳ ಸೌಂದರ್ಯ ಮತ್ತು ಅವುಗಳ ಮಧ್ಯೆ ಅರಳಿದ ಜನಸಾಮಾನ್ಯರ ಬದುಕಿನ ರೀತಿ-ನೀತಿಗಳನ್ನು ತಾವು ನಂಬಿದ ಗಾಂಧಿಯುಗದ ನವೋದಯದ ಕಣ್ಣುಗಳಲ್ಲಿ

ನೋಡಿ, ನಮ್ಮ ಮುಂದೆ ತಮ್ಮದೇ ಆದ ಲಲಿತ-ಗಂಭೀರ-ವಿನೋದಮಯ ಶೈಲಿಯಲ್ಲಿ ಕಂಡಿರಿಸಿದ್ದಾರೆ.

ಲಲಿತ-ಗಂಭೀರ, ವಿನೋದಮಯ ಶೈಲಿ ಎಂದೆ. ಸ್ವಲ್ಪ ಪರಸ್ಪರ ವ್ಯತಿರಿಕ್ತವೆನಿಸುವ ಈ ಮೂರೂ ಗುಣಗಳು ಬೆರೆತು ಹದವಾದ ಒಂದು ವಿಶಿಷ್ಟ ಶೈಲಿಯನ್ನು ಗೊರೂರರು ಕನ್ನಡಕ್ಕೆ ರೂಢಿಸಿ ಕೊಟ್ಟಿದ್ದಾರೆ, ತಮ್ಮ 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಎಂಬ ತಮ್ಮ ಒಂಭತ್ತು ಲೇಖನಗಳ ಸಂಗ್ರಹದಲ್ಲಿ. ಮೊದಲ ಬಾರಿಗೆ ೧೯೬೭ರಲ್ಲಿ ಪ್ರಕಟವಾದ (*ಪ್ರ: ಶ್ರೀ ಲಕ್ಷ್ಮೀ ಬುಕ್ ಹೌಸ್, ಕೃಷ್ಣಮೂರ್ತಿಪುರಂ, ಮೈಸೂರು-೪*) ಈ ಸಂಗ್ರಹದ 'ಪಾಕಶಾಲೆಯಲ್ಲಿ', 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ?' ಮತ್ತು 'ಸಂಚಾರಿ ಚಲನಚಿತ್ರಗಳು' ಎಂಬ ಮೂರು 'ಹರಟೆ'ಗಳನ್ನು ಹೊರತುಪಡಿಸಿದರೆ, ಮಿಕ್ಕ ಆರು ಪ್ರಬಂಧಗಳಲ್ಲಿ ಗೊರೂರರು ತಾವು ಹತ್ತಿರದಿಂದ ಕಂಡ ಗ್ರಾಮಜೀವನದ ಸೊಗಸನ್ನೂ, ಅದ್ಭುತಗಳನ್ನೂ, ಆಧುನಿಕತೆಯ ಆಗಮನದ ತಲ್ಲಣಗಳನ್ನೂ ಮತ್ತು ಪರಿವರ್ತನಾಶೀಲತೆಯನ್ನೂ ಸೂಕ್ಷ್ಮವಾಗಿ, ಲಲಿತವಾಗಿ ಹಾಗೂ ಪರಿಣಾಮಕಾರಿಯಾಗಿ ಚಿತ್ರಿಸಿರುವುದನ್ನು ಕಾಣಬಹುದು. 'ಹರಟೆ'ಗಳೆಂದು ಮೇಲೆ ವರ್ಗೀಕರಿಸಲ್ಪಟ್ಟ ಮೂರು ಪ್ರಬಂಧಗಳು ಇತರ ಯಾರೂ ಬರೆಯಬಹುದಾದ ವಿನೋದ ಬರಹಗಳಷ್ಟು ಸಾರ್ವತ್ರಿಕವಾಗಿರುವುದರಿಂದ, ಅವುಗಳ ಬಗ್ಗೆ ಇಲ್ಲಿ ಹೆಚ್ಚೇನೂ ಹೇಳುವ ಅಗತ್ಯ ಕಾಣಬರುವುದಿಲ್ಲ.

'ಹೇಮಾವತಿಯ ತೀರದಲ್ಲಿ' ಪ್ರಬಂಧವು ನದೀ ತೀರದ ಒಂದು ಊರಿನ ಜನರ ಇತಿಹಾಸ-ಸಂಸ್ಕೃತಿ-ವಿಕಾಸಗಳನ್ನು ಆ ನದಿ ಹೇಗೆ ಪ್ರಭಾವಿಸುತ್ತಾ,ರೂಪಿಸುತ್ತಾ ಹೋಗುತ್ತದೆ ಎಂಬುದರ ಒಂದು ಸಂಕ್ಷಿಪ್ತ ಚಿತ್ರ ನೀಡುತ್ತದೆ. ಹೇಮಾವತಿ ಗೊರೂರಿನ ಜೀವನದಿ; ಆ ಊರಿನ ಜನಜೀವನದ ಒಂದು ಅವಿಭಾಜ್ಯ ಅಂಗ - ಅಲ್ಲಿ ಸೇತುವೆ, ಅಣೆಕಟ್ಟು ಹಾಗೂ ಜಲಾಶಯಗಳು ನಿರ್ಮಾಣವಾಗುವವರೆಗೆ : "ಹೇಮಾವತಿ ನದಿಯು ನಮ್ಮೂರ ಉಸಿರು. ನದಿಯ ದಡದಲ್ಲಿ ನಿಂತುಕೊಂಡು ನೋಡಿದರೆ ನದಿ ನಮ್ಮೂರ ಬಳಿ ಇರುವಷ್ಟು ಸುಂದರವಾಗಿ, ಸೊಗಸಾಗಿ ಮತ್ತೆಲ್ಲೂ ಇಲ್ಲವೆಂದು ಯಾರಿಗಾದರೂ ತೋರುವುದು... ನರಸಿಂಹಸ್ವಾಮಿ ದೇವಸ್ಥಾನದ ಮುಂದುಗಡೆಯಿಂದ ಎಡಗಡೆಯೂ ಬಲಗಡೆಯೂ ನೋಡಿದರೆ ನೂರಾರು ತೋಪುಗಳ ಗೊಂಚಲುಗಳು ಕಣ್ಣಿಗೆ ವಿಶ್ರಾಂತಿಯನ್ನು ಕೊಡುವುವು. ನದಿಯ ಎರಡೂ ದಡಗಳಲ್ಲೂ ಮರಗಳ ಕೊಂಬೆಗಳು ನದಿಯ ಮೇಲೆ ಬಾಗಿದ್ದು ನೀರನ್ನು ಮುತ್ತಿಡುತ್ತಾ ನದಿಯ ರೆಪ್ಪೆಗಳಂತೆ ಕಾಣುವುವು. ನದಿಯಿಂದ ಮೇಲೆ ಪಶ್ಚಿಮಕ್ಕೆ ಒಂದು ಮೈಲಿ ಹೋದರೆ ಈಶ್ವರನನ್ನು ತಪಸ್ಸಿಗೆ ಆಕರ್ಷಿಸುವಷ್ಟು ರಮಣೀಯವೂ ಶಾಂತವೂ ಆದ ಸಂಗಮ ಮತ್ತು ತೋಪು. ಹೇಮಾವತಿ ನದಿಯು ನಮ್ಮ ಪ್ರಾಂತ್ಯಕ್ಕೆ ಜೀವವನ್ನು ಕೊಡುವ ಜೀವನಾಡಿ. ಅದರ ಸ್ಪರ್ಶದಿಂದ

ಪವಿತ್ರವೂ ಚೆನ್ನೂ ಆದ ನಮ್ಮ ನಾಡು ದೇವಲೋಕದ ನಂದನವನಕ್ಕೆ ಎಣೆಯಾದುದು."

ಇಂತಹ ನದಿ ತನ್ನ ತೀರದ ಸುತ್ತಲಿನ ಜನಸಮುದಾಯಕ್ಕೆ ಅನ್ನ-ನೀರು ಒವಗಿಸುತ್ತಾ ಲೋಕಾರ್ಥವಾದ ಉದ್ದೇಶವನ್ನು ಈಡೇರಿಸುತ್ತಿರುವಂತೆಯೇ, ಊರಿನ ಶುಚಿ-ಅಭಿರುಚಿ, ಸಾಹಸ-ವಿವೇಕ ಹಾಗೂ ಹಬ್ಬ- ಆಚರಣೆಗಳಿಗೆ ಮೂಲಸ್ಫೂರ್ತಿಯೂ ಆಧಾರ ನೆಲೆಯೂ ಆಗಿ, ಒಂದು ಪರಮಾರ್ಥದ ಉದ್ದೇಶವನ್ನೂ ಈಡೇರಿಸುತ್ತಿದೆ-ಈ ನದಿ ಊರ ಜನರ ಮೈಮಾಲಿನ್ಯವನ್ನು ಮಾತ್ರ ತೊಳೆಯದೆ, ಮನಸ್ಸಿನ ಮಾಲಿನ್ಯಗಳನ್ನೂ ತೊಳೆಯುತ್ತಿದೆ! ಇದರ ಸೂಕ್ಷ್ಮ ನಿರೂಪಣೆಯೇ 'ಹೇಮಾವತಿಯ ತೀರದಲ್ಲಿ' ಪ್ರಬಂಧದ ವೈಶಿಷ್ಟ್ಯವೂ ಆಗಿದೆ. ಈ ನದಿಯಲ್ಲಿ ಊರಿನ ಸಕಲೆಂಟು ಜಾತಿಗಳ ಜನರೂ ಸ್ನಾನ ಮಾಡುತ್ತಾರೆ, ಬಟ್ಟೆ ಒಗೆಯುತ್ತಾರೆ, ನೀರು ತೆಗೆದುಕೊಂಡು ಹೋಗುತ್ತಾರೆ, ಒಬ್ಬರ ಮೇಲೊಬ್ಬರು ಬಿದ್ದು ಈಜಾಡುತ್ತಾ ವಿನೋದ ಪಡುತ್ತಾರೆ; ನದೀ ತಟದಲ್ಲಿ ದೇವಸ್ಥಾನ ಕಟ್ಟಿ ಒಟ್ಟಿಗೆ ಜಾತ್ರೆ ನಡೆಸುತ್ತಾರೆ. ಬ್ರಾಹ್ಮಣ-ಶೂದ್ರ, ಗಂಡಸು-ಹೆಂಗಸರಿಗೆಂದು ಪ್ರತ್ಯೇಕ 'ಕಡು'ಗಳಿದ್ದರೂ, ನದಿ ಮಾತ್ರ ಒಂದೇ ತಾನೇ? ಮನೆಯೊಳಗಿನ ಕಟ್ಟುನಿಟ್ಟಾದ ಮಡಿ-ಮೈಲಿಗೆಗಳು ನದಿ ಬಳಿಗೆ ಬಂದೊಡನೆ ಅನಿವಾರ್ಯವಾಗಿ, ಉದಾರವಾಗಿಬಿಡುತ್ತವೆ -

ದಿನವೂ ಸ್ನಾನ ಮಾಡಿದರೆ ರೋಗರುಜಿನ ಅಂಟಿಕೊಂಡಾವು ಎಂಬ ಆತಂಕದಿಂದ ವಾರಕೊಮ್ಮೆ ಮಾತ್ರ ಸ್ನಾನ ಮಾಡುವ ಶೂದ್ರರಿಗಾಗಿರುವ ಮೇಲಿನ ಕಡುವಿನಿಂದ ಬರುವ ನೀರಿನಿಂದ ತಮ್ಮ ಸ್ನಾನ ಸರಿಯಾಗಿ ಮಡಿಯಾಗದೆಂದು ಶಪಿಸಿಕೊಳ್ಳುತ್ತಾ, ಅಮಾವಾಸ್ಯೆಯ ದಿನದ ಸ್ನಾನದಲ್ಲಾದರೂ ಶೂದ್ರರ ಮೈಕೊಳೆ ಸ್ವಚ್ಛವಾಗಲೆಂದು ಮಹಾ ಸಂಕಲ್ಪಗೊಂಡು, ನದಿಯಲ್ಲಿ ದಿನಾ ಮುಳುಗು ಹಾಕುವ ವೈದಿಕ ಮಹಾಶಯರು; ಶೂದ್ರ ಹೆಂಗಸರ ಕಡುವಿನಿಂದ ಬರುವ ನೀರನ್ನು ನೂರು ಬಿಂದಿಗೆಗಳಷ್ಟು ಹಿಂದಕ್ಕೆ ತಳ್ಳಿ 'ಪರಿಶುದ್ಧಿ'ಯಾದ ಒಂದು ಬಿಂದಿಗೆ ನೀರನ್ನು ಎಚ್ಚರಿಕೆಯಿಂದ ಮೊಗೆದುಕೊಳ್ಳುವಷ್ಟರಲ್ಲಿ ಮೇಲಿನ ಕಡುವಿನಲ್ಲಿ ಶೂದ್ರ ಹೆಂಗಸೊಬ್ಬಳು ಸೀರೆ ಕುಕ್ಕುವ ಸದ್ದು ಕೇಳಿ ಬೆಚ್ಚಿಬೀಳುವ ಮಡಿ ಹೆಂಗಸರು; ಆಪತ್ಕಾಲದಲ್ಲಿ ನದಿಗೆ ಬಿದ್ದು, ಈಜು ಬರದ 'ಶತ್ರು'ಗಳಿಂದ ಪಾರಾಗುವ ತಂಟೆಕೋರರ ಅಧಿಕ ಪ್ರಸಂಗಗಳು; ಬೆಸ್ತರು ಮೀನು ಹಿಡಿಯುವ ವಿವಿಧ ರೀತಿಯ ಮೋಜುಗಳು; ಈಜುವ ಆಟೋಟಗಳಲ್ಲಿ ಆದಿ ಕರ್ನಾಟಕದ ಜೀತದ ಆಳು ತನ್ನ ಸಾಹುಕಾರನ ಮಗನನ್ನು ಮುಳುಗಿಸಿ ನೋಡುವ, ಈಜುತ್ತಿರುವ ಪುರೋಹಿತರ ಮಗನ ಬೆನ್ನ ಮೇಲೆ ಬೆಸ್ತರ ಹುಡುಗನ ಸವಾರಿಯ ಹುಡುಗಾಟಗಳು; ಈಜುವ ಸ್ಪರ್ಧೆಗಳಲ್ಲಿ ಬ್ರಾಹ್ಮಣ, ಒಕ್ಕಲಿಗ, ಬೆಸ್ತ, ಬೇಡ, ತುರುಕ, ಒಡ್ಡರೆನ್ನದೆ ಒಟ್ಟಿಗೆ ಮಾಡುವ ಸಾಹಸ ಪ್ರದರ್ಶನಗಳನ್ನು ಇಡೀ ಊರೇ ಮೈಮರೆತು ನೋಡುವುದು; ತಮ್ಮ ದಟ್ಟ ನಾಮಗಳಿಂದಾಗಿ ಸ್ನಾನಕ್ಕೆ ಮುಳುಗು ಹಾಕಿದ ಕೂಡಲೇ ನದಿಯನ್ನು ಕೆಂಪಾಗಿಸಿ ಗಾಬರಿ ಮಾಡುವ ದೇವಸ್ಥಾನದ ಪಾರುಪತ್ತೇದಾರರು,

ಅವರೊಂದಿಗೆ ಚೇಷ್ಟೆಯಾಟ ಆಡುವ ತುಂಟ ಹುಡುಗರು; ನದೀತೀರದ ದೇವಸ್ಥಾನದ ಗೋಪುರದ ಬಗೆಗಿರುವ ದಂತ ಕಥೆ; ನೇರಳೆ ಮರದ ಕೆಳಗೆ ತಣ್ಣಗೆ ಮಲಗಿರುವ ಸ್ಮಶಾನದ ಮೌನಗೀತೆ; ದೇವಸ್ಥಾನದಲ್ಲಿ ಹುಳಿಯನ್ನ ಹೊಡೆದು 'ಹೆಗ್ಗಣ'ಗಳಾಗಿ ಕೊಬ್ಬಿರುವ ಇಲಿಗಳನ್ನು ಹಾಗೂ ಅಲ್ಲಿನ ಆವರಣದಲ್ಲಿ ಮರಿ ಹಾಕುವ ಬೆಕ್ಕುಗಳನ್ನು ಕುರಿತ ಕಥೆ-ಉಪಕಥೆಗಳು; ನದಿ ತೀರದಲ್ಲೇ ನಡೆಯುವ ತಿರುಪತಿ ವೆಂಕಟರಮಣ ಸ್ವಾಮಿಯ 'ಒಕ್ಕಲಿಗರ ಜಾತ್ರೆ'ಯನ್ನು ಸಸ್ಯಹಾರಿ-ಮಾಂಸಹಾರಿ ಆಚರಣೆಗಳಿಗೆ ಸಂಬಂಧಿಸಿದಂತೆ ಒಂದು ಒಪ್ಪಂದದ ಅನುಸಾರ ಬ್ರಾಹ್ಮಣರೂ ಸೇರಿ ಊರವರೆಲ್ಲ ನಡೆಸಿ ಸಂಭ್ರಮ ಪಡುವುದು-

ನದಿ ತಟದ ಈ ರೀತಿಯ ಸಕಲ ಲೀಲಾ ವಿನೋದಗಳನ್ನು ವರ್ಣಿಸುತ್ತಲೇ, ಸಮಾಜ ಕ್ರಮೇಣ ತನಗೆ ಗೊತ್ತಿಲ್ಲದಂತೆಯೇ ತನ್ನ ಸಾಮಾಜಿಕ ಕಟ್ಟುಕಟ್ಟಲೆಗಳನ್ನೂ, ಜೀವನ ದೃಷ್ಟಿಯನ್ನೂ ಉದಾರಗೊಳಿಸಿಕೊಳ್ಳುತ್ತಿರುವ ಪರಿಯನ್ನು ಗೊರೂರರು ಸಾಹಿತ್ಯ ಪರಿಭಾಷೆಯ ಪ್ರಾಥಮಿಕ ಪಾಠಗಳನ್ನಷ್ಟೇ ಬಳಸಿಕೊಂಡು - ಸರಳ ವಾಕ್ಯಗಳ ತಿಳಿಯಾದ ಗದ್ಯ, ಜನಸಾಮಾನ್ಯರ ಬದುಕಿನ ಚಿತ್ರಗಳನ್ನು ಒಂದು ಪ್ರಬಂಧವಾಗಿ ಸಂಯೋಜಿಸುವಲ್ಲಿ ತೋರುವ ಕಲಾತ್ಮಕತೆ, ಬದುಕನ್ನು ಕುರಿತ ಒಂದು ಮುನ್ನೋಟ, ಇವೆಲ್ಲಕ್ಕೆ ತಮ್ಮದೇ ವಿಶಿಷ್ಟ ಛಾಪಿನ ವಿನೋದದ ಸ್ಪರ್ಶ- ನಿರೂಪಿಸುವ ಬರವಣಿಗೆಯ ಪರಿಣಾಮಶೀಲತೆ ಅನನ್ಯವಾದುದು: "ಅಂತರ ಈಜು, ಮಾರು ಈಜು, ಮುಳುಗು ಈಜು, ಆನೆ ಈಜು, ನಾಯಿ ಈಜು, ಮೀನು ಈಜು, ಈಜುವವರ ಆನಂದ ಸಾಂಕ್ರಾಮಿಕವಾದುದು. ಅವರ ಬೇಜವಾಬ್ದಾರಿಯು ಅನುಕರಣಕ್ಕೆ ಯೋಗ್ಯವಾದುದಾಗಿ ತೋರುತ್ತದೆ. ಯಾವಾಗಲೂ ಆನಂದಮಯವಾದ ಪ್ರಕೃತಿಯ ಜೊತೆಯಲ್ಲಿ ಅವರೂ ಸೇರಿ, ಆನಂದದ ಮೂರ್ತಿಗಳೇ ಆಗುತ್ತಾರೆ. ನದಿ, ಅದರಲ್ಲಿರುವ ನೀರು, ನೀರಿನಲ್ಲಿರುವ ಮರಳು, ಮೀನು, ಬಂಡೆ, ಬಂಡೆಯ ಮೇಲೆ ಕುಳಿತ ಹಕ್ಕಿ, ತೀರದ ತೋಪು - ಇವುಗಳಂತೆ ಅವರೂ ಪ್ರಕೃತಿಯ ಅಂಗವಾಗಿ ಹೋಗುತ್ತಾರೆ. ಆ ಆನಂದದ ಪ್ರವಾಹದ ಮುಂದೆ ಮನುಷ್ಯನು ನಿರ್ಮಿಸಿಕೊಂಡಿರತಕ್ಕ ಕೃತಕವಾದ ಭೇದಗಳು ನಿಲ್ಲುವುದಿಲ್ಲ. ಸಮಾನವಾಗಿ ಬದುಕುವುದು ಮನುಷ್ಯನ ನೈಸರ್ಗಿಕ ಸ್ವಭಾವಕ್ಕೆ ಹೊಂದಿಕೊಂಡಂತೆ ಕಾಣುತ್ತದೆ. ಆದುದರಿಂದಲೇ ಒಬ್ಬನಿಗೆ ಸಮಾನತೆಯನ್ನು ತೋರಿಸಿದರೆ, ಅವನು ತನ್ನ ಉತ್ತಮ ಗುಣಗಳನ್ನು ಮಾತ್ರ ಪ್ರಕಟಿಸುತ್ತಾನೆ."

ಹೀಗೆ ನದಿ ಒಂದು ಜನ ಸಮುದಾಯವನ್ನು ಲೌಕಿಕವಾಗಷ್ಟೇ ಅಲ್ಲದೆ, ಆಂತರಂಗಿಕವಾಗಿ- ಆಧ್ಯಾತ್ಮಿಕವಾಗಿ-ಕೂಡಾ ಬೆಳೆಸುತ್ತಾ ಒಂದು ಸವಿನೆನಪಾಗಿ, ಅಲ್ಲಿ ಹುಟ್ಟಿ ಬೆಳೆದು ಕಾಲಾನುಕ್ರಮದಲ್ಲಿ ಕಾರಣಾಂತರಗಳಿಂದಾಗಿ ದೂರದೂರದ ಊರುಗಳಿಗೆ ಚದುರಿಹೋಗಿರುವವರ ಮನಸ್ಸಿನಲ್ಲಿ ಸದಾ ಹಸಿರಾಗಿರುವುದರಲ್ಲಿ ಆಶ್ಚರ್ಯವೇನು?

ಅದನ್ನೇ ಗೊರೂರರು ತಮ್ಮ ಪ್ರಬಂಧದ ಕೊನೆಯಲ್ಲಿ ಭಾವನಾತ್ಮಕವಾಗಿ ಅನುರಣಿಸಿದ್ದಾರೆ: " ಹೇಮಾವತಿ ನದಿಯು ನಮ್ಮ ಜೀವದ ಉಸಿರು. ನಮ್ಮ ನಾಡಿಯ ರಕ್ತ. ನಮ್ಮ ಊರಿನ ಬೀದಿ. ಅದರ ಮೇಲೆ ಬೀಸಿ ಬರುವ ಗಾಳಿ ಜೀವರಸದಿಂದ ತುಂಬಿರುತ್ತದೆ. ನದಿ ನಮ್ಮ ಊರಲ್ಲಿ ಇಲ್ಲದಿದ್ದರೆ ಊರು ಇರುತ್ತಲೇ ಇರಲಿಲ್ಲ. ಈ ನದಿಯು ಇಲ್ಲಿಂದ ಹೋಗುವುದಕ್ಕೆ ಮುಂಚೆ ಊರೇ ಕಣ್ಮರೆಯಾಗಲಿ. ಅಲ್ಲಿಯವರೆಗೆ ಸ್ನೇಹಿತರು ಆರು ತಿಂಗಳಿಗೊಮ್ಮೆ ವರುಷಕ್ಕೆ ಒಮ್ಮೆಯಾದರೂ ಚಿಂತೆಯಲ್ಲ, ನೆನಪಿದೆಯೇ? ಎಂದು ಬರೆಯುತ್ತಿರಲಿ." ಇಷ್ಟೇ ತೀವ್ರ ಅನಿಸಿಕೆ ಈ ಪ್ರಬಂಧ ಓದಿದ ಪ್ರತಿಯೊಬ್ಬರಿಗೂ ಅನ್ನಿಸುವಷ್ಟು ಆತ್ಮೀಯವಾಗಿದೆ ಈ ಪ್ರಬಂಧ!

ಈ ಸಂಗ್ರಹದ ಮಿಕ್ಕ ಪ್ರಬಂಧಗಳು- 'ಒಂದು ಸಂಜೆ,' 'ಸೇತುವೆ,' 'ದೇವರೂ ಡೆಮಾಕ್ರಸಿಯೂ' 'ಬೆಸ್ತರ ಕರಿಯ' ಮತ್ತು 'ಬಿಂದಿಗಮ್ಮನ ಜಾತ್ರೆ' - ಒಂದಲ್ಲ ಒಂದು ರೀತಿಯಲ್ಲಿ 'ಹೇಮಾವತಿಯ ತೀರದಲ್ಲಿ' ಪ್ರಬಂಧದ ವಿಸ್ತರಣೆ ಅಥವಾ ಅನುಬಂಧಗಳಂತೆಯೇ ಇವೆ. 'ಒಂದು ಸಂಜೆ' ಪ್ರಬಂಧವು 'ಮಳೆ ಎಂಬ ವಸ್ತು ಜಗತ್ತಿನಲ್ಲಿದೆಯೇ ಎಂಬುದೇ ಮಲೆನಾಡಿನವರಿಗೆ ಮರತೇ ಹೋಯಿತು' ಎಂಬಷ್ಟರ ಮಟ್ಟಿಗೆ ಉಂಟಾಗಿದ್ದ ಅನಾವೃಷ್ಟಿಯ ದಿನಗಳ ಅನುಭವದ ಹಿನ್ನಲೆಯಲ್ಲಿ, ಹಿಂದೆ ಆ ಮಲೆನಾಡ ಸೀಮೆಯಲ್ಲಿ ಆಗುತ್ತಿದ್ದ ಮಳೆಯ ವೈವಿಧ್ಯ, ಬೀಸುತ್ತಿದ್ದ ಸುಂಟರಗಾಳಿಯ ವೈಭವ, ಅದರಿಂದೆಲ್ಲ ಉಂಟಾಗುತ್ತಿದ್ದ 'ಛತ್ರಿ ಅನಾಹುತ'ಗಳು ಇತ್ಯಾದಿಗಳನ್ನು ಆಯಾ ಮಳೆಗಳನ್ನು ರೈತಾಪಿ ಜನ ಗಾದೆಮಾತು ಮತ್ತು ನಾಣ್ನುಡಿಗಳ ಮೂಲಕ ಗುರುತಿಸುತ್ತಿದ್ದ ಸ್ವಾರಸ್ಯಕರ ರೀತಿನೀತಿಗಳನ್ನು (ಉದಾ: 'ರೋಹಿಣಿ ಮಳೆಗೆ ಓಣಿಯೆಲ್ಲ ಕೆಸರು', 'ಹುಬ್ಬೆ ಮಳೆಗೆ ಗುಬ್ಬಿ ತಲೆಯೂ ನೆನೆಯೊಲ್ಲ', 'ಉತ್ತರೆ ಮಳೆಗೆ ಉತ್ತ ಎತ್ತು ನೀರಿಗೆ ಬಿತ್ತು' ಇತ್ಯಾದಿ), ಪ್ರವಾಹ ಬಂದಾಗ ಹೇಮಾವತಿ - ಯಗಚಿ ಸಂಗಮದಲ್ಲಿ ಬಂಡೆಗಲ್ಲುಗಳು ಸೃಷ್ಟಿಸುತ್ತಿದ್ದ ಪ್ರಾಕೃತಿಕ ರಚನೆಗಳ ಸೌಂದರ್ಯವನ್ನು, ಮಳೆಗಾಲವೊಂದರಲ್ಲಿ ನದಿಗೆ ಕಟ್ಟುತ್ತಿದ್ದ ಸೇತುವೆಯ ಕಟ್ಟೋಣ ಸರಿಯಿಲ್ಲದೆ ಕುಸಿದು ಬಿದ್ದಾಗ-ಅದಕ್ಕೆ ಪ್ರವಾಹದಲ್ಲಿ ತೇಲಿ ಬಂದ ಮರದ ದಿಮ್ಮಿಯೇ ಕಾರಣವೆಂದು ಅದನ್ನು 'ಬಂಧಿಸಿ', 'ಮಹಜರು' ನಡೆಸಿ ಕೇಸು ಗೆದ್ದ ವಿವಿಧ ಸರ್ಕಾರಿ ಇಲಾಖೆಗಳ ಅಧಿಕಾರಿಗಳು ಬಹುಮಾನ ಪಡೆದುದನ್ನು ಸ್ವಾರಸ್ಯಕರವಾಗಿ ನಿರೂಪಿಸುವ ಈ ಪ್ರಬಂಧ, ಧುತ್ತನೆ ಗಂಭೀರವಾಗಿ ಬಿಡುತ್ತದೆ. ಕಾರಣ: ಆ ಬಿರು ಬೇಸಿಗೆಯ ದಿನಗಳಲ್ಲಿ ಒಂದು ಸಂಜೆ ಹೀಗಾಯಿತು-

"ಇದ್ದಕ್ಕಿದ್ದಂತೆ ಯಾವ ಮುನ್ಸೂಚನೆಯನ್ನೂ ಕೊಡದೇ ಬಹಳ ಕಾಲದ ಹಳೆಯ ಮಿತ್ರನಂತೆ, ಒಂದು ಹಿಂದಲ ಸವಿ ನೆನಪಿನಂತೆ, ಸರ್‍ರನೆ ಒಂದು ಸೋರು ಮಳೆ ಬಂದು ನಿಂತಿತು. ಮರುಕ್ಷಣದಲ್ಲಿಯೇ ಅಂತರಿಕ್ಷ ಮೊದಲಿನಂತೆ ಬಿಳುಪಾಯಿತು. ಅದಾವ ಮಾಯವೋ ಜಗತ್ತು ತನ್ನನ್ನು ತೊಳೆದಂತೆ ಸ್ವಚ್ಛವೂ, ಶ್ವೇತವೂ, ಕಾಂತಿಯುಕ್ತವೂ

ಆಯಿತು. ಆಂಜನೇಯ ಔಷಧಿಯ ಪರ್ವತವನ್ನು ಹೊತ್ತು ತರುವಾಗಲೇ ಅದರಲ್ಲಿದ್ದ ಔಷಧಿಗಳ ವಾಯುವಿನಿಂದ, ರಾಮಸೇನೆಯಲ್ಲಿ ಮೂರ್ಛಿತರಾಗಿದ್ದವರೆಲ್ಲ ಎದ್ದು ಕುಳಿತಂತೆ, ಅಮೃತ ರಸವನ್ನು ಹೊತ್ತ ಮಳೆ ಗಾಳಿಗಳು ಬೀಸಿದುದರಿಂದಲೇ ಜಗತ್ತು, ಜನ, ದನ ನವಚೇತನಗೊಂಡು ಉಲ್ಲಾಸಯುಕ್ತರಾದರು. ಪುಷ್ಪ ಒಂದು ಅರಳುವಂತೆ ಜಗತ್ತೆ ಅರಳಿತು...."

ಮುಂದಿನ ವರ್ಣನೆಯನ್ನು ಪೂರ್ಣವಾಗಿ ಓದಿಯೇ ಸವಿಯಬೇಕು. ಸುಮಾರು ಎರಡು ಪುಟಗಳಷ್ಟು ಹರಡಿರುವ ಈ ಪ್ರಕೃತಿ ವರ್ಣನೆಯ ಹಿಂದಿನ ಲಲಿತ ಪ್ರತಿಭೆ ಇಲ್ಲಿ ಮೇರೆ ಮುಟ್ಟಿದೆ. 'ಪ್ರಕೃತಿಯೆಲ್ಲ ಬಹಿರಂಗ ಸಭೆ ಸೇರಿಬಿಟ್ಟಿದ್ದ' ಆ ಸುಂದರ ಸಂಜೆಯ ದಿವ್ಯ ಸೌಂದರ್ಯವನ್ನು ಸಂಪೂರ್ಣವಾಗಿ ಸವಿದ ಲೇಖಕನಿಗೆ ಕೊನೆಗೆ ತೀವ್ರವಾಗಿ ಅನ್ನಿಸುವುದು ಹೀಗೆ: "ಪಕ್ಷಿಗಳು, ಪ್ರಾಣಿಗಳು, ಕ್ರಿಮಿಕೀಟ ಎಲ್ಲವೂ ಸುಖವಾಗಿರುವುದನ್ನು ಬಲ್ಲವು. ಆದರೆ ಮನುಷ್ಯನಿಗೆ ಬಾಳುವುದೇ ತಿಳಿಯುವುದಿಲ್ಲ...." ಅವರ ಈ ವಿಷಾದಕ್ಕೆ ಒಂದು ದುರಂತ ಹಿನ್ನಲೆ ಇದೆ: ಆಗಲೇ, ನಾಲ್ಕು ದಶಕಗಳ ಹಿಂದೆಯೇ, 'ಅಭಿವೃದ್ಧಿ'ಗಾಗಿ ಆರಂಭವಾಗಿದ್ದ ಅರಣ್ಯನಾಶ- 'ನಮ್ಮ ಹೇಮಾವತಿ ತೀರದ ಸೇತುವೆಯ ಮೇಲೆ ನಿಂತು ನೋಡಿದರೆ ಪ್ರತಿನಿತ್ಯವೂ ಅದೆಷ್ಟು ಲಾರಿಗಳು ಮರದ ದಿಮ್ಮಿಗಳನ್ನು ಸಾಗಿಸಿಕೊಂಡು ಹಾಸನ, ಬೆಂಗಳೂರು, ಮೈಸೂರು ಕಡೆ ಹೋಗುತ್ತವೆ! ಹೀಗೆ ಸಾಗುತ್ತಿದ್ದರೆ ಯಾವ ಕಾಡು ತಾನೇ ಉಳಿಯುತ್ತದೆ?'- ಹಾಗೂ ಅದರಿಂದಾಗಿ ಉಂಟಾಗಲಾರಂಭಿಸಿದ ಮಳೆಗಾಲದ ಏರುಪೇರು ಮತ್ತು ತತ್ಪರಿಣಾಮವಾಗಿ ಗ್ರಾಮ ಜೀವನಕ್ಕೆ ಹಾಗೂ ಸುತ್ತಲಿನ ಪ್ರಾಣಿ ಪರಿಸರಕ್ಕೆ ಆಗಿತ್ತಿದ್ದ ಪರಿತಾಪ.

ಅರಣ್ಯ ನಾಶದ ದುಷ್ಪರಿಣಾಮಗಳ ಬಗ್ಗೆ ಆಗಲೇ ಅಮೆರಿಕಾದ ವಿಜ್ಞಾನಿಗಳು ಮಾಡಿದ್ದ ಸಂಶೋಧನೆಯನ್ನು ವಿವಿರವಾಗಿ ಉಲ್ಲೇಖಿಸುವ ಗೊರೂರರು 'ಹೊಸ ಅಭಿವೃದ್ಧಿ'ಯ ಹಿಂದಿರುವ ನಮ್ಮ ವಿಜ್ಞಾನಿಗಳಿಗೆ ವಿವೇಕ ಮೂಡಲೆಂದು ಹಾರೈಸುತ್ತಾ, ತಮ್ಮ ಪ್ರಬಂಧವನ್ನು ಸುತ್ತಲಿನ ಕಟುವಾಸ್ತವವನ್ನೂ ಮರೆಯದೆ, ಕಟೂಕ್ತಿಯೊಂದರೊಡನೆ ಮುಗಿಸುವುದು ಹೀಗೆ: ".....'ಸರ್ವರಿಗೂ ಸುಖವಾಗಲಿ, ಎಲ್ಲರೂ ನಿರೋಗಿಗಳಾಗಲಿ. ಸರ್ವರಿಗೂ ಮಂಗಳ ದರ್ಶನವಾಗಲಿ, ಯಾರಿಗೂ ದುಖ ಬೇಡ'. ಭಾರತೀಯ ಸಂಸ್ಕೃತಿ ಇದು. ಈ ಗುರಿಯನ್ನು ಸಾಧಿಸಲು ಬೇಕಾದ ಶಾಂತಿ ವಿಜ್ಞಾನಿಗಳಿಗೆ ದೊರೆಯಬೇಕು. ಮಾನವ ಜಗತ್ತಿನ ಕಲ್ಯಾಣವನ್ನು ಸಾಧಿಸುವವರಿಗೆ ಈ ಶಾಂತಿ ದೊರೆಯುವುದೇ? ಅವರು ರಾಜಕಾರಣಿ ರಾಕ್ಷಸರ ಕೈ ಗೊಂಬೆಯಾಗದೆ ಇರಬೇಕಲ್ಲ!"

'ಸೇತುವೆ', ಹೇಮಾವತಿ ನದಿಗೆ ಸೇತುವೆ ಕಟ್ಟಲ್ಪಟ್ಟಿದ್ದರಿಂದ ಊರಿನ ಜನಪದ ಕಳೆದುಕೊಂಡ ಹಲವಾರು 'ಖುಷಿ'ಗಳನ್ನು ನೆನಪಿನಂಗಳಕ್ಕೆ ತಂದುಕೊಳ್ಳುವ ಒಂದು ಸಣ್ಣ

ಲಲಿತ ಪ್ರಬಂಧ. ಸೇತುವೆಯು ನದಿಯ ಸಹಜ ನಡಿಗೆಗೆ ಭಂಗ ತಂದಿದೆ; ವಿವಿಧ ಕಾಲಕ್ರಮಗಳಲ್ಲಿ ಅದು ಪಡೆಯುತ್ತಿದ್ದ ವಿವಿಧ ವಿನ್ಯಾಸಗಳ ಅಂದಗೆಡಿಸಿದೆ; ದೋಣಿಯಾತ್ರೆಯ ಕಾಲದಲ್ಲಿ, ಹಾಯ್ಗಡು ಮಾಡುವಾಗ ನದಿಯೊಂದಿಗೆ ನಡೆಯುತ್ತಿದ್ದ ಆಪ್ತ ಸಂಭಾಷಣೆ ನಿಂತು ಹೋಗಿದೆ, ಸಾಗಡದ ಸಂಭ್ರಮ-ಸಾಹಸಗಳ ದೃಶ್ಯಾವಳಿಗೆ ತೆರೆಬಿದ್ದಿದೆ: "...... ಮರಳಿನ ಮೇಲೆ ನಡೆದು ನೀರಿನಲ್ಲಿ ಹಾಯುವುದರಲ್ಲಿನ ನಿಜವಾದ ಆನಂದ ನಮ್ಮವರಿಗೆ ಮರೆಯುತ್ತಾ ಬಂತು. ಆಗ ಹಾಯ್ಗಡು ಆಗಿದ್ದಾಗ ಹೊಳೆ ಉಸಿರಾಡುವುದೂ ಕೂಡಾ ನಮಗೆ ತಿಳಿಯುತ್ತಿದ್ದಿತು- 'ಇವತ್ತು ಬಣ್ಣ ಬದಲಾಯಿಸಿದೆ, ಮೇಲೆ ಎಲ್ಲೋ ಸ್ವಲ್ಪ ಮಳೆ ಆಗಿರಬೇಕು. ರಾತ್ರಿ ನಾಲ್ಕು ಬೆರಳು ನೀರು ಬಂದು ಮತ್ತೆ ಇಳಿದಿದೆ.' ಹೇಮಾವತಿ ನಮಗೆ ತಿಳಿಯದಂತೆ ಏನನ್ನೂ ಮಾಡಲು ಆಗ ಸಾಧ್ಯವಿರಲಿಲ್ಲ. ಈಗ ಅವಳು ನಮ್ಮ ಲಕ್ಷ್ಯವನ್ನು ಸೆಳೆಯಲು ಎಷ್ಟು ಬಗೆಯಿಂದ ನಲಿದರೂ ನಾವು ಅದರ ಕಡೆ ನೋಡುವುದೇ ಇಲ್ಲ." ಆಧುನೀಕರಣದ ಒಂದು ಸಣ್ಣ ಹೆಜ್ಜೆಯು ಗ್ರಾಮಜನಪದದ ಮೇಲೆ ಸೂಕ್ಷ್ಮ ಸ್ತರದಲ್ಲಿ ತತ್ಕಾಲದಲ್ಲಿ ಉಂಟುಮಾಡುವ ಪರಿಣಾಮಗಳನ್ನು ಈ ಪ್ರಬಂಧ ನವಿರಾಗಿ- ಮಂದ್ರಸ್ತರದ ವಿಷಾದದಲ್ಲಿ-ನಿರೂಪಿಸಿ ತನ್ನ ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ.

ಇನ್ನು 'ದೇವರುಗಳೂ ಡೆಮಾಕ್ರಸಿಯೂ', ನಾವು ಆಯ್ದುಕೊಂಡ ಪ್ರಜಾಪ್ರಭುತ್ವ ಪದ್ಧತಿಯು ನಮ್ಮ ಆಸ್ತಿಕ ಲೋಕದ ಮೇಲೆ ಉಂಟು ಮಾಡುತ್ತಿರುವ 'ಪರಿಣಾಮ'ಗಳ ಮೂಲಕ ಸ್ವತಂತ್ರ ಭಾರತದ ತೇರು 'ಮುನ್ನಡೆ'ಯುತ್ತಿರುವ 'ಮೌನಕ್ರಾಂತಿ'ಯ ಕಥೆಯನ್ನು ವ್ಯಂಗ್ಯ- ವಿಡಂಬನೆಗಳ ಮೂಲಕ ಚಿತ್ರಿಸುವ ಒಂದು ವಿನೋದಮಯ ಪ್ರಬಂಧ. ಡೆಮಾಕ್ರಸಿ ಅರ್ಥಾತ್ ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು. ಇಲ್ಲಿ ವರ್ಗ ಹಾಗೂ ಜಾತಿ ತರತಮಗಳಿಗೆ ಮಾನ್ಯತೆ ಇಲ್ಲ. ರಾಷ್ಟ್ರದ ಜನಸಮುದಾಯ ಈ ಬದಲಾವಣೆಗೆ ಒಗ್ಗಿಕೊಳ್ಳುತ್ತಿದ್ದಂತೆ, ಅಂತಹ ಬದಲಾವಣೆಗಳು ಉಂಟುಮಾಡುವ 'ಪರಿಸ್ಥಿತಿ'ಗಳಿಂದಾಗಿ ಜಾತಿ ಮತ್ತು ವರ್ಗಾಧಾರಿತ ದೇವರುಗಳೂ ತಂತಮ್ಮ ಜಾತಿ-ವರ್ಗ ಭೇದಗಳನ್ನೆಲ್ಲ ಅಳಿಸಿ ಹಾಕಿಕೊಂಡು 'ಜನತಾ ದೇವರು'ಗಳಾಗಿ ಪರಿವರ್ತಿತವಾಗುವ ಒಂದೂರಿನ (ತಮ್ಮೂರಿನ?) ಕಥೆಯನ್ನು, ಲೇಖಕರು ಇಲ್ಲಿ ಸ್ವಾತಂತ್ರ್ಯೋದಯ ಕಾಲದ ಆದರ್ಶಗಳ ನವೋತ್ಸಾಹ ಬೆರೆತ ಉಲ್ಲಾಸ ಸಂಭ್ರಮಗಳ ಮಧ್ಯೆ ಸಹಜವಾಗಿ ಹೊಮ್ಮಿದ 'ವಿನೋದ ಚಿತ್ರ'ಗಳ ಮೂಲಕ ನಿರೂಪಿಸಿದ್ದಾರೆ.

ಊರಿನ 'ಹೈಕ್ಲಾಸು' ದೇವರ ಪ್ರಜಾಪ್ರಭುತ್ವೀಕರಣಕ್ಕೆ, ಈ ದೇವರ ಪಾರಂಪರಿಕ ಪರಿಚಾರಕ ವರ್ಗದವರಾದ ಪೂಜಾರಿ-ಪುರೋಹಿತರ ವೃತ್ತಿ ನಿಷ್ಠೆಯ ಕೊರತೆ ಭೂಮಿಕೆಯನ್ನು ಸಿದ್ಧಪಡಿಸಿದ್ದರೆ, ಊರ ಓಲಗದವರ ವೃತ್ತಿ ನಿಷ್ಠೆಯ ಕೊರತೆ ಅದನ್ನು ಪೂರ್ಣಗೊಳಿಸಲು ತನ್ನ ಉದಾರ ಸಹಾಯ ಹಸ್ತವನ್ನು ಚಾಚಿದೆ: "ಮರೆಯಲ್ಲಿದ್ದು

ಕೇಳಿದರೆ ಅಲ್ಲಾದೇವರ ಓಲಗಕ್ಕೂ ನರಸಿಂಹಸ್ವಾಮಿ ಓಲಗಕ್ಕೂ ಬುಡನ್‌ಸಾಬರ ಮಗಳ ನಿಕಾ ಓಲಗಕ್ಕೂ ವೆಂಕ್ಟಾಚಾರ್ಯರ ಮಗಳ ಕಲ್ಯಾಣದ ಓಲಗಕ್ಕೂ ವ್ಯತ್ಯಾಸ ಗೊತ್ತಾಗುತ್ತಿರಲಿಲ್ಲ. ಎಲ್ಲವೂ ಮೊಹರಂ ಅಲ್ಬಿದಾಯದಂತೆಯೇ ಕೇಳುತ್ತಿದ್ದವು. " ಊರು ಇದನ್ನು ಸಹಿಸದಾಯಿತು. ಜೊತೆಗೆ ಓಲಗ ಕುಲದವರ 'ಪ್ರಜಾಪ್ರಭುತ್ವೀಕರಣ'ದಿಂದಾಗಿ ಅವರಲ್ಲಿ ತಮ್ಮ ಕುಲ ಕಸುಬಿನ ಬಗ್ಗೆ ಉಂಟಾದ ನಿರುತ್ಸಾಹ- ಮೇಳದ ಮೂವ್ವರಲ್ಲಿ ಒಬ್ಬಿಬ್ಬರು ಗೈರುಹಾಜರಿಗಳಿಂದಾಗಿ -ದೇವರ ಓಲಗ 'ಜೀರುಂಡೆ' ಸದ್ದಾಗಿ ಮಾರ್ಪಟ್ಟು, 'ಹೈಕ್ಲಾಸು' ದೇವರಾದ ನರಸಿಂಹಸ್ವಾಮಿಯ ವಾರ್ಷಿಕ ಉತ್ಸವ-ಮೆರವಣಿಗೆಗೆ ಸಂಭ್ರಮವಿಲ್ಲದಾಯಿತು, ಜನಾಕರ್ಷಣೆ ಕಡಿಮೆಯಾಯಿತು. ಶಾನುಭೋಗರು, ಪಟೇಲರು, ಧರ್ಮದರ್ಶಿಗಳು ಊರಿನ ನಾಲ್ಕಾರು ವಿಧೇಯರನ್ನು ನಿದ್ರೆಯಿಂದೆಚ್ಚರಿಸಿ ಪಂಜು ಹಿಡಿಸಿ, ದೇವರ ಮೆರವಣಿಗೆ ಮಾಡಿಸುವ ಪರಿಸ್ಥಿತಿ ಉಂಟಾಯಿತು.

ಇಂತಹ ಒಂದು ದುರ್ದಿನದಂದು 'ಚಿಲ್ಲರೆ' ದೇವರುಗಳ ಉತ್ಸವ-ಮೆರವಣಿಗೆಗಳ ಸಂದರ್ಭದಲ್ಲಿ ದೂರದಿಂದ ಕೇಳಿ ಬಂದು, ಬ್ರಾಹ್ಮಣರ ಕೇರಿಯ ಮನೆ ಮಕ್ಕಳೆಲ್ಲ ಅದರ ಲಯಬದ್ಧತೆಗೆ ಮಾರುಹೋಗಿ ತಮ್ಮ ಮನೆಗಳ ಬಾಗಿಲು-ಕಂಬಗಳ ಮೇಲೆಲ್ಲ ತಾಳ ಹಾಕುವಂತೆ ಮಾಡಿ ವೈದಿಕರ ಹೊಟ್ಟೆ ಉರಿಸುತ್ತಿದ್ದ ತಮ್ಮಟೆ-ಹೆರೆ-ಡೋಣು-ಕುಣಿಮಿಣಿ-ಕೊಂಬು-ಕಹಳೆಗಳಿಂದೊಡಗೂಡಿದ್ದ ಆದಿಕರ್ನಾಟಕರ ವಾದ್ಯಮೇಳವು ಮೀಸೆ ಗುಂಡ (ತನ್ನೂರಿನಲ್ಲಿ ತನ್ನ ಜಾತಿಯವರಲ್ಲಿ ಮೀಸೆ ಬಿಟ್ಟ ಮೊದಲಿಗನಾಗಿ ಬಂಡಾಯವೆಬ್ಬಿಸಿದ್ದ ಶ್ರೀ ವೈಷ್ಣವ ತುಡುಗ!) ನಂತಹ ನಿಜವಾದ 'ದೈವಭಕ್ತ' ಹಾಗೂ ಸಂಗೀತಜ್ಞ'ನ ಮನಸ್ಸಾಕ್ಷಿಯನ್ನು ಜಾಗೃತಗೊಳಿಸಿತು! ಅವನು 'ಊರವರ ಗಡ್ಡ ಕೆರೆಯಲೂ ಪುರೊಸೊತ್ತಿಲ್ಲದೆ ಇಡೀ ಊರನ್ನೇ ಒಂದು ಪಾಕಿಸ್ತಾನ ಮಾಡಹೊರಟಿದ್ದ' ನಯನಜ ಕ್ಷತ್ರಿಯರ ಓಲಗ ತಂಡದ ಸೊಕ್ಕು ಮುರಿಯಲೋ ಎಂಬಂತೆ, ಆದಿಕರ್ನಾಟಕರ ಈ ವಾದ್ಯಮೇಳವನ್ನೇ ನರಸಿಂಹಸ್ವಾಮಿ ದೇವರ ಉತ್ಸವಕ್ಕೆ ಆಹ್ವಾನಿಸಿ ರಣವಾದ್ಯಗಳನ್ನು ಊರ ತುಂಬಾ ಮೊಳಗಿಸಿಯೇಬಿಟ್ಟ! ಮಲಗಿದ್ದ ಊರೆಲ್ಲ ಎದ್ದು ಕೂತಿತು. ಊರಿಗೆ ಊರೇ ಎಷ್ಟೋ ವರ್ಷಗಳ ನಂತರ ಮತ್ತೆ 'ಯುಗಾದಿಹಬ್ಬದ ದೇವರ ಉತ್ಸವದ ಸಂಭ್ರಮದಲ್ಲಿ ಪಾಲ್ಗೊಂಡಿತು. ದೇವರ ಉತ್ಸವ ಮತ್ತೆ ಕಳೆಗಟ್ಟಿದ ಉಲ್ಲಾಸದಲ್ಲಿ ಪುರೋಹಿತರೂ, ಊರ ಯಜಮಾನರುಗಳೂ ಇದನ್ನೆಲ್ಲಾ ಹೇಗೋ ಅನುಸರಿಸಿಕೊಂಡು ಹೋಗಿ, ನಂತರ 'ಹೈಕ್ಲಾಸು' ದೇವರಿಗೆ ಒಂದು ಚಿಲ್ಲರೆ 'ಸಂಪ್ರೋಕ್ಷಣೆ' ಮಾಡಿಸಿ ಸಮಾಧಾನವನ್ನೂ ಹೊಂದಿದರು!

ಇದು ಇಷ್ಟು ಸುಲಭ ಸಾಧ್ಯವಾದುದು 'ನಯನಜ ಕ್ಷತ್ರಿಯ'ರ ಓಲಗದ ದೌರ್ಬಲ್ಯದಿಂದ ಮಾತ್ರವಲ್ಲ; 'ಆದಿ ಕರ್ನಾಟಕ'ರ ಕಷ್ಟಪಟ್ಟು ದುಡಿದು ಬದುಕುವ

ಸಂಸ್ಕೃತಿಯ ಮಧ್ಯದಿಂದ ಸಹಜವಾಗಿ ಹುಟ್ಟಿದ ಶ್ರುತಿ ಹಾಗೂ ಲಯಜ್ಞಾನಗಳಿಂದಾಗಿ ಕೂಡಾ. ಡೋರಿ ಊದುವ ಗುಳ್ಳ, ತಮ್ಮಟೆ ಹೊಡೆಯುವ ದಾಸ ಹಾಗೂ ಕೊಂಬು ಊದುವ ಈರ ಮುಂತಾದ 'ಮಹಾಮಹೋಪಾಧ್ಯಾಯ ಗಾನ ಗಜಪತಿ ವಿದ್ಯಾದಿಗ್ಗಜ ಹಾಗೂ ಗಾನ ಮಾರ್ತಾಂಡ'ರ ಕಾಯಕನಿಷ್ಠೆ ಕಲಾ ಪ್ರತಿಭೆಗಳ ವರ್ಣನೆ ಮಾಡುತ್ತಾ ನಮ್ಮ ಸಂಸ್ಕೃತಿಯಲ್ಲಿ 'ಚಿಲ್ಲರೆ ದೇವರು'ಗಳ 'ಚಿಲ್ಲರೆ ವಾದ್ಯಮೇಳ'ಗಳಾಗಿದ್ದ ಆದಿ ಕರ್ನಾಟಕರ ವಾದ್ಯಮೇಳಕ್ಕೆ ಒಂದು ಘನತೆಯನ್ನೂ, ಎತ್ತರವನ್ನೂ ಈ ಬರಹ ತಂದೊದಗಿಸುತ್ತದೆ. ಅಲ್ಲದೆ ಅದೇ ಲಹರಿಯಲ್ಲಿ ಮುಂದುವರೆದು, ಮುಂದಿನ ವರ್ಷದ ಉತ್ಸವದ ಹೊತ್ತಿಗೆ ಪೂರಾ ಅಸ್ತವ್ಯಸ್ತಗೊಂಡಿದ್ದ ಊರ ಓಲಗದವರ ತಂಡದ ಗೈರುಹಾಜರಿಯಲ್ಲಿ ಕೊಂಬಿನ ಈರನನ್ನೂ, ಮೋರಿಯ ಗುಳ್ಳನನ್ನೂ - 'ಆ ಸಮಯದಲ್ಲಿ ಅದು ಹೇಗೆ ಆಯಿತೋ ಈವತ್ತಿನವರೆಗೆ ಯಾರಿಗೂ ತಿಳಿಯದು' - ರಥಾರೋಹಣ ಮಾಡಿಸಿ, ನರಸಿಂಹಸ್ವಾಮಿ ದೇವರ ಹಿಂಭಾಗದಲ್ಲಿ ಕೂರಿಸಿ ಬಿಡುತ್ತದೆ: "ಇದ್ದಕ್ಕಿದ್ದಂತೆ ರಥದ ಮೇಲಿಂದ, ಏಳು ಅಂತಸ್ತಿನ ಬಿದಿರು ಬಟ್ಟೆಗಳ ಹಂಗಾಮಿ ಗೋಪುರದ ತುದಿಯ ಹಿತ್ತಾಳೆಯ ಕಲಶವನ್ನು ಭೇದಿಸಿಕೊಂಡು, ಈರನ ಕೊಂಬಿನ ಧ್ವನಿ ಹೊರಟಿತು. ಒಂದೊಂದು ಸಮಯದಲ್ಲಿಯಂತೂ ಆ ಕೊಂಬಿನ ಧ್ವನಿ ನಿಂತ ಕೂಡಲೆ ತೇರು ಮುಂದಕ್ಕೆ ಹೋಗುವುದೂ ನಿಂತು, ಅದು ಮತ್ತೆ ಪ್ರಾರಂಭವಾದ ಕೂಡಲೆ ಗಾಲಿಗಳೂ ಮುಂದೆ ಉರುಳುತ್ತಿದ್ದವು. ಹೀಗೆ ಕೊಂಬು ರಥವನ್ನು ತಳ್ಳಿ ತಳ್ಳಿ ಜನರ ಅಮಿತೋತ್ಸಾಹದೊಡನೆ ಅದರ ನೆಲೆಗೆ ನಿಲ್ಲಿಸಿತು." ಇದು ಗಾಂಧಿವಾದಿ ಲೇಖಕರೊಬ್ಬರು ಸಾಂಕೇತಿಕವಾಗಿ, ಭಾರತದ ಪ್ರಗತಿ ರಥದ ಗಾಲಿಗಳು ಉರುಳಬೇಕಾದ ದಾರಿ ಮತ್ತು ಕ್ರಮವನ್ನು ಸೂಚಿಸಿರುವ ಬಗೆಯಿರಬಹುದು. ಅದೇನೇ ಇರಲಿ, ಪ್ರಬಂಧವನ್ನು ಓದಿ ಮುಗಿಸಿದಾಗ ಅಪಾರ ವಿನೋದಾನುಭವದ ಹಿಂದೆಲ್ಲೋ ಆಳವಾದ ವಿಚಾರದ ಕಿಡಿಯೂ ಹೊತ್ತಿಕೊಳ್ಳದಿರದು.

ಬಲೆ ಹೆಣೆದು, ಊರವರ ಮಡಿ-ಮೈಲಿಗೆಗಳಿಗೆ ತೊಂದರೆಯಾಗದಂತೆ ಮೀನು ಹಿಡಿದು ತಿಂದು, ಮಾರಿ, ಒಬ್ಬರು ಸತ್ತ ಮೇಲೆ ಒಬ್ಬರಂತೆ ಸದ್ಯಕ್ಕೆ ಮೂವ್ವರು ಹೆಂಡತಿಯರಲ್ಲಿ 'ಒಂದು ಕೊಪ್ಪಲನ್ನೇ ಸ್ಥಾಪಿಸಲು ಸಾಕಾಗುವಷ್ಟು' ಮಕ್ಕಳನ್ನು ಮಾಡಿ ತನ್ನ ಪಾಡಿಗೆ ತಾನು ತನ್ನ ಬದುಕನ್ನು ಕಟು-ಏಕಾಗ್ರತೆಯಿಂದ ನಡೆಸಿಕೊಂಡು ಬಂದು, ಊರಿನ ಮೂರು ತಲೆಮಾರುಗಳಿಗೆ 'ಅಮರ'ನಾಗಿ ಕಾಣುವ 'ಕರಿಯ'ನೆಂಬ ಸಾಮಾನ್ಯ ಬೆಸ್ತನೊಬ್ಬನ ಕಥೆ '*ಬೆಸ್ತರ ಕರಿಯ*'. ಈತ ತನ್ನ ಬದುಕಿನ ರೀತಿ ನೀತಿಗಳಿಂದ ಲೇಖಕರ ಮುಂದೆ ಸೃಷ್ಟಿಸಿರುವ ತಾತ್ವಿಕ ಬೆಡಗೊಂದನ್ನು, ಅವನ ಸುತ್ತ ಇರುವ ಕಥೆ-ಉಪಕಥೆಗಳ ಮೂಲಕ ಸಮಾಜವನ್ನು ಅಲ್ಲಲ್ಲಿ ಕೆಣಕುತ್ತಾ- 'ಆಡಿನ ಮಾಂಸ, ಆಹಾರದಲ್ಲೆಲ್ಲ ಅತ್ಯುತ್ತಮವಾದದ್ದು. ವೈದಿಕರಾದ ನಮ್ಮ ಪೂರ್ವಿಕರೂ ಇದನ್ನು ಔತಣದ ವಸ್ತುವಾಗಿ

ಪರಿಗಣಿಸಿದ್ದರಂತೆ. ಶ್ರಾದ್ಧದ ದಿನ ಈ ಮಾಂಸವಿಲ್ಲದಿದ್ದರೆ ಪಿತೃಗಳಿಗೆ ತೃಪ್ತಿಯುಂಟಾಗುತ್ತಿರಲಿಲ್ಲವಂತೆ....'- ಸ್ವಾರಸ್ಯಕರವಾಗಿ ನಿರೂಪಿಸುವ ಈ ಬರಹದ ಕೊನೆಯಲ್ಲಿ ಲೇಖಕರ ಈ ಬೆಡಗಿನ ಪ್ರಶ್ನೆ: 'ಕರಿಯುನ ಕಾಯಕ ನಿಷ್ಠೆ, ಬದುಕಿನ ಏಕಾಗ್ರತೆ, ನಿರ್ಲಿಪ್ತಿಗಳನ್ನು ನೋಡಿದರೆ ಅವನೊಬ್ಬ ಯೋಗಿಯೇ! ಆದರೆ ಅವನು ಮಾಡಿಕೊಂಡಿರುವ ಮದುವೆಗಳು, ಮಾಡಿಟ್ಟಿರುವ ಮಕ್ಕಳ ಹಿಂಡನ್ನು ನೋಡಿದರೆ?' ಲೇಖಕರ ಈ ಬೆಡಗಿನ ಪ್ರಶ್ನೆಗೆ, ಭಾರತೀಯ ತತ್ವಶಾಸ್ತ್ರದ ಪರಿಭಾಷೆಗೆ 'ಬೆಸ್ತರ ಕರಿಯ' ಎಂಬೊಂದು ಪಾರಿಭಾಷಿಕ ಶಬ್ದವನ್ನು ಸೇರಿಸುವುದೇ ಉತ್ತರವಿರಬಹುದೇ?

'ಬಿಂದಿಗಮ್ಮನ ಜಾತ್ರೆ' ಒಂದು ಸ್ಥಳೀಯ ಜಾನಪದ ಆಚರಣೆಯ ಶ್ರದ್ಧಾಪೂರ್ವಕವಾದ ಮತ್ತು ಸವಿವರವಾದ ನೇರ ನಿರೂಪಣೆಯಿರುವ; ಆದರೆ ಗೊರೂರರ ವಿಶಿಷ್ಟ ವಿನೋದ-ವಿಡಂಬನೆಗಳ ಛಾಯೆಯೂ ಇಲ್ಲದೆ, ಈ ಸಂಗ್ರಹದ ಇತರೆಲ್ಲ ಪ್ರಬಂಧಗಳಿಗೆ ಹೊರತಾಗಿ ನಿಲ್ಲುವಂತಹ ಗಂಭೀರ ಬರಹ. ಗೊರೂರರು ಕನ್ನಡದ ಗಮನಾರ್ಹ ಜಾನಪದ ಸಂಗ್ರಹಕಾರರೂ ಹೌದು ಎಂಬ ಸಂಗತಿಯ ಹಿನ್ನೆಲೆಯಲ್ಲಿ, ಈ ಪ್ರಬಂಧವನ್ನು ಅವರದೊಂದು ಜಾನಪದ ಸಂಗ್ರಹ ಲೇಖನವೆಂದೂ ಪರಿಗಣಿಸಹಬುದು. ಆದರೆ ಈ ಲೇಖನಕ್ಕೆ ಲಲಿತ ಪ್ರಬಂಧದ ಪ್ರಭೆಯೂ ಒದಗಿಬಿಟ್ಟಿದೆ- ಪ್ರಕೃತಿ ಹಾಗೂ ಜಾತ್ರೆಯ ಸಂಭ್ರಮದ ವರ್ಣನೆಯಲ್ಲಿ ಸುವ್ಯಕ್ತವಾಗುವ ಸೃಜನಶೀಲ ಪ್ರತಿಭೆಯಿಂದಾಗಿ!

ಕರ್ನಾಟಕದ ದಕ್ಷಿಣ ಸೀಮೆಯ ಕಾಡುಮೇಡುಗಳಲ್ಲಿ ಸಾಮಾನ್ಯವಾಗಿ ಬೇರೆ ಬೇರೆ ಹೆಸರುಗಳಲ್ಲಿ ಪೂಜೆಗೊಳ್ಳುವ ಬೇಟೆ ರಂಗ, ಲೇಖಕರ ಊರಿನ ಸನಿಹದ ರಂಗನ ಬೆಟ್ಟದಲ್ಲೂ ಇದ್ದಾನೆ. ಅವನಿಗೊಂದು ವಾರ್ಷಿಕ ಜಾತ್ರೆಯೂ ಇದೆ. ಆದರೆ ಈ ಬೆಟ್ಟದ ರಂಗನ ಜಾತ್ರೆಯ ವೈಶಿಷ್ಟ್ಯವೆಂದರೆ, ಈ ಬೇಟೆ ರಂಗ ಸಂಕ್ರಾಂತಿ ಮಾರನೇ ದಿನ ಬೆಟ್ಟದ ಮೇಲಿಂದ ಜನ ಹೊತ್ತಿರುವ ಅಡ್ಡೆಯ ಮೇಲೆ ಕೂತು ಇಳಿದು, ತಪ್ಪಲಿನ ಹಳ್ಳಿಗಳ ಭಕ್ತರ ಮನೆ ಬಾಗಿಲುಗಳಲ್ಲೇ ರಂಗೋಲಿ, ಆರತಿಗಳ 'ಬಡವರ ಉಪಚಾರ' ಸ್ವೀಕರಿಸುತ್ತಾ ಇದ್ದು ಒಂದು ತಿಂಗಳು ಮೂರು ದಿನಗಳ ನಂತರ, ಅಂದರೆ ರಂಗನ ಬೆಟ್ಟದ ಜಾತ್ರೆಯ ಹಿಂದಿನ ದಿನ, ಬೆಟ್ಟವೇರಿ ಬಿಡುತ್ತಾನೆ. ಜಾತ್ರೆಯ ದಿನ ಸಿಂಗಾರಗೊಂಡ ರಂಗ ಬೆಟ್ಟದಿಂದ ನಾಲ್ಕು ಮೈಲಿ ದೂರದಲ್ಲಿರುವ ಭರತೂರಿಗೆ ಬಂದು, ಹೇಮಾವತಿ ತೀರದ ತೋಪಿನಲ್ಲಿ ನೆಲೆಸಿಬಿಡುತ್ತಾನೆ. ಅಲ್ಲಿ ಆತನ ಪತ್ನಿ 'ಬಿಂದಿಗಮ್ಮ'ನ ದೇವಸ್ಥಾನವಿದೆ. ದೇವಸ್ಥಾನವೆಂದರೆ ಒಂದು ಕಲ್ಲು ಮಂಟಪ. ಬಿಂದಿಗಮ್ಮ ಎಂದರೆ, ಆ ಮಂಟಪದ ಮಧ್ಯದಲ್ಲಿ ಹೂಳಲಾಗಿರುವ ಕಲ್ಲು ತಂಡೊಂದರ ಮೇಲೆ ಅಂದಿನ ದಿನಕ್ಕೆ ಮಾತ್ರ ಇಡಲಾಗಿರುವ ಅಗಲವಾದ ಲೋಹದ ತಟ್ಟೆಯೊಂದರಲ್ಲಿ ಹೂವು-ತುಳಸಿಗಳಿಂದ ಆವೃತಗೊಂಡು ಓಲಾಡದಂತೆ ಸ್ಥಾಪಿತವಾಗಿರುವ ಮತ್ತು ಒಂದು ಸಣ್ಣ ಛತ್ರಿಯ ಅಲಂಕಾರವನ್ನೂ ಪಡೆದ,

ನೀರು ತುಂಬಿದ ಒಂದು ಸಣ್ಣ ಗಡಿಗೆ. ಇದಕ್ಕೆ ಜಾತ್ರೆಗೆ ಬಂದ ಮಹಿಳೆಯರಿಂದ ಆ ರಾತ್ರಿ ಬೆಳದಿಂಗಳು ಮೂಡುವವರೆಗೂ ಆರತಿ-ಪೂಜೆ. ಹೀಗಾಗಿ ಈ ಜಾತ್ರೆ ಅಧಿಕೃತವಾಗಿ ರಂಗನ ಜಾತ್ರೆಯಾದರೂ, ಜನಪದರ ಬಾಯಲ್ಲಿ ಅದು 'ಬಿಂದಿಗಮ್ಮನ ಜಾತ್ರೆ'ಯೆಂದೇ ಜನಪ್ರಿಯ. ಅಂದು ರಂಗ ಬೆಟ್ಟವಿಳಿದು ಬರುವುದೇ ತನ್ನ ಭಕ್ತರನ್ನೆಲ್ಲ ಕೂಡಿಸಿಕೊಂಡು, ಪತ್ನಿಯ ವೈಭವ ನೋಡಲೆಂದು!

ಬೆಳದಿಂಗಳು ಮೂಡುತ್ತಿದ್ದಂತೆ, ಪ್ರತಿವರ್ಷ ಅದಕ್ಕೆ ನಿಯಮಿತವಾಗಿ ಇಡೀ ದಿನ ಉಪವಾಸ -ಸ್ನಾನ-ಧ್ಯಾನಗಳಿಂದಲ್ಲದೆ, ತಲೆಯನ್ನು ಬೋಳಿಸಿಕೊಂಡು ಪವಿತ್ರನಾದ ಪೂಜಾರಿ ಆ ಬಿಂದಿಗಮ್ಮನನ್ನು ತಲೆಯ ಮೇಲೆ ಹೊತ್ತು; ತಟ್ಟೆಯನ್ನಾಗಲೀ, ಅದರ ಮೇಲಿನ ಗಡಿಗೆಯನ್ನಾಗಲೀ ಒಮ್ಮೆಯೂ ಕೈಯಲ್ಲಿ ಹಿಡಿಯದೆ, ಮೆರವಣಿಗೆ ಹೊರಟ ಬೆಟ್ಟದ ರಂಗನ ಅಡ್ಡೆಯ ಹಿಂದೆ ಬೆಟ್ಟದ ಕಡೆ ಓಡಲಾರಂಭಿಸುತ್ತಾನೆ. ದಾರಿಯಲ್ಲದ-ಗದ್ದೆಹಳ್ಳಗಳಲ್ಲಿ ಹಾದುಹೋದ ಕಾಡಿನ ಕಾಲುದಾರಿ- ಆ ದಾರಿಯಲ್ಲಿ ಸಿಗುವ ಹನ್ನೆರಡು ಕಲ್ಲು ತೋರಣಗಳ ಬಳಿಯಲ್ಲಿ ತನ್ನ ಮುಂದೆ ಸಾಗಿ ಹೋಗಿ ಸ್ಥಾಪಿತನಾಗಿರುವ ರಂಗನಾಥ ದೇವರಿಗೆ ತನ್ನ ತಲೆ ಮೇಲಿನ ಬಿಂದಿಗಮ್ಮ ಬೀಳದಂತೆ ದೀರ್ಘ ಸಾಷ್ಟಾಂಗ ನಮಸ್ಕಾರ ಮಾಡಿ; ಒಂದೂವರೆ ತಾಸಿನ ಅವಧಿಯಲ್ಲಿ ಬೆಟ್ಟದ ಮೇಲಿನ ದೇವಾಲಯ ಸೇರಿ, ಬಿಂದಿಗಮ್ಮನನ್ನು ಮತ್ತೊಬ್ಬ ಪೂಜಾರಿಯ ಮುಖೇನ ಬೆಟ್ಟದ ರಂಗನಿಗೆ ಒಪ್ಪಿಸಿ, ಕುಸಿದು ಬಿದ್ದು 'ಸೂಕ್ತ ಪರಿಚಾರಿಕೆ'ಗೆ ಒಳಗಾಗುತ್ತಾನೆ. ಆತ ಬೆಳಗಿನವರೆಗೆ ವಿರಮಿಸಿ, ಮತ್ತೆ ಮುಂಜಾನೆ ಎದ್ದು ಸ್ನಾನ ಮಾಡಿ 'ರಂಗನ ಜಾತ್ರೆ' ದಿನದ ಉತ್ಸವಗಳಿಗೆ ಸಿದ್ಧನಾಗುತ್ತಾನೆ!

ಪವಾಡ ಸದೃಶವಾದ ಈ ಬಿಂದಿಗಮ್ಮನ ಈ ಯಾತ್ರೆಯಿಂದೊಡಗೂಡಿದ ಜಾತ್ರೆಯನ್ನು, ಗೊರೂರರು ಈ ಜಾತ್ರೆಯಲ್ಲಿ ಕೇಳಿಬರುವ ಜಾನಪದ ಹಾಡುಗಳು, ಕಂಡು ಬರುವ ಉಲ್ಲಾಸ-ಸಂಭ್ರಮ ಮತ್ತು ಅಪೂರ್ವ ಯಾತ್ರೆಯ ಸಾಹಸ ಕೈಗೊಳ್ಳುವ ಪೂಜಾರಿಯ 'ಸಾಮರ್ಥ್ಯ'ದ ಸುತ್ತ ಕಟ್ಟಿಕೊಂಡಿರುವ ಒಂದು ಅಪೂರ್ವ ಬೆರಗು ಮತ್ತು ಈ ಜಾತ್ರೆಯ ಹಿಂದಿರುವ ದಂತಕಥೆ- ಉಪಕಥೆಗಳ ದಟ್ಟ ವರ್ಣನೆ-ನಿರೂಪಣೆಗಳೊಂದಿಗೆ ಈ ಆಧುನಿಕ ಕಾಲದ ಸಂವೇದನೆಗಳ ನಡುವೆಯೂ, ಒಂದು ವಿಚಿತ್ರ ಪೌರಾಣಿಕ ವಾತಾವರಣವನ್ನು ನಿರ್ಮಿಸಿಬಿಡುತ್ತಾರೆ. ಇದೇ ಗೊರೂರರ ಬರವಣಿಗೆಯ ಶಕ್ತಿ. ಆದರೆ ಇದೇ ಒಂದು ದೌರ್ಬಲ್ಯವಾಗಿ ಕೂಡಾ ಕಾಣುವುದು, ಅವರು ಇಂತಹ ವಿಶಿಷ್ಟ ಆಚರಣೆಯ ಹಿಂದಿನ ಸಾಂಸ್ಕೃತಿಕ ಆಶಯಗಳನ್ನು ಅನ್ವೇಷಿಸುವ ಪ್ರಯತ್ನವನ್ನೇ ಮಾಡದಿರುವುದರಲ್ಲಿ. ಅಂದರೆ ವರ್ಣನೆ-ನಿರೂಪಣೆಗಳನ್ನು ದಾಟಿ ವಿಶ್ಲೇಷಣೆ ಕಡೆಗೆ ಗಮನ ಕೊಡದಿರುವುದರಲ್ಲಿ. ಬಹುಶಃ ಗೊರೂರರ ಕಾಲಕ್ಕೆ ನಮ್ಮ ಜಾನಪದ ಅಧ್ಯಯನ ಒಂದು ವಿಶ್ಲೇಷಣಾ ಶಾಸ್ತ್ರವಾಗಿ ಬೆಳದಿಲ್ಲದಿದ್ದುದೇ ಇದಕ್ಕೆ ಕಾರಣವಿದ್ದರೂ ಇರಬಹುದು. ಆದರೆ ಗ್ರಾಮ ಸಂಸ್ಕೃತಿಯ ಸೂಕ್ಷ್ಮ ಅವಲೋಕನ ಮಾಡಬಲ್ಲವರಾಗಿದ್ದ ಲೇಖಕರು,

ಮಾನವ ಸಹಜ ಕುತೂಹಲದಿಂದಾದರೂ ಈ ಆಚರಣೆಯ ಹಿಂದಿನ ದಂತಕಥೆಯ ಆಳದಲ್ಲಿ ನಮ್ಮ ಗ್ರಾಮೀಣ ಜನರ 'ಜಲ ಸಂಸ್ಕೃತಿ'ಗೆ ಸಂಬಂಧಪಟ್ಟ ಆಚರಣೆಯ ಛಾಯೆಯೇನಾದರೂ ಇದೆಯೇ ಎಂಬುದನ್ನು ಗಮನಿಸಬಹುದಿತ್ತು ಎಂಬ ನಿರೀಕ್ಷೆ, ಪ್ರಬಂಧ ಓದಿ ಸಂತೋಷಪಟ್ಟ ನಂತರವೂ ನನ್ನಲ್ಲಿ ಹಾಗೇ ಉಳಿಯಿತು.

ಆದರೆ ಪ್ರಬಂಧದ ಹಿಂದಿನ ಗೊರೂರರ ನಿರೀಕ್ಷೆ-ಆಸೆಗಳೇ ಬೇರೆ ಸ್ತರದ್ದಾಗಿದೆ: "ಹೀಗೆ ಬಿಂದಿಗಮ್ಮನ ಜಾತ್ರೆ ನಮ್ಮ ಬಾಳಿನಲ್ಲಿ ನಿಜವಾದ ಆಧ್ಯಾತ್ಮಿಕ ಅನುಭವವೇ ಆಗಿದೆ. ಅದನ್ನು ನೋಡಿದ ಅನೇಕ ದಿನಗಳವರೆಗೆ 'ನಮಗೆ ಅಲ್ಲಿ ದೇವರು ಪ್ರಕಟವಾದ' ಎಂಬ ಭಾವನೆ ನಿಶ್ಚಯವಾಗಿರುತ್ತದೆ. ದೇವರು ಇದ್ದಾನೆಂದು ನಂಬಿ ಅಥವಾ ಬಿಡಿ. ಬೋಳು ತಲೆಯ ಮೇಲೆ ತಟ್ಟೆಯನ್ನೂ ನೀರು ತುಂಬಿದ ಕಳಸವನ್ನೂ ಹೊತ್ತುಕೊಂಡು, ಕತ್ತಲೆಯಲ್ಲಿ, ಕಾಡುದಾರಿಯಲ್ಲಿ ಬೆಟ್ಟದ ಮೇಲೆ ಕೈಬಿಟ್ಟು ನಮಸ್ಕರಿಸುತ್ತಾ ಆವೇಶದಿಂದ ಓಡುವ ಪೂಜಾರಿಯ ಭಕ್ತಿಯಂತೂ ನಿಜವರಾಗಿ ಇದ್ದೇ ಇದೆ. ಒಂದು ಸಲ ಬಿಂದಿಗಮ್ಮನ ಜಾತ್ರೆಯನ್ನು ನೋಡಿದ ಮೇಲೆ ಇದನ್ನು ಪದೇ ಪದೇ ನೋಡುವುದಕ್ಕಾಗಿ ಬದುಕಿರಬೇಕು ಎಂಬ ಆಸೆ ಯಾರಿಗಾದರೂ ಉಂಟಾಗುತ್ತದೆ."

ಅದೇನೇ ಇರಲಿ, ಒಟ್ಟಾರೆ ಈ ನನ್ನ ಲೇಖನದಲ್ಲಿ ಚರ್ಚಿಸಿದ ಎಲ್ಲ ಲೇಖನಗಳೂ ಗೊರೂರರ ಪ್ರಗತಿಶೀಲ, ಸ್ವದೇಶಾಭಿಮಾನಿ, ಸಾಂಸ್ಕೃತಿಕ ಸಂಪನ್ನತೆಯ ಮತ್ತು ಕಹಿ ಉಳಿಸದ ವ್ಯಂಗ್ಯ-ವಿಡಂಬನೆಗಳಿಂದೊಡಗೂಡಿದ ವಿನೋದದ ಮಾಂತ್ರಿಕ ಸ್ಪರ್ಶ ಪಡೆದು, ಇವರ 'ಹಳ್ಳಿಯ ಚಿತ್ರಗಳು' ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಾ 'ಶ್ರೀನಿವಾಸ'ರು ಹೇಳಿದಂತೆ, 'ನಾವು ಕನಸಿನಲ್ಲಿ ಕಂಡು ಮೆಚ್ಚಿ ನಿಜವಾದೀತೇ? ಎಂದು ಆಶಿಸುವ ಒಂದು ಪ್ರಪಂಚವನ್ನು ನಮ್ಮ ಎಚ್ಚರದ ದೃಷ್ಟಿಯ ಮುಂದೆ ತಂದು ನಿಲ್ಲಿಸುತ್ತವೆ.' ಇದಕ್ಕಾಗಿ ಅಕ್ಷರ ಬಲ್ಲ ಕನ್ನಡಿಗರೆಲ್ಲರೂ ಶ್ರೀಮಾನ್ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಿಗೆ ಚಿರಋಣಿಯಾಗಿರಬೇಕಾಗಿರುತ್ತದೆ.

○

('ಹೇಮಾವತಿಯ ಚೇತನ': ಗೊರೂರು ಶತಮಾನೋತ್ಸ ಸ್ಮರಣ ಸಂಪುಟ, ೨೦೦೫)



ಕನ್ನಡದ ಬಹುಮುಖ್ಯ ಚಿಂತಕರಲ್ಲೊಬ್ಬರಾದ ಡಿ.ಎಸ್. ನಾಗಭೂಷಣ ಅವರ 'ಬೇರು- ಬಿಳಲು' ಎಂಬ ಸಮಾಜವಾದಿ ಸಂಕಥನಗಳ ಈ ಸಂಗ್ರಹ ನಮ್ಮ ವರ್ತಮಾನದ ಹಲವಾರು ಸಂದಿಗ್ಧತೆಗಳಿಗೆ ತನ್ನ ಆಲೋಚನೆಯ ಕನ್ನಡಿ ಹಿಡಿದಿದೆ. ಆ ಕನ್ನಡಿ ಸಿದ್ಧಾಂತಗಳ ಸೋಗಲಾಡಿ ಪರದೆಗಳ ಹಿಂದೆ ಅವಿಸಿಟ್ಟ ವಾಸ್ತವತೆಯ ಮುಖದ ಸುಕ್ಕುಗಳನ್ನೂ ಬಿಂಬಿಸುವಷ್ಟು ಪರಿಶುಭ್ರವಾಗಿದೆ.

ಡಿ.ಎಸ್. ನಾಗಭೂಷಣ ಜನಪ್ರಿಯ ಮಾದರಿಗಳಿಗಿಂತ ಭಿನ್ನವಾಗಿ ಚಿಂತಿಸಬಲ್ಲರು. ವ್ಯಕ್ತಿ ಮುಲಾಜುಗಳನ್ನು ಮೀರಿದ ನಿಷ್ಠುರ ಸತ್ಯಾನ್ವೇಷಣೆ ಅವರ ಗುರಿ. ಖಚಿತವಾಗಿ, ವಸ್ತುನಿಷ್ಠವಾಗಿ , ತಮಗಿರುವ ಬಹುಶಾಸ್ತ್ರ ಅಧ್ಯಯನದ ತಿಳಿವಳಿಕೆಯೊಂದಿಗೆ ಅವರು ಮಂಡಿಸುವ ವಿಚಾರ ತಮ್ಮ ನಂಬುಗೆಯ ಆಳದಿಂದ ಹೊಮ್ಮಿರುತ್ತದೆ. ಸೈದ್ಧಾಂತಿಕವಾಗಿ ಜಗಳವಾಡುತ್ತಲೂ ಅವರೊಂದಿಗೆ ಸ್ನೇಹದಿಂದಿರಬಹುದು ಆದರೆ ರಾಜಿಕಬೂಲಿಗಳಿಲ್ಲ.

ಒಂದು ನೈತಿಕವಾದಿ ಸಾಕ್ಷಿಪ್ರಜ್ಞೆಯಂತೆ ಸಾಹಿತ್ಯ ಮತ್ತು ಸಮಾಜ; ರಾಜಕಾರಣ ಹಾಗೂ ಜಾಗತೀಕರಣ ಅಥವಾ ಜಾತಿ ವ್ಯವಸ್ಥೆಯ ವ್ಯಾಕರಣ ಈ ಎಲ್ಲದರ ಬಗ್ಗೆ ನಾಗಭೂಷಣ ತಮ್ಮ ಒಳನೋಟಗಳ ವಿಶ್ಲೇಷಣೆಯನ್ನು ಸಮತೋಲನ ತಪ್ಪದೆ ಮಾಡುತ್ತಾರೆ. ಇದರ ಹಿನ್ನೆಲೆಯಲ್ಲಿ ಅವರೊಳಗಿರುವ ಸಾಮಾಜಿಕ ಕಾರ್ಯಕರ್ತನೊಬ್ಬನ ನಿಜವಾದ ಕಕ್ಕುಲಾತಿ, ವಿದ್ವಾಂಸನೊಬ್ಬನ ಬಹುಮುಖಿ ಅವಧಾರಣೆ, ಸರ್ವರ ಹಿತಚಿಂತನೆಯ ಜೀವಪರ ಧೋರಣೆ ಬಹಳ ಮುಖ್ಯ.

ಅತ್ಯಂತ ಕ್ರಿಯಾಶೀಲವಾಗಿ ಸ್ಪಂದಿಸುತ್ತ ಪ್ರಜಾತಾಂತ್ರಿಕ ಮೌಲ್ಯಗಳನುಸಾರ ಎಲ್ಲರೊಂದಿಗೆ ಬೌದ್ಧಿಕ ವಾಗ್ವಾದಗಳನ್ನು ನಡೆಸುತ್ತ, ಸಾಹಿತ್ಯ- ಸಾಂಸ್ಕೃತಿಕ ರಂಗಗಳಲ್ಲಿ ಸದಭಿರುಚಿಯ ವಾತಾವರಣ ಕಾಪಾಡಲು ಶ್ರಮಿಸುತ್ತ, ವರ್ತಮಾನದ ಆರೋಗ್ಯವನ್ನು ಸರಿಪಡಿಸಲು ಹೆಣಗುತ್ತ, ಸಿಟ್ಟುಗೊಳ್ಳುತ್ತಾ....ಒಂದು ರೀತಿಯಲ್ಲಿ ಅವರು ಶಿವರಾಮ ಕಾರಂತರ ಕಾಳಜಿಗಳ ಸದ್ಯದ ಮಾದರಿಯಂತೆ ನನಗೆ ಕಾಣುತ್ತಾರೆ.

ಹಾಗಾಗಿಯೇ ನನಗೆ ಡಿ.ಎಸ್. ನಾಗಭೂಷಣ ಎಂಬ ಹೆಸರು ನಮ್ಮ ಸಮಕಾಲೀನ ಸಹವಾಸಗಳ ನಡುವಿನ ಅತ್ಯಂತ ಪ್ರೀತಿಪಾತ್ರವಾದ ಕ್ರಿಯಾಪದ.

– ಬಂಜಗೆರೆ ಜಯಪ್ರಕಾಶ

ರೂಪ
ಪ್ರಕಾಶನ
ಮೈಸೂರು